DISPATCH AND AVAILABILITY OF ISSUE MATERIALS: Pursuant to the requirements of the SEBI ICDR Regulations and other applicable laws, the Rights Entitlements will be credited to the demat account of the Eligible Equity Shareholders (being the Equity Shareholders as on the Record Date), however, the Issue Materials will be sent/ dispatched only to such Eligible Equity Shareholders who have provided an Indian address to our Company. Only such Eligible Equity Shareholders who have provided an Indian address to our Company are permitted to participate in the Issue. The credit of Rights Entitlement does not constitute an offer, invitation to offer or solicitation for participation in the Issue, whether directly or indirectly, and only dispatch of the Issue Material shall constitute an offer, invitation or solicitation for participation in the Issue in accordance with the terms of the Issue Material. Further, receipt of the Issue Materials (including by way of electronic means) will not constitute an offer, invitation to or solicitation by anyone in (i) the United States or (ii) any jurisdiction or in any circumstances in which such an offer, invitation or solicitation is unlawful or not authorized or to any person to whom it is unlawful to make such an offer, invitation or solicitation. In those circumstances, the Letter of Offer and any other Issue Materials must be treated as sent for information only and should not be acted upon for subscription to Rights Equity Shares and should not be copied or re-distributed, in part or full. Accordingly, persons receiving a copy of the Issue Materials should not distribute or send the Issue Materials in or into any jurisdiction where to do so, would or might contravene local securities laws or regulations, or would subject our Company or its affiliates or the Lead Managers or their affiliates to any filing or registration requirement (other than in India). If Issue Material is received by any person in any such jurisdiction or the United States, they must not seek to subscribe to the Rights Equity Shares.
For more details, see **"*Restrictions on Purchases and Resales*" beginning on page 382 of the Letter of Offer.**

The Abridged Letter of Offer, the Application Form, the Rights Entitlement Letter and other Issue material will be sent/ dispatched only to the Eligible Equity Shareholders who have provided an Indian address to our Company. In case such Eligible Equity Shareholders have provided their valid e-mail address, the Abridged Letter of Offer, the Application Form, the Rights Entitlement Letter and other Issue material will be sent only to their valid e-mail address and in case such Eligible Equity Shareholders have not provided their valid e-mail address, then the Abridged Letter of Offer, the Application Form, the Rights Entitlement Letter and other Issue material will be physically dispatched, on a reasonable effort basis, to the Indian addresses provided by them. Further, the Letter of Offer will be sent/ dispatched to the Eligible Equity Shareholders who have provided their Indian address and who have made a request in this regard.

Investors can access the Letter of Offer, the Abridged Letter of Offer and the Application Form (provided that the Eligible Equity Shareholder is eligible to subscribe to the Rights Equity Shares under applicable laws) on the websites of:

(i) our Company at www.sobha.com;
(ii) the Registrar at www.linkintime.co.in;
(iii) the Lead Managers, at www.jmfl.com and www.bobcaps.in; and
(iv) the Stock Exchanges at www.bseindia.com and www.nseindia.com.

To update the respective Indian addresses/e-mail addresses/phone or mobile numbers in the records maintained by the Registrar or by our Company, Eligible Equity Shareholders should visit www.linkintime.co.in.

Eligible Equity Shareholders can also obtain the details of their respective Rights Entitlements from the website of the Registrar (i.e., www.linkintime.co.in) by entering their DP ID and Client ID or folio number (for Eligible Equity Shareholders who hold Equity Shares in physical form as on Record Date) and PAN. The link for the same shall also be available on the website of our Company at www.sobha.com.

Please note that neither our Company nor the Registrar nor the Lead Managers shall be responsible for not sending the physical copies of Issue materials, including the Letter of Offer, the Abridged Letter of Offer, the Rights Entitlement Letter and the Application Form or delay in the receipt of the Letter of Offer, the Abridged Letter of Offer, the Rights Entitlement Letter or the Application Form attributable to non-availability of the e- mail addresses of Eligible Equity Shareholders or electronic transmission delays or failures, or if the Application Forms or the Rights Entitlement Letters are delayed or misplaced in transit.
For further details, please refer **"*Dispatch and availability of Issue Materials*" on page 357 of the Letter of Offer.**

The Material Contracts and Documents for Inspection (including a copy of the Letter of Offer) is also available on the website of SEBI at www.sebi.gov.in.

LEAD MANAGERS TO THE ISSUE		REGISTRAR TO THE ISSUE	COMPANY SECRETARY AND COMPLIANCE OFFICER
JM FINANCIAL LIMITED 7th Floor, Cnergy, Appasaheb Marathe Marg Prabhadevi, Mumbai - 400 025, Maharashtra, India. **Telephone:** +91 22 6630 3030 **E-mail:** sobha.rights@jmfl.com **Investor Grievance E-mail:** grievance.ibd@jmfl.com **Website:** www.jmfl.com **Contact Person:** Prachee Dhuri **SEBI Registration No.:** INM000010361	**BOB CAPITAL MARKETS LIMITED** 1704, B Wing, 17th Floor, Parinee Crescenzo Plot No. C-38/39, G Block, Bandra Kurla Complex Bandra (East), Mumbai 400 051, Maharashtra, India **Tel:** +91 22 6138 9353 **E-mail:** sobha.rights@bobcaps.in **Website:** www.bobcaps.in **Investor Grievance ID:** investorgrievance@bobcaps.in **Contact Person:** Nivedika Chavan **SEBI Registration Number:** INM000009926	**LINK INTIME INDIA PRIVATE LIMITED** C-101, 247 Park, L.B.S. Marg, Vikhroli West Mumbai 400 083, Maharashtra, India **Tel:** +91 810 811 4949 **E-mail:** sobha.rights2024@linkintime.co.in **Website:** www.linkintime.co.in **Investor grievance email:** sobha.rights2024@linkintime.co.in **Contact Person:** Shanti Gopalkrishnan **SEBI Registration No.:** INR000004058	**Bijan Kumar Dash** Company Secretary and Compliance Officer **Address:** SOBHA, Sarjapur-Marathahalli, Outer Ring Road (ORR), Devarabisanahalli, Bellandur Post, Bangalore 560 103, Karnataka, India **Tel:** +91 80 4932 0000; **E-mail:** rights.issue@sobha.com; **Website:** www.sobha.com

Investors may contact the Registrar to the Issue or our Company Secretary and Compliance Officer for any pre Issue or post-Issue related matters. All grievances relating to the ASBA process may be addressed to the Registrar to the Issue, with a copy to the SCSB (in case of ASBA process), giving full details such as name, address of the Applicant, contact number(s), e-mail address of the sole/ first holder, folio number or demat account number, number of Rights Equity Shares applied for, amount blocked, ASBA Account number and the Designated Branch of the SCSB where the Application Form, or the plain paper application, as the case may be, to be submitted by the Investors along with a photocopy of the acknowledgement slip. For details on the ASBA process, please see the section entitled "Terms of the Issue" on page 356 of the Letter of Offer.

For Sobha Limited
On behalf of Board of Directors
Sd/-
Bijan Kumar Dash
Company Secretary and Compliance Officer

Date : June 24, 2024
Place : Bengaluru

Sobha Limited is proposing, subject to market conditions and other considerations, a rights issue of its Equity Shares and has in this regard filed a letter of offer dated June 12, 2024 and corrigendum dated June 17, 2024 to the letter of offer dated June 12, 2024 (**"Corrigendum"**) with SEBI and Stock Exchanges. The letter of offer dated June 12, 2024 and the Corrigendum are available on the website of SEBI at www.sebi.gov.in, the Stock Exchanges i.e. BSE Limited at www.bseindia.com, NSE of India Limited at www.nse.com and on the website of Lead Managers to the Issue i.e JM Financial Limited at www.jmfl.com and BOB Capital Markets Limited at www.bobcaps.in. Investors should note that that investment in equity shares involves a degree of risk and for details relating to the same, please see section titled "Risk Factors" beginning on page 17 of the Letter of Offer.
The Rights Entitlements and the Rights Equity Shares have not been and will not be registered under the US Securities Act or any state securities laws in the United States, and may not be offered, sold, resold or otherwise transferred within the United States, except in a transaction exempt from the registration requirements of the US Securities Act. Accordingly, the Rights Entitlements and Rights Equity Shares are being offered and sold in 'offshore transactions' outside the United States in compliance with Regulation S under the US Securities Act to existing shareholders located in jurisdictions where such offer and sale of the Rights Equity Shares is permitted under laws of such jurisdiction. There will be no public offering in the United States.

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
UPSC, KPSC, PSI, Banking, Railways, NABARD ಮುಂತಾದ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿರುವ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ, ಪ್ರಜಾವಾಣಿ ವಿಶ್ವಾಸಾರ್ಹ ಮಾಹಿತಿ ಮೂಲದಿಂದ ಸ್ಪರ್ಧಾವಾಣಿ ಮಾಸಿಕ.
ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ
ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128
ಚಂದಾದಾರಿಕೆ ಕೇವಲ ₹360 ರಿಂದ ಪ್ರಾರಂಭ

ಜೂನ್ ಸಂಚಿಕೆ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ

ಕಡಿಮೆ ದರಕ್ಕೆ ಗುತ್ತಿಗೆ; ಷರತ್ತು ಉಲ್ಲಂಘಿಸಿದ್ದರೂ ಬಿಬಿಎಂಪಿಯಿಂದ ಕ್ರಮವಿಲ್ಲ: ಆಕ್ಷೇಪ

₹100 ಕೋಟಿ ಬಾಡಿಗೆ, ತೆರಿಗೆ ವಸೂಲಿ ಬಾಕಿ

• ಆರ್. ಮಂಜುನಾಥ್

ಬೆಂಗಳೂರು: ಖಾಸಗಿ ಮಳಿಗೆಗಳು ಹಾಗೂ ಸಂಸ್ಥೆಗಳು ಆಸ್ತಿ ತೆರಿಗೆ ಪಾವತಿಸಿಲ್ಲವೆಂದು ಬೀಗ ಹಾಕುತ್ತಿರುವ ಬಿಬಿಎಂಪಿ, ತನ್ನದೇ ಆಸ್ತಿ, ಮಳಿಗೆ, ಮಾರುಕಟ್ಟೆಗಳಿಗೆ ಬಾಡಿಗೆ ರೂಪದಲ್ಲಿ ಬಾಕಿಯಿರುವ ₹100 ಕೋಟಿಗೂ ಅಧಿಕ ಮೊತ್ತವನ್ನು ವಸೂಲಿ ಮಾಡಿಲ್ಲ.

ಪಾಲಿಕೆ ಸ್ವತ್ತುಗಳನ್ನು ಬಾಡಿಗೆ ಅಥವಾ ಗುತ್ತಿಗೆಗೆ ಪಡೆದಿರುವ ಸಂಸ್ಥೆಗಳು ಗುತ್ತಿಗೆಯ ಷರತ್ತುಗಳನ್ನು ಮೀರಿ ಉಪ ಗುತ್ತಿಗೆಗೆ ನೀಡಿ, ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಅಲ್ಲದೆ, ಹಲವು ಗುತ್ತಿಗೆಗಳ ಅವಧಿ ಮುಗಿದಿದ್ದರೂ ನವೀಕರಿಸಿಲ್ಲ. ಆದರೂ ಸಂಸ್ಥೆಗಳು ಅವುಗಳ ಲಾಭ ಪಡೆಯುತ್ತಿವೆ. ಉಪ ಕಂದಾಯ ಅಧಿಕಾರಿಗಳು ನೋಟಿಸ್ ಅಷ್ಟೇ ನೀಡಿದ್ದಾರೆ. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಿದೆ.

ಬಿಬಿಎಂಪಿಯ ಮುಖ್ಯ ಲೆಕ್ಕ ಪರಿಶೋಧಕರು 2021–22ನೇ ಸಾಲಿನ ಕ್ರೋಢೀಕೃತ ಲೆಕ್ಕ ಪರಿಶೋಧನಾ ವರದಿಯಲ್ಲಿ ಪಾಲಿಕೆ ವಸೂಲಿ ಮಾಡಬೇಕಿರುವ ಬಾಕಿ ಮೊತ್ತ ಹಾಗೂ ಆರ್ಥಿಕ ನಷ್ಟವನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ.

ಬಿಬಿಎಂಪಿ ಮಾಲೀಕತ್ವದ ಜಮೀನು, ಆಸ್ತಿ ಹಾಗೂ ಸ್ವತ್ತುಗಳನ್ನು ದೀರ್ಘಕಾಲಕ್ಕೆ ಗುತ್ತಿಗೆ ಅಥವಾ ಬಾಡಿಗೆಗೆ ನೀಡಿದ್ದು, ಹಲವು ವರ್ಷಗಳಿಂದ ಬಾಡಿಗೆ ಪಾವತಿಯಾಗಿಲ್ಲ. ಪಾಲಿಕೆಯ 3,855 ಆಸ್ತಿಗಳಲ್ಲಿ 372 ಆಸ್ತಿಗಳನ್ನು ಗುತ್ತಿಗೆ/ ಬಾಡಿಗೆಗೆ ನೀಡಲಾಗಿದೆ. ಅವುಗಳಲ್ಲಿ 145 ಆಸ್ತಿಗಳ ವಿವರ ಮಾತ್ರ ಚಾಲ್ತಿಯಲ್ಲಿವೆ. ಬಹುತೇಕ ಆಸ್ತಿಗಳನ್ನು 3 ರಿಂದ 100 ವರ್ಷಗಳವರೆಗೆ ಅತಿ ಕಡಿಮೆ ದರಕ್ಕೆ ಗುತ್ತಿಗೆ ಅಥವಾ ಬಾಡಿಗೆಗೆ ನೀಡಲಾಗಿದೆ. ಆಸ್ತಿಗಳನ್ನು ವಶಕ್ಕೆ ತೆಗೆದುಕೊಂಡು, ಪಾಲಿಕೆ ಆದಾಯ ಹೆಚ್ಚಿಸಿಕೊಳ್ಳಲು ಹಾಗೂ ಸೋರಿಕೆ ತಡೆಗಟ್ಟುವ ಅಗತ್ಯವಿದೆ ಎಂದು ವರದಿಯಲ್ಲಿ ಅಭಿಪ್ರಾಯಪಡಲಾಗಿದೆ.

ಪಾಲಿಕೆಯ ಸ್ಥಿರಾಸ್ತಿಗಳನ್ನು ಬಾಡಿಗೆ ಹಾಗೂ ಗುತ್ತಿಗೆಗೆ ನೀಡಲಾಗಿದ್ದು, ಆರು ಸಂಸ್ಥೆಗಳಿಂದ ಬಾಕಿ ವಸೂಲಿ ಮಾಡಿಲ್ಲ. ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಉಪವಿಭಾಗ ವ್ಯಾಪ್ತಿಯಲ್ಲಿ ಗರುಡಾ ಮಾಲ್ ತ್ರೈಮಾಸಿಕ ಮೊತ್ತ ₹3.27 ಕೋಟಿಯನ್ನು ಪಾವತಿಸಿಲ್ಲ. ಹೆಬ್ಬಾಳದಲ್ಲಿ ನಗರ ಕೇಂದ್ರ ಗ್ರಂಥಾಲಯದಿಂದ ₹1.29 ಕೋಟಿ ಬಾಡಿಗೆ ನೀಡಿಲ್ಲ.

'ನಮ್ಮ ಮೆಟ್ರೊ' ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಂಡಿರುವ ಸ್ವತ್ತುಗಳಿಂದ ₹1.46 ಕೋಟಿ ಕಂದಾಯವನ್ನು ಪಾಲಿಕೆ ವಸೂಲಿ ಮಾಡಿಲ್ಲ. ಶಿವಾಜಿನಗರ, ಜಯನಗರ, ಜೆ.ಪಿ.ನಗರ, ವಿಜಯನಗರ, ಯಲಚೇನಹಳ್ಳಿ, ದಾಸರಹಳ್ಳಿ ಉಪ ವಿಭಾಗದಲ್ಲಿ ಬಾಕಿ ಉಳಿದಿದೆ.

ಜಯನಗರದ ವಾಣಿಜ್ಯ ಸಂಕೀರ್ಣ-ದಲ್ಲಿರುವ ಬಿಎಸ್‌ಎನ್‌ಎಲ್, ಕರ್ನಾಟಕ ರಾಜ್ಯ ಹಣಕಾಸು ನಿಗಮ, ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್, ಲಿಡ್ಕರ್ ನಿಗಮ, ಮಹಾರಾಜ ಕೋಲ್ಡ್ ಸ್ಟೋರೇಜ್‌ಗಳು ₹9.42 ಕೋಟಿಯಷ್ಟು ಬಾಡಿಗೆ ಉಳಿಸಿಕೊಂಡಿವೆ.

ಜಯನಗರ ವಾಣಿಜ್ಯ ಸಂಕೀರ್ಣ (ಸಂಗ್ರಹ ಚಿತ್ರ)

ಅಂಕಿ ಅಂಶಗಳು

- **₹30.10** ಕೋಟಿ; ಪಾಲಿಕೆಯ 372 ಆಸ್ತಿಗಳಿಂದ ಬಾಡಿಗೆ ಬಾಕಿ
- **₹28.06** ಕೋಟಿ; ಪಿಯುಬಿ ಮಾರುಕಟ್ಟೆ, ಜಯನಗರ ವಾಣಿಜ್ಯ ಸಂಕೀರ್ಣ, ಕೃಷ್ಣರಾಜ ಮಾರುಕಟ್ಟೆ ಬಾಡಿಗೆ ಬಾಕಿ
- **₹17.77** ಕೋಟಿ; ಕೇಂದ್ರ–ರಾಜ್ಯ ಸರ್ಕಾರದ ಕಟ್ಟಡಗಳಿಂದ ಆಸ್ತಿ ತೆರಿಗೆ ಬಾಕಿ
- **₹13.85** ಕೋಟಿ; ಕಲ್ಯಾಣ ಮಂಟಪ, ಪಾರ್ಟಿ ಹಾಲ್, ಹೋಟೆಲ್ ಪಿಜಿಗಳಿಂದ ಬಾಕಿ
- **₹9.42** ಕೋಟಿ; ಜಯನಗರ ವ್ಯಾಪ್ತಿಯಲ್ಲಿ 6 ಸಂಸ್ಥೆಗಳಿಂದ ಬಾಡಿಗೆ ಬಾಕಿ
- **₹7.98** ಕೋಟಿ; ದೂರಸಂಪರ್ಕ ಗೋಪುರಗಳಿಂದ ತೆರಿಗೆ ಬಾಕಿ
- **₹4.67** ಕೋಟಿ; ಪಾಲಿಕೆಯ 6 ಸ್ಥಿರಾಸ್ತಿಗಳಿಂದ ಬಾಡಿಗೆ ಬಾಕಿ
- **₹4.93** ಕೋಟಿ; ಖಾಸಗಿ ಶಾಲಾ–ಕಾಲೇಜುಗಳಿಂದ ಆಸ್ತಿ ತೆರಿಗೆ ಬಾಕಿ

ಸರ್ಕಾರಿ ಕಟ್ಟಡಗಳಿಂದ ₹17 ಕೋಟಿ ಬಾಕಿ

ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಟ್ಟಡಗಳು ತೆರಿಗೆ ಹಾಗೂ ಸೇವಾ ಶುಲ್ಕವನ್ನು ಬಿಬಿಎಂಪಿ ವಸೂಲಿ ಮಾಡಿಲ್ಲ. 2022ರ ಮಾರ್ಚ್ ಅಂತ್ಯಕ್ಕೆ ₹17 ಕೋಟಿಗೂ ಹೆಚ್ಚು ಮೊತ್ತ ಬಾಕಿ ಉಳಿದಿದೆ.

ಪಾಲಿಕೆಯ ವಿದ್ಯಾರಣ್ಯಪುರ ಉಪ ವಿಭಾಗದಲ್ಲಿ ಈ ಬಾಬ್ತಿನಲ್ಲಿ ಅತಿಹೆಚ್ಚು (₹4.01 ಕೋಟಿ) ಬಾಕಿ ಉಳಿದಿದೆ. ಯಲಹಂಕ ಓಲ್ಡ್ ಟೌನ್ ಉಪವಿಭಾಗದಲ್ಲಿ ₹2.67 ಕೋಟಿ, ವಸಂತನಗರ ಉಪವಿಭಾಗದಲ್ಲಿ ₹2.04 ಕೋಟಿ, ಹೊಂಬೇಗೌಡನಗರ ಉಪವಿಭಾಗದಲ್ಲಿ ₹1.69ಕೋಟಿ ಹಾಗೂ ಎಚ್‌ಬಿಆರ್ ಲೇಔಟ್ ಉಪವಿಭಾಗದಲ್ಲಿ ₹1.18 ಕೋಟಿಯಷ್ಟು ಆಸ್ತಿ ತೆರಿಗೆ ಬಾಕಿ ಉಳಿದಿದೆ.

ಮಾರುಕಟ್ಟೆಗಳ ಬಾಡಿಗೆಯಲ್ಲಿ ಅಕ್ರಮ

ಪೂರ್ವ ವಲಯದಲ್ಲಿರುವ ಪಬ್ಲಿಕ್ ಯುಟಿಲಿಟಿ ಮಾರುಕಟ್ಟೆ, ಕೃಷ್ಣರಾಜೇಂದ್ರ ಮಾರುಕಟ್ಟೆ ಹಾಗೂ ದಕ್ಷಿಣ ವಲಯದಲ್ಲಿರುವ ಜಯನಗರ ವಾಣಿಜ್ಯ ಸಂಕೀರ್ಣ ಮಾರುಕಟ್ಟೆಗಳಲ್ಲಿ ಬಾಡಿಗೆ/ ಗುತ್ತಿಗೆಯ ಬೇಡಿಕೆ, ವಸೂಲಿ ಮತ್ತು ಬಾಕಿಯಲ್ಲಿ ಸಾಕಷ್ಟು ಅಕ್ರಮಗಳು ಕಂಡುಬಂದಿವೆ. ಈ ಮೂರೂ ಮಾರುಕಟ್ಟೆಗಳಿಂದ ಬಾಡಿಗೆ, ಗುತ್ತಿಗೆಯಿಂದ ₹128.92 ಕೋಟಿ ಬಾಕಿ ಉಳಿದಿದೆ. ಲೋಪಗಳನ್ನು ಸರಿಪಡಿಸಿ ಕ್ರಮ ಕೈಗೊಳ್ಳದಿದ್ದರೆ ಆರ್ಥಿಕ ನಷ್ಟ ಉಂಟಾಗುವ ಜೊತೆಗೆ ಪಾಲಿಕೆ ಆಸ್ತಿ ಕೈಬಿಟ್ಟು ಹೋಗುವ ಸಾಧ್ಯತೆ ಇದೆ ಎಂದು ಲೆಕ್ಕಪರಿಶೋಧನಾ ವರದಿಯಲ್ಲಿ ಎಚ್ಚರಿಸಲಾಗಿದೆ. ಅಲ್ಲದೆ, 2021–22ರ ಮಾರ್ಚ್ ಅಂತ್ಯಕ್ಕೆ ಅನುಗುಣವಾಗಿ ಕೂಡಲೇ ₹28 ಕೋಟಿ ವಸೂಲಿ ಮಾಡಲು ಸೂಚಿಸಲಾಗಿದೆ.

ಶಾಲೆ, ಮಾಲ್ ಆಸ್ಪತ್ರೆಗಳಿಂದ ₹ 22 ಕೋಟಿ ಬಾಕಿ

ಬಿಬಿಎಂಪಿಯ ಜಯನಗರ ಹಾಗೂ ಕೊಡಿಗೆಹಳ್ಳಿ ಉಪ ವಿಭಾಗ ವ್ಯಾಪ್ತಿಯಲ್ಲಿರುವ ಶಾಲೆ–ಕಾಲೇಜುಗಳು ಅತಿಹೆಚ್ಚು ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿವೆ. ವಿದ್ಯಾರಣ್ಯಪುರ, ಹೊರಮಾವು ಉಪ ವಿಭಾಗದಲ್ಲೂ ಬಾಕಿ ಹೆಚ್ಚಿದೆ.

ಕಲ್ಯಾಣ ಮಂಟಪ, ಪಾರ್ಟಿ ಹಾಲ್, ಹೋಟೆಲ್, ಪಿ.ಜಿ ಹಾಸ್ಟಲ್, ಆಸ್ಪತ್ರೆ, ನರ್ಸಿಂಗ್ ಹೋಂ, ಚಿತ್ರಮಂದಿರಗಳು ಮತ್ತು ಕೈಗಾರಿಕೆ ಕಟ್ಟಡಗಳೂ ₹13 ಕೋಟಿಗೂ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿವೆ. ಗಾಂಧಿನಗರ ಉಪವಿಭಾಗದಲ್ಲಿರುವ ಮಾಲ್‌ಗಳಿಂದ ₹6.77 ಕೋಟಿ ತೆರಿಗೆ ಬಾಕಿ ಇದ್ದರೆ, ಚಿತ್ರಮಂದಿರಗಳಿಂದ ₹5.79 ಲಕ್ಷ ಬಾಕಿ ಉಳಿದಿದೆ. ಜಯನಗರದಲ್ಲಿರುವ ವಾಣಿಜ್ಯ ಕಟ್ಟಡಗಳಿಂದ ₹3.87 ಕೋಟಿ ತೆರಿಗೆ ಬಾಕಿ ವಸೂಲಿಯಾಗಿಲ್ಲ.

ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ವೆಂಕಟೇಶಪುರದ ಕೆರೆಯ ಪುನರುಜ್ಜೀವನ ಕಾರ್ಯ ಹಾಗೂ ನೀಲ ನಕ್ಷೆಯನ್ನು ಸಚಿವ ಕೃಷ್ಣಬೈರೇಗೌಡ ವೀಕ್ಷಿಸಿದರು

ವೆಂಕಟೇಶಪುರ ಕೆರೆ ಅಭಿವೃದ್ಧಿ: ಸಚಿವ

ಪ್ರಜಾವಾಣಿ ವಾರ್ತೆ

ಯಲಹಂಕ: ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ವೆಂಕಟೇಶಪುರ ಗ್ರಾಮದ ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಅವರು, 'ಕ್ಷೇತ್ರವ್ಯಾಪ್ತಿಯಲ್ಲಿ ನಿರಂತರವಾಗಿ ಕೆರೆಗಳ ಪುನಶ್ಚೇತನ ಕಾರ್ಯ ಮಾಡಲಾಗುತ್ತಿದೆ. ಇದರ ಭಾಗವಾಗಿ ಎರಡು ವರ್ಷಗಳಿಂದ ವೆಂಕಟೇಶಪುರ ಕೆರೆಯ ಪುನರುಜ್ಜೀವನ ಕೆಲಸವು ನಡೆದಿದೆ' ಎಂದರು.

'ಸದ್ಯ ಈ ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ನೀರು ನಿಲ್ಲುವಂತೆ ಮಾಡಲಾಗಿದೆ. ಮೊದಲು 6 ಎಕರೆ ವಿಸ್ತೀರ್ಣವಿದ್ದ ಕೆರೆಯನ್ನು ಪಕ್ಕದಲ್ಲಿದ್ದ ಬಿಡಿಎ ಮತ್ತು ಸರ್ಕಾರಕ್ಕೆ ಸೇರಿದ ಜಾಗವನ್ನು ಬಳಸಿಕೊಂಡು, 13 ಎಕರೆ ವಿಸ್ತೀರ್ಣದ ದೊಡ್ಡ ಕೆರೆಯಾಗಿಸಿ ಮೇಲ್ದರ್ಜೆಗೇರಿಸಲಾಗಿದೆ' ಎಂದು ವಿವರಿಸಿದರು.

'ಸ್ಥಳೀಯ ಜನರ ವಾಯುವಿಹಾರಕ್ಕೆ ಅನುಕೂಲವಾಗುವಂತೆ ನಡಿಗೆ ಪಥ, ಖಾಸಗಿಯವರ ಸಹಕಾರದೊಂದಿಗೆ ಬಟರ್ ಫ್ಲೈ ಉದ್ಯಾನ, ಮಕ್ಕಳಿಗೆ ಆಟದ ಮೈದಾನ ಸೇರಿದಂತೆ ಕೆರೆಯ ಅಭಿವೃದ್ಧಿಯ ಜೊತೆಗೆ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೌಕರ್ಯಗಳನ್ನು ಕಲ್ಪಿಸುವ ಕಾರ್ಯ ಪ್ರಗತಿಯಲ್ಲಿದೆ' ಎಂದರು.

'ಪರಿಸರವನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಈ ದಿಸೆಯಲ್ಲಿ ಜನರಲ್ಲಿ ಜಾಗೃತಿ ಮೂಡಿಸುವ ಹಿನ್ನಲೆಯಲ್ಲಿ ಸ್ಥಳೀಯ ನಿವಾಸಿಗಳು ಹಾಗೂ ಮಕ್ಕಳಿಂದ ಕೆರೆಯ ಸುತ್ತಲೂ ಸಸಿನೆಡುವ ಕಾರ್ಯವನ್ನು ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಕಾಂಗ್ರೆಸ್ ಮುಖಂಡರಾದ ಟಿ.ವೆಂಕಟರಾಮರೆಡ್ಡಿ, ಎಚ್.ಎ. ಶಿವಕುಮಾರ್, ಚಂದನ್. ಜೆ.ಎ, ವಿ.ವಿಶ್ವನಾಥ್ ಮತ್ತಿತರರು ಉಪಸ್ಥಿತರಿದ್ದರು.

'ಝಿಯು ಹೋಮ್ಸ್' ಕಂಪನಿ ಹೆಸರಲ್ಲಿ ಬಾಡಿಗೆಗೆ ಪಡೆದ ಮನೆಗಳನ್ನು ನಕಲಿ ದಾಖಲೆ ಸೃಷ್ಟಿಸಿ ಬೇರೆಯವರಿಗೆ ಭೋಗ್ಯಕ್ಕೆ ನೀಡಿ ಮನೆ ಮಾಲೀಕರಿಗೂ, ಭೋಗ್ಯಕ್ಕೆ ಪಡೆದವರಿಗೂ ವಂಚನೆ ಮಾಡಲಾಗಿದೆ ಎಂದು ಆರೋಪಿಸಿ ಸಂತ್ರಸ್ತರು ಸೋಮವಾರ ಎಂ.ಜಿ. ರಸ್ತೆಯಲ್ಲಿರುವ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಮೌನ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಝಿಯು ಹೋಮ್ಸ್ ಹಗರಣ: ಸಂತ್ರಸ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಝಿಯು ಹೋಮ್ಸ್' ಕಂಪನಿ ಹೆಸರಲ್ಲಿ ಬಾಡಿಗೆಗೆ ಪಡೆದ ಮನೆಗಳನ್ನು ನಕಲಿ ದಾಖಲೆ ಸೃಷ್ಟಿಸಿ ಬೇರೆಯವರಿಗೆ ಭೋಗ್ಯಕ್ಕೆ ನೀಡಿ ವಂಚಿಸಿದ್ದಾರೆ ಎಂದು ಆರೋಪಿಸಿ ಸಂತ್ರಸ್ತರು ಸೋಮವಾರ ಎಂ.ಜಿ. ರಸ್ತೆಯಲ್ಲಿರುವ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಮೌನ ಪ್ರತಿಭಟನೆ ನಡೆಸಿದರು.

'ಬಾಡಿಗೆ ನಿರ್ವಹಣಾ ಕಂಪನಿ 'ಝಿಯು ಹೋಮ್ಸ್' ಚೇರ್‌ಮನ್ ಎಂದು ಹೇಳಿಕೊಂಡಿದ್ದ ಅಹಮ್ಮದ್ ಅಲಿ ಬೇಗ್ 2022ರಲ್ಲಿ ನಮ್ಮನ್ನು ಸಂಪರ್ಕಿಸಿದ್ದರು. ಅವರು ಹೆಣ್ಣೂರಿನಲ್ಲಿರುವ ನಮ್ಮ ಕ್ಲಾಸಿಕ್ ರಾಯಲ್ ಗಾರ್ಡನ್ ಫ್ಲ್ಯಾಟ್ ಅನ್ನು ₹35 ಸಾವಿರ ಬಾಡಿಗೆಗೆ ಪಡೆದುಕೊಂಡಿದ್ದರು. ಅವರು ನಮಗೆ ಮಾಹಿತಿ ನೀಡದೇ ನಕಲಿ ದಾಖಲೆ ಸೃಷ್ಟಿಸಿ 'ಝಿಯು ಹೋಮ್ಸ್'ನವರ ಮನೆ ಎಂದು ಬೇರೆಯವರಿಗೆ ಭೋಗ್ಯಕ್ಕೆ ನೀಡಿದ್ದಾರೆ. ನಮಗೆ ಆರು ತಿಂಗಳು ಬಾಡಿಗೆ ನೀಡಿದ್ದು, ಬಳಿಕ ಪಾವತಿಸಿಲ್ಲ. ಫ್ಲ್ಯಾಟ್ ಅನ್ನು ಲೀಸ್‌ಗೆ ಪಡೆದವರು ಬಿಟ್ಟುಕೊಡುತ್ತಿಲ್ಲ. ಈಗ ಝಿಯು ಕಂಪನಿಯವರು ಪರಾರಿಯಾಗಿದ್ದಾರೆ' ಎಂದ ಸಂತ್ರಸ್ತೆ ಸಾರಮ್ಮ ಜೇಕಬ್ ಅಳಲು ತೋಡಿಕೊಂಡರು.

'ಆರು ತಿಂಗಳ ಹಿಂದೆ ಝಿಯು ಹೋಮ್ಸ್‌ನವರು ಆರ್.ಟಿ.ನಗರದಲ್ಲಿ ಮನೆ ತೋರಿಸಿದ್ದರು. ₹ 20 ಲಕ್ಷ ನೀಡಿ ಭೋಗ್ಯಕ್ಕೆ ಬರೆಸಿಕೊಳ್ಳಲಾಗಿತ್ತು. ಎಲ್ಲ ಪ್ರಕ್ರಿಯೆ ಮುಗಿದು ಅಲ್ಲಿಗೆ ಹೋದರೆ, ಅದೇ ಮನೆಯನ್ನು ಹಿಂದೆಯೇ ಭೋಗ್ಯಕ್ಕೆ ಪಡೆದು ಬೇರೆಯವರು ವಾಸ ಇದ್ದರು. ಕೇಳಲು ಹೋದರೆ ಝಿಯು ಹೋಮ್ಸ್ ಕಚೇರಿಯೇ ಬಂದ್ ಆಗಿತ್ತು' ಎಂದು ಮೊಹಮ್ಮದ್ ಫಕ್ರುದ್ದೀನ್ ವಿವರಿಸಿದರು.

'ಕಲ್ಯಾಣನಗರ ಬಾಬುಸ ಪಾಳ್ಯದಲ್ಲಿ ಎಸ್.ಕೆ. ಹೋಮ್ಸ್‌ನಲ್ಲಿ 41 ಮನೆಗಳಿವೆ. ಒಂದು ಮನೆಯನ್ನು ನಾನು ಝಿಯು ಹೋಮ್ಸ್ ಪ್ರೈವೆಟ್ ಲಿಮಿಟೆಡ್‌ನಿಂದ ಲೀಸ್‌ಗೆ ಪಡೆದಿದ್ದೇನೆ. ಅದೇ ರೀತಿ ಉಳಿದವರೂ ಲೀಸ್‌ಗೆ ಪಡೆದಿದ್ದಾರೆ. ಆರಂಭದಲ್ಲಿ ನಮಗೆ ಏನೂ ಸಮಸ್ಯೆ ಇರಲಿಲ್ಲ. ಆನಂತರ 'ನಾವು ಮಾಲೀಕರು' ಎಂದು ಕೆಲವರು ಬಂದಾಗ ನಾವು ಮೋಸ ಹೋಗಿರುವುದು ಗೊತ್ತಾಯಿತು. ಈಗ ಬಂದವರೇ ನಿಜವಾದ ಮಾಲೀಕರು ಎಂಬುದು ನಮಗೆ ಅರ್ಥವಾಗಿದೆ. ಆದರೆ, ನಾವು ಕೊಟ್ಟಿರುವ ಹಣ ವಾಪಸ್ ಬಾರದೇ ಮನೆ ಬಿಟ್ಟು ಕೊಡುವುದು ಹೇಗೆ' ಎಂದು ಸಂತ್ರಸ್ತ ಮಲ್ಲಿಕಾರ್ಜುನ ಪ್ರಶ್ನಿಸಿದರು.

450ಕ್ಕೂ ಹೆಚ್ಚು ಕುಟುಂಬಗಳು ವಂಚನೆಗೊಳಗಾಗಿವೆ ಎಂದು ಸಂತ್ರಸ್ತರು ತಿಳಿಸಿದರು.

'ನಾವು ಪೊಲೀಸರಿಗೆ ಈ ಬಗ್ಗೆ ದೂರು ನೀಡಿದ್ದು, ಪ್ರಕರಣವನ್ನು ಸಿಸಿಬಿಗೆ ವರ್ಗಾಯಿಸಲಾಗಿದೆ. ಸಿಸಿಬಿ ಪೊಲೀಸರು ಯಾವ ರೀತಿ ತನಿಖೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಇಲ್ಲ. ಕೂಡಲೇ ತನಿಖೆ ನಡೆಸಿ, ಮನೆ ಮಾಲೀಕರಿಗೆ ಮನೆ ವಾಪಸ್ ಕೊಡಿಸಬೇಕು. ಲೀಸ್‌ಗೆ ಹಣ ನೀಡಿದವರಿಗೆ ಹಣ ವಾಪಸ್ ಮಾಡಿಸಬೇಕು' ಎಂದು ಆಗ್ರಹಿಸಿದರು.

ಸುಧಾ ಓದಿರಿ

hudco
ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತ
(ಭಾರತ ಸರ್ಕಾರದ ಉದ್ಯಮ)
ಪ್ರಾದೇಶಿಕ ಕಛೇರಿ, ಬೆಂಗಳೂರು.
ಇ–ಮೇಲ್: bro@hudco.org
ಟೆಂಡರ್ ಪ್ರಕಟಣೆ
ಭಾರತ ಸರ್ಕಾರದ ಒಂದು ಉದ್ಯಮವಾಗಿರುವ ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತವು (ಹುಡ್ಕೋ) ಬೆಂಗಳೂರಿನ ಎನ್‌ಜಿವಿ – ಕೋರಮಂಗಲ, ನಂದಿನಿ ಲೇಔಟ್ ಹಾಗೂ ಆರ್‌ಎಂವಿ ಎಕ್ಸ್‌ಟೆನ್ಷನ್ ಇಲ್ಲಿರುವ ತನ್ನ ಸಿಬ್ಬಂದಿ ಕ್ವಾರ್ಟರ್ಸ್‌ಗಳ ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ/ಹೆಸರಾಂತ ಸಂಸ್ಥೆಗಳು/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಇನ್ನಿತರೆ ವಿವರಗಳಿಗಾಗಿ ನಮ್ಮ ವೆಬ್‌ಸೈಟ್ www.hudco.org ಭೇಟಿ ನೀಡುವುದು. ಸಂಪರ್ಕ ಸಂಖ್ಯೆ : 080–25587009/ 25582602. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 23.07.2024.
ಭೇಟಿನೀಡಿ : www.hudco.org ಮತ್ತು www.eprocure.gov.in

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಕಾಗಕ್ಕ ಗುಬ್ಬಕ್ಕನ ಕಥೆ ಬೇಡ

ಬಿಬಿಎಂಪಿಯನ್ನು ವಿಭಜನೆ... ವಿಭಜನೆ.. ಮಾಡುತ್ತೇವೆಂಬ ಪರಿಪಾಠದ ಭಜನೆ ಬಿಟ್ಟು ಚುನಾವಣೆ ನಡೆಸಲಿ. ನ್ಯಾಯಾಲಯಗಳು ಛೀಮಾರಿ ಹಾಕಿದರೂ ಹಿಂದಿನ ಹಾಗೂ ಈಗಿನ ಸರ್ಕಾರಗಳು ತಲೆ ಹೋಗುವಂತಹದ್ದು ಏನೇನೂ ಇಲ್ಲವೆಂಬಂತೆ ವರ್ತಿಸುತ್ತಿವೆ. ನ್ಯಾಯಕ್ಕೂ, ನ್ಯಾಯಾಲಯಕ್ಕೂ ಕವಡೆ ಕಾಸಿಗೂ ಬೆಲೆ ಇಲ್ಲದಂತಾಗಿದೆ. ಕಾಗಕ್ಕ ಗುಬ್ಬಕ್ಕನ ಕಥೆ ಹೇಳದೆ ಚುನಾವಣೆ ನಡೆಸಬೇಕು.

ಬಿ.ಕೋ. ರಾಜೀವ, ಬೆಂಗಳೂರು

ಕೆಲಸ–ಕಾರ್ಯ ಸುಗಮ

ಬಿಬಿಎಂಪಿಯನ್ನು ಐದು ವಿಭಾಗಗಳಾಗಿ ವಿಂಗಡಿಸುವುದು ಸೂಕ್ತ. ಪೂರ್ಣ ಅಧಿಕಾರವೆಲ್ಲ ಕೇಂದ್ರೀಕೃತಗೊಂಡಿದ್ದು ಸಾರ್ವಜನಿಕರ ಕಾರ್ಯಗಳು ಸುಗಮವಾಗಿ ನಡೆಯಲು ಸಾಧ್ಯವಾಗುತ್ತಿಲ್ಲ. ಪ್ರತಿ ಸಮಸ್ಯೆಗೂ ಮುಖ್ಯ ಆಯುಕ್ತರಿಗೆ ದೂರು ನೀಡಬೇಕಾಗಿದೆ. ಐದು ವಿಭಾಗಗಳಾಗಿ ವಿಂಗಡಿಸಿ ಅಲ್ಲಿಗೆ ಸಮರ್ಥ ಅಧಿಕಾರಿಗಳನ್ನು ನೇಮಿಸಿದಲ್ಲಿ ಅಧಿಕಾರ ವಿಕೇಂದ್ರೀಕರಣಗೊಂಡು ಸಾರ್ವಜನಿಕ ಕೆಲಸಗಳು ಸುಗಮವಾಗುತ್ತದೆ.

ಎಚ್. ದೊಡ್ಡಮಾರಯ್ಯ, ಬಿಟಿಎಂ ಲೇಔಟ್

ವಿಭಜನೆ ಮಾಡಿ ಚುನಾವಣೆ ನಡೆಸಿ

ಪಾಲಿಕೆಯನ್ನು ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡುವ ರಾಜ್ಯ ಸರ್ಕಾರದ ಯೋಚನೆ ಒಳ್ಳೆಯ ನಿರ್ಧಾರ. ಖಜಾನೆಗೆ ಅತಿಹೆಚ್ಚು ವರಮಾನ ತೆರಿಗೆ ತಂದುಕೊಡುವ ಮಹದೇವಪುರ ವಲಯಕ್ಕೆ ಅಭಿವೃದ್ಧಿಗಾಗಿ ಪ್ರತಿ ವರ್ಷ ಕಡಿಮೆ ಹಣ ಹಂಚಲಾಗುತ್ತಿದೆ. ಬೇರೆ ವಲಯಗಳಿಗೆ ಹೋಲಿಸಿದರೆ ಇಲ್ಲಿ ಅಭಿವೃದ್ಧಿ ಹಾಗೂ ಮೂಲಸೌಕರ್ಯ ಕಡಿಮೆ. ವಿಭಜನೆ ಮಾಡಿ, ಪಾಲಿಕೆಗಳಿಗೆ ಚುನಾವಣೆ ನಡೆಸಬೇಕು

ಕಿರಣ್ ಕುಮಾರ್ ಜೆ, ಮೇಡಹಳ್ಳಿ, ಕೃಷ್ಣರಾಜಪುರ

ವಿಭಜನೆಯಿಂದ ಆರೋಗ್ಯಕರ ಬೆಂಗಳೂರು

ಪ್ರಜೆಗಳ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಬಿಬಿಎಂಪಿ ವಿಭಜನೆ ಅವಶ್ಯ. ಜನಸಂಖ್ಯೆ ಹೆಚ್ಚುತ್ತಿರುವ ನಮ್ಮ ಕಾಸ್ಮೋಪಾಲಿಟನ್ ಬೆಂಗಳೂರು ನಗರದಲ್ಲಿ ಹೆಚ್ಚಿನ ಸವಲತ್ತುಗಳು ಹಾಗೂ ಅದನ್ನು ನಿರ್ವಹಿಸಲು ಸೂಕ್ತ ಮಾನವ ಸಂಪನ್ಮೂಲ ಅಗತ್ಯ. ವಿಭಜನೆ ಮಾಡಿದರೆ ಆರೋಗ್ಯಕರ ಬೆಂಗಳೂರನ್ನು ನಾವು ನೋಡಬಹುದು ಹಾಗೂ ಉದ್ಯೋಗವೂ ಹೆಚ್ಚುತ್ತದೆ. ವಿಸ್ತಾರವಾಗಿರುವ ಬೆಂಗಳೂರು ಇನ್ನೂ ಹಲವರನ್ನು ಆಕರ್ಷಿಸುತ್ತದೆ.

ರಾಜ್‌ಕುಮಾರ್ ಕೆ, ರಾಮಗೊಂಡನಹಳ್ಳಿ, ಹಗದೂರು

ಚುನಾವಣೆ ನಡೆಸದಿರಲು ನೆಪ

ಯಾವುದೇ ಸರ್ಕಾರ ಬಂದರೂ ಬಿಬಿಎಂಪಿಗೆ ಚುನಾವಣೆ ಮಾಡಲ್ಲ. ಇದಕ್ಕೆ ಕಾರಣವಾಗಿ, ಬಿಬಿಎಂಪಿ ವ್ಯಾಪ್ತಿಗೆ ಬರುವ ಪಕ್ಕದ ಪ್ರದೇಶವನ್ನು ಸೇರಿಸುವ ನೆಪ ಹೇಳುತ್ತಾರೆ. ಚುನಾವಣೆ ಮಾಡಲು ಬೆಂಗಳೂರಿನ ಶಾಸಕರಿಗೆ ಇಷ್ಟವಿರುವುದಿಲ್ಲ. ಎಲ್ಲ ಪಕ್ಷದ ಶಾಸಕರಿಗೂ ಬೇರೆಯವರು (ಕಾರ್ಪೊರೇಟರ್‌ಗಳು) ನಗರದಲ್ಲಿ ಅಧಿಕಾರಕ್ಕೆ ಬರುವುದು ಇಷ್ಟವಿಲ್ಲ. ಹೀಗಾಗಿ ವಿಭಜನೆಯ ನೆಪ ಹೇಳುತ್ತಿದ್ದಾರೆ.

ಕೆ.ಎಂ. ನಾಗೇಂದ್ರ, ಕೋನೇನ ಅಗ್ರಹಾರ, ಎಚ್‌ಎಎಲ್

ಬೆಂಗಳೂರು ಒನ್, ಟು, ತ್ರೀ, ಫೋರ್!

ಬೆಂಗಳೂರು ಅಭಿವೃದ್ಧಿ ಹಾಗೂ ಆಡಳಿತ ವಿಕೇಂದ್ರೀಕರಣ ದೃಷ್ಟಿಯಿಂದ ನಾಲ್ಕು ವಿಭಾಗ ಮಾಡುವುದು ಸರಿಯಾದ ನಿರ್ಧಾರ. ಆದರೆ ನಾಲ್ಕು ವಿಭಾಗಗಳಿಗೂ ಒಬ್ಬರೇ ಮೇಯರ್ ಇದ್ದು, ಒಂದೊಂದು ವಿಭಾಗಕ್ಕೆ ಒಬ್ಬೊಬ್ಬ ಉಪಮೇಯರ್ ಆಯ್ಕೆ ಮಾಡಬೇಕು. ಇವರ ಅವಧಿ ಎರಡೂವರೆ ವರ್ಷ ನಿಗದಿಪಡಿಸಬೇಕು. ಐದು ವರ್ಷಕ್ಕೆ ಒಮ್ಮೆ ತಪ್ಪದೇ ಪಾಲಿಕೆ ಚುನಾವಣೆ ನಡೆಸಬೇಕು. ನಾಲ್ಕು ವಿಭಾಗಗಳಿಗೂ ಬೆಂಗಳೂರು ಒನ್, ಟು, ತ್ರೀ, ಫೋರ್ ಎಂದು ಕರೆಯಬೇಕು ಒಂದೊಂದು ವಲಯಕ್ಕೆ ಸ್ವತಂತ್ರ ಬಜೆಟ್ ಹಾಗೂ ಆಯುಕ್ತರ ನೇಮಿಸಬೇಕು.

ಎಚ್.ಸಿ. ಶ್ರೀನಿವಾಸ, ಆರ್.ಆರ್. ನಗರ

ಪ್ರಯೋಜನ ಮುಂದಿಡಲಿ

ವಿಭಜನೆ ಅಂದರೆ ಅಧಿಕಾರಿ ಮತ್ತು ರಾಜಕಾರಣಿಗಳಿಗೆ ಅಚ್ಚುಮೆಚ್ಚು. ಇಂತಹ ವಿಭಜನೆಗಳಿಂದ ಅಧಿಕಾರಿಗಳಿಗೆ ಅನೇಕ ಹೊಸ ಹುದ್ದೆಗಳು ಸೃಷ್ಟಿಯಾಗಿ ಅವರಿಗೆ ಪದೋನ್ನತಿಗಳು ದೊರೆಯುತ್ತವೆ. ಅಸಂತುಷ್ಟ ರಾಜಕಾರಣಿಗಳನ್ನು ಸಂತೃಪ್ತಗೊಳಿಸಲು ಹೆಚ್ಚು ಮೇಯರ್ ಮುಂತಾದ ಹುದ್ದೆಗಳು ಸೃಷ್ಟಿಯಾಗುತ್ತವೆ. ವಿಭಜನೆಯಿಂದಾಗುವ ಸಕಾರಾತ್ಮಕ ಪರಿಣಾಮಗಳನ್ನು ಜನರ ಮುಂದಿಡಬೇಕು. ಉಪಯೋಗಗಳನ್ನು ಸ್ಪಷ್ಟಪಡಿಸಬೇಕು. ಎಲ್ಲ ಮುಚ್ಚಿಟ್ಟು, ಅನುಕೂಲ ಸಿಂಧು ನೀತಿ ಆಗಬಾರದು.

ಗುರುರಾಜ ಹ. ನಾಯಕ, ರಾಘವೇಂದ್ರ ಬಡಾವಣೆ, ಬನ್ನೇರುಘಟ್ಟ ರಸ್ತೆ

ಬಿಬಿಎಂಪಿ ವಿಭಜನೆ ಆಗಲೇಬೇಕು

ಬಿಬಿಎಂಪಿ ತನ್ನ ಸ್ವಂತ ಬಲದಿಂದ ಸಂಗ್ರಹಿಸುತ್ತಿರುವ ಆದಾಯ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿ. ಉಳಿದಿದ್ದು, ರಾಜ್ಯ ಸರ್ಕಾರದ ಅನುದಾನದಿಂದ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು. ಹೀಗಾಗಿ ಬಿಬಿಎಂಪಿ ಅನ್ನು ಐದು ಪ್ರತ್ಯೇಕ ಪಾಲಿಕೆಗಳನ್ನಾಗಿ ವಿಭಜಿಸಲೇಬೇಕು. ಆರ್ಥಿಕ ಕ್ರೋಡೀಕರಣದಲ್ಲಿ ಹಿಂದುಳಿಯುವ ಪಾಲಿಕೆಗಳಿಗೆ ರಾಜ್ಯ ಸರ್ಕಾರವು ಹೆಚ್ಚಿನ ಅನುದಾನ ಬಿಡುಗಡೆಗೊಳಿಸಬೇಕು.

ಡಾ.ವಿಜಯಕುಮಾರ್ ಎಚ್. ಕೆ, ವಿದ್ಯಾರಣ್ಯಪುರ

ವಿಭಜನೆಯಿಂದ ಅಪಾಯ

ಬಿಬಿಎಂಪಿಯನ್ನು ಐದು ವಿಭಾಗಳಾಗಿ ಮಾಡಿದರೆ, ಪರಭಾಷಿಕರ ಪ್ರಾಬಲ್ಯ ಹೆಚ್ಚಾಗಿ, ಅವರೇ ಮೇಯರ್‌ಗಳಾಗುತ್ತಾರೆ. ಪರಭಾಷಿಕರ ಆಡಳಿತಕ್ಕೊಳಪಟ್ಟು ನಂತರ ಅವರವರ ವಿಭಾಗದ ಕೌನ್ಸಿಲ್‌ನಲ್ಲಿ ಬೆಂಗಳೂರನ್ನು ಕೇಂದ್ರಾಡಳಿತ ಪ್ರದೇಶಕ್ಕೆ ಸೇರಿಸಬೇಕೆಂಬ ನಿರ್ಣಯವನ್ನೂ ಮಾಡುತ್ತಾರೆ. ನಾವು, ನೀವು ಏನು ಮಾಡೋದು? ಬೇಕಿದ್ದರೆ ಐದು ವಲಯ ಮಾಡಿ, ಐದು ಜನ ಮುಖ್ಯ ಆಯುಕ್ತರನ್ನು ನೇಮಿಸಿ.

ರಕ್ಷಿತ್ ಗೌಡ ಎಂ, ಬೆಂಗಳೂರು

ಒಂದೇ ಬಿಬಿಎಂಪಿ ಇರಲಿ

ಒಂದೇ ನಗರ, ಒಂದೇ ಬೆಂಗಳೂರು, ಒಂದೇ ಬಿಬಿಎಂಪಿ ಇರಬೇಕು. ವಿಭಜನೆ ಮಾಡದೆ, ಈಗಿರುವಂತೆಯೇ ಚುನಾವಣೆ ನಡೆಸಬೇಕು. ಮಹಾನಗರ ಕೇಂದ್ರ ಬೆಂಗಳೂರು ಈಗ ಹೇಗಿದೆಯೋ ಹಾಗೇ ಇರಲಿ.

ವೀರಕುಮಾರ್, ವಿದ್ಯಾರಣ್ಯಪುರ

ಸರ್ಕಾರಿ ಶಾಲೆಯಲ್ಲಿ ಎಲ್‌ಕೆಜಿ ಆರಂಭ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಇಲಾಖೆಯು ಹೊಸ ಪರಿಕಲ್ಪನೆ ಅಡಿಯಲ್ಲಿ 4 ರಿಂದ 6 ವರ್ಷದ ಮಕ್ಕಳಿಗೆ 2,524 ಸರ್ಕಾರಿ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ಶಿಕ್ಷಣ ನೀಡಲು ಆದೇಶ ಹೊರಡಿಸಿರುವುದನ್ನು 'ಐಸಿಡಿಎಸ್ ಉಳಿಸಿ ಮಕ್ಕಳನ್ನು ರಕ್ಷಿಸಿ' ಆಂದೋಲನ ಸಮಿತಿ ಖಂಡಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮತನಾಡಿದ ಸಮಿತಿಯ ವಿಜಯಮ್ಮ, ಕೆ.ಎಸ್. ವಿಮಲಾ, ಎಚ್.ಎಸ್. ಸುನಂದಾ, 'ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ–ಯುಕೆಜಿ ತರಗತಿಗಳನ್ನು ಪ್ರಾರಂಭಿಸಬೇಕು. ಕೇಂದ್ರದ ಹೆಸರು ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರವೆಂದು ಬದಲಿಸಬೇಕು. ಇಲ್ಲಿನ ಕಾರ್ಯಕರ್ತರಿಗೆ 'ಶಿಕ್ಷಕಿ'ಯರ ಸ್ಥಾನ ನೀಡಬೇಕು. ಐಸಿಡಿಎಸ್ ನಲ್ಲಿರುವ ಆರಂಭಿಕ ಆರೈಕೆ ಮತ್ತು ಶಿಕ್ಷಣಕ್ಕೆ (ಇಸಿಸಿಇ) ಅನುದಾನ ಹೆಚ್ಚಿಸಬೇಕು' ಎಂದು ಒತ್ತಾಯಿಸಿದರು.

'ಅಂಗನವಾಡಿ ಕಾರ್ಯಕರ್ತೆಯರಿಗೆ ನಿರಂತರ ಕೌಶಲ ತರಬೇತಿ ನೀಡುವ ಮೂಲಕ ಅಂಗನವಾಡಿ ಕೇಂದ್ರಗಳಲ್ಲಿಯೇ ಇಸಿಸಿಇ ಶಿಕ್ಷಣ ನೀಡಬೇಕು. ಶಿಕ್ಷಣ ಇಲಾಖೆಯಲ್ಲಿ ಅತಿಥಿ ಶಿಕ್ಷಕರಿಗೆ ನೀಡುವ ಗೌರವಧನ ಕಾರ್ಯಕರ್ತೆಯರಿಗೆ ಹೆಚ್ಚುವರಿಯಾಗಿ ನೀಡಬೇಕು' ಎಂದು ಹೇಳಿದರು.

ತುಷಾರ್ ಗಿರಿನಾಥ್‌ಗೆ ಡೆಂಗಿ ಲಕ್ಷಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಜ್ವರದಿಂದ ಬಳಲುತ್ತಿದ್ದು, ಡೆಂಗಿ ಲಕ್ಷಣಗಳು ಕಂಡುಬಂದಿವೆ.

ಮುಖ್ಯ ಆಯುಕ್ತರಿಗೆ ಕಳೆದ ವಾರ ಜ್ವರ ಬಂದಿತ್ತು. ಒಂದು ದಿನ ವಿಶ್ರಾಂತಿ ತೆಗೆದುಕೊಂಡು ಮತ್ತೆ ಕೆಲಸಕ್ಕೆ ಹಾಜರಾಗಿದ್ದರು. ಭಾನುವಾರ ಮತ್ತೆ ಜ್ವರ ಬಂದಿದ್ದು, ಡೆಂಗಿ ಲಕ್ಷಣಗಳು ಕಂಡುಬಂದಿವೆ. ಡೆಂಗಿ ಪರೀಕ್ಷೆಯನ್ನು ನಡೆಸಿಲ್ಲ. ಆರೋಗ್ಯಾಧಿಕಾರಿಗಳ ಸಲಹೆ ಮೇರೆಗೆ ಮುಖ್ಯ ಆಯುಕ್ತರು ವಿಶ್ರಾಂತಿಯಲ್ಲಿದ್ದಾರೆ. ಒಂದೆರಡು ದಿನದಲ್ಲಿ ಕೆಲಸಕ್ಕೆ ಹಾಜರಾಗಲಿದ್ದಾರೆ ಎಂದು ಬಿಬಿಎಂಪಿ ಮೂಲಗಳು ತಿಳಿಸಿವೆ.

ತುಷಾರ್ ಗಿರಿನಾಥ್

ನಗರದಲ್ಲಿ ಹತ್ತು ದಿನಗಳಿಂದ 550 ಡೆಂಗಿ ಪ್ರಕರಣಗಳು ಕಂಡುಬಂದಿವೆ.

ವಿದ್ಯುತ್ ಸುರಕ್ಷತಾ ಸಪ್ತಾಹ ನಾಳೆಯಿಂದ

ಬೆಂಗಳೂರು: ಇಂಧನ ಇಲಾಖೆಯ ವಿದ್ಯುತ್ ಪರಿವೀಕ್ಷಣಾಲಯ ವತಿಯಿಂದ 'ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ-2024' ಕಾರ್ಯಕ್ರಮವನ್ನು ಜೂನ್ 26ರಿಂದ ಜುಲೈ 2 ರವರೆಗೆ ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗಿದೆ.

ಜೂನ್ 26 ರಂದು ಬೆಳಿಗ್ಗೆ 8ಕ್ಕೆ ಇಂಧನ ಸಚಿವ ಕೆ.ಜೆ. ಜಾರ್ಜ್ ಸಪ್ತಾಹ ಉದ್ಘಾಟಿಸಲಿದ್ದಾರೆ. ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕ ತೀತಿರಾ ಎನ್. ಅಪ್ಪಚ್ಚು ಭಾಗವಹಿಸಲಿದ್ದಾರೆ.

ನಗರದಲ್ಲಿ ಭಾನುವಾರ 'ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಮತ್ತು ಸನ್ಮತಿ ಸಾಹಿತ್ಯ ಪೀಠ ಶಿರಸಿ' ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ (ಎಡದಿಂದ ಮೂರನೆಯವರು) ಕೆ.ಬಿ. ಪವಾರ (ಬಲದಿಂದ ಎರಡನೆಯವರು) ಅವರ 'ಕೊಳ್ಳ', 'ಬಂಜಾರ ಮತ್ತು ಜೆಪ್ಸಿ' ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದರು. ಸಾಹಿತಿ ಧರಣೇಂದ್ರ ಕುರಕುರಿ, 'ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ಮತ್ತು ಲೇಖಕ ಆರ್.ಜಿ. ಹಳ್ಳಿ ನಾಗರಾಜ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate
ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310038
ಗುತ್ತಿಗೆಯ ಮೇಲೆ ಸ್ಥಳಾವಕಾಶ ಬೇಕಾಗಿದೆ
ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, ಮುಖ್ಯ ರಸ್ತೆಯಲ್ಲಿ ಆದ್ಯತೆಯಾಗಿ ನೆಲಮಹಡಿಯಲ್ಲಿ ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಯಲಹಂಕ ಓಲ್ಡ್ ಟೌನ್	ಬೆಂಗಳೂರು ನಗರ	ಮಹಾನಗರ	2500

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ Announcement → Tenders ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 16–07–2024 ರಂದು ಸಂಜೆ 3.00 ಗಂಟೆಯವರೆಗೆ. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"
ಸ್ಥಳ : ಬೆಂಗಳೂರು
ದಿನಾಂಕ : 25–06–2024
ಸಹಿ/–
ಸಹಾಯಕ ಮಹಾ ಪ್ರಬಂಧಕರು

REGIONAL INSTITUTE OF EDUCATION
National Council of Educational Research and Training, New Delhi
Ministry of Education, Government of India, MYSURU - 570006
Email: principal@riemysore.ac.in, website: www.riemysore.ac.in
WALK-IN-INTERVIEW
The Regional Institute of Education, Mysuru will conduct Walk-in-Interview on the dates as shown against each post purely on contractual basis for the Academic Session 2024-25.

Sl. No.	Name of the Posts	No. of Posts	Date of Interviews
1	Assistant Professor in Physics	02	01st July, 2024
2	Assistant Professor in Mathematics	02	
3	Assistant Professor in Zoology	01	
4	Assistant Professor in Pedagogy of Physical Science (Physics)	01	
5	Assistant Professor in Pedagogy of Physical Science (Chemistry)	01	
6	Assistant Professor in Pedagogy of English	01	
7	Pre-Primary/Nursery Teacher	03	02nd July, 2024
8	Vocational Teacher (Retail)	01	
	Vocational Teacher (IT-ITes)	01	
9	PGT in English	01	
10	PGT in Guidance & Counselling	01	
11	WET in Home Science	01	
12	WET in Drawing & Painting	01	
13	Laboratory Assistant in Botany	01	3rd July, 2024
14	Computer Assistant (DCGC)	01	
15	Course Administrator	01	

For more details please log on to www.riemysore.ac.in
Principal

ಜೀವನದಲ್ಲಿ ಶಿಸ್ತು ಏಕೆ? ಹೇಗೆ?

ರಮ್ಯಾ ಶ್ರೀಹರಿ

ಶಿಸ್ತನ್ನು ರೂಢಿಸಿಕೊಂಡು ಬದುಕುವುದು ಎಂದರೆ ಯಾವುದೋ ಕಟ್ಟುಪಾಡುಗಳಿಗೆ ಒಳಗಾಗಿ ಕಷ್ಟಪಡುವುದು ಎಂದು ಅನಿಸುವುದೇ? ಶಿಸ್ತಾಗಿರುವುದೆಂದರೆ ಯಾಂತ್ರಿಕವಾಗಿರುವುದು, ಸೃಜನಶೀಲವಲ್ಲದ್ದು, ಶಿಕ್ಷೆಗೆ / ಪರಿಣಾಮಗಳಿಗೆ ಹೆದರಿ ಆಚೀಚೆ ನೋಡದೆ ಒಂದೇ ದಿಕ್ಕಿಗೆ ಸುಮ್ಮನೆ ಓಡುವುದು; ಬೇಸರ ತರಿಸುವ ಕೆಲಸಗಳನ್ನು ಬೇರೆ ವಿಧಿಯಿಲ್ಲದೆ ಮಾಡಿಕೊಂಡು ಹೋಗುವುದು ಎಂದೆನಿಸುವುದೇ? ಶಿಸ್ತು ಎಂದರೆ ಕರ್ತವ್ಯ, ಜವಾಬ್ದಾರಿ; ಶಿಸ್ತಾಗಿರುವುದು ನಮಗೆ ಬೇಡದ್ದು ಆದರೂ ನಾವು ಶಿಸ್ತಿನಲ್ಲಿರಲೇಬೇಕು, ಇಲ್ಲದಿದ್ದರೆ ತೊಂದರೆಗಳಿಗೆ ಒಳಗಾಗಬಹುದು; ಶಿಸ್ತು ಭಯದಿಂದ ಪ್ರೇರಿತವಾದದ್ದು ಎನಿಸುತ್ತಿದೆಯೇ? ಶಿಸ್ತು ಏಕೆ ಬೇಕು – ಎನ್ನುವುದನ್ನು ನಮಗಾಗಿ ನಾವು ಕಂಡುಕೊಂಡಿಲ್ಲದೆ ಅದು ಹೊರಗಿನಿಂದ ಆರೋಪಿಸಲ್ಪಟ್ಟಿದ್ದರೆ ಹೀಗೆಲ್ಲಾ ಅನಿಸುವುದು ಸಹಜ. ಸ್ವಯಂಪ್ರೇರಿತರಾಗಿ ಶಿಸ್ತಿನ ಜೀವನ ನಡೆಸಿದಾಗ 'ಶಿಸ್ತು' ಎಂದರೆ 'ಶಿಕ್ಷೆ' ಎನಿಸುವುದಿಲ್ಲ; ಬದಲಾಗಿ ಯಶಸ್ಸಿಗೆ, ನೆಮ್ಮದಿಗೆ, ಗುರಿ ತಲುಪಲು ಇರುವ ಮೆಟ್ಟಿಲು, ಒಂದು ಪರಿಣಾಮಕಾರಿಯಾದ ವಿಧಾನ ಎನಿಸುತ್ತದೆ.

ಶಿಸ್ತಿನ ಜೊತೆಗೆ ನಮಗಿರುವ ಸಂಬಂಧವನ್ನು ಮತ್ತೊಮ್ಮೆ ವಿಮರ್ಶಿಸಲು ಕೆಳಕಂಡ ಕೆಲವು ಅಂಶಗಳೂ ಪೂರಕವಾಗುತ್ತವೆ:

1. ಶಿಸ್ತು ಎಂದರೆ ಅದೊಂದು ನಿಯಮಿತ ಅಭ್ಯಾಸ, ಮಾಡಬೇಕಾದ ಕೆಲಸವನ್ನು ಸರಿಯಾದ ಸಮಯಕ್ಕೆ ಮಾಡಿ ಮುಗಿಸುವ ಬದ್ಧತೆ; ನಿಯಮಗಳನ್ನು ಒಪ್ಪಿಕೊಳ್ಳುವ, ಅನುಸರಿಸುವ ಮನಃಸ್ಥಿತಿ ಅದಕ್ಕೆ ಮುಖ್ಯ. ಪ್ರತಿದಿನವೂ ಮಾಡಿದ್ದನ್ನೇ ಮಾಡಬೇಕಾಗಿ ಬಂದರೂ ಬೇಸರಿಸಿಕೊಳ್ಳದೆ, ಅದನ್ನೇಕೆ ಮಾಡಬೇಕು, ಆ ಕೆಲಸದ ಪ್ರಾಮುಖ್ಯವೇನು ಎಂದರಿತು ತೊಡಗಿಕೊಳ್ಳಲು ಪ್ರೌಢತೆ ಬೇಕು. ಒಂದೇ ದಿನದಲ್ಲಿ ಯಾವ ಮಹತ್ಕಾರ್ಯವೂ ಸಿದ್ಧಿಸುವುದಿಲ್ಲ; ಪ್ರತಿದಿನವೂ ಸ್ವಲ್ಪವಾದರೂ ಗುರಿಯ ಕಡೆಗೆ ನಮ್ಮ ಪ್ರಯತ್ನವಿರಲೇಬೇಕು.

2. ಒಂದಿಡೀ ದಿನವನ್ನು ಏನೂ ಮಾಡದೇ ಸುಲಭವಾಗಿ ಕಳೆದುಬಿಡಬಹುದು ಆದರೆ ಕೇವಲ ಮೂವತ್ತು ನಿಮಿಷ ಒಂದು ಗುರಿಯ ಕಡೆಗೆ ಗಮನವಿಟ್ಟು ಕೆಲಸ ಮಾಡಬೇಕಾದರೆ ಅದಕ್ಕೆ ಮಾನಸಿಕ ಶಕ್ತಿ ಬೇಕು. 'ಇವತ್ತು ಹೇಗಿದ್ದರೂ ದಿನ ಹಾಳಾಗಿಹೋಯಿತು, ಈಗ ರಾತ್ರಿ ಮಲಗಿಬಿಡುವೆ, ನಾಳೆಯಿಂದ ಓದುವೆ, ಬರೆಯುವೆ' ಎನ್ನುವ ಬದಲು 'ಇಂದು ದಿನಪೂರ್ತಿ ಏನೂ ಮಾಡಲಾಗಲಿಲ್ಲ, ಈಗ ರಾತ್ರಿಯಾದರೂ ಚಿಂತೆಯಿಲ್ಲ ಹೆಚ್ಚಲ್ಲದಿದ್ದರೂ ಅರ್ಧಗಂಟೆ ನಾಲ್ಕು ಪುಟವಾದರೂ ಓದುತ್ತೇನೆ, ನಾನು ಅಂದುಕೊಂಡಂತೆ ಹತ್ತು ಪುಟಗಳಲ್ಲದಿದ್ದರೂ ಒಂದು ಪುಟವನ್ನಾದರೂ ಬರೆದೇ ಮಲಗುತ್ತೇನೆ' ಎನ್ನುವ ನಿರ್ಧಾರ ಶಿಸ್ತಿನ ಬದುಕಿಗೆ ಸಹಾಯಕ.

> ಶಿಸ್ತು ಎಂದರೆ ನಿಯಮಿತ ಅಭ್ಯಾಸ

3. ನಮ್ಮ ಜೀವನದಲ್ಲಿ ನಮಗೆ ಯಾವುದು ಮುಖ್ಯ? ಯಾಕೆ? ಎನ್ನುವ ಸ್ಪಷ್ಟತೆ ಇದ್ದರೆ ಶಿಸ್ತಿನ ಜೀವನ ತಾನೇ ರೂಪಿತವಾಗುತ್ತದೆ. ಉದಾಹರಣೆಗೆ 'ನನ್ನ ಜೀವನದಲ್ಲಿ ನನಗೆ ಉದ್ಯೋಗ ತುಂಬಾ ಮುಖ್ಯವಾದದ್ದು. ಏಕೆಂದರೆ ಅದು ನನಗೆ ಸಮಾಜದೊಟ್ಟಿಗೆ ನಂಟನ್ನು ಕಂಡುಕೊಳ್ಳುವುದಕ್ಕೆ ಮತ್ತು ಧನ್ಯತಾಭಾವಕ್ಕೆ ಕಾರಣವಾಗಿದೆ' ಎಂದುಕೊಂಡಾಗ ಕೆಲಸ ಮಾಡುವ ಹುಮ್ಮಸ್ಸು ಶಿಸ್ತನ್ನು ರೂಢಿಸಿಕೊಳ್ಳಲು ಪ್ರೇರಕವಾಗುತ್ತದೆ.

4. ಒಮ್ಮೊಮ್ಮೆ ನಮಗೆ ಜೀವನದಲ್ಲಿ ಯಾವುದೂ ಅರ್ಥಪೂರ್ಣವೆನಿಸುವುದಿಲ್ಲ. 'ಏನಾದರೂ ಏಕೆ ಮಾಡಬೇಕು?' ಎನ್ನುವ ನಿರುತ್ಸಾಹ ಕಾಡುತ್ತದೆ. ಅರ್ಥಹೀನತೆಯೇ ಶಿಸ್ತಿನ ಬದುಕನ್ನು ನಡೆಸಲು ಇರುವ ದೊಡ್ಡ ಶತ್ರು. ಈ ಅರ್ಥಹೀನತೆಯ ಹಿಂದೆ ಯಾವುದೋ ನೋವಿರುತ್ತದೆ. 'ಏನು ಮಾಡಿ ಏನನ್ನೇ ಪಡೆದರೂ ಏನುಪಯೋಗ?' ಎಂಬ ಶೂನ್ಯತೆ, ನಿರಾಸೆಯ ಭಾವವಿದ್ದಾಗ ಸುಮ್ಮನೆ ಹೊರಪ್ರಪಂಚದ ಒತ್ತಡಗಳಿಗೆ ಮಣಿಯುತ್ತಾ ಏನನ್ನಾದರೂ ಮಾಡುವ ಪ್ರಯತ್ನವಿರುತ್ತದೆ. ಆದರೆ ಒಳಗಿನ ಶೂನ್ಯತೆ ಕೆಲಸ ಕಾರ್ಯಗಳನ್ನು ಶ್ರದ್ಧೆಯಿಂದ, ಸಮಯಕ್ಕೆ ಸರಿಯಾಗಿ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. 'ಯಾವ ದುಃಖ ನಮ್ಮ ಬದುಕಿನ ಅರ್ಥಪೂರ್ಣತೆಯನ್ನು ಕಸಿದುಕೊಂಡಿದೆ' ಎಂದು ಅವಲೋಕಿಸಿ ಸ್ಪಂದಿಸಿದರೆ ಅಶಿಸ್ತಿನ ಬದುಕಿಗೆ ಒಂದು ಪರಿಹಾರ ಕಂಡುಕೊಳ್ಳಬಹುದು.

5. ನಾವು ಮಾಡಬೇಕೆಂದಿರುವ ಕೆಲಸ ಸಂಕೀರ್ಣವಾಗಿರಬಹುದು; ಅದರೊಳಗೇ ಒಂದು ಗೋಜಲು, ಗೊಂದಲವಿರಬಹುದು, ಅಂತಹ ಕೆಲಸದಲ್ಲಿ ಬರಬಹುದಾದ ಸವಾಲುಗಳಿಗೆ ಹೆದರಿ ಅದರಿಂದ ತಪ್ಪಿಸಿಕೊಳ್ಳುವ ಮಾರ್ಗವಾಗಿ ಸಾಮಾಜಿಕ ಜಾಲತಾಣದಲ್ಲೋ, ಹಾಳು ಹರಟೆಯಲ್ಲೋ ಕಾಲ ಕಳೆಯುತ್ತಾ ಕೆಲಸವನ್ನು ಮುಂದೂಡುತ್ತಾ ಇರುವುದು ಅಶಿಸ್ತಿಗೆ ಮೂಲ.

6. ಜೀವನವನ್ನು ಆದಷ್ಟು ಸರಳವಾಗಿರಿಸಿಕೊಳ್ಳುವುದು ಶಿಸ್ತಿನ ಬದುಕಿಗೆ ಅಡಿಪಾಯ. ಸಮಯವನ್ನು ನುಂಗಿ ಹಾಕುವ ಅಭ್ಯಾಸಗಳು, ತೋರಿಕೆಗಾಗಿ ಮಾಡುವ ಅನವಶ್ಯಕ ಕೆಲಸಗಳು, ಯಾರನ್ನೋ ಮೆಚ್ಚಿಸಲು ಮಾಡುವ ಪ್ರಯತ್ನಗಳು ಬದುಕಿನ ಅಸ್ತವ್ಯಸ್ತತೆಗೆ ಕಾರಣ. ಮನೆಯಲ್ಲಿ ಅತಿಯಾಗಿ ವಸ್ತುಗಳನ್ನು ತುಂಬಿಕೊಂಡಿದ್ದರೆ ಹೇಗೆ ಬೇಕಾದ ವಸ್ತು ಬೇಕಾದ ಸಮಯದಲ್ಲಿ ಸಿಗದೆ ಎಲ್ಲಾ ಅಲ್ಲೋಲಕಲ್ಲೋಲವಾದಂತೆ ಅನಿಸುತ್ತದೆಯೋ ಹಾಗೆಯೇ ಅತಿಯಾದ ನಿರೀಕ್ಷೆಗಳು, ಆಸೆಗಳು, ಆಲೋಚನೆಗಳು ನಮ್ಮ ಗಮನವನ್ನು ಹತ್ತು ದಿಕ್ಕುಗಳಿಗೆ ಏಕಕಾಲಕ್ಕೆ ಸೆಳೆಯುತ್ತದೆ. ಅದರಿಂದ ಉಂಟಾದ ಬಳಲಿಕೆ ನಮ್ಮನ್ನು ಶಿಸ್ತಾಗಿರುವುದಕ್ಕೆ ಬಿಡುವುದಿಲ್ಲ.

7. ಒಮ್ಮೊಮ್ಮೆ ನಾವು ಸಂಕಲ್ಪಿಸಿದ ಕೆಲಸ ಎಷ್ಟು ಪ್ರಯತ್ನಪಟ್ಟರೂ ಆಗುತ್ತಲೇ ಇಲ್ಲ ಎನಿಸುತ್ತದೆ. 'ಶಿಸ್ತಿನಿಂದ ಕೆಲಸ ಮಾಡಬೇಕು, ಆಗ ಎಲ್ಲ ಕೆಲಸವೂ ಸಾಧ್ಯ' ಎಂದುಕೊಂಡು ಪ್ರಯೋಜನವೇ ಇಲ್ಲದ ಪ್ರಯತ್ನವನ್ನು ಮುಂದುವರಿಸುತ್ತಲೇ ಇರಬೇಕಿಲ್ಲ. ಶಿಸ್ತಿನಿಂದ ಕೆಲಸ ಮಾಡುವುದೆಷ್ಟು ಮುಖ್ಯವೋ ಅಷ್ಟೇ ಮುಖ್ಯ ನಮ್ಮ ಕೆಲಸಗಳನ್ನು, ಉದ್ದೇಶಗಳನ್ನು ಒಂದು ವಿಶಾಲ ಭಿತ್ತಿಯಲ್ಲಿ ಅನೇಕ ದೃಷ್ಟಿಕೋನಗಳಿಂದ ಪರೀಕ್ಷಿಸುವುದು. ಸೂಕ್ತವಲ್ಲದ ಹಾದಿಯಲ್ಲಿ ಶಿಸ್ತಿನಿಂದ ಕೆಲಸ ಮಾಡಿದರೂ ವ್ಯರ್ಥವಲ್ಲವೇ?

8. ನಾವು ಇಂದು ಮಾಡುವ ಅತಿ ಸಣ್ಣ ಆಲೋಚನೆ, ಚಿಂತನೆಗಳೂ; ನಮ್ಮನ್ನು ಹಾದುಹೋಗುವ ಎಲ್ಲ ಭಾವನೆಗಳು, ಅನುಭೂತಿಗಳೂ; ನಮ್ಮ ಎಲ್ಲ ಕೆಲಸಗಳು, ಧೋರಣೆಗಳೂ ನಮ್ಮ ಭವಿಷ್ಯವನ್ನು ಇಂದಿನಿಂದಲೇ ನಿರ್ಧರಿಸುತ್ತಿರುತ್ತದೆ ಎನ್ನುವ ವಿವೇಕವೇ ಶಿಸ್ತನ್ನು ಅಭ್ಯಾಸಮಾಡಿಕೊಳ್ಳಬೇಕು ಎಂದು ನಮ್ಮನ್ನು ಎಚ್ಚರಿಸುತ್ತಿರುತ್ತದೆ.

ತಲೆಹೊಟ್ಟಿನ ಕಿರಿ ಕಿರಿ

ಡಾ. ವಿನಯ ಶ್ರೀನಿವಾಸ್

ದೂರದರ್ಶನದ ಒಂದು ಜಾಹೀರಾತು: ಪ್ರಿಯಕರನೊಬ್ಬ ಪ್ರೇಯಸಿಯನ್ನು ಔತಣಕ್ಕೆ ಆಹ್ವಾನಿಸಲು ಬರುತ್ತಾನೆ. ಆಕೆಯ ಭುಜ ಮತ್ತು ಕುತ್ತಿಗೆಯ ಭಾಗದ ಮೇಲೆ ಬಿದ್ದ ಬೆಳ್ಳಗಿನ ಸಣ್ಣ ಹುಡಿಗಳನ್ನು ಕಂಡು 'ಮತ್ತೆ ತಲೆ ಹೊಟ್ಟು!' ಎನ್ನುತ್ತಾನೆ. ಆಕೆ ನಾಚಿಕೆ, ಅವಮಾನ ಮತ್ತು ಬೇಸರದಿಂದ ಕುಗ್ಗುತ್ತಾಳೆ. ಆತ ಆಕೆಯೊಡನೆಯ ಔತಣವನ್ನು ನಿರಾಕರಿಸಿ, ಮುಂದಕ್ಕೆ ಹೊರಟುಬಿಡುತ್ತಾನೆ. ನಿಜಜೀವನದಲ್ಲಿ ತಲೆಹೊಟ್ಟು ಇಂಥ ಸಮಸ್ಯೆಯನ್ನು ತರದಿದ್ದರೂ, ವ್ಯಕ್ತಿಗೆ ಒಂದು ಬಗೆಯ ಕಿರಿಕಿರಿಯನ್ನು ಉಂಟುಮಾಡುವುದಂತೂ ಸತ್ಯ.

ವಿಪರೀತ ತುರಿಕೆಯಿಂದ ಕೂಡಿದ ಈ ತಲೆಹೊಟ್ಟಿನ ಸಮಸ್ಯೆ ಜೀವನದಲ್ಲಿ ಒಮ್ಮೆಯಾದರೂ ಪ್ರತಿಯೊಬ್ಬರನ್ನೂ ಬಾಧಿಸಿರುತ್ತದೆ. ಪ್ರೌಢಾವಸ್ಥೆಯ ಆರಂಭದ ದಿನಗಳಿಂದ ಮಧ್ಯವಯಸ್ಸಿನವರೆಗೂ ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಇಬ್ಬರನ್ನೂ ಕಾಡುತ್ತದೆಯಾದರೂ ಈ ಸಮಸ್ಯೆ ಪುರುಷರಲ್ಲಿ ಹೆಚ್ಚು. ಇದರ ತೀವ್ರತೆ ವಾತಾವರಣದ ಉಷ್ಣತೆ ಮತ್ತು ತೇವಾಂಶದ ಮೇಲೆಯೂ ಅವಲಂಬಿತವಾಗಿರುತ್ತದೆ. ಹಾಗಾಗಿಯೇ ಚಳಿಗಾಲದಲ್ಲಿ ತಲೆಹೊಟ್ಟು ವಿಪರೀತಕ್ಕೆ ಹೋಗಬಹುದು.

ಕಾರಣಗಳೇನು?

ಹಲವು ಅಧ್ಯಯನಗಳ ಮೂಲಕ ತಲೆಹೊಟ್ಟಿಗೆ ಕಾರಣಗಳನ್ನು ವಿಶ್ಲೇಷಿಸಲಾಗಿದೆ.

- ಒಂದು ಅಧ್ಯಯನದ ಪ್ರಕಾರ ಇದೊಂದು ಸಹಜ ಜೈವಿಕ ಕ್ರಿಯೆ. ಚರ್ಮವು ಹಲವು ಪದರಗಳಿಂದ ಮಾಡಲ್ಪಟ್ಟಿದೆ. ಕೆಳಗಿನ ಪದರಗಳು ಪಕ್ವವಾಗುತ್ತಾ ಮೇಲ್ಪದರಗಳಾಗುವುದು ಮತ್ತು ಮೇಲ್ಪದರದ ಸತ್ತ ಜೀವಕೋಶಗಳು ನಿಯಮಿತವಾಗಿ ದೇಹದಿಂದ ಹೊರಹಾಕಲ್ಪಡುವುದು ಸಹಜ ಪ್ರಕ್ರಿಯೆ. ನೆತ್ತಿಯ ಚರ್ಮವೂ ಇದಕ್ಕೆ ಹೊರತಲ್ಲ. ಈ ಭಾಗದ ಚರ್ಮದ ಮೇಲ್ಪದರಗಳಿಂದ ಉದುರುವ ಸತ್ತ ಜೀವಕೋಶಗಳೇ ತಲೆಹೊಟ್ಟು. ಸಾಮಾನ್ಯವಾಗಿ ಒಂದು ಚದರ ಸೆಂಟಿಮೀಟರ್ ನೆತ್ತಿಯ ಚರ್ಮದ ಮೂಲಕ ನಾಲ್ಕುಲಕ್ಷದ ಎಂಬತ್ತೇಳು ಸಾವಿರ ಜೀವಕೋಶಗಳು ಉದುರಿದರೆ, ತಲೆಹೊಟ್ಟಿನ ಸಮಸ್ಯೆಯಿಂದ ಬಳಲುವವರಲ್ಲಿ ಈ ಸಂಖ್ಯೆ ಎಂಟು ಲಕ್ಷದಷ್ಟಿರುತ್ತದೆ. ಈ ಜೀವಕೋಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವು ಪರಸ್ಪರ ಹೆಚ್ಚು ಅಂಟಿಕೆಯನ್ನು ಹೊಂದಿದ್ದು ಕೆಳಗಿನ ಪದರಗಳಿಂದ ವೇಗಗತಿಯಲ್ಲಿ ಬೇರ್ಪಟ್ಟಿರುವುದು ಗಮನಕ್ಕೆ ಬರುತ್ತದೆ. ಅಲ್ಲದೆ, ಕೆಳಗಿನ ಪದರಗಳ ಜೀವಂತ ಜೀವಕೋಶಗಳೂ ಒಮ್ಮೊಮ್ಮೆ ಹೊಟ್ಟಿನೊಂದಿಗೆ (ಸತ್ತ ಜೀವಕೋಶಗಳೊಂದಿಗೆ) ಉದುರಿರುತ್ತವೆ. ಹೊಟ್ಟಿನ ಗಾತ್ರ ಮತ್ತು ಸಂಖ್ಯೆ ವ್ಯಕ್ತಿಯಿಂದ ವ್ಯಕ್ತಿಗೆ ಮತ್ತು ನೆತ್ತಿಯ ಒಂದು ಬಿಂದುವಿನಿಂದ ಮತ್ತೊಂದು ಬಿಂದುವಿಗೆ ಬೇರೆಯಾಗಿರುತ್ತದೆ.
- ನೆತ್ತಿಯ ಚರ್ಮದ ಕೆಳಪದರಗಳಲ್ಲಿ ತೈಲಾಂಶ ಉತ್ಪತ್ತಿ ಮಾಡುವ ಗ್ರಂಥಿಗಳು ಉರಿಯೂತಕ್ಕೆ ಒಳಗಾದಾಗಲೂ ಮೇಲ್ಪದರಗಳಿಂದ ಹೆಚ್ಚು ಸತ್ತ ಜೀವಕೋಶಗಳು ಉದುರುತ್ತವೆ.
- ಮೆಲಸೇಜಿಯ ಗುಂಪಿನ ಶಿಲೀಂಧ್ರಗಳು ಮತ್ತು 'ಸ್ಟ್ಯಾಫಿಲೋಕಾಕ್ಕೈ' ಗುಂಪಿನ ಬ್ಯಾಕ್ಟೀರಿಯಾಗಳಿಂದ ನೆತ್ತಿಯ ಚರ್ಮದ ಸೋಂಕು ಉಂಟಾದಾಗಲೂ ಹೊಟ್ಟು ಹೆಚ್ಚಾಗಬಹುದು.
- ಶರೀರದಲ್ಲಿ ಹೆಚ್ಚಾದ ಕೊಬ್ಬಿನಾಂಶವೂ ಪರೋಕ್ಷವಾಗಿ ಹೊಟ್ಟಿನ ಸಮಸ್ಯೆಗೆ ಪೂರಕವಾಗಬಹುದು. ಮುಖ್ಯವಾಗಿ ಚರ್ಮದ ಮೇಲ್ಪದರುಗಳಲ್ಲಿ ಕೊಬ್ಬಿನಾಂಶ ಹೆಚ್ಚಾದಾಗ ಉತ್ಪತ್ತಿಯಾಗುವ ಹೊಟ್ಟೂ ಹೆಚ್ಚಾಗುತ್ತದೆ.
- ಕೆಂಪು ರಕ್ತಕಣಗಳ ಪ್ರತಿಜನ್ಯಗಳು ಮತ್ತು ನಿರ್ದಿಷ್ಟ ಶಿಲೀಂಧ್ರಗಳೊಡನೆಯ ಪ್ರತಿಕ್ರಿಯೆಗಳೂ ಹೆಚ್ಚು ಹೊಟ್ಟು ಉತ್ಪಾದನೆಗೆ ಕಾರಣ ಎನ್ನುತ್ತವೆ ಕೆಲವು ಅಧ್ಯಯನಗಳು. ಹಾಗಾಗಿಯೇ 'ಬಿ' ಪಾಸಿಟಿವ್ ಮತ್ತು 'ಒ' ಪಾಸಿಟಿವ್ ರಕ್ತದ ಗುಂಪಿನ ವ್ಯಕ್ತಿಗಳಲ್ಲಿ ತಲೆಹೊಟ್ಟಿನ ಸಮಸ್ಯೆಯ ಸಂಭವ ಹೆಚ್ಚು. 'ಬಿ' ನೆಗೆಟಿವ್ ಗುಂಪಿನ ವ್ಯಕ್ತಿಗಳಲ್ಲಿ ತಲೆ ಹೊಟ್ಟಿನ ಸಂಭವ ಕಡಿಮೆ.
- ಪಾರ್ಕಿನ್‌ಸನ್ ಮತ್ತಿತರ ನರಸಂಬಂಧಿತ ಕಾಯಿಲೆಗಳಿಂದ ಬಳಲುವವರಲ್ಲಿ ಈ ಸಮಸ್ಯೆಯ ಸಂಭವ ಹೆಚ್ಚು.
- ತಲೆಗೂದಲನ್ನು ಹೆಚ್ಚು ಹೆಚ್ಚು ಬಿಸಿಲು, ದೂಳಿಗೆ ತೆರದಿಡುವುದು ಮತ್ತು ಪ್ರಸಾಧನದ ರೂಪದಲ್ಲಿನ ರಾಸಾಯನಿಕಗಳ ಬಳಕೆಯೂ ತಲೆಹೊಟ್ಟಿನ ಸಮಸ್ಯೆಯನ್ನು ಹೆಚ್ಚಿಸುತ್ತದೆ.
- ಪುರುಷರ ಸಂತಾನೋತ್ಪತ್ತಿ ರಸದೂತಗಳು ಚರ್ಮದ ಕೆಳಪದರಗಳಲ್ಲಿನ ತೈಲಾಂಶ ಉತ್ಪತ್ತಿ ಮಾಡುವ ಗ್ರಂಥಿಗಳನ್ನು ಪ್ರಚೋದಿಸುತ್ತವೆ. ಹಾಗಾಗಿಯೇ ಈ ಸಮಸ್ಯೆ ಪ್ರೌಢವಾಸ್ಥೆಯ ಹೊಸ್ತಿಲಲ್ಲಿನ ಪುರುಷರಲ್ಲಿ ಹೆಚ್ಚು.
- ಆಹಾರದಲ್ಲಿ ಸತು (ಜಿಂಕ್) ಮತ್ತು ವಿಟಮಿನ್ ಬಿ ಸಮೂಹಗಳ ಕೊರತೆಯಿದ್ದಾಗಲೂ ತಲೆಹೊಟ್ಟು ಹೆಚ್ಚು ಕಾಣಿಸಿಕೊಳ್ಳುತ್ತದೆ. ತಲೆಹೊಟ್ಟಿನ ಸಮಸ್ಯೆ ಕೂದಲು ಉದುರುವಿಕೆಗೂ ಕಾರಣವಾಗಬಹುದು. ಆರೋಗ್ಯವಂತ ವ್ಯಕ್ತಿಯಲ್ಲಿ ಸುಮಾರು 50-100 ಕೂದಲುಗಳು ಉದುರಿದರೆ, ಹೊಟ್ಟಿನ ಸಮಸ್ಯೆಯಿರುವವರಲ್ಲಿ ಸುಮಾರು 100-300 ಕೂದಲು ಉದುರುತ್ತವೆ.

ಚಿಕಿತ್ಸೆ ಏನು?

- ಸ್ಯಾಲಿಸಿಲಿಕ್ ಆ್ಯಸಿಡ್, ಸಲ್ಫರ್, ಜಿಂಕ್ ಪೈರಿಥಿಯೋನ್, ಟಾರ್ ಮೊದಲಾದ ರಾಸಾಯನಿಕಗಳನ್ನು ಹೊಂದಿದ ಶ್ಯಾಂಪೂಗಳ ನಿಯಮಿತ ಬಳಕೆಯಿಂದ ಸಮಸ್ಯೆಯನ್ನು ನಿಯಂತ್ರಿಸಬಹುದು.
- ಕೀಟೊಕೊನಜೋಲ್, ಇಮಿಡಜೋಲ್, ಸೆಲೆನಿಯಂ ಸಲ್ಫೈಡ್ ಮೊದಲಾದುವುಗಳನ್ನು ಹೊಂದಿದ ಔಷಧೀಯ ಶ್ಯಾಂಪೂಗಳ ಬಳಕೆಯೂ ಉತ್ತಮ.
- ಚರ್ಮರೋಗತಜ್ಞರ ಸಲಹೆಯ ಮೇರೆಗೆ ಸೂಕ್ತ ಶ್ಯಾಂಪೂವನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ.

ಸಮಸ್ಯೆಯ ನಿಯಂತ್ರಣಕ್ಕೆ

- ವಾರಕ್ಕೆ ಎರಡು ಬಾರಿ ತಲೆಕೂದಲನ್ನು ಸ್ವಚ್ಛಗೊಳಿಸಿಕೊಳ್ಳಿರಿ.
- ನಿಮ್ಮ ಬಾಚಣಿಗೆಯನ್ನು ಪ್ರತ್ಯೇಕವಾಗಿರಿಸಿಕೊಳ್ಳಿ, ಇತರರೊಂದಿಗೆ ಹಂಚಿಕೊಳ್ಳುವುದು ಬೇಡ.
- ಅತಿಯಾದ ಶ್ಯಾಂಪೂ ಬಳಕೆ ಬೇಡ. ಪದೇ ಪದೇ ಶ್ಯಾಂಪೂ ಬದಲಾವಣೆಯೂ ಒಳ್ಳೆಯದಲ್ಲ.
- ಪದೇ ಪದೇ ತಲೆಕೂದಲನ್ನು ಜೋರಾಗಿ ಬಾಚುವುದು, ಬಿಗಿಯಾಗಿ ಎಳೆದು ಕಟ್ಟುವುದು ಕೂಡ ಸಮಸ್ಯೆಯನ್ನು ಉಲ್ಬಣಗೊಳಿಸಬಹುದು.
- ಅತಿಯಾದ ಬಿಸಿಲು, ಗಾಳಿ ಮತ್ತು ದೂಳಿಗೆ ನೆತ್ತಿಯನ್ನು ಒಡ್ಡದಿರವುದು ಕ್ಷೇಮ.
- ಸಮತೋಲನ ಆಹಾರಸೇವನೆಯು ಕೂದಲು ಹಾಗೂ ಚರ್ಮದ ಆರೋಗ್ಯಕ್ಕೂ ಅತ್ಯವಶ್ಯಕ.
- ಅತಿಯಾದ ಒತ್ತಡವೂ ತಲೆಹೊಟ್ಟನ್ನು ಹೆಚ್ಚಿಸಬಹುದು. ಒತ್ತಡ ನಿರ್ವಹಣೆಯ ಕೌಶಲಗಳನ್ನು ಕರಗತಗೊಳಿಸಿಕೊಳ್ಳಿರಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ 5.2

8) 50 ಪದಗಳನ್ನು ಹೊಂದಿರುವ ಸಮಾಂತರ ಶ್ರೇಢಿಯ 3ನೇ ಪದ 12 ಮತ್ತು ಕೊನೆಯ ಪದ 106 ಆದರೆ 29ನೇ ಪದ ಕಂಡುಹಿಡಿಯಿರಿ

ಪರಿಹಾರ:- ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 3ನೇ ಪದ = 12

$a + (3-1)d = 12 \quad (\because a_n = a + (n-1)d)$

$a + 2d = 12$ .... (1)

ಕೊನೆಯ ಪದ ಮತ್ತು 50ನೇ ಪದ = 106

$a + (50-1)d = 106.$

$a + (49)d = 106$ .... (2)

(1) ಮತ್ತು (2)ನ್ನು ಬಿಡಿಸುವುದರಿಂದ

$a + 49d = 106$

$a + 2d = 12$

(-) (-) (-)

$47d = 94 \quad \therefore d = 2$

ಈಗ ಸಮೀಕರಣ 1ನ್ನು ತೆಗೆದುಕೊಂಡು ಅದರಲ್ಲಿ $d = 2$ ಆದೇಶಿಸಿದಾಗ

$a + 2d = 12 \Rightarrow a + 2(2) = 12 \Rightarrow a = 8$

$\therefore a = 8 \quad d = 2$ ಲಭ್ಯವಾಗುವುದು

ಆದ್ದರಿಂದ 29ನೇ ಪದ =

$= 8+(29-1)d \quad (\because a_n = a + (n-1)d)$

$= 8 + 28d \Rightarrow = 8+(28)(2) \Rightarrow = 8+56 = 64$

9) ಒಂದು ಸಮಾಂತರ ಶ್ರೇಢಿಯ 3ನೇ ಮತ್ತು 9ನೇ ಪದಗಳು ಕ್ರಮವಾಗಿ 4 ಮತ್ತು –8 ಆದರೆ ಅದರ ಎಷ್ಟನೇ ಪದ ಸೊನ್ನೆಯಾಗಿದೆ?

ಪರಿಹಾರ:- ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 3ನೇ ಪದ= 4

$a + (3-1)d = 4 \quad (\because a_n = a + (n-1)d)$

$a + 2d = 4$ .... (1)

9ನೇ ಪದ = - 8

$a + (9-1)d = -8$

$a + 8d = -8$ ....(2)

(1) ಮತ್ತು (2)ನ್ನು ಬಿಡಿಸುವುದರಿಂದ

$a = 8 \quad d = -2$

ಸಮಾಂತರ ಶ್ರೇಢಿಯ nನೇ ಪದ ಶೂನ್ಯವಾದಾಗ

$a + (n-1)d = 0 \quad (a_n = a + (n-1)d)$

$= 8+(n-1)(-2) = 0$

$= -2(n-1) = -8 \Rightarrow = -2(n-1) = -8 \Rightarrow n-1 = -8/-2 = 4$

$n = 4+1 = 5$

5ನೇ ಪದ ವು ಶೂನ್ಯವಾಗಿದೆ

10) ಒಂದು ಸಮಾಂತರ ಶ್ರೇಢಿಯ 17ನೇ ಪದವು ಅದರ 10ನೇ ಪದಕ್ಕಿಂತ 7 ಹೆಚ್ಚಾಗಿದ್ದರೆ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

ಪರಿಹಾರ:- ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

ಪ್ರಶ್ನೆಯಲ್ಲಿ ಕೊಟ್ಟಂತೆ $a_{17} = a_{10} + 7$

$a + (17-1)d = a + (10-1)d + 7$

$(\because a_n = a + (n-1)d)$

$a + 16d = a + 9d + 7$

$16d - 9d = 7 \Rightarrow 7d = 7 \Rightarrow d = 7/7 = 1$

ಸಾಮಾನ್ಯ ವ್ಯತ್ಯಾಸ = 1

11) 3, 15, 27, 39 .... ಈ ಸಮಾಂತರ ಶ್ರೇಢಿಯ ಯಾವ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿದೆ?

ನೀಡಿರುವ ಸಮಾಂತರ ಶ್ರೇಢಿ 3, 15, 27, 39.........

ಇಲ್ಲಿ $a = 3 \quad d = 15-3 = 12$

$a_n = a + (n-1)d$

$a_{54} = a + 53d$

$= 3 + 53(12)$

$= 639$

nನೇ ಪದವು 54ನೇ ಪದಕ್ಕಿಂತ 132 ಹೆಚ್ಚಾಗಿದೆ ಎಂದು ಭಾವಿಸಿದಾಗ

$a_n = a_{54} + 132$

$= 639 + 132$

$= 771$

$a + (n-1)d = 771$

$(n-1)12 = 771 - a$

$(n-1)12 = 771 - 3$

$(n-1)12 = 768$

$(n-1) = 768/12$

$(n-1) = 64$

$n = 65$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿದೆ

12) ಎರಡು ಸಮಾಂತರ ಶ್ರೇಢಿಗಳ ಸಾಮಾನ್ಯ ವ್ಯತ್ಯಾಸ ಒಂದೇ ಆಗಿದೆ. ಅವುಗಳ 100ನೇ ಪದಗಳ ನಡುವಿನ ವ್ಯತ್ಯಾಸ 100 ಆದರೆ 1000ನೇ ಪದಗಳ ನಡುವಿನ ವ್ಯತ್ಯಾಸವೇನು?

ಪರಿಹಾರ:- ಎರಡೂ ಸಮಾಂತರ ಶ್ರೇಢಿಯ ಮೊದಲ ಪದಗಳು ಕ್ರಮವಾಗಿ a_1 ಮತ್ತು a_2 ($a_1 > a_2$) ಆಗಿರಲಿ.

ಸಾಮಾನ್ಯ ವ್ಯತ್ಯಾಸ d ಆಗಿರಲಿ

ಮೊದಲ ಪದ =

$a_1 + (100-1)d \quad (\because a_n = a + (n-1)d)$

$= a_1 + 99d$

ಎರಡನೇ ಪದ=

$a_2 + (100-1)d \quad (\because a_n = a + (n-1)d)$

$= a_2 + 99d$

ದತ್ತ ಪ್ರಶ್ನೆಯ ಪ್ರಕಾರ

$a_1 + (99)d - a_2 + (99)d = 100$

$a_1 - a_2 = 100$

ಈಗ 1000^{th} term of the 1^{st} AP

$a_1 + (1000-1)d \quad (\because a_n = a + (n-1)d)$

$= a_1 + 999d$

1000^{th} term of the 2nd AP

$a_2 + (1000-1)d \quad (\because a_n = a + (n-1)d)$

$= a_2 + 999d$

ಆದ್ದರಿಂದ ಇವುಗಳ 1000ನೇ ಪದಗಳ ನಡುವಿನ ವ್ಯತ್ಯಾಸ =

$(a_1 + 999)d - (a_2 + 999)d$

$a_1 - a_2 = 100$

13) ಮೂರು ಅಂಕಿಗಳ ಎಷ್ಟು ಸಂಖ್ಯೆಗಳು 7ರಿಂದ ಭಾಗಿಸಲ್ಪಡುತ್ತದೆ?

ಪರಿಹಾರ:- 7ರಿಂದ ಭಾಗಿಸಲ್ಪಡುವ ಮೂರು ಅಂಕಿಯ ಸಂಖ್ಯೆಗಳು 105, 112, 119, 126........994

$\Rightarrow a_2 - a_1 = 112 - 105 = 7$

$\Rightarrow a_3 - a_2 = 119 - 112 = 7$

$\Rightarrow a_4 - a_3 = 126 - 119 = 7$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 7$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2
ELECTROSTATIC POTENTIAL AND CAPACITANCE

(........Contd)

5. If an air capacitor is given a charge of 2 μF, its p.d is raised to 200V. If on inserting a dielectric medium its p.d falls to 50V, what is the dielectric constant of the medium?

Soln:- When dielectric is introduced, the p. d between the plates of the capacitor decreases by a factor equal to dielectric constant. Therefore,

$$K = \frac{V}{V'} = \frac{200}{50} = 4$$

6. Three capacitors of capacitance of each 2 μF are connected in parallel. Find the resultant capacitance in Farad.

Soln:– Given, 3 capacitors

$C_1 = C_2 = C_3 = C = 2\mu F$

When they are connected in parallel the capacitance of the resultant capacitor is given by, $C_p = nC = 3 \times 2$

$\therefore C_p = 6\mu F$

7. The volumes of the conducting spheres are in the ratio 1: 8. What is the ratio of their capacitance?

Soln:–Ratio of the volumes capacitors are 1:8

$$\Rightarrow \frac{V_1}{V_2} = \frac{r_1^3}{r_2^3} = \frac{1}{8}$$

$$\therefore \frac{r_1}{r_2} = \frac{1}{2}$$

Ratio of the capacitance $\frac{C_1}{C_2} = \frac{r_1}{r_2} = \frac{1}{2} = 1:2$

8. Two capacitors of capacity 2 μF and 4 μF are connected in parallel across 20 V supply. The energy stored in the combination is ......

Soln:–Given, $C_1 = 2\mu F$, $C_2 = 4\mu F$ & $V = 20V$

If U is the energy stored in the combination,

then, $U = \frac{1}{2} C_p V^2 \quad (C_p = C_1 + C_2)$

$= \frac{1}{2}(2+4)10^{-6} \times 20^2 = 1.2 \times 10^{-3} J$

9. Two capacitors of capacitance of each 2 μF and 6 μF are connected in series. Find the resultant capacitance in Farad.

Soln:–Given, capacitors $C_1 = 2\mu F$, $C_2 = 6\mu F$

When they are connected end to end means they are in series.

The capacitance of the resultant capacitor is given by, $\frac{1}{C_s} = \frac{1}{C_1} + \frac{1}{C_2} = \frac{1}{2} + \frac{1}{6} = \frac{2}{3}$

$\therefore C_s = \frac{3}{2}\mu F = 1.5\mu F$

Answer the following questions:-

33. If an earthed metal plate is brought near a charged spherical conductor mounted on an insulated stand. What happens to the -

(a) p.d of the conductor

(c) charge on the capacitor

(d) capacitance of the conductor

Ans:- If an earthed metal plate is brought near a charged spherical conductor mounted on an insulated stand.

(a) p.d of the conductor decreases

(b) charge on the capacitor is not altered

(c) capacitance of the conductor increases

34. Mention some of the uses of the capacitors.

Ans:- Some of the uses of the capacitors are as follows –

(a) they are used to store the electric charges and energy.

(b) they are used to eliminate sparking as in an induction coil

(c) they are used to deflect the electron beams

(d) they are used in radio circuits for tuning

(e) they are used to reduce pulsations in the electronic power systems

(f) they are used to determine very high resistance say of the order mega ohms

(g) they are used as potential dividers

(h) they are used to separate the radio active radiations

(i) they are used in the generation and detection of the electromagnetic waves

(j) they are used in ignition system of automobile engines.

35. Four capacitors 2μ F, 3μ F, 4μ F and 5μ F are connected in the form of a rectangle ABCD as in the figure.



Calculate the capacitance between the diagonals. Across which diagonal is the effective capacitance more.

Soln:- As per the figure, across AC, the capacitors 2μ F and 3μ F are in series.

The effective capacitance,

$$C_1 = \frac{2 \times 3}{2+3} = \frac{6}{5}\mu F$$

and the capacitors 4μ F and 5μ F are in series, therefore the effective capacitance,

$$C_2 = \frac{4 \times 5}{4+5} = \frac{20}{9}\mu F$$

(Contd........)

ಮುಂದಿನ ಕಾನೂನು ಹೋರಾಟ ಕುರಿತು ಚರ್ಚೆ?

ಪತ್ನಿ, ಪುತ್ರ ಭೇಟಿ; ದರ್ಶನ್ ಕಣ್ಣೀರು

ಪ್ರಜಾವಾಣಿ ವಾರ್ತೆ

ದರ್ಶನ್

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧ-ನದಲ್ಲಿರುವ ನಟ ದರ್ಶನ್ ಅವರನ್ನು ಪತ್ನಿ ವಿಜಯಲಕ್ಷ್ಮಿ ಹಾಗೂ ಅವರ ಪುತ್ರ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಸೋಮವಾರ ಭೇಟಿ ಮಾಡಿದರು.

ಈ ವೇಳೆ ದರ್ಶನ್ ಗೆಳೆಯ, ನಟ ವಿನೋದ್ ಪ್ರಭಾಕರ್ ಇದ್ದರು. ಮೂವರ ಎದುರು ದರ್ಶನ್ ಕಣ್ಣೀರು ಹಾಕಿದ್ದಾರೆ ಎಂದು ಗೊತ್ತಾಗಿದೆ. ಇದೇ ವೇಳೆ ಮುಂದಿನ ಕಾನೂನು ಹೋರಾಟದ ಬಗ್ಗೆಯೂ ಚರ್ಚಿಸಿದ್ದಾರೆ ಹೇಳಲಾಗಿದೆ.

ಅದಕ್ಕೂ ಮುನ್ನ ಕಾರಾಗೃಹ ಬಳಿಗೆ ಬಂದ ವಿಜಯಲಕ್ಷ್ಮಿ ಮಾಧ್ಯಮದವರನ್ನು ಕಂಡು ವಾಪಸು ತೆರಳಿದ್ದರು. ಮತ್ತೆ ಬೇರೊಂದು ಕಾರಿನಲ್ಲಿ ಬಂದ ಅವರನ್ನು ಪೊಲೀಸರು ದರ್ಶನ್ ಭೇಟಿಗೆ ಕರೆದೊಯ್ದರು. ಸುಮಾರು ಅರ್ಧ ತಾಸಿನ ಭೇಟಿ ಬಳಿಕ ವಿಜಯಲಕ್ಷ್ಮಿ ಕಾರಾಗೃಹದಿಂದ ನಿರ್ಗಮಿಸಿದರು ಎಂದು ಮೂಲಗಳು ಹೇಳಿವೆ. 'ದರ್ಶನ್ ರನ್ನು ನಾಲ್ಕು ತಿಂಗಳಿಂದ ಭೇಟಿ ಆಗಿರಲಿಲ್ಲ. ಅವರ ಜನ್ಮದಿನದಂದು ಭೇಟಿಯಾಗಿದ್ದೆ' ಎಂದು ವಿನೋದ್ ಬಳಿಕ ಮಾಧ್ಯಮದವರೊಂದಿಗೆ ಮಾತನಾಡುತ್ತಾ ತಿಳಿಸಿದರು.

'ದರ್ಶನ್ ಅವರು ಪೊಲೀಸ್ ಕಸ್ಟಡಿಯಲ್ಲಿ ಇದ್ದಾಗ ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ಇದೀಗ ಅವರನ್ನು ಭೇಟಿ ಮಾಡಿದ್ದೇನೆ. ಹೆಚ್ಚೇನೂ ಮಾತನಾಡಲು ಸಾಧ್ಯವಾಗಲಿಲ್ಲ. ಕೈ ಕುಲುಕಿದ ದರ್ಶನ್ ಸರ್, ನನ್ನನ್ನು ಏನ್ ಟೈಗರ್? ಹೇಗಿದ್ದೀಯಾ ಎಂದು ಕೇಳಿದರು' ಎಂದು ಪ್ರತಿಕ್ರಿಯಿಸಿದರು.

ಪವಿತ್ರಾ ಖಾತೆಗೆ ₹2 ಕೋಟಿ?

ಒಂದನೇ ಪುಟದಿಂದ...

ಪ್ರತ್ಯೇಕ ದೂರು ನೀಡಿದ್ದರಿಂದ ಆತ್ಮಹತ್ಯೆ ಪ್ರಚೋದನೆ ಆಯಾಮದಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದರು. ಇದೀಗ ಪವಿತ್ರಾ ಪಿ. ಹೆಸರಿನ ಖಾತೆಗೆ ಹಣ ಸಂದಾಯ ಆಗಿರುವುದು ಗೊತ್ತಾಗಿದೆ.

'ಹಣದ ವ್ಯವಹಾರದ ಬಗ್ಗೆ ಸೌಂದರ್ಯ ಜಗದೀಶ್ ಅವರ ಪಾಲುದಾರ ಸುರೇಶ್ ಅವರು ದಾಖಲೆಗಳನ್ನು ಪೊಲೀಸರಿಗೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಸೌಂದರ್ಯ ಜಗದೀಶ್ ಅವರು 'ಸೌಂದರ್ಯ ಕನ್‌ಸ್ಟ್ರಕ್ಷನ್' ಕಂಪನಿ ನಡೆಸುತ್ತಿದ್ದರು. ವಿ.ಎಸ್.ಸುರೇಶ್, ಎಸ್.ಪಿ. ಹೊಂಬಣ್ಣ ಹಾಗೂ ಸುಧೀಂದ್ರ ಅವರು ಕಂಪನಿಯ ಸಹ ಪಾಲುದಾರರು ಆಗಿದ್ದರು. ತಮ್ಮ ಕೆಲ ಆಸ್ತಿಯನ್ನು ಬ್ಯಾಂಕ್‌ನಲ್ಲಿ ಅಡವಿಟ್ಟಿದ್ದ ಸೌಂದರ್ಯ ಜಗದೀಶ್, ₹60 ಕೋಟಿ ಸಾಲ ಪಡೆದು ಕಂಪನಿಯಲ್ಲಿ ಹೂಡಿಕೆ ಮಾಡಿದ್ದರು. ಕಂಪನಿ ನಷ್ಟದಲ್ಲಿರುವುದಾಗಿ ಹೇಳಿದ್ದ ಸಹ ಪಾಲುದಾರರು, ₹60 ಕೋಟಿ ವಂಚಿಸಿದ್ದರು. ಜೊತೆಗೆ, ಸೌಂದರ್ಯ ಜಗದೀಶ್ ಅವರಿಂದ ಹಲವು ದಾಖಲೆಗಳಿಗೆ ಸಹಿ ಪಡೆದು-ಕೊಂಡಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಸಹ ಪಾಲುದಾರರು, ಜೀವ ಬೆದರಿಕೆ ಒಡ್ಡಿದ್ದರು. ಇದರ ಕಿರುಕುಳದಿಂದಲೇ ಸೌಂದರ್ಯ ಜಗದೀಶ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಶಶಿರೇಖಾ ದೂರಿನಲ್ಲಿ ತಿಳಿಸಿದ್ದರು.

'ಸೌಂದರ್ಯ ಜಗದೀಶ್ ಅವರ ಕೊಠಡಿಯಲ್ಲಿದ್ದ ಬಟ್ಟೆಯಲ್ಲಿ ಮರಣ ಪತ್ರವೊಂದು ಸಿಕ್ಕಿತ್ತು. ಅದೇ ಮರಣಪತ್ರ ಆಧರಿಸಿ ಪತ್ನಿ ದೂರು ನೀಡಿದ್ದರು. ಅದನ್ನು ಆಧರಿಸಿಯೇ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜು.1ರವರೆಗೆ ಸೂರಜ್ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಸೂರಜ್ ರೇವಣ್ಣ

ಬೆಂಗಳೂರು: ಯುವಕರೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಹೊತ್ತಿರುವ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರನ್ನು ಜನಪ್ರ-ತಿನಿಧಿಗಳ ವಿಶೇಷ ನ್ಯಾಯಾಲಯ ಜುಲೈ 1ರವರೆಗೆ ಸಿಐಡಿ ಕಸ್ಟಡಿಗೆ ನೀಡಿ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ (42ನೇ ಎಸಿಎಂಎಂ) ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಸೋಮವಾರ ವಿಚಾರಣೆ ನಡೆಸಿದರು.

ಸೂರಜ್ ರೇವಣ್ಣ ಅವರನ್ನು ಭಾನುವಾರವಷ್ಟೇ (ಜೂನ್ 23) ನ್ಯಾಯಾಧೀಶ ಶಿವಕುಮಾರ್ ಅವರ ಕೋರಮಂಗಲದ ನಿವಾಸದಲ್ಲಿ ಹಾಜರು ಪಡಿಸಲಾಗಿತ್ತು. ಹೀಗಾಗಿ, ಕಲಾಪದ ದಿನವಾದ ಸೋಮವಾರದಂದು ಕೋರ್ಟ್‌ಗೆ ಹಾಜರುಪಡಿಸಿ-ದಾಗ ಪ್ರಾಸಿಕ್ಯೂಷನ್ ಪರ ವಕೀಲ ಸಿ.ವಿಶ್ವನಾಥ್ ಅವರು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಮನವಿ ಮಾಡಿದರು.

ಇದಕ್ಕೆ ಸೂರಜ್ ರೇವಣ್ಣ ಪರ ವಕೀಲ ನಿಖಿಲ್ ಡಿ.ಕಾಮತ್ ತೀವ್ರ ಆಕ್ಷೇಪ ವ್ಯಕ್ತಪಡಿಸಿ, 'ಎರಡು ಅಥವಾ ಮೂರು ದಿನ ಕೊಟ್ಟರೆ ಸಾಕು. 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವುದು ಕೇವಲ ಕಿರುಕುಳದ ಉದ್ದೇಶ ಅಷ್ಟೇ. ಪ್ರಕರಣದಲ್ಲಿ ದೂರುದಾರ ಘಟನೆ ನಡೆದ ಸಮಯದಲ್ಲಿ ದೂರು ನೀಡಿಲ್ಲ. ಬದಲಾಗಿ ತಡವಾಗಿ ದೂರು ಸಲ್ಲಿಸಿದ್ದಾನೆ. ಬ್ಲಾಕ್ ಮೇಲ್ ಮಾಡುವ ಯತ್ನ ನಡೆಸಿದ್ದಾನೆ' ಎಂದರು.

ಇದನ್ನು ವಿಶ್ವನಾಥ್ ಅಲ್ಲಗಳೆದರಾದರೂ, ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು ಜುಲೈ 1ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿ ವಿಚಾರಣೆ ಮುಂದೂಡಿದರು.

ಸೂರಜ್ ವಿಚಾರಣೆಗೆ ಸಿಐಡಿ ತನಿಖಾ ತಂಡ

'ಸೂರಜ್ ರೇವಣ್ಣ ವಿರುದ್ಧ ದಾಖಲಾದ ಲೈಂಗಿಕ ದೌರ್ಜನ್ಯ ಪ್ರಕರಣದ ತನಿಖೆ ನಡೆಸಲು ತಂಡವನ್ನು ನೇಮಿಸಲಾಗಿದ್ದು, ಮಂಗಳವಾರದಿಂದ ಆರೋಪಿ ವಿಚಾರಣೆ ನಡೆಸಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

ತನಿಖಾಧಿಕಾರಿಗಳಾಗಿ ಸಿಐಡಿ ಎಸ್‌ಪಿ ವೆಂಕಟೇಶ್, ಡಿವೈಎಸ್‌ಪಿ ಉಮೇಶ್, ಇನ್‌ಸ್ಪೆಕ್ಟರ್ ನರೇಂದ್ರ ಬಾಬು ಅವರನ್ನು ನೇಮಕ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ. 'ಸಿಐಡಿ ಕಚೇರಿಯಲ್ಲೇ ವಿಚಾರಣೆ ನಡೆಯಲಿದೆ. ತನಿಖೆಗೆ ಸಿದ್ಧತೆ ನಡೆಸಲಾಗಿದೆ. ಆರೋಪಿ ಹೇಳಿಕೆಗಳನ್ನು ವಿಡಿಯೊ ರೆಕಾರ್ಡ್ ಮಾಡಲಾಗುವುದು. ಕೃತ್ಯ ನಡೆದ ಸ್ಥಳಕ್ಕೆ ಆರೋಪಿಯನ್ನು ಕರೆದೊಯ್ದು ಸ್ಥಳ ಮಹಜರು ನಡೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಸಂತ್ರಸ್ತರ ದೂರು ಆಧರಿಸಿ ಹೊಳೆನರಸೀಪುರ ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. 8 ಗಂಟೆ ವಿಚಾರಣೆ ನಡೆಸಿ ನಂತರ ಬಂಧಿಸಿದ್ದರು. ಬಳಿಕ ಪೊಲೀಸರು ಆರೋಪಿಯನ್ನು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹಕ್ಕೆ ಬಿಟ್ಟಿದ್ದರು. ಈ ನಡುವೆ ರಾಜ್ಯ ಸರ್ಕಾರ ಈ ಪ್ರಕರಣವನ್ನು ಸಿಐಡಿ ತನಿಖೆಗೆ ಆದೇಶಿಸಿತ್ತು. ಹೀಗಾಗಿ ಆರೋಪಿಯನ್ನು ವಿಚಾರಣೆಗೆ ಒಳಪಡಿಸಲು ಸಿಐಡಿ ಅಧಿಕಾರಿಗಳು ಸೋಮವಾರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಬಾಡಿ ವಾರಂಟ್ ಅರ್ಜಿ ಸಲ್ಲಿಸಿದ್ದರು.

ಪ್ರಜ್ವಲ್‌ಗೆ ಮತ್ತೆ ನ್ಯಾಯಾಂಗ ಬಂಧನ

ಬೆಂಗಳೂರು: ಹಲವು ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ್ದ ಆರೋಪದಡಿ ಬಂಧನಕ್ಕೆ ಒಳಗಾಗಿ ಎಸ್‌ಐಟಿ ಕಸ್ಟಡಿಯಲ್ಲಿದ್ದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಜುಲೈ 8ರ ವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಅವರು ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದು, ಪ್ರಜ್ವಲ್ ಅವರು ಮತ್ತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದರು.

ಅತ್ಯಾಚಾರ ಪ್ರಕರಣ ದಾಖಲಾದ ಮೇಲೆ ಪ್ರಜ್ವಲ್ ವಿದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದರು. ಅವರು ವಾಪಸ್ಸಾದ ಮೇಲೆ ಎಸ್‌ಐಟಿ ಬಂಧಿಸಿತ್ತು.

ಮೇ 21ರಂದು ಬಂಧಿತರಾಗಿದ್ದ ಪ್ರಜ್ವಲ್ ಅವರು ಮೇ 31ರಿಂದ ಜೂನ್ 10ರ ವರೆಗೆ ಎಸ್‌ಐಟಿ ಕಸ್ಟಡಿಯಲ್ಲಿದ್ದರು. ನಂತರ, ಎರಡನೇ ಅತ್ಯಾಚಾರ ಪ್ರಕರಣದಲ್ಲಿ ಜೂನ್ 13ರಿಂದ 18ರವರೆಗೆ ಎಸ್‌ಐಟಿ ಕಸ್ಟಡಿಯಲ್ಲಿದ್ದರು. ಮೂರನೇ ಅತ್ಯಾಚಾರ ಪ್ರಕರಣದಲ್ಲಿ ಜೂನ್ 24ರ ವರೆಗೆ ಎಸ್‌ಐಟಿ ವಶಕ್ಕೆ ನ್ಯಾಯಾಲಯ ನೀಡಿತ್ತು.

ಪ್ರಜ್ವಲ್, ಸೂರಜ್ ವಿರುದ್ಧದ ಪ್ರಕರಣ: ಗೃಹ ಸಚಿವರ ಹೇಳಿಕೆ

'ಕಾನೂನು ಎಲ್ಲರಿಗೂ ಒಂದೇ'

ಪ್ರಜಾವಾಣಿ ವಾರ್ತೆ

ಹಾಸನ: 'ಜಿಲ್ಲೆಯಲ್ಲಿ ನಡೆದಿರುವ ಅಪರಾಧ ಪ್ರಕರಣಗಳಲ್ಲಿ ಯಾರನ್ನೂ ರಕ್ಷಿಸದೇ, ಯಾವ ಒತ್ತಡಕ್ಕೂ ಮಣಿಯದೇ ಕ್ರಮ ಕೈಗೊಂಡಿದ್ದೇವೆ. ಎಲ್ಲರಿಗೂ ಇರುವುದು ಒಂದೇ ಕಾನೂನು' ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಪ್ರತಿಪಾದಿಸಿದರು.

ನಗರದ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ಬಳಿಕ ಸುದ್ದಿಗೋಷ್ಠಿ-ಯಲ್ಲಿ ಮಾತನಾಡಿದ ಅವರು, 'ಸೂರಜ್ ರೇವಣ್ಣ ಪ್ರಕರಣ ರಾಜಕೀಯ ಷಡ್ಯಂತ್ರ ಎಂದು ಎಚ್.ಡಿ. ಕುಮಾರಸ್ವಾಮಿ ಆರೋಪಿಸಿರುವುದು ಸತ್ಯಕ್ಕೆ ದೂರವಾದ ವಿಚಾರ' ಎಂದರು.

'ಪ್ರಜ್ವಲ್ ರೇವಣ್ಣ ಪ್ರಕರಣ-ದಲ್ಲೂ ದೂರು ಬಂದ ನಂತರವೇ ಸರ್ಕಾರ ತನಿಖೆಗೆ ಆದೇಶಿಸಿತ್ತು. ರಾಜಕೀಯ ದುರುದ್ದೇಶವಿಲ್ಲ ಎಂಬುದು ಅದರಿಂದಲೇ ಸಾಬೀತಾಗುತ್ತಿದೆ. ಎರಡೂ ಕಡೆಯ ದೂರನ್ನು ಪರಿಗಣಿಸಿ ತನಿಖೆ ನಡೆದಿದೆ. ಎಸ್‌ಐಟಿ ತನಿಖೆಯ ಬಗ್ಗೆ ಸಂಶಯ ಬೇಡ' ಎಂದು ಸ್ಪಷ್ಟಪಡಿಸಿದರು.

> **ಮಾನಗೇಡಿ ಕೆಲಸ ಮಾಡಲು ನಾವು ಹೇಳಿದ್ವಾ? ಅಂಥ ಕೆಲಸ ಪ್ರಜ್ವಲ್ ಮತ್ತು ಸೂರಜ್ ಮಾಡಿಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಲಿ ನೋಡೋಣ**
> **ಆರ್.ಬಿ.ತಿಮ್ಮಾಪುರ,** ಸಚಿವ

> **'ಎಚ್.ಡಿ. ರೇವಣ್ಣ ಕುಟುಂಬದವರ ವಿರುದ್ಧ ದಾಖಲಾಗುತ್ತಿರುವ ದೂರುಗಳಲ್ಲಿ ಕಾಂಗ್ರೆಸ್ ಪಕ್ಷದವರ ಪಾತ್ರವಿಲ್ಲ**
> **ದಿನೇಶ್ ಗುಂಡೂರಾವ್**
> ಆರೋಗ್ಯ ಸಚಿವ

'ತಿಂಗಳಲ್ಲಿ 3 ಜಿಲ್ಲೆಗಳಲ್ಲಿ ವಕ್ಫ್ ಅದಾಲತ್'

ಪ್ರಜಾವಾಣಿ ವಾರ್ತೆ

ಬೀದರ್: ತಿಂಗಳಲ್ಲಿ ಮೂರು ಜಿಲ್ಲೆಗಳಲ್ಲಿ ವಕ್ಫ್ ಅದಾಲತ್ ನಡೆಸಲು ತೀರ್ಮಾನಿಸಿರುವುದಾಗಿ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝಡ್. ಜಮೀರ್ ಅಹಮ್ಮದ್ ಖಾನ್ ಹೇಳಿದರು.

ಬೀದರ್ ಜಿಲ್ಲೆಯಿಂದ ಸೋಮವಾರ ವಕ್ಫ್ ಅದಾಲತ್ ಕುಂದುಕೊರತೆಗಳ ಸಭೆ ಆರಂಭಿಸಿದ ಅವರು ವಕ್ಫ್ ಆಸ್ತಿ ಕಬಳಿಕೆ, ಸರ್ವೇ, ಖಬರಸ್ತಾನಗಳ ಸಂರಕ್ಷಣೆಗೆ ಸಂಬಂಧಿಸಿದಂತೆ 178 ಜನರಿಂದ ಅಹವಾಲು ಸ್ವೀಕರಿಸಿದರು.

ಆನಂತರ ಮಾತನಾಡಿದ ಸಚಿವರು, 'ಆಯಾ ಜಿಲ್ಲೆಗಳಿಗೆ ತೆರಳಿ, ಜನರಿಂದ ನೇರವಾಗಿ ಸಮಸ್ಯೆಗಳನ್ನು ಆಲಿಸಿ ಪರಿಹಾರ ಒದಗಿಸುವುದು ಇದರ ಮುಖ್ಯ ಉದ್ದೇಶ' ಎಂದರು. 'ಕಲಬುರಗಿ, ಮಂಗಳೂರು ಸೇರಿದಂತೆ ರಾಜ್ಯದ ನಾಲ್ಕು ಕಡೆ ಹಜ್ ಭವನಗಳನ್ನು ನಿರ್ಮಿಸಲಾಗುವುದು. ನಮ್ಮ ಸರ್ಕಾರದಲ್ಲಿ ಐದು ವರ್ಷ ಈ ಇಲಾಖೆಯ ಸಚಿವನಾಗಿದ್ದರೆ, ಉತ್ತಮ ಕೆಲಸ ಮಾಡಿ ಹೊಸ ಇತಿಹಾಸ ನಿರ್ಮಿಸುವೆ' ಎಂದರು.

ಎಚ್.ಡಿ. ಕುಮಾರಸ್ವಾಮಿ–ಜಾರಕಿಹೊಳಿ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಸೋಮವಾರ ಇಲ್ಲಿ ಭೇಟಿ ಮಾಡಿ ಚರ್ಚಿಸಿದ್ದು, ಇದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದ ಪತನಕ್ಕೆ ರಮೇಶ ಜಾರಕಿಹೊಳಿ ಪ್ರಮುಖ ಕಾರಣಕರ್ತ-ರಾಗಿದ್ದರು. ಲೋಕಸಭೆ ಚುನಾವಣೆಯ ಬಳಿಕ ಕಾಂಗ್ರೆಸ್ ಸರ್ಕಾರ ಪತನಗೊಳ್ಳಲಿದೆ ಎಂದು ಜಾರಕಿಹೊಳಿ ಸೇರಿ ಹಲವರು ಹೇಳಿಕೆ ನೀಡಿದ್ದರು.

ಇದರ ಬೆನ್ನಲ್ಲೇ, ಉಭಯ ನಾಯಕರು ಭೇಟಿ ಮಾಡಿ ಚರ್ಚಿಸಿದ್ದಾರೆ. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್, ಸಂಸದ ಮಲ್ಲೇಶ್ ಬಾಬು, ಜೆಡಿಎಸ್ ಮುಖಂಡ ಎನ್.ಆರ್.ಸಂತೋಷ್ ಅವರು ಸಚಿವರನ್ನು ಭೇಟಿ ಮಾಡಿದರು.

ವಿಧಾನ ಪರಿಷತ್: 17 ಮಂದಿ ಪ್ರಮಾಣ ವಚನ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ಒಟ್ಟು 17 ಸದಸ್ಯರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಉಪಸ್ಥಿತರಿದ್ದರು

ಬೆಂಗಳೂರು: ವಿಧಾನ ಪರಿಷತ್‌ಗೆ ವಿಧಾನಸಭೆಯಿಂದ ಅವಿರೋಧವಾಗಿ ಆಯ್ಕೆಯಾದ ಹಾಗೂ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳಿಂದ ಚುನಾಯಿತರಾದ ಒಟ್ಟು 17 ಸದಸ್ಯರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಯಕ್ರಮ ನಡೆಯಿತು.

ವಿಧಾನಸಭೆಯಿಂದ ಆಯ್ಕೆಯಾದ ಕೆ. ಗೋವಿಂದರಾಜು, ಐವನ್ ಡಿಸೋಜ, ಬಿಲ್ಕಿಸ್ ಬಾನು, ಜಗದೇವ್ ಗುತ್ತೇದಾರ್, ಎನ್.ಎಸ್. ಬೋಸರಾಜು, ಡಾ. ಯತೀಂದ್ರ ಸಿದ್ದರಾಮಯ್ಯ ಹಾಗೂ ಎ. ವಸಂತ ಕುಮಾರ್ ಪ್ರಮಾಣ ವಚನ ಸ್ವೀಕರಿಸಿದರು. ವಿರೋಧ ಪಕ್ಷ ಬಿಜೆಪಿಯ ಎಂ.ಜಿ. ಮುಳೆ, ಸಿ.ಟಿ. ರವಿ, ಎನ್. ರವಿಕುಮಾರ್, ಜೆಡಿಎಸ್‌ನ ಟಿ.ಎನ್. ಜವರಾಯಿಗೌಡ, ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾದ ಚಂದ್ರಶೇಖರ ಪಾಟೀಲ ಬಸವರಾಜ, ಡಾ. ಧನಂಜಯ ಸರ್ಜಿ, ರಾಮೋಜಿಗೌಡ, ಎಸ್.ಎಲ್. ಬೋಜೇಗೌಡ, ಕೆ. ವಿವೇಕಾನಂದ ಹಾಗೂ ಡಿ.ಟಿ. ಶ್ರೀನಿವಾಸ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಕಾಂಗ್ರೆಸ್ ಬಲ 35ಕ್ಕೆ ಏರಿಕೆ: ಇತ್ತೀಚೆಗೆ 17 ಕ್ಷೇತ್ರಗಳಿಗೆ ನಡೆದ ವಿವಿಧ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 10, ಬಿಜೆಪಿಗೆ 4 ಮತ್ತು ಜೆಡಿಎಸ್‌ಗೆ 3 ಸ್ಥಾನಗಳು ಸಿಕ್ಕಿವೆ. ಇದರಿಂದ ಕಾಂಗ್ರೆಸ್ ಬಲ 34ಕ್ಕೆ ಏರಿದರೆ, ಬಿಜೆಪಿ ಸಂಖ್ಯೆ 30ಕ್ಕೆ ಇಳಿದಿತ್ತು. ವಿಧಾನಪರಿಷತ್ ವಿರೋಧ ಪಕ್ಷದ ನಾಯಕರಾಗಿದ್ದ ಕೋಟ ಶ್ರೀನಿವಾಸ ಪೂಜಾರಿ ಅವರು ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ಸಂಸದರಾಗಿ ಆಯ್ಕೆ ಆಗಿರುವುದರಿಂದ ಅವರು ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಹೀಗಾಗಿ ಬಿಜೆಪಿಯ ಸಂಖ್ಯೆ ಇನ್ನೂ ಒಂದು ಸ್ಥಾನ ಕಡಿಮೆಯಾಗಿ 29 ಆಗಿದೆ. ಜೆಡಿಎಸ್ 8, ಸಭಾಪತಿ 1, ಪಕ್ಷೇತರ 1 ಇದೆ. ವಿಧಾನಸಭೆಯಿಂದ ಆಯ್ಕೆಯಾಗಿದ್ದ ಜಗದೀಶ ಶೆಟ್ಟರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿದ್ದು, ಕಾಂಗ್ರೆಸ್ ಪಕ್ಷ ಬಸನಗೌಡ ಬಾದರ್ಲಿ ಅವರ ಹೆಸರನ್ನು ಅಖೈರು ಗೊಳಿಸಿದೆ. ಈ ಸ್ಥಾನ ಕಾಂಗ್ರೆಸ್‌ಗೆ ದಕ್ಕುವುದು ಖಾತ್ರಿಯಾಗಿದ್ದು, ಆಗ ಆ ಪಕ್ಷದ ಬಲ 35ಕ್ಕೆ ಏರಲಿದೆ. ಮತ್ತೆ, ಕೋಟ ಶ್ರೀನಿವಾಸ ಪೂಜಾರಿ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರಕ್ಕೆ ಚುನಾವಣೆ ನಿಗದಿಯಾಗಬೇಕಿದೆ.

ವಿಧಾನ ಪರಿಷತ್ ಪಕ್ಷಗಳ ಬಲಾಬಲ



‘ಸಂಘರ್ಷ’ದ ಮಕ್ಕಳಲ್ಲಿ ಖಿನ್ನತೆ

ಹತ್ತು ರಾಜ್ಯಗಳಲ್ಲಿ ಪರಿವೀಕ್ಷಣಾಲಯದ ಮಕ್ಕಳ ಕುರಿತ ಅಧ್ಯಯನ ವರದಿ

ಪ್ರಜಾವಾಣಿ ವಾರ್ತೆ

ಮೈಸೂರು: ಬಾಲನ್ಯಾಯ ಕಾಯ್ದೆ-2015 ಜಾರಿಗೆ ಬಂದು 9 ವರ್ಷವಾದರೂ ಅದರ ಎಲ್ಲಾ ಅಂಶಗಳು ಇಂದಿಗೂ ಸಂಪೂರ್ಣವಾಗಿ ಜಾರಿಯಾಗಿಲ್ಲ ಎಂಬ ಅಂಶ, ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರವು (ಸಿಎಸ್ಎಸ್ಇಐಪಿ) ಕರ್ನಾಟಕ ಸೇರಿದಂತೆ ದೇಶದ ಹತ್ತು ರಾಜ್ಯಗಳಲ್ಲಿ ನಡೆಸಿದ ಅಧ್ಯಯನದಿಂದ ಹೊರಬಿದ್ದಿದೆ.

ಹೊಸ ಕಾಯ್ದೆಯ ಪ್ರಕಾರ ಕಾನೂನಿನ ಸಂಘರ್ಷಕ್ಕೆ ಒಳಗಾಗಿರುವ ಮಕ್ಕಳ ವಿಚಾರಣೆ ಪರಿವೀಕ್ಷಣಾಲಯಗಳಲ್ಲಿ ನಿಗದಿತ ನಾಲ್ಕು ತಿಂಗಳ ಕಾಲಾವಧಿಯಲ್ಲಿ ನಡೆಯುತ್ತಿಲ್ಲ. ಅದರಿಂದ ಮಕ್ಕಳು ವರ್ಷಾನುಗಟ್ಟಲೆ ಪರಿವೀಕ್ಷಣಾಲಯಗಳಲ್ಲೇ ಇರುವಂತಾಗಿದೆ.

ಸದಾ ಕೂಡಿ ಹಾಕುವುದರಿಂದ ಆ ಮಕ್ಕಳು ಕ್ರಮೇಣ ಹಲವು ಗಂಭೀರವಾದ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವ ಅಂಶ ಕಂಡುಬಂದಿದೆ. ಏಳು ಮಕ್ಕಳ ಪೈಕಿ ಒಬ್ಬರಲ್ಲಿ ಈ ಸಮಸ್ಯೆ ಇರುವುದು ಪತ್ತೆಯಾಗಿದೆ. ಅದರಲ್ಲೂ ಆತಂಕ ಮತ್ತು ಖಿನ್ನತೆಯಿಂದ ಮತ್ತು ಆಕ್ರಮಣಕಾರಿ ಸಮಸ್ಯೆಗಳಿಂದ ಹೆಚ್ಚಿನ ಮಕ್ಕಳು ಬಳಲುತ್ತಿದ್ದಾರೆ.

ಮೈಸೂರು ವಿವಿಯ ಸಿಎಸ್ಎಸ್ಇಐಪಿ ಕೇಂದ್ರದ ಸಹ ಪ್ರಾಧ್ಯಾಪಕ ಡಿ.ಸಿ. ನಂಜುಂಡ ಮತ್ತು ತಂಡವು ಕರ್ನಾಟಕ, ತಮಿಳುನಾಡು, ಮಧ್ಯಪ್ರದೇಶ, ಹರಿಯಾಣ, ನವದೆಹಲಿ, ಅಸ್ಸಾಂ, ಒಡಿಶಾ, ಮಣಿಪುರ, ಜಾರ್ಖಂಡ್ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಭೇಟಿ ನೀಡಿ ಮಾಹಿತಿ ಕಲೆ ಕ್ರೋಢೀಕರಿಸಿ ಅಧ್ಯಯನ ನಡೆಸಿದೆ.

‘ನವದೆಹಲಿಯ ಪೊಲೀಸ್ ಸಂಶೋಧನಾ ಮತ್ತು ಅಭಿವೃದ್ಧಿ ಬ್ಯೂರೊ ಈ ಅಧ್ಯಯನವನ್ನು ಪ್ರಾಯೋಜಿಸಿತ್ತು. 340 ಪುಟಗಳ ವರದಿಯನ್ನು ಆ ಬ್ಯೂರೊಗೆ ಈಗಾಗಲೇ ಸಲ್ಲಿಸಲಾಗಿದೆ. ₹ 19 ಲಕ್ಷ ಅನುದಾನ ದೊರೆತಿತ್ತು. ಅಧ್ಯಯನಕ್ಕೆ ಎರಡು ವರ್ಷ ತೆಗೆದುಕೊಳ್ಳಲಾಗಿದೆ’ ಎಂದು ಡಿ.ಸಿ. ನಂಜುಂಡ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಕ್ಕಳು ಜಾಮೀನು ಪಡೆಯುವ ಅಪರಾಧ ಮಾಡಿದ್ದರೂ ಜಾಮೀನು ನೀಡಲು ಹೆಚ್ಚಿನ ಪೋಷಕರು ಮುಂದೆ ಬರುತ್ತಿಲ್ಲ. ಬಡತನ ಮತ್ತಿತ್ತರ ಕಾರಣಗಳಿಂದ ಪರಿವೀಕ್ಷಣಾಲಯಗಳಲ್ಲೇ ಬಿಡಲು ಬಯಸುತ್ತಿದ್ದಾರೆ. ಕೆಲವು ಮಕ್ಕಳಲ್ಲಿ ಮಾನಸಿಕ ಕಾಯಿಲೆಗಳು ಪ್ರಕಟವಾದರೂ ಹೆಚ್ಚಿನ ಮಕ್ಕಳಲ್ಲಿ ಗುಪ್ತವಾಗಿದ್ದು ಹೊರನೋಟಕ್ಕೆ ಕಂಡು ಬರುತ್ತಿಲ್ಲ. ಕೆಲವರಲ್ಲಿ ಕಾಯಿಲೆಗಳು ಆರಂಭಿಕ ಹಂತದಲ್ಲಿವೆ ಮತ್ತು ಕೆಲವರಲ್ಲಿ ಆತಂಕಕಾರಿ ಹಂತ ದಾಟಿದೆ ಎಂಬ ಕಳವಳಕಾರಿ ಅಂಶ ಅಧ್ಯಯನದಿಂದ ತಿಳಿದುಬಂದಿದೆ’ ಎಂದು ಮಾಹಿತಿ ನೀಡಿದರು.

‘ಕೆಲವು ಮಕ್ಕಳು ಕದ್ದು ಮುಚ್ಚಿ ಮಾದಕ ವಸ್ತು ಬಳಸುತ್ತಿರುವುದನ್ನು ಗಮನಿಸಲಾಗಿದೆ. ಸಣ್ಣ ವಯಸ್ಸಿನಲ್ಲಿ ಕಂಡುಬರುವ ಮತ್ತು ಸೂಕ್ತ ಚಿಕಿತ್ಸೆ ದೊರಕದ ಮಾನಸಿಕ ಕಾಯಿಲೆಗಳೇ ಮಕ್ಕಳು ಅಪರಾಧ ಕೃತ್ಯ ನಡೆಸಲು ಕಾರಣವಾಗಬಹುದು ಎಂಬ ಮುಖ್ಯ ಅಂಶ ತಿಳಿದುಬಂದಿದೆ’ ಎಂದು ತಿಳಿಸಿದರು.

‘ಅಲ್ಲದೇ ಕೆಲವು ಪರಿವೀಕ್ಷಣಾಲಯದಲ್ಲಿ ಮಕ್ಕಳನ್ನು ನಿಯಂತ್ರಿಸಲು ಕ್ರೂರ ಶಿಕ್ಷೆಯನ್ನು ನೀಡುತ್ತಿದ್ದು, ಇದು ಸಹ ಮಾನಸಿಕ ಕಾಯಿಲೆಗಳು ಉಂಟಾಗಲು ಕಾರಣವಾಗಬಹುದು’ ಎನ್ನುತ್ತಾರೆ ನಂಜುಂಡ.

‘ಸೃಜನಶೀಲ ಚಟುವಟಿಕೆಗಳು ಮಕ್ಕಳನ್ನು ಅವರ ಮಾನಸಿಕ ಒತ್ತಡದಿಂದ ಹೊರಬರಲು ಪ್ರೇರೇಪಿಸುತ್ತವೆ. ಮಾನಸಿಕ ಆರೋಗ್ಯ ಸಮಸ್ಯೆಗಳಿರುವ ಮಕ್ಕಳನ್ನು ಧನಾತ್ಮಕವಾಗಿ ಪ್ರೇರೇಪಿಸಲು ಮತ್ತು ಅವರ ಜೀವನದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಲು ಚಿತ್ರಕಲೆ, ಕರಕುಶಲ, ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಅಗತ್ಯವಿದೆ. ಕೆಲವು ಪರಿವೀಕ್ಷಣಾಲಯಗಳು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಅವುಗಳ ಪರಿಣಾಮ ಕುರಿತು ಮೌಲ್ಯ ಮಾಪನದ ಅಗತ್ಯವಿದೆ’ ಎಂದು ತಿಳಿಸಿದರು.

ಅಧ್ಯಯನ ತಂಡದಲ್ಲಿ ಎಸ್. ರಮೇಶ್, ಸೋಹನ್ ಮತ್ತು ಮಹೇಶ್ ಪಾಲ್ಗೊಂಡಿದ್ದರು.



‘ಹಾರರ್ ಚಿತ್ರ ನೋಡುತ್ತಾರೆ!’

‘ಪರಿವೀಕ್ಷಣಾಲಯಗಳಲ್ಲಿ ಮಕ್ಕಳು ಹಾರರ್ ಚಲನಚಿತ್ರಗಳನ್ನು ವೀಕ್ಷಿಸುವುದು ಕಂಡುಬಂದಿದೆ! ಅಲ್ಲಿ ಮಕ್ಕಳ ಸ್ನೇಹಿ ವಾತಾವರಣವಿಲ್ಲ’ ಎಂದು ನಂಜುಂಡ ವಿವರಿಸಿದರು.

‘ಬಹುತೇಕ ಕಡೆ ಆಪ್ತಸಮಾಲೋಚಕರ ಕೊರತೆ ಇದೆ. ಆಪ್ತ ಸಮಾಲೋಚಕರಾಗಿರುವ ಎಂಎಸ್‌ಡಬ್ಲ್ಯು ಪಧವೀಧರರಿಗೆ ಸೂಕ್ತ ತರಬೇತಿ ಇಲ್ಲ. ಇಂತಹ ಮಕ್ಕಳ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಸಾಧ್ಯ ಆಗುತ್ತಿಲ್ಲ. ತಕ್ಷಣ ಕ್ಲಿನಿಕಲ್ ಸೈಕಾಲಜಿಸ್ಟ್‌ಗಳ ಅಗತ್ಯವಿದೆ’ ಎಂದರು.

ಬಾಲಕಿಯರಿಗೆ ಪ್ರತ್ಯೇಕ ವ್ಯವಸ್ಥೆ ಇಲ್ಲ

ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕಿಯರಿಗೆ ಪ್ರತ್ಯೇಕ ಪರಿವೀಕ್ಷಣಾಲಯ ಎಲ್ಲೂ ಕಂಡುಬಂದಿಲ್ಲ. 65 ವರ್ಷ ಹಳೆಯದಾದ ಮಕ್ಕಳ ಪಾಲನಾ ಸಂಸ್ಥೆಗಳ ರಚನೆ ಮತ್ತು ಕಾರ್ಯ ವೈಖರಿಯನ್ನು ಸಂಪೂರ್ಣವಾಗಿ ಬದಲಿಸಬೇಕು. ಉನ್ನತ ತರಬೇತಿ ಪಡೆದ ಮನೋರೋಗ ತಜ್ಞರ ಸೇವೆ ಆಗಾಗ ಅಗತ್ಯ. ಅದಕ್ಕಾಗಿ ಸ್ಥಳೀಯ ವೈದ್ಯಕೀಯ ಕಾಲೇಜುಗಳ ಸಹಾಯವನ್ನು ಪಡೆದುಕೊಳ್ಳಬೇಕೆಂಬ ಅಭಿಪ್ರಾಯ ವರದಿಯಲ್ಲಿ ವ್ಯಕ್ತವಾಗಿದೆ.

320 ಅಭ್ಯರ್ಥಿಗಳಿಗಿಲ್ಲ ಅಂಗವಿಕಲ ಕೋಟಾ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಅಂಗವಿಕಲ ಕೋಟಾದಲ್ಲಿ ಮೀಸಲಾತಿ ಬಯಸಿ ಅರ್ಜಿ ಸಲ್ಲಿಸಿದ್ದ 300ಕ್ಕೂ ಹೆಚ್ಚು ಅಭ್ಯರ್ಥಿಗಳು ಹೆಚ್ಚು ನ್ಯೂನತೆ ನಮೂದಿಸಿ, ತಪ್ಪು ಮಾಹಿತಿ ನೀಡಿದ್ದು ಮರು ತಪಾಸಣೆಯಲ್ಲಿ ದೃಢಪಟ್ಟಿದೆ.

2024–25ನೇ ಸಾಲಿಗೆ ಪ್ರವೇಶ ಬಯಸಿ ಸಿಇಟಿ ಬರೆದಿದ್ದ ಅಭ್ಯರ್ಥಿಗಳಲ್ಲಿ 783 ಅಭ್ಯರ್ಥಿಗಳು ಅಂಗವಿಕಲ ಕೋಟಾದಲ್ಲಿ ಮೀಸಲಾತಿ ಬಯಸಿದ್ದರು. ತಜ್ಞ ವೈದ್ಯರಿಗೆ ಜೂನ್ 10ರಿಂದ 12ರವರೆಗೆ ಮಲ್ಲೇಶ್ವರದ ಕೆಇಎ ಕಚೇರಿಯಲ್ಲಿ ವೈದ್ಯಕೀಯ ತಪಾಸಣೆ, ದಾಖಲಾತಿ ಪರಿಶೀಲನೆ ನಡೆಸಲಾಗಿತ್ತು.

ಮೀಸಲಾತಿ ಪಡೆಯಲು ಅಂಗವಿಕಲ ವಿದ್ಯಾರ್ಥಿಗಳಿಗೆ ಶೇ 40ಕ್ಕಿಂತ ಹೆಚ್ಚು ನ್ಯೂನತೆ ಇರಬೇಕು. ಅರ್ಜಿ ಸಲ್ಲಿಸಿದ್ದ ಎಲ್ಲರೂ ಶೇ 40ಕ್ಕಿಂತ ಹೆಚ್ಚು ನ್ಯೂನತೆ ಹೊಂದಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಿದ್ದರು.

ಆದರೆ, ಕೆಇಎನಲ್ಲಿ ಮರು ತಪಾಸಣೆಗೆ ಒಳಪಡಿಸಿದಾಗ 320 ವಿದ್ಯಾರ್ಥಿಗಳಿಗೆ ಶೇ 30ರ ಒಳಗೆ ನ್ಯೂನತೆ ಇರುವುದು ದೃಢಪಟ್ಟಿದೆ. ಹಾಗಾಗಿ, ಕೆಇಎ ಅವರಿಗೆಲ್ಲ ಮೀಸಲಾತಿ ಸೌಲಭ್ಯ ನಿರಾಕರಿಸಿದೆ.

ದಕ್ಷಿಣ ಕನ್ನಡ, ಕೊಡಗಿನಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಅಬ್ಬರ ಮುಂದುವರಿದಿದೆ. ಜಿಲ್ಲೆಯಾದ್ಯಂತ ಭಾನುವಾರ ರಾತ್ರಿಯಿಡೀ ಬಿಟ್ಟು ಬಿಟ್ಟು ಬಿರುಸಿನ ಮಳೆಯಾಗಿದೆ. ಸೋಮವಾರ ಬಿಸಿಲಿನಿಂದ ಕೂಡಿದ ವಾತಾವರಣ ವಿತ್ತು. ಮಧ್ಯಾಹ್ನದ ಬಳಿಕ ಸುಮಾರು ಅರ್ಧ ಗಂಟೆ ಧಾರಾಕಾರ ಮಳೆ ಸುರಿಯಿತು.

ಸೋಮವಾರ ಬೆಳಿಗ್ಗೆ 8.30ರವರೆಗಿನ 24 ಗಂಟೆಗಳಲ್ಲಿ ಬಂಟ್ವಾಳ ತಾಲ್ಲೂಕಿನ ಮಂಚಿಯಲ್ಲಿ 13 ಸೆಂ.ಮೀ, ಬಾಳ್ತಿಲದಲ್ಲಿ 11, ಬಂಟ್ವಾಳದಲ್ಲಿ 10, ತುಂಬೆಯಲ್ಲಿ 10, ಬೆಳ್ತಂಗಡಿ ತಾಲ್ಲೂಕಿನ ಪಟ್ರಮೆಯಲ್ಲಿ 12, ಅರಸಿನಮಕ್ಕಿಯಲ್ಲಿ 11, ಪುತ್ತೂರು ತಾಲ್ಲೂಕಿನ ಬೆಳಂದೂರಿನಲ್ಲಿ 12, ನೂಜಿಬಾಳ್ತಿಲದಲ್ಲಿ 10, ಉಳ್ಳಾಲ ತಾಲ್ಲೂಕಿನ ಬೋಳಿಯಾರ್‌ನಲ್ಲಿ 10, ಸುಳ್ಯ ತಾಲ್ಲೂಕಿನ ಕಲ್ಮಡ್ಕದಲ್ಲಿ 10 ಸೆಂ.ಮೀ. ಮಳೆಯಾಗಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಜಿಲ್ಲೆಯಲ್ಲಿ ಇದೇ 27ರವರೆಗೂ ಸಿಡಿಲು, ಗುಡುಗು ಹಾಗೂ ಗಾಳಿಯಿಂದ ಕೂಡಿದ ಮಳೆ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಿಕ್ಕಮಗಳೂರು ಜಿಲ್ಲೆಯ ಅಲ್ಲಲ್ಲಿ ಸಾಧಾರಣ ಮಳೆಯಾಗಿದೆ. ಶೃಂಗೇರಿ, ಕಳಸ, ಕೊಪ್ಪ ಮತ್ತು ಮೂಡಿಗೆರೆ ಭಾಗದಲ್ಲಿ ಉತ್ತಮ ಮಳೆಯಾಗಿದೆ.

ಗೋಣಿಕೊಪ್ಪಲು ವರದಿ (ಕೊಡಗು ಜಿಲ್ಲೆ): ದಕ್ಷಿಣ ಕೊಡಗಿನ ಶ್ರೀಮಂಗಲ, ಟಿ.ಶೆಟ್ಟಿಗೇರಿ, ಬೀರುಗ ಬಿರುನಾಣಿ, ಹುದಿಕೇರಿ, ಬಿ.ಶೆಟ್ಟಿಗೇರಿ ಭಾಗದಲ್ಲಿ ಸೋಮವಾರ ರಭಸದ ಮಳೆಯಾಯಿತು.

ಬೆಳಿಗ್ಗೆಯಿಂದಲೇ ಶುರುವಾದ ಮಳೆ ಮಧ್ಯಾಹ್ನದ ಬಳಿಕ ಬಿರುಸು ಪಡೆಯಿತು. ನದಿ, ತೊರೆ, ತೋಡುಗಳಲ್ಲಿ ನೀರು ತುಂಬಿ ಹರಿಯಿತು. ಸಂಜೆಯಾಗುತ್ತಿದ್ದಂತೆ ಮಳೆ ರಭಸ ಕಡಿಮೆಯಾಯಿತು. ಮಡಿಕೇರಿ, ಗೋಣಿಕೊಪ್ಪಲು, ಪೊನ್ನಂಪೇಟೆ, ಕಿರುಗೂರು, ನಲ್ಲೂರು ಭಾಗದಲ್ಲಿ ಸಾಧಾರಣ ಮಳೆಯಾಯಿತು.

ತೊರೆ ತೋಡುಗಳಲ್ಲಿ ಹರಿಯುವ ಮಳೆ ನೀರನ್ನು ಗದ್ದೆಗೆ ಹಾಯಿಸಿಕೊಂಡಿರುವ ರೈತರು ಭತ್ತ ಬಿತ್ತನೆ ಕಾರ್ಯದಲ್ಲಿ ತೊಡಗಿದ್ದಾರೆ.

‘ಇದು ಗಂಭೀರ ಪ್ರಕರಣ, ಆರೋಪಿಗಳ ವಿರುದ್ಧ ಗುರುತರ ಆಪಾದನೆಗಳಿವೆ’

ಗರ್ಭಪಾತ: ಐವರಿಗೆ ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯ ಪಾಂಡವಪುರ ಟೌನ್ ವ್ಯಾಪ್ತಿಯ ಆರೋಗ್ಯ ವಸತಿಗೃಹ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯಲ್ಲಿ ಕಾನೂನು ಬಾಹಿರವಾಗಿ ಗರ್ಭಪಾತ ಮಾಡುತ್ತಿದ್ದ ಆರೋಪದಡಿ ಬಂಧನದಲ್ಲಿರುವ ಐವರು ಆರೋಪಿಗಳ ಸಲ್ಲಿಸಿದ್ದ ಪ್ರತ್ಯೇಕ ಜಾಮೀನು ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಬೆಂಗಳೂರಿನ ಶಾಂತಿನಗರದ ಡಾ.ಎಸ್. ಆದರ್ಶ ಹಾಗೂ ಮೈಸೂರು ತಾಲ್ಲೂಕಿನ ಸಾಲುಂಡಿ ಗ್ರಾಮದ ಶಿವಲಿಂಗನಾಯಕ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಗಳು ಹಾಗೂ ಮೇಲುಕೋಟೆ ಹೋಬಳಿಯ ಮಹದೇಶ್ವರಪುರದ ಎಂ.ಎಸ್.ಕಿರಣ್, ಪಾಂಡವಪುರ ತಾಲ್ಲೂಕು ಹೊಸಕೋಟೆಯ ಎಚ್.ಪಿ.ಅಖಿಲೇಶ್ ಹಾಗೂ ಕೆ.ಆರ್.ಪೇಟೆಯ ಶ್ರುತಿ ಸಲ್ಲಿಸಿದ್ದ ನಿಗದಿತ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಜಾಮೀನು ಮಂಜೂರು ಮಾಡಲು ನಿರಾಕರಿಸಿದೆ.

ಪ್ರಕರಣವೇನು?

ಆರೋಪಿಗಳ ವಿರುದ್ಧ, ಕರ್ನಾಟಕ ಖಾಸಗಿ ವೈದ್ಯಕೀಯ ಸ್ಥಾಪನಾ ಕಾಯ್ದೆ–2007 ಹಾಗೂ ವೈದ್ಯಕೀಯ ಗರ್ಭಪಾತ ಕಾಯ್ದೆ–1971ರ (ಎಂಟಿಪಿ ಕಾಯ್ದೆ) ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಷನ್ ಪರ ವಕೀಲ ರಾಹುಲ್ ರೈ ಅವರು, ‘ದಸ್ತಗಿರಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗಳು ನೀಡಿರುವ ಸ್ವಯಂ ಹೇಳಿಕೆ ಅನುಸಾರ ಭ್ರೂಣದ ಲಿಂಗ ಪತ್ತೆ ಹಾಗೂ ಗರ್ಭಪಾತ ಮಾಡಿಸಿಕೊಂಡಿರುವ ಹಲವು ಸಂತ್ರಸ್ತೆಯರನ್ನು ಪತ್ತೆ ಮಾಡಿ ಅವರ ಹೇಳಿಕೆ ಪಡೆಯಬೇಕಿದೆ’ ಎಂದು ವಿವರಿಸಿದರು.

ಅಂತೆಯೇ, ‘ಪ್ರಕರಣದ ತನಿಖಾ ವೇಳೆ ಅಮಾನತ್ತುಪಡಿಸಿಕೊಂಡಿರುವ ವೈದ್ಯಕೀಯ ಉಪಕರಣಗಳು, ಔಷಧಗಳು, ಚುಚ್ಚುಮದ್ದುಗಳನ್ನು ತಜ್ಞರ ಬಳಿಗೆ ಕಳುಹಿಸಿ ಅವರ ಅಭಿಪ್ರಾಯ ಪಡೆಯಬೇಕಿದೆ. ಭ್ರೂಣ ಲಿಂಗ ಪತ್ತೆ ಮಾಡುವ ಸಲುವಾಗಿ ಆರೋಪಿಗಳು ಬಳಸಿರುವ ಸ್ಕ್ಯಾನಿಂಗ್ ಮೆಷಿನ್ ಪತ್ತೆ ಮಾಡಿ ಅವುಗಳನ್ನು ವಶಕ್ಕೆ ಪಡೆಯಬೇಕಿದೆ ಮತ್ತು ಈ ಪ್ರಕರಣದಲ್ಲಿ ಇನ್ನೂ ಕೆಲವು ಸಾಕ್ಷಿದಾರರ ಹೇಳಿಕೆ ಕಲೆ ಹಾಕಬೇಕಿದ್ದು, ಇನ್ನಷ್ಟು ಸಾಕ್ಷ್ಯಾಧಾರ ಸಂಗ್ರಹಿಸಬೇಕಿದೆ. ಆದ್ದರಿಂದ, ಯಾವುದೇ ಆರೋಪಿಗಳಿಗೆ ಜಾಮೀನು ಮಂಜೂರು ಮಾಡಬಾರದು’ ಎಂದು ಕೋರಿದ್ದರು.

ರಾಹುಲ್ ರೈ ಅವರ ವಾದವನ್ನು ಮಾನ್ಯ ಮಾಡಿರುವ ಪೀಠ, ಜಾಮೀನು ನೀಡುವಂತೆ ಕೋರಿದ ಐವರೂ ಅರ್ಜಿದಾರರ ಪರ ವಕೀಲರ ವಾದವನ್ನು ತಿರಸ್ಕರಿಸಿದೆ. ‘ಇದೊಂದು ಗಂಭೀರ ಪ್ರಕರಣ. ಆರೋಪಿಗಳ ವಿರುದ್ಧ ಗುರುತರ ಆಪಾದನೆಗಳಿವೆ. ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ. ಇನ್ನೂ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ. ಹಾಗಾಗಿ, ಇಂತಹ ಪ್ರಕರಣದಲ್ಲಿ; ಅದೂ ಈ ಹಂತದಲ್ಲಿ ಜಾಮೀನು ಮಂಜೂರು ಮಾಡಲು ಆಗದು’ ಎಂದು ಖಡಕ್ಕಾಗಿ ಹೇಳಿದೆ.

ಬಂಧಿತರ ಸಂಖ್ಯೆ 11ಕ್ಕೆ ಏರಿಕೆ, ಒಟ್ಟು ₹14.7 ಕೋಟಿ ಜಪ್ತಿ

ವಾಲ್ಮೀಕಿ ನಿಗಮ: ಮತ್ತೊಬ್ಬ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣದ ಸಂಬಂಧ ಮತ್ತೊಬ್ಬ ಆರೋಪಿ ಸಾಯಿತೇಜ್ ಎಂಬುವರನ್ನು ವಿಶೇಷ ತನಿಖಾ ದಳದ(ಎಸ್ಐಟಿ) ಪೊಲೀಸರು ಹೈದರಾಬಾದ್‌ನಲ್ಲಿ ಸೋಮವಾರ ಬಂಧಿಸಿದ್ದಾರೆ.

‘ಬಂಧಿತ ಆರೋಪಿಯಿಂದ ಹಗರಣಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆ ಪತ್ರಗಳನ್ನು ಜಪ್ತಿ ಮಾಡಲಾಗಿದೆ. ಸಾಯಿತೇಜ್, ಬಂಧಿತ ಆರೋಪಿ ಸತ್ಯನಾರಾಯಣ ವರ್ಮ ಅವರ ಸಹಚರ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದು ಎಸ್ಐಟಿ ಮೂಲಗಳು ತಿಳಿಸಿವೆ.

‘ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ನಕಲಿ ಖಾತೆಗಳನ್ನು ತೆರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆರೋಪದಡಿ ಹೈದರಾಬಾದ್‌ನಲ್ಲಿ ಸತ್ಯನಾರಾಯಣ ವರ್ಮಾ ಮತ್ತು ಚಂದ್ರಮೋಹನ್ ಎಂಬುವರನ್ನು ಈ ಹಿಂದೆ ಬಂಧಿಸಲಾಗಿತ್ತು. ಹಣ ವರ್ಗಾವಣೆ ಪ್ರಕರಣದಲ್ಲಿ ವರ್ಮಾ ಅವರೊಂದಿಗೆ ಸಾಯಿತೇಜ್ ಭಾಗಿ ಆಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಹೈದರಾಬಾದ್‌ನ ‘ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ’ಯ (ಎಫ್ಎಫ್‌ಸಿಸಿಎಸ್ಎಲ್) 18 ಖಾತೆಗಳಿಗೆ ವಾಲ್ಮೀಕಿ ನಿಗಮದ ಖಾತೆಯಿಂದ ₹94.73 ಕೋಟಿ ಹಣ ವರ್ಗಾವಣೆ ಆಗಿತ್ತು. ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ರಾಜ್ಯ ಸರ್ಕಾರ ಎಸ್ಐಟಿಗೆ ವಹಿಸಿತ್ತು. ಬಳಿಕ ಸೊಸೈಟಿಯ ಅಧ್ಯಕ್ಷ ಸತ್ಯನಾರಾಯಣ್ ಅವರನ್ನು ಎಸ್ಐಟಿ ಬಂಧಿಸಿತ್ತು.

‘ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 11ಕ್ಕೆ ಏರಿಕೆಯಾಗಿದ್ದು ಆರೋಪಿಗಳಿಂದ ಒಟ್ಟು ₹14.7 ಕೋಟಿ ಜಪ್ತಿ ಮಾಡಲಾಗಿದೆ’ ಎಂದು ಎಸ್ಐಟಿ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಸಾಯಿತೇಜ್ ಎಂಬುವರನ್ನು ಹೈದರಾಬಾದ್‌ನಲ್ಲಿ ಬಂಧಿಸಿದ ಪೊಲೀಸರು
- ಹಣ ವರ್ಗಾವಣೆ ಪ್ರಕರಣದಲ್ಲಿ ಭಾಗಿ ಆಗಿರುವ ಆರೋಪ
- ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲು ನಿರ್ಧಾರ

ಇ.ಡಿ ತನಿಖೆಯೂ ಆರಂಭ

ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ತನಿಖೆ ಆರಂಭಿಸಿದೆ.

ಸಿಐಡಿ ಪೊಲೀಸರನ್ನು ಒಳಗೊಂಡ ವಿಶೇಷ ತನಿಖಾ ತಂಡ ಮತ್ತು ಸಿಬಿಐ ಪ್ರತ್ಯೇಕವಾಗಿ ಈ ಬಗ್ಗೆ ತನಿಖೆ ನಡೆಸುತ್ತಿವೆ. ಇ.ಡಿ ಅಧಿಕಾರಿಗಳು ಈ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ. ಪದ್ಮನಾಭ ಮತ್ತು ಹಿಂದಿನ ಲೆಕ್ಕಾಧಿಕಾರಿ ಪರಶುರಾಮ ಜಿ. ದುರ್ಗಣ್ಣನವರ ಅವರನ್ನು ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಬ್ಬರೂ ಆರೋಪಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಇ.ಡಿ ಅಧಿಕಾರಿಗಳು ನ್ಯಾಯಾಲಯದ ಅನುಮತಿ ಪಡೆದು ಕಾರಾಗೃಹದಲ್ಲೇ ಪದ್ಮನಾಭ ಮತ್ತು ಪರಶುರಾಮ ಅವರನ್ನು ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ತಾಂಡಾ, ಆದಿಜಾಂಬವ ನಿಗಮಗಳಿಗೆ ಅಧ್ಯಕ್ಷರ ನೇಮಕ

ಪ್ರಜಾವಾಣಿ ವಾರ್ತೆ

ಜಯದೇವ ನಾಯ್ಕ

ಜಿ.ಎಸ್. ಮಂಜುನಾಥ್

ಬೆಂಗಳೂರು: ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ದಾವಣಗೆರೆಯ ಎನ್. ಜಯದೇವನಾಯ್ಕ ಮತ್ತು ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷರನ್ನಾಗಿ ಚಿತ್ರದುರ್ಗದ ಜಿ.ಎಸ್. ಮಂಜುನಾಥ್ ಅವರನ್ನು ನೇಮಿಸಿ ಸಮಾಜ ಕಲ್ಯಾಣ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಹಲವು ಜಾತಿವಾರು ನಿಗಮಗಳಿಗೆ ಹಿಂದೆಯೇ ಅಧ್ಯಕ್ಷರನ್ನು ನೇಮಿಸಲಾಗಿತ್ತು. ಆದರೆ, ತಾಂಡಾ ಅಭಿವೃದ್ಧಿ ನಿಗಮ, ಆದಿಜಾಂಬವ ಅಭಿವೃದ್ಧಿ ನಿಗಮ ಸೇರಿದಂತೆ ಕೆಲವು ನಿಗಮಗಳ ಅಧ್ಯಕ್ಷರ ನೇಮಕಾತಿ ಬಾಕಿ ಇತ್ತು. ಆಯಾ ಇಲಾಖೆಗಳ ಉಸ್ತುವಾರಿ ಹೊಂದಿರುವ ಸಚಿವರೇ ಪದನಿಮಿತ್ತ ಅಧ್ಯಕ್ಷರಾಗಿದ್ದರು.

ವಿವಿಧ ನಿಗಮಗಳಿಗೆ ನೇಮಕ: ಪರಮೇಶ್ವರ ನೇತೃತ್ವದಲ್ಲಿ ಸಮಿತಿ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ನಿಗಮ, ಮಂಡಳಿಗಳ ನಿರ್ದೇಶಕರು ಮತ್ತು ಸದಸ್ಯರನ್ನು ಆಯ್ಕೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೃಹ ಸಚಿವ ಜಿ. ಪರಮೇಶ್ವರ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರ ಸಮಿತಿ ರಚಿಸಿದ್ದಾರೆ.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಮತ್ತು ಶಾಸಕ ರಿಜ್ವಾನ್ ಅರ್ಷದ್ ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. ನಿಗಮ, ಮಂಡಳಿಗಳ ಸದಸ್ಯರು, ನಿರ್ದೇಶಕರ ಸ್ಥಾನಗಳಿಗೆ ಆಯ್ಕೆಮಾಡಿ ಪಟ್ಟಿಯನ್ನು ಒಂದು ತಿಂಗಳೊಳಗೆ ಸಲ್ಲಿಸುವಂತೆ ಸಮಿತಿಗೆ ಮುಖ್ಯಮಂತ್ರಿ ಸಮಿತಿ ಸೂಚಿಸಿದ್ದಾರೆ.

ಜನನ–ಮರಣ ನೋಂದಣಿ: ಗ್ರಾ.ಪಂ ಕಾರ್ಯದರ್ಶಿಗೆ ಅಧಿಕಾರ

ಬೆಂಗಳೂರು: ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಇನ್ನು ಮುಂದೆ ಜನನ–ಮರಣ ಉಪ ನೋಂದಣಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಈ ಕುರಿತು ಜನನ–ಮರಣಗಳ ಮುಖ್ಯ ನೋಂದಣಾಧಿಕಾರಿಗಳು ಸೋಮವಾರ ಸುತ್ತೋಲೆ ಹೊರಡಿಸಿದ್ದು, ಪಂಚಾಯಿತಿ ವ್ಯಾಪ್ತಿಯಲ್ಲಿ ಜನನ–ಮರಣಗಳಾದ 21 ದಿನಗಳ ಒಳಗೆ ನೋಂದಣಿ ಮಾಡಿಕೊಂಡು ಉಚಿತವಾಗಿ ಪ್ರಮಾಣ ಪತ್ರ ವಿತರಿಸಬೇಕು. 21 ದಿನಗಳ ನಂತರ ಮಾಹಿತಿ ನೀಡುವ ಪ್ರಕರಣಗಳಲ್ಲಿ ₹2 ಶುಲ್ಕ ಪಡೆದು ನೋಂದಣಿ ಮಾಡಬೇಕು. 30 ದಿನಗಳ ತರುವಾಯ ಕಾರ್ಯದರ್ಶಿಗಳು ನೋಂದಣಿ ಮಾಡಬಾರದು ಎಂದು ಸೂಚಿಸಿದೆ. ಜನನ–ಮರಣಗಳು ನಡೆದು 30 ದಿನಗಳ ತರುವಾಯ ಮಾಹಿತಿ ನೀಡುವ ಜನನ–ಮರಣಗಳ ನೋಂದಣಿ ಅಧಿಕಾರವನ್ನು ಆಯಾ ಗ್ರಾಮಗಳ ಗ್ರಾಮ ಆಡಳಿತ ಅಧಿಕಾರಿಗೆ ನೀಡಲಾಗಿದೆ. ಜನರು ಅಗತ್ಯ ದಾಖಲೆಗಳೊಂದಿಗೆ ಗ್ರಾಮ ಆಡಳಿತ ಅಧಿಕಾರಿಗಳನ್ನು ಸಂಪರ್ಕಿಸಬೇಕು. ತಹಶೀಲ್ದಾರ್ ಅವರ ಲಿಖಿತ ಅನುಮತಿ ಪಡೆದು ನೋಂದಣಿ ಮಾಡಬೇಕು ಎಂದು ಸೂಚಿಸಲಾಗಿದೆ.

ಡಿಸಿಇಟಿ ಸರಿ ಉತ್ತರ ಪ್ರಕಟ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಕಾಲೇಜುಗಳ ಲ್ಯಾಟರಲ್ ಪ್ರವೇಶಕ್ಕೆ ನಡೆಸಿದ್ದ ಪ್ರವೇಶ ಪರೀಕ್ಷೆಯ (ಡಿಸಿಇಟಿ) ತಾತ್ಕಾಲಿಕ ಸರಿ ಉತ್ತರ ಪ್ರಕಟಿಸಿದೆ.

ಉತ್ತರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಜೂನ್ 26ರ ಬೆಳಿಗ್ಗೆ 11ರ ಒಳಗೆ ಸಲ್ಲಿಸಬಹುದು. ವರ್ಷನ್ ಕೋಡ್, ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆ ಸಂಖ್ಯೆಯ ವಿವರಗಳನ್ನು ನಮೂದಿಸಿ, ಅದಕ್ಕೆ ಪೂರಕ ಸಮರ್ಥನೆಗಳನ್ನು ಪಿಡಿಎಫ್ ರೂಪದಲ್ಲಿ ಸಲ್ಲಿಸಬೇಕು. ಪ್ರಶ್ನೆ ಸಂಖ್ಯೆ ಅಥವಾ ವರ್ಷನ್ ಕೋಡ್ ನಮೂದಿಸದೆ ಅಥವಾ ಆಧಾರ ರಹಿತವಾಗಿ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕೆಇಎ ಸ್ಪಷ್ಟಪಡಿಸಿದೆ.

ಸಮುದಾಯವಾರು ಹುದ್ದೆ ಸೃಷ್ಟಿಸಬೇಕೆಂಬ ಒತ್ತಾಯಕ್ಕೆ ಮತ್ತೆ ಬಲ

ಡಿಸಿಎಂ ಬೇಡಿಕೆ ಮತ್ತೆ ಮುನ್ನೆಲೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕೆಂಬ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಸಚಿವರೇ ಈ ವಿಚಾರವಾಗಿ ಧ್ವನಿ ಎತ್ತಲು ಆರಂಭಿಸಿದ್ದಾರೆ.

ಸಚಿವ ಕೆ.ಎನ್. ರಾಜಣ್ಣ ಅವರು ಲೋಕಸಭೆ ಚುನಾವಣೆಗೂ ಮೊದಲೇ ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸಬೇಕೆಂದು ಹೇಳಿಕೆ ನೀಡಿದ್ದರು. 'ಈ ರೀತಿ ಹುದ್ದೆ ನೀಡುವುದರಿಂದ ಆಯಾ ಸಮುದಾಯಗಳು ಪಕ್ಷದ ಜೊತೆ ನಿಲ್ಲಲಿದ್ದು, ಚುನಾವಣೆಯಲ್ಲಿ ಪಕ್ಷಕ್ಕೆ ಅನುಕೂಲವಾಗಲಿದೆ' ಎಂದು ಪ್ರತಿಪಾದಿಸಿದ್ದರು. ಅದಕ್ಕೆ ಸಚಿವರಾದ ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ ಕೂಡಾ ಸಹಮತ ವ್ಯಕ್ತಪಡಿಸಿದ್ದರು.

ಆಗ ಮಧ್ಯಪ್ರವೇಶಿಸಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ರಾಜ್ಯದಲ್ಲಿ ಇನ್ನೂ ಮೂರು ಉಪ ಮುಖ್ಯಮಂತ್ರಿ (ಡಿಸಿಎಂ) ಪ್ರಸ್ತಾವ ಇಲ್ಲ' ಎಂದು ಸ್ಪಷ್ಟಪಡಿಸಿದ್ದರು. ಅಲ್ಲದೆ, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, 'ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿ ವಿಚಾರ ಊಹಾಪೋಹದ ಸುದ್ದಿ' ಎಂದಿದ್ದರು. ಹೀಗಾಗಿ, ಈ ವಿಚಾರ ಚುನಾವಣೆಯ ಸಂದರ್ಭದಲ್ಲಿ ತಣ್ಣಗಾಗಿತ್ತು.

ಲೋಕಸಭೆ ಚುನಾವಣೆ ಮುಗಿದ ಬೆನ್ನಲ್ಲೆ ಮತ್ತೆ ಈ ವಿಚಾರ ಚರ್ಚೆಗೆ ಬಂದಿದೆ. ಚುನಾವಣೆಯಲ್ಲಿ ಪಕ್ಷಕ್ಕೆ ನಿರೀಕ್ಷೆಯಂತೆ ಸ್ಥಾನಗಳು ಬಂದಿಲ್ಲ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಚುನಾವಣೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ ಸಮುದಾಯವಾರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸಬೇಕೆಂಬ ಬೇಡಿಕೆಗೆ ಮತ್ತೆ ಬಲ ಬಂದಿದೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗಿದೆ. ಸಿದ್ದರಾಮಯ್ಯ ಬಣದಲ್ಲಿರುವ ಸತೀಶ ಜಾರಕಿಹೊಳಿ, ಬಿ.ಝೆಡ್. ಜಮೀರ್ ಅಹಮದ್‌ಖಾನ್ ಈ ವಿಚಾರವನ್ನು ಮತ್ತೆ ಪ್ರಸ್ತಾಪಿಸಿದ್ದು, ಅದಕ್ಕೆ ಕೆ.ಎನ್. ರಾಜಣ್ಣ ದನಿಗೂಡಿಸಿದ್ದಾರೆ. ಡಿಸಿಎಂ ಸ್ಥಾನಕ್ಕೆ ಸಾಕಷ್ಟು ಮಂದಿ ಆಕಾಂಕ್ಷಿಗಳಿದ್ದಾರೆ. ಈ ಪೈಕಿ, ಜಿ. ಪರಮೇಶ್ವರ (ಎಸ್‌ಸಿ), ಸತೀಶ ಜಾರಕಿಹೊಳಿ (ಎಸ್‌ಟಿ), ಎಂ.ಬಿ. ಪಾಟೀಲ (ಲಿಂಗಾಯತ), ಜಮೀರ್ ಅಹಮ್ಮದ್ ಖಾನ್ (ಮುಸ್ಲಿಂ), ಕೆ.ಎನ್. ರಾಜಣ್ಣ (ಎಸ್‌ಟಿ), ರಾಮಲಿಂಗಾರೆಡ್ಡಿ (ರೆಡ್ಡಿ) ಪ್ರಮುಖರು.

'ಎಲ್ಲ ಸಚಿವರೂ ಡಿಸಿಎಂ ಆಗಲಿ'

'ಉಪ ಮುಖ್ಯಮಂತ್ರಿ ಹುದ್ದೆ ಬಯಸುವವರು ವರಿಷ್ಠರ ಬಳಿ ಹೋಗಿ ಕೇಳಲಿ. ಯಾರೂ ಬೇಡ ಅಂದಿಲ್ಲ. ಮುಖ್ಯಮಂತ್ರಿ ಹುದ್ದೆಯನ್ನೂ ಕೇಳಲಿ, ಯಾರು ಬೇಡ ಅಂದವರು? ಹೆಚ್ಚುವರಿ ಉಪ ಮುಖ್ಯಮಂತ್ರಿ ಮಾಡುವುದರಿಂದ ಎಲ್ಲವೂ ಸರಿಯಾಗುತ್ತದೆ ಎನ್ನುವುದಾದರೆ ಮುಖ್ಯಮಂತ್ರಿ ಒಬ್ಬರನ್ನು ಬಿಟ್ಟು ಎಲ್ಲ ಸಚಿವರೂ ಉಪ ಮುಖ್ಯಮಂತ್ರಿ ಆಗಲಿ. ಹಾಗೆ ಮಾಡಲು ಆಗುತ್ತದೆಯೇ?'

ಪ್ರಿಯಾಂಕ್ ಖರ್ಗೆ, ಪಂಚಾಯತ್‌ರಾಜ್ ಸಚಿವ

'ಇನ್ನೂ ಐದು ಡಿಸಿಎಂ ಮಾಡಿದರೆ ಒಳ್ಳೆಯದು'

'ಉಪ ಮುಖ್ಯಮಂತ್ರಿ ಸ್ಥಾನ ಚರ್ಚೆಯ ಬಗ್ಗೆ ಮಾಹಿತಿಯಿಲ್ಲ. ಪಕ್ಷ ತೀರ್ಮಾನ ಮಾಡಿ ಇನ್ನೂ ಐದು ಉಪ ಮುಖ್ಯಮಂತ್ರಿಗಳನ್ನು ಮಾಡಿದರೆ ಒಳ್ಳೆಯದು. ಇಲ್ಲಿ ಡಿ.ಕೆ. ಶಿವಕುಮಾರ್ ಅವರ ವಿಚಾರ ಮಾತ್ರ ಅಲ್ಲ. ಎಂಟು ಬಾರಿ ಗೆದ್ದ ರಾಮಲಿಂಗಾರೆಡ್ಡಿ ಇದ್ದಾರೆ. ಎಂಟು ವರ್ಷ ಪಕ್ಷದ ಅಧ್ಯಕ್ಷರಾಗಿದ್ದ ಪರಮೇಶ್ವರ ಇದ್ದಾರೆ. ಕಾರ್ಯಾಧ್ಯಕ್ಷರಾಗಿದ್ದ ಈಶ್ವರ್ ಖಂಡ್ರೆ, ಸತೀಶ ಜಾರಕಿಹೊಳಿ, ಪ್ರಚಾರ ಸಮಿತಿ ಅಧ್ಯಕ್ಷರಾಗಿದ್ದ ಎಂ.ಬಿ. ಪಾಟೀಲ ಇದ್ದಾರೆ. ಮುಸ್ಲಿಂ ಸಮುದಾಯದಲ್ಲಿ ಪ್ರಬಲ ನಾಯಕ ಜಮೀರ್ ಅಹ್ಮದ್ ಸಾಹೇಬರು ಇದ್ದಾರೆ. ಒಕ್ಕಲಿಗರಲ್ಲಿ ಹಿರಿಯ ನಾಯಕ ಕೃಷ್ಣ ಬೈರೇಗೌಡ ಇದ್ದಾರೆ. ಚಲುವರಾಯಸ್ವಾಮಿ, ದಿನೇಶ್ ಗುಂಡೂರಾವ್, ದೇಶಪಾಂಡೆ ಕೂಡ ಇದ್ದಾರೆ. ಅವರೆಲ್ಲರನ್ನೂ ಮಾಡಬಹುದು. ಎಲ್ಲ ಸಮುದಾಯಗಳಿಗೂ ಅವಕಾಶ ನೀಡಬೇಕಲ್ಲವೇ? ಸಾಮಾಜಿಕ ನ್ಯಾಯ ಮತ್ತು ಪಕ್ಷ ಬಲವರ್ಧನೆಗಾಗಿ'

ಡಿ.ಕೆ. ಸುರೇಶ್, ಮಾಜಿ ಸಂಸದ

'ಹೈಕಮಾಂಡ್ ತೀರ್ಮಾನಿಸಲಿದೆ'

'ಹೊಸ ಡಿಸಿಎಂ ಹುದ್ದೆಗಳನ್ನು ಸೃಷ್ಟಿಸುವುದರ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ. ಸಚಿವರಾದ ಪರಮೇಶ್ವರ, ಸತೀಶ ಜಾರಕಿಹೊಳಿ, ಕೆ.ಎನ್. ರಾಜಣ್ಣ ಅವರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸುವುದರ ಬಗ್ಗೆ ಅವರ ಅಭಿಪ್ರಾಯಗಳನ್ನು ಹೇಳಿದ್ದಾರೆ. ನಾನು ಮತ್ತು ಪೌರಾಡಳಿತ ಸಚಿವ ರಹೀಂ ಖಾನ್ ಕೂಡ ಅಭಿಪ್ರಾಯ ತಿಳಿಸಿದ್ದೇವೆ. ಆದರೆ, ಅಂತಿಮವಾಗಿ ತೀರ್ಮಾನ ಕೈಗೊಳ್ಳಬೇಕಾಗಿರುವುದು ಪಕ್ಷದ ಹೈಕಮಾಂಡ್'

ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್, ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ (ಬೀದರ್‌ನಲ್ಲಿ)

ಪಕ್ಷದೊಳಗೆ ಎದ್ದಿರುವ ಮೂವರು ಉಪ ಮುಖ್ಯಮಂತ್ರಿ ಹುದ್ದೆ ಬೇಡಿಕೆ ಕುರಿತು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಆ ಬಗ್ಗೆ ನಾನೇನು ಪ್ರತಿಕ್ರಿಯೆ ನೀಡುವುದಿಲ್ಲ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ನ್ಯಾ.ಬಿ. ವೀರಪ್ಪ ನೂತನ ಉಪ ಲೋಕಾಯುಕ್ತ

ಒಂದನೇ ಪುಟದಿಂದ...

'ಉಪ ಲೋಕಾಯುಕ್ತರ ಹುದ್ದೆ ಭರ್ತಿಗೆ ಬಿ. ವೀರಪ್ಪ ಅವರ ಹೆಸರು ಮಾತ್ರ ಪ್ರಸ್ತಾಪವಾಯಿತು. ಸಭೆಯಲ್ಲಿದ್ದ ಎಲ್ಲರೂ ಸಹಮತ ವ್ಯಕ್ತಪಡಿಸಿದರು. ಅವರನ್ನೇ ನೇಮಕ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಶೀಘ್ರದಲ್ಲಿ ಆದೇಶ ಹೊರಬೀಳಲಿದೆ ಎಂದು ಮೂಲಗಳು ತಿಳಿಸಿವೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 1961ರ ಜೂನ್ 1ರಂದು ಜನಿಸಿದ್ದ ವೀರಪ್ಪ, ಬೆಂಗಳೂರಿನ ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದು 1988ರಲ್ಲಿ ವಕೀಲಿ ವೃತ್ತಿ ಆರಂಭಿಸಿದ್ದರು. 1995ರಿಂದ 2015ರವರೆಗೆ ಸರ್ಕಾರಿ ವಕೀಲರಾಗಿ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸಿದ್ದರು.

2015ರ ಜನವರಿಯಲ್ಲಿ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದ ವೀರಪ್ಪ, 2016ರಿಂದ 2023ರ ಮೇವರೆಗೆ ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಿದ್ದರು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳ ತನಿಖೆಯ ಅಧಿಕಾರವನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಮರುಸ್ಥಾಪಿಸಿ ಐತಿಹಾಸಿಕ ತೀರ್ಪು ನೀಡಿದ್ದರು. 2021ರಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದ್ದ ಅಕ್ರಮಗಳ ಕುರಿತ ತನಿಖೆಗೆ ನೇಮಿಸಿದ್ದ ಆಯೋಗದ ಅಧ್ಯಕ್ಷರೂ ಆಗಿದ್ದರು.

13 ಸ್ಥಳಗಳಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣದ ಅಕ್ರಮ ವಹಿವಾಟಿನ ಆರೋಪದಡಿ ಬಿಲ್ಡರ್‌ಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಜಾರಿ ನಿರ್ದೇಶನಾಲಯ, ಬೆಂಗಳೂರಿನ 11 ಮತ್ತು ಮೈಸೂರಿನ ಎರಡು ಸ್ಥಳಗಳಲ್ಲಿ ಸೋಮವಾರ ಶೋಧ ನಡೆಸಿದೆ.

ಬೆಂಗಳೂರಿನ ಯು.ಬಿ. ಸಿಟಿ, ಮಲ್ಲೇಶ್ವರ, ಬಸವೇಶ್ವರನಗರ, ಹನುಮಂತನಗರ, ಬನ್ನೇರುಘಟ್ಟ ರಸ್ತೆಯಲ್ಲಿರುವ ಬಿಲ್ಡರ್‌ಗಳ ಕಚೇರಿ ಹಾಗೂ ಮನೆಗಳ ಮೇಲೆ ಸೋಮವಾರ ಬೆಳಿಗ್ಗೆ ಏಕಕಾಲಕ್ಕೆ ದಾಳಿಮಾಡಿದ ಇ.ಡಿ ಅಧಿಕಾರಿಗಳು, ಸಂಜೆಯವರೆಗೂ ಶೋಧ ನಡೆಸಿದರು. ಮೈಸೂರಿನಲ್ಲೂ ಬಿಲ್ಡರ್‌ಗಳಿಗೆ ಸೇರಿದ ಎರಡು ಸ್ಥಳಗಳ ಮೇಲೆ ದಾಳಿಮಾಡಿ ಶೋಧ ನಡೆಸಿದರು.

ಯು.ಬಿ. ಸಿಟಿ ಸೇರಿದಂತೆ ಕೆಲವು ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ವೇಳೆ ಸ್ಥಳೀಯ ಪೊಲೀಸರು ರಕ್ಷಣೆ ಒದಗಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಅಂಗನವಾಡಿಯಲ್ಲಿ ಎಲ್‌ಕೆಜಿ–ಯುಕೆಜಿ ಪ್ರಾರಂಭಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ–ಯುಕೆಜಿ ತರಗತಿಗಳನ್ನು ಪ್ರಾರಂಭಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

'ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ಶಿಶುಪಾಲನ ಕೇಂದ್ರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೂಸಿನ ಮನೆ ಮತ್ತು ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಲ್ಲಿ ಹಾಗೂ ರಾಜ್ಯದ ಇತರೆ ಭಾಗದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸುವ ಆದೇಶವನ್ನು ರದ್ದುಪಡಿಸಬೇಕು' ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

'ಅಂಗನವಾಡಿ ಕೇಂದ್ರಗಳಲ್ಲಿಯೇ ಶಾಲಾ ಪೂರ್ವ ಶಿಕ್ಷಣಕ್ಕೆ ನೀಡುವುದಕ್ಕೆ ಆದ್ಯತೆ ಕೊಡಬೇಕು. 3 ರಿಂದ 6 ವರ್ಷದ ಮಕ್ಕಳಿಗೆ ಸಮವಸ್ತ್ರ, ಪಠ್ಯಪುಸ್ತಕ ಹಾಗೂ ಉತ್ತಮ ಆಟೋಪಕರಣಗಳನ್ನು ಒದಗಿಸಬೇಕು. ಮಕ್ಕಳಿಗೆ ಆರಂಭಿಕ ಆರೈಕೆ ಮತ್ತು ಶಿಕ್ಷಣ (ಇಸಿಸಿಇ) ನೀಡುವ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡಬೇಕು' ಎಂದು ಫೆಡರೇಷನ್ ಅಧ್ಯಕ್ಷ ಬಿ. ಅಮ್ಜದ್ ಒತ್ತಾಯಿಸಿದರು.

'ರಾಜ್ಯದಲ್ಲಿ 46,062 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡಗಳನ್ನು ಹೊಂದಿವೆ. ಅಂಗನವಾಡಿ ಕಾರ್ಯಕರ್ತೆಯರಲ್ಲಿ 1,682 ಸ್ನಾತಕೋತ್ತರ ಪದವಿ, 6,365 ಪದವಿ, 15,217 ಪಿಯುಸಿ ಹಾಗೂ 32,612 ಮಂದಿ ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆ ಹೊಂದಿದ್ದಾರೆ. ಹೀಗಾಗಿ ಅಂಗನವಾಡಿ ಕೇಂದ್ರಗಳಲ್ಲೇ ಎಲ್‌ಕೆಜಿ–ಯುಕೆಜಿ ಆರಂಭಿಸಬೇಕು' ಎಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ಒತ್ತಾಯಿಸಿದರು.

'ಕಾಂಗ್ರೆಸ್ ಸರ್ಕಾರ ವಿಧಾನಸಭೆ ಚುನಾವಣೆಯ ಪೂರ್ವದಲ್ಲಿ ನೀಡಿದ್ದ ಅಂಗನವಾಡಿ ಕಾರ್ಯಕರ್ತೆಯರಿಗೆ ₹15 ಸಾವಿರ ಹಾಗೂ ಸಹಾಯಕಿಯರಿಗೆ ₹10 ಸಾವಿರ ಗೌರವ ಧನ ಹೆಚ್ಚಿಸುವ ಭರವಸೆಯನ್ನು ಈಡೇರಿಸಬೇಕು. ಅಂಗನವಾಡಿ ಕೇಂದ್ರಗಳಿಗೆ ಗುಣಮಟ್ಟದ ಆಹಾರ ಪೂರೈಸಬೇಕು' ಎಂದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ಫೆಡರೇಷನ್ ಉಪಾಧ್ಯಕ್ಷ ಹೊನ್ನಪ್ಪ ಮರಿಯಮ್ಮನವರ್ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

'ಅಂಗನವಾಡಿಗಳಲ್ಲೇ ಪೂರ್ವ ಪ್ರಾಥಮಿಕ'

ಒಂದನೇ ಪುಟದಿಂದ...

'ಅಂಗನವಾಡಿ ಕೇಂದ್ರಗಳಲ್ಲಿಯೇ ಪೂರ್ವ ಪ್ರಾಥಮಿಕ ಶಿಕ್ಷಣ ನೀಡಲು ತೀರ್ಮಾನಿಸಲಾಗಿದೆ. ಗುಣಮಟ್ಟದ ಶಿಕ್ಷಣ ಹಾಗೂ ಪೌಷ್ಟಿಕ ಆಹಾರ ನೀಡುವುದೇ ನಮ್ಮ ಉದ್ದೇಶ. ಈ ಕಾರಣಕ್ಕೆ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಮುಖ್ಯಮಂತ್ರಿ ಸಹಮತ ವ್ಯಕ್ತಪಡಿಸಿದ್ದಾರೆ. ಇಲಾಖೆಯ ಮೂಲಕವೇ ಮಕ್ಕಳಿಗೆ ಸಮವಸ್ತ್ರ, ಪುಸ್ತಕ, ಬ್ಯಾಗ್ ನೀಡಲು ನಿರ್ಧರಿಸಲಾಗಿದೆ. ಜೊತೆಗೆ, ಶಾಲೆಗಳ ಮಾದರಿಯಲ್ಲೆ ವರ್ಗಾವಣೆ ಪತ್ರ (ಟಿಸಿ) ನೀಡಲು ಕ್ರಮ ವಹಿಸಲಾಗುವುದು' ಎಂದರು.

'ಗುಣಮಟ್ಟದ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿಯೇ ಸಿಗಬೇಕೆಂಬ ಕಳಕಳಿಯಿಂದ ಶಿಕ್ಷಣ ಇಲಾಖೆಯೂ ಸರ್ಕಾರಿ ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭಿಸಲು ಮುಂದಾಗಿದೆ. ಆದರೆ, ಇದಕ್ಕೆ ಅಂಗನವಾಡಿ ಕಾರ್ಯಕರ್ತೆಯ ರಿಂದ ವಿರೋಧ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಣಗೊಳಿಸಿ, ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ನೀಡುವ ಚಿಂತನೆಯಿದೆ' ಎಂದರು.

'ಪೂರ್ವ ಪ್ರಾಥಮಿಕ ಶಿಕ್ಷಣ ಆರಂಭಿಸುವ ಸಂಬಂಧ ಅಂಗನವಾಡಿ ಕಾರ್ಯಕರ್ತೆಯರ ಜೊತೆ ಈಗಾಗಲೇ ಚರ್ಚೆ ನಡೆಸಲಾಗಿದೆ. ಸದ್ಯ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರ ಪೈಕಿ, ಒಂಬತ್ತು ಸಾವಿರ ಮಂದಿ ಪದವಿ ಪಡೆದವರು. ಒಂದೂವರೆ ಸಾವಿರಕ್ಕಿಂತಲೂ ಹೆಚ್ಚು ಮಂದಿ ಸ್ನಾತಕೋತ್ತರ ಪದವಿ ಪಡೆದವರು. ಹೀಗಾಗಿ, ಗುಣಮಟ್ಟದ ಶಿಕ್ಷಣ ನೀಡಲು ಯಾವುದೇ ಸಮಸ್ಯೆಯಾಗದು' ಎಂದು ಹೇಳಿದ ಹೆಬ್ಬಾಳಕರ, 'ಯಾರನ್ನೂ ಕೆಲಸದಿಂದ ತೆಗೆಯುವ ಪ್ರಶ್ನೆ ಇಲ್ಲ' ಎಂದು ಸ್ಪಷ್ಟಪಡಿಸಿದರು. ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

ಶ್ರೀನಗರಕ್ಕೆ 'ವಿಶ್ವ ಕರಕುಶಲ ನಗರಿ' ಗೌರವ

ಶ್ರೀನಗರ (ಪಿಟಿಐ): ತನ್ನ ವಿಶಿಷ್ಟ ಕರಕುಶಲ ಕಲೆಯಿಂದ ಜಾಗತಿಕ ಮನ್ನಣೆ ಗಳಿಸಿರುವ ಜಮ್ಮು ಮತ್ತು ಕಾಶ್ಮೀರದ ಬೇಸಿಗೆ ರಾಜಧಾನಿ ಶ್ರೀನಗರ, ಇದೀಗ 'ವಿಶ್ವ ಕರಕುಶಲ ನಗರಿ' ಎಂಬ ಗೌರವಕ್ಕೆ ಪಾತ್ರವಾಗಿದೆ.

'ಈ ಪ್ರತಿಷ್ಠಿತ ಗೌರವವು ಶ್ರೀನಗರದ ಸಾಂಸ್ಕೃತಿಕ ವೈಭವದ ಪರಂಪರೆ ಮತ್ತು ಸ್ಥಳೀಯ ಕುಶಲಕರ್ಮಿಗಳ ವಿಶಿಷ್ಟ ಕೌಶಲದ ಪ್ರತೀಕವಾಗಿದೆ. ಇದು ಸ್ಥಳೀಯ ಕೈಮಗ್ಗ ಹಾಗೂ ಕರಕುಶಲ ವಲಯಕ್ಕೆ ಉತ್ತೇಜನ ನೀಡಲಿದ್ದು, ಆ ಮೂಲಕ ಪ್ರವಾಸೋದ್ಯಮ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೂ ಅನುಕೂಲವಾಗಲಿದೆ' ಎಂದು ವಿಶ್ವ ಕರಕುಶಲ ಮಂಡಳಿಯ ವಕ್ತಾರರು ತಿಳಿಸಿದ್ದಾರೆ.

ಶ್ರೀನಗರವು 'ವಿಶ್ವ ಕರಕುಶಲ ನಗರಿ' ಮಾನ್ಯತೆ ಪಡೆದಿರುವುದು ಇಲ್ಲಿನ ಸಾಂಸ್ಕೃತಿಕ ವೈಭವ ಹಾಗೂ ಸ್ಥಳೀಯ ಕರಕುಶಲಕರ್ಮಿಗಳ ಪರಿಶ್ರಮಕ್ಕೆ ಸಂದ ಪ್ರತಿಫಲವಾಗಿದೆ. ಇದು ಪರಿವರ್ತನೆಗೆ ನಾಂದಿ ಹಾಡಿದ್ದು, ಸ್ಥಳೀಯ ಕರಕುಶಲ ಕರ್ಮಿಗಳ ಕೌಶಲ ವಿಕಾಸಕ್ಕಾಗಿ ಅತ್ಯಾಧುನಿಕ ತರಬೇತಿ ಕಾರ್ಯಕ್ರಮಗಳು ಹಾಗೂ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತದೆ ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಮಲ್ಲೇಶ್ವರ, ಗಂಗಮ್ಮನಗುಡಿ, ಜ್ಞಾನಭಾರತಿ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲು

ಪ್ರತ್ಯೇಕ ಪ್ರಕರಣ: ಮೂವರ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಡೆದ ಪ್ರತ್ಯೇಕ ಪ್ರಕರಣದಲ್ಲಿ ಮೂವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮಲ್ಲೇಶ್ವರ, ಗಂಗಮ್ಮನಗುಡಿ ಹಾಗೂ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಂಗಮ್ಮನಗುಡಿ ಸಮೀಪದ ಮೈಮ್ಯಾಕ್ಸ್ ವೃತ್ತದ ಬಳಿ ಮಂಜುನಾಥ್ (17) ಎಂಬ ಯುವಕನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ. ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ಮುಂದುವರಿಸಿದ್ದಾರೆ.

'ಮಂಜುನಾಥ್ ಅವರು ಕಾರ್ಪೆಂಟರ್ ಕೆಲಸ ಮಾಡುತ್ತಿದ್ದರು. ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಲಾಗಿದೆ. ಘಟನೆಗೆ ನಿಖರ ಕಾರಣ ಗೊತ್ತಾಗಿಲ್ಲ. ಹಳೇ ದ್ವೇಷ ಅಥವಾ ಪ್ರೀತಿಯ ವಿಚಾರಕ್ಕೆ ಕೃತ್ಯ ನಡೆದಿರುವ ಸಾಧ್ಯತೆಯಿದೆ' ಎಂದು ಪೊಲೀಸರು ಹೇಳಿದರು.

'ಕೊಲೆಯಾದ ಮಂಜುನಾಥ್‌ಗೆ ಅಪ್ಪ–ಅಮ್ಮ ಇಲ್ಲ. ಹೀಗಾಗಿ ಅಬ್ಬಿಗೆರೆಯ ಚಿಕ್ಕಪ್ಪನ ಮನೆಯಲ್ಲಿ ವಾಸವಾಗಿದ್ದರು. ಎಸ್‌ಎಸ್‌ಎಲ್‌ಸಿ ಅನುತ್ತೀರ್ಣ ಆಗಿದ್ದರು. ಕೆಲ ದಿನಗಳ ಹಿಂದೆ ಮದ್ಯ ಸೇವಿಸಿದ್ದ ಎಂಬ ಕಾರಣಕ್ಕೆ ಚಿಕ್ಕಪ್ಪ, ಮಂಜುನಾಥ್ ಅವರಿಗೆ ಹೊಡೆದು ಬುದ್ಧಿಮಾತು ಹೇಳಿದ್ದರು' ಎಂದು ಗೊತ್ತಾಗಿದೆ.

'ಭಾನುವಾರ ಮನೆಯಿಂದ ಹೊರಗಡೆ ಬಂದಿದ್ದ ಮಂಜುನಾಥ್, ವೈಮ್ಯಾಕ್ಸ್ ವೃತ್ತದ ಬಳಿ ಪ್ರದರ್ಶನಗೊಳ್ಳುತ್ತಿದ್ದ ನಾಟಕವನ್ನು ವೀಕ್ಷಿಸಲು ತೆರಳಿದ್ದರು. ನಾಟಕದ ಪ್ರದರ್ಶನ ಮುಗಿದ ಮೇಲೆ ಮನೆಗೆ ವಾಪಸ್ ಬರುತ್ತಿದ್ದರು. ಆಗ ಯುವಕರ ಗುಂಪಿನ ಜತೆಗೆ ವಾಗ್ವಾದ ನಡೆದಿದೆ. ಇದೇ ವಿಚಾರಕ್ಕೆ ಕೃತ್ಯ ನಡೆದಿರುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ'.

ಭಾನುವಾರ ಬೆಳಿಗ್ಗೆ 11ರ ಸುಮಾರಿಗೆ ವೈಮ್ಯಾಕ್ ವೃತ್ತದ ಬಳಿಯ ಖಾಲಿ ಜಾಗದ ಕಸದ ರಾಶಿ ಸಮೀಪ ಯುವಕನ ಶವ ಗಮನಿಸಿದ್ದ ಪಾದಚಾರಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದರು. ಬಳಿಕ ಸ್ಥಳಕ್ಕೆ ಧಾವಿಸಿದ ಪೊಲೀಸರು ಮೃತದೇಹ ಪರಿಶೀಲಿಸಿದಾಗ ಮಂಜುನಾಥ್ ಎಂಬುದು ಗೊತ್ತಾಗಿದೆ.

ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿ ಕೊಲೆ

ತಾಯಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ ಎಂಬ ಕಾರಣಕ್ಕೆ ಗಾರೆ ಕೆಲಸಗಾರರೊಬ್ಬರನ್ನು ಕೊಲೆ ಮಾಡಲಾಗಿದೆ. ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆ ಆವರಣ ಬಳಿ ಉದ್ಯಾನದಲ್ಲಿ ಈ ಕೃತ್ಯ ನಡೆದಿದೆ.

ವಲ್ಲಿಪುರದ ನಿವಾಸಿ ಪನ್ನೀರ್ ಸೆಲ್ವಂ(36) ಕೊಲೆಯಾದ ವ್ಯಕ್ತಿ. 'ಕೃತ್ಯ ಎಸಗಿದ್ದ ಆರೋಪದ ಅಡಿ ಪ್ರೇಮ್ ಕುಮಾರ್(21) ಮತ್ತು ಮದನ್ (23) ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಪನ್ನೀರ್ ಸೆಲ್ವಂ ಅವರು ಗಾರೆ ಕೆಲಸ ಮಾಡುತ್ತಿದ್ದರು. ಅವರು ಮದ್ಯ ವ್ಯಸನಿ ಆಗಿದ್ದರು. ಪ್ರತಿನಿತ್ಯ ಸಂಜೆ ಮದ್ಯದ ಅಮಲಿನಲ್ಲಿ ಅಕ್ಕಪಕ್ಕದ ನಿವಾಸಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಭಾನುವಾರ ಬೆಳಿಗ್ಗೆ ಪನ್ನೀರ್ ಸೆಲ್ವಂ ಮದ್ಯದ ನಶೆಯಲ್ಲಿ ಪ್ರೇಮ್‌ಕುಮಾರ್ ಅವರ ತಾಯಿಗೆ ನಿಂದಿಸಿದ್ದರು ಎನ್ನಲಾಗಿದೆ. ಅದೇ ವಿಚಾರವಾಗಿ ಕೊಲೆಯಾದ ವ್ಯಕ್ತಿ ಹಾಗೂ ಆರೋಪಿಗಳ ನಡುವೆ ಗಲಾಟೆ ನಡೆದಿದೆ. ಬಳಿಕ ಸ್ಥಳೀಯರು ಜಗಳ ಬಿಡಿಸಿ ಕಳುಹಿಸಿದ್ದರು. ನಂತರ ಮಧ್ಯಾಹ್ನವೂ ಗಲಾಟೆ ನಡೆದು ಸೆಲ್ವಂ ಅವರನ್ನು ಕೊಲೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಪನ್ನೀರ್ ಸೆಲ್ವಂ ಅವರಿಗೆ ಆರೋಪಿಗಳು ಕರೆ ಮಾಡಿ ಕೆ.ಸಿ.ಜನರಲ್ ಆಸ್ಪತ್ರೆ ಆವರಣದಲ್ಲಿ ಇರುವ ಪಾರ್ಕ್‌ಗೆ ಬರಲು ಹೇಳಿದ್ದರು. ಅವರು ಅಲ್ಲಿಗೆ ಬಂದಾಗ ಗಲಾಟೆ ಪ್ರಸ್ತಾಪಿಸಿ ಸಿಮೆಂಟ್ ಇಟ್ಟಿಗೆ ಎತ್ತಿಹಾಕಿ ಕೊಲೆ ಮಾಡಿ ಆರೋಪಿಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಚಾಕುವಿನಿಂದ ಇರಿದು ಕೊಲೆ

ಜ್ಞಾನ ಭಾರತಿ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡ ಗೊಲ್ಲರಹಟ್ಟಿಯಲ್ಲಿ ಬಾಡಿಗೆ ಪಾವತಿ ಹಾಗೂ ಕೌಟುಂಬಿಕ ವಿಚಾರಕ್ಕೆ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಲಾಗಿದೆ.

ಪೇಯಿಂಟಿಂಗ್ ಕೆಲಸ ಮಾಡುತ್ತಿದ್ದ ಆನಂದ್ (37) ಕೊಲೆಯಾದ ವ್ಯಕ್ತಿ. 'ಆನಂದ್ ಅವರು ಪುಟ್ಟಸ್ವಾಮಿ ಅವರ ಮನೆಯಲ್ಲಿದ್ದರು. ಇವರೇ ಆನಂದ್ ಅವರನ್ನು ನೋಡಿಕೊಳ್ಳುತ್ತಿದ್ದರು. ಪುಟ್ಟಸ್ವಾಮಿ ಅವರಿಗೆ ಮದ್ಯ ಸೇವನೆ ಅಭ್ಯಾಸವಿತ್ತು. ಮನೆ ಬಾಡಿಗೆ ಪಾವತಿಸುವ ವಿಚಾರಕ್ಕೆ ಇಬ್ಬರ ನಡುವೆ ನಿತ್ಯ ಗಲಾಟೆ ಆಗುತ್ತಿತ್ತು. ಭಾನುವಾರ ರಾತ್ರಿ ಜಗಳ ವಿಕೋಪಕ್ಕೆ ಹೋಗಿ ಮನೆಯಲ್ಲಿದ್ದ ಚಾಕುವಿನಿಂದ ಎಡಭಾಗದ ಎದೆಯ ಕೆಳಭಾಗಕ್ಕೆ ಚುಚ್ಚಿ ಕೊಲೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಪ್ರಬುದ್ಧಾ ಕೊಲೆ ಪ್ರಕರಣ ತನಿಖೆ ಸಿಐಡಿ ಹೆಗಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದ್ವಿತೀಯ ಬಿಬಿಎ ವಿದ್ಯಾರ್ಥಿನಿ ಆರ್. ಪ್ರಬುದ್ಧಾ (20) ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಲು ಮುಖ್ಯಮಂತ್ರಿ ಸೂಚಿಸಿದ್ದಾರೆ.

ಸಾಮಾಜಿಕ ಕಾರ್ಯಕರ್ತೆ ಕೆ.ಆರ್. ಸೌಮ್ಯಾ ಅವರು ತಮ್ಮ ಮಗಳ ಸಾವಿನ ಪ್ರಕರಣವನ್ನು ಸಿಐಡಿಗೆ ಒಪ್ಪಿಸಲು ಕೋರಿ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

'ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಸ್ಥಳೀಯ ಪೊಲೀಸರ ನಡೆ ಸಂಶಯಾಸ್ಪದವಾಗಿದೆ. ಮೇ 15ರಂದು ಕೊಲೆ ನಡೆದಾಗ ಅದನ್ನು ಆತ್ಮಹತ್ಯೆ ಎಂದು ಬಿಂಬಿಸುವ ಕೆಲಸ ಮಾಡಿದ್ದರು. ಸಿಸಿಟಿವಿ ದೃಶ್ಯಾವಳಿಗಳು ಲಭ್ಯವಾದ ನಂತರ ವರಸೆ ಬದಲಿಸಿದರು. ನಂತರವೂ ಸರಿಯಾಗಿ ತನಿಖೆ ನಡೆಸದೇ ಆರೋಪಿಯನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದಾರೆ.

ಆರೋಪಿಯ ತಂದೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೇ ಮದ್ಯದಂಗಡಿ ನಡೆಸುತ್ತಿದ್ದಾರೆ. ಅವರ ಜತೆ ಸ್ಥಳೀಯ ಪೊಲೀಸರಿಗೆ ಸಂಪರ್ಕವಿದೆ. ಕೊಲೆ ಸಾಕ್ಷ್ಯಗಳನ್ನು ಸರಿಯಾಗಿ ಸಂಗ್ರಹಿಸಲಿಲ್ಲ, ವಿಚಾರಣೆ ನಡೆಸಲಿಲ್ಲ. ಸರ್ಕಾರಿ ವಕೀಲರಿಗೆ ಸೂಕ್ತ ಮಾಹಿತಿ ನೀಡಲಿಲ್ಲ. ಇದರಿಂದ ಆರೋಪಿ 10 ದಿನಗಳಲ್ಲೇ ಜಾಮೀನು ಪಡೆಯಲು ಸಹಕಾರಿಯಾಯಿತು. ಈಗ ನನಗೂ ಜೀವ ಬೆದರಿಕೆ ಇದೆ. ಹಾಗಾಗಿ, ಸಿಐಡಿಗೆ ವಹಿಸಬೇಕು' ಎಂದು ಮನವಿ ಮಾಡಿದ್ದರು.

ಪ್ರಬುದ್ಧಾ

ಘಟನೆ ಹಿನ್ನೆಲೆ: ಪದ್ಮನಾಭನಗರ ಬಳಿಯ ಬೃಂದಾವನ ಲೇಔಟ್‌ನ ಮನೆಯೊಂದರಲ್ಲಿ ಮೇ 15ರಂದು ಪ್ರಬುದ್ಧಾ ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಪ್ರಬುದ್ಧಾ ಅವರದ್ದು ಆತ್ಮಹತ್ಯೆ ಎಂಬುದಾಗಿ ಆರಂಭದಲ್ಲಿ ಬಿಂಬಿಸಲಾಗಿತ್ತು. ಸಾವಿನ ಬಗ್ಗೆ ಪೊಲೀಸರಿಗೂ ಆರಂಭದಲ್ಲಿ ಸುಳಿವು ಸಿಕ್ಕಿರಲಿಲ್ಲ. ಆರೋಪಿ, ಪೊಲೀಸರ ದಿಕ್ಕು ತಪ್ಪಿಸುವ ರೀತಿಯಲ್ಲಿ ವ್ಯವಸ್ಥಿತ ಸಂಚು ರೂಪಿಸಿ ಕೃತ್ಯ ಎಸಗಿದ್ದ.

ಕೈ ಹಾಗೂ ಕತ್ತಿನ ಭಾಗದಲ್ಲಿ ಗಾಯವಿದ್ದಿದ್ದರಿಂದ ಇದೊಂದು ಕೊಲೆ ಎಂಬುದಾಗಿ ತಾಯಿ ದೂರು ನೀಡಿದ್ದರು. ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಹಲವು ಪುರಾವೆಗಳನ್ನು ಆಧರಿಸಿ ಬಾಲಕನ್ನು ವಶಕ್ಕೆ ಪಡೆದಿದ್ದರು. ₹ 2 ಸಾವಿರ ವಾಪಸು ಕೇಳಿದ್ದಕ್ಕಾಗಿ 14 ವರ್ಷ ವಯಸ್ಸಿನ ಬಾಲಕ ಈ ಕೃತ್ಯ ಎಸಗಿದ್ದ ಎನ್ನುವುದು ಬಯಲಾಗಿತ್ತು.

ಜೆಟಿಒ ಹುದ್ದೆ: ಅಂತಿಮ ಆಯ್ಕೆಪಟ್ಟಿ ಪ್ರಕಟಿಸುವಂತೆ ಆಗ್ರಹ

ಕೆಪಿಎಸ್‌ಸಿ ಎದುರು ಅಭ್ಯರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ ಅಡಿಯಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ (ಐಟಿಐ) ಖಾಲಿ ಇರುವ ಕಿರಿಯ ತರಬೇತಿ ಅಧಿಕಾರಿಗಳ (ಜೆಟಿಒ) ಹುದ್ದೆಯ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ಆದೇಶದಂತೆ ಪರಿಷ್ಕರಿಸಿ ತಾತ್ಕಾಲಿಕ ಪಟ್ಟಿ ಪ್ರಕಟಿಸಿದರೂ, ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲು ಕೆಪಿಎಸ್‌ಸಿ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ನೂರಾರು ಅಭ್ಯರ್ಥಿಗಳು ಕೆಪಿಎಸ್‌ಸಿ ಕಚೇರಿ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

2019ರಲ್ಲಿ ಪ್ರಕಟಿಸಿದ್ದ ಅಂತಿಮ ಆಯ್ಕೆ ಪಟ್ಟಿಯನ್ನು ಹೈಕೋರ್ಟ್ ನಿರ್ದೇಶನದಂತೆ ಕೆಪಿಎಸ್‌ಸಿ ಪರಿಷ್ಕರಿಸಿದೆ. ಆದರೆ, ಅಂತಿಮ ಪಟ್ಟಿ ಪ್ರಕಟಿಸಲು ಕೆಪಿಎಸ್‌ಸಿ ವಿಳಂಬ ಮಾಡುತ್ತಿರುವುದರಿಂದ, ಹುದ್ದೆಗೆ ಆಯ್ಕೆಯಾದರೂ ಕೆಲಸ ಸಿಗದೆ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಐಟಿಐಗಳಲ್ಲಿ 23 ವಿವಿಧ ವೃಂದಗಳಲ್ಲಿ ಖಾಲಿ ಇರುವ ಜೆಟಿಒಗಳ ನೇಮಕಾತಿಗೆ 2018 ಫೆ. 19 ರಂದು ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ಅರ್ಜಿ ಸಲ್ಲಿಸಿದ್ದ 50 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ 2018 ಡಿ. 27 ರಿಂದ 2019 ಜ. 3ರವರೆಗೆ ಪರೀಕ್ಷೆ ನಡೆದಿತ್ತು. 399 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿತ್ತು. ಆದರೆ, ಅತಿ ಹೆಚ್ಚು ಅಂಕ ಪಡೆದಿದ್ದರೂ ಸೇವಾನುಭವ ಪ್ರಮಾಣ ಪತ್ರದ ಕಾರಣಕ್ಕೆ ಆಯ್ಕೆಯಾದವರು ಹೈಕೋರ್ಟ್ ಮೆಟ್ಟಿಲೇರಿದ್ದರು.

'2023ರ ಜುಲೈ 24ರಂದು ಮಧ್ಯಂತರ ಆದೇಶ ನೀಡಿದ್ದ ಹೈಕೋರ್ಟ್, ಪಟ್ಟಿ ಪರಿಷ್ಕರಿಸಲು ಸೂಚಿಸಿತ್ತು. ಅದರಂತೆ, ಇದೇ ಮೇ 7ರಂದು ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ.

ಹೈಕೋರ್ಟ್ ಆದೇಶ ನೀಡಿ 11 ತಿಂಗಳು ಕಳೆದಿದೆ. ಆದರೆ, ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲು ಕೆಪಿಎಸ್‌ಸಿಗೆ ಇನ್ನೂ ಸಾಧ್ಯವಾಗಿಲ್ಲ. ಈ ಹುದ್ದೆಗಳಿಗೆ ಮಾಜಿ ಸೈನಿಕ ಕೋಟಾದಲ್ಲಿ ಆಯ್ಕೆಯಾದ ಕೆಲವರ ವಯಸ್ಸು 57 ದಾಟಿದೆ. ವಯೋಮಿತಿ ಸಡಿಲಿಕೆಯ ಅವಕಾಶದಲ್ಲಿ ಆಯ್ಕೆ ಆದವರ ವಯಸ್ಸು 49 ದಾಟಿದೆ. ಕೆಲವರು ಈಗಾಗಲೇ ಮೃತಪಟ್ಟಿದ್ದಾರೆ. ಕೆಪಿಎಸ್‌ಸಿಯ ವಿಳಂಬ ಧೋರಣೆಗೆ ಬೇಸತ್ತು, ದಯಾ ಮರಣಕ್ಕೆ ಅನುಮತಿ ನೀಡುವಂತೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದೇವೆ' ಎಂದು ಪ್ರತಿಭಟನಾ ನಿರತರು ಅಳಲು ತೋಡಿಕೊಂಡರು.

ಕಿರಿಯ ತರಬೇತಿ ಅಧಿಕಾರಿಗಳ (ಜೆಟಿಒ)ಹುದ್ದೆ ಆಕಾಂಕ್ಷಿಗಳು ಕೆಪಿಎಸ್‌ಸಿ ಕಚೇರಿ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿದರು

ಸುದ್ದಿ 2 ನಿಮಿಷ

ಕೃಷ್ಣಾ ಮೇಲ್ದಂಡೆ ಯೋಜನೆ: ರಾಜ್ಯ ಸರ್ಕಾರಕ್ಕೆ ನೋಟಿಸ್

ಬೆಂಗಳೂರು: 'ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಪರಿಹಾರ ನೀಡುವಾಗ ನಿಯಮ ಪಾಲನೆ ಆಗುತ್ತಿಲ್ಲ' ಎಂದು ಆರೋಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬಾಗಲಕೋಟೆ ನವನಗರದ ನಿವಾಸಿ ಶ್ರೀಶೈಲ್ ಬರಗುಂಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸರ್ಕಾರ ಭೂಸ್ವಾಧೀನ ಮಾಡಿಕೊಂಡಿತ್ತು. ಭೂಮಿ ಕಳೆದುಕೊಂಡವರಿಗೆ 2013ರ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನ ಪುನರ್ವಸತಿ ಹಾಗೂ ಪುನರ್ವಸತಿ ಮಸೂದೆ ಅಡಿಯಲ್ಲಿ ಪರಿಹಾರವಾಗಿ ಉದ್ಯೋಗ ಸೇರಿದಂತೆ ವಿವಿಧ ರೀತಿಯ ಸಹಾಯಹಸ್ತಕ್ಕೆ ಮುಂದಾಗಿದೆ. ಆದರೆ ಈ ಪ್ರಕ್ರಿಯೆಯಲ್ಲಿ ಸರಿಯಾದ ನಿಯಮ ಪಾಲನೆ ಆಗುತ್ತಿಲ್ಲ' ಎಂದು ಆಕ್ಷೇಪಿಸಿದರು.

ಹಣದ ಅಭಾವ: ಸಹಕಾರ ಸಂಘದ ಚುನಾವಣೆ ಮುಂದೂಡಿಕೆ!

ಪಟ್ಟನಾಯಕನಹಳ್ಳಿ: ಶಿರಾ ತಾಲ್ಲೂಕಿನ ನಾದೂರು ಪ್ರಾಥಮಿಕ ಸಹಕಾರ ಸಂಘದ ಆಡಳಿತ ಮಂಡಳಿ ಆಯ್ಕೆ ಸಂಬಂಧ ಜೂನ್ 30ರಂದು ನಿಗದಿಯಾಗಿದ್ದ ಚುನಾವಣೆಯನ್ನು ಹಣದ ಅಭಾವದಿಂದ ಮುಂದೂಡಲಾಗಿದೆ.

ಚುನಾವಣೆ ನಡೆಸಲು ₹30 ಸಾವಿರ ಮುಂಗಡ ಪಾವತಿಸುವಂತೆ ಚುನಾವಣಾಧಿಕಾರಿ ಇಂದಿರಮ್ಮ ಅವರು ಸಂಘದ ಮುಖ್ಯ ಪ್ರವರ್ತಕರಿಗೆ ನೋಟಿಸ್ ನೀಡಿದ್ದರು. ಸಂಘದಲ್ಲಿ ಹಣಕಾಸು ಕೊರತೆ ಇದೆ ಎಂದು ಮುಖ್ಯ ಪ್ರವರ್ತಕರು ನೋಟೀಸ್‌ಗೆ ಉತ್ತರಿಸಿದ್ದರು. ಹೀಗಾಗಿ ಚುನಾವಣೆ ಮುಂದೂಡಿ ಚುನಾವಣಾಧಿಕಾರಿ ಪ್ರಕಟಣೆ ಹೊರಡಿಸಿದ್ದಾರೆ.

ನಗರದಲ್ಲಿ ಇಂದು

ಬಿ. ಗಂಗಾಧರ ಅವರ 'ಮಾನವೀಯತೆಯಡೆಗೆ ನನ್ನ ಓದು–2' ಪುಸ್ತಕ ಬಿಡುಗಡೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಜಯಕರ ಎಸ್.ಎಂ., ಅತಿಥಿಗಳು: ಎಚ್. ನಟರಾಜ್, ಎಚ್. ವಿಶ್ವನಾಥ್, ನಿಜಲಿಂಗಪ್ಪ ವೈ. ಮಟ್ಟಿಹಾಳ್, ಶೇಖ್ ಲತೀಫ್, ಡಿ. ಡೊಮಿನಿಕ್, ಸಿ. ರಮಾಕುಮಾರಿ ಸಿದ್ಧಲಿಂಗಯ್ಯ, ಪುಸ್ತಕದ ಕುರಿತು: ಎಚ್. ಲಕ್ಷ್ಮಿನಾರಾಯಣಸ್ವಾಮಿ, ಆಯೋಜನೆ: ಪ್ರೊ.ಬಿ. ಗಂಗಾಧರ ಶಿಷ್ಯ ಬಳಗ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

'ಯಶೋಧರಮ್ಮ ದಾಸಪ್ಪ ಸಮಾಜರತ್ನ' ಪ್ರಶಸ್ತಿ ಪ್ರದಾನ: ಬಿ.ಆರ್. ಪಾಟೀಲ, ಅತಿಥಿಗಳು: ಪಿ.ಜಿ.ಆರ್. ಸಿಂಧ್ಯ, ಬಸವರಾಜ ಗ. ಗಾರ್ಗಿ, ಪ್ರಶಸ್ತಿ ಪುರಸ್ಕೃತರು: ಮೀನಾಕ್ಷಿ ಬಾಳಿ, ಅಧ್ಯಕ್ಷತೆ: ರಾಮಣ್ಣ ಎಚ್. ಕೋಡಿಹೊಸಳ್ಳಿ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.15

ಸಿಜಿಕೆ ಒಂದು ಮಾಂತ್ರಿಕ ಕ್ರಿಯೆ 'ಮೂರು ದಿನಗಳ ಒಡಲಾಳ' ನಾಟಕೋತ್ಸವ: ಉದ್ಘಾಟನೆ: ಕಾ.ತ. ಚಿಕ್ಕಣ್ಣ, ಅಧ್ಯಕ್ಷತೆ: ನರಸಿಂಹ ನಾಯ್ಕ, ಅತಿಥಿಗಳು: ಎಚ್. ದಿವಾಕರ್, ಸೂರ್ಯಕಾಂತ್ ಗುಣಕಿಮಠ್, 'ಅಲ್ಲೇ ಇದ್ದೋರು' ನಾಟಕ ಪ್ರದರ್ಶನ: ರಚನೆ: ಸಿಜಿಕೆ, ಕಾವ್ಯ: ಸಿದ್ಧಲಿಂಗಯ್ಯ, ಸಂಗೀತ: ವಾಸುದೇವ್ ಹೊಸಳ್ಳಿ, ಕೋಕಿಲರಾಜು, ನಿರ್ದೇಶನ: ಸಿದ್ದರಾಮ ಕೊಪ್ಪರ್, ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಬಿಇಎಲ್ ಕಾರ್ಖಾನೆ ಆವರಣ, ಜಾಲಹಳ್ಳಿ, ಸಂಜೆ 6

ಜ್ಯೋತಿ ಸ್ಮಾರಣಾರ್ಥ ದತ್ತಿ ಕಾರ್ಯಕ್ರಮ: ಭರತನಾಟ್ಯ ಪ್ರದರ್ಶನ: ಚೇತನ್ ಗಂಗಟ್ಕರ್, ಚಂದ್ರಪ್ರಭ ಚೇತನ್ ಮತ್ತು ತಂಡ, ಆಯೋಜನೆ: ಭಾರತೀಯ ವಿದ್ಯಾಭವನ, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

UVCE GRADUATES ASSOCIATION
NOTICE IS HEREBY GIVEN THAT the 4th General Meeting (AGM) of the Association is scheduled to be held on **Sunday, 21st July, 2024 at 11 AM in the KEB Engineers Association,** Anand Rao Circle, Bengaluru along with elections. Agenda and Calendar of events can be viewed in the website: **www.uvcega.org**
Sd/-Secretary
Date:24-06-2024 Place: Bengaluru

JOB OPPORTUNITIES

Walk-in

DESIGNATION: STAFF Nurse. Qualification: GNM. Locations: Bangalore and Mangalore Walk in interview: 1. Location: Nephroplus Dialysis Center, Ground, Malleswaram Circle, Police Station Rd, Bengaluru, Karnataka- 560003, Date: 25 June 2024. Contact Number: 7396660520, 2. Location: Nephroplus Dialysis Centre, 3HXW+RG4, Railway Station Rd, Gandhi Nagar, Yelahanka, Bengaluru, Karnataka- 560064 Date: 26 June 2024. Contact Number: 8977868245

BUSINESS

Business Offers

Distributors

DISTIUBUTORS WANTED ALL OVER KARNATAKA for FURNITURE. Contact by WhatsApp : 9900856033

Business For Sale

BUSINESS FOR SALE 40 year old established profitable auto parts business for sale. Contact 9448039076

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Lost

NOTICE
Notice is hereby given that share certificate no 1 Distinctive nos from 1 to 5000 of **Daikoku Software Services Private Limited**, Flat no. 204, Retreat Garden White City Layout, Seegehalli Nr Battrahalli, Nr KR Puram RTC Office, Bangalore – 560049, Karnataka, India in the name of Late Lalitha Kumar Das have has been reported by Ajeet Kumar Dash(Legal Heir) that the share certificate has been lost or misplaced, and an application has been made by Ajeet Kumar Dash his Legal Heir to the Daikoku
Folio No.: 1, **Share certificate no.:** 1 - 5000, **Distinctive nos.:** 5000, **No. of Shares:** 5000
Date: 06-05-2024 Place: Bangalore | Ajeet kumar Dash (Hon, Secretary)

Change of Name

CHANGE OF NAME
I, **Rakesha H.U.** S/o Ugraiah, Aged: 32 Years, Residing at Hodagatta, Yelagalavadi, Kunigal Taluk, Tumkur, Karnataka-572126, Today at Bengaluru. have changed my name to **VINAYAKA H.U** vide affidavit dated 24-06-2024 sworn to before Notary Devaraja E, Bengaluru. Henceforth I shall be known as **VINAYAKA H.U** only

CHANGE OF NAME
We, **Mrs. P. SMITHA & SHIVAKUMAR.R**, Residing at No.200, 5th 'A' Main, 6th Cross, Hampinagar, Vijayanagar, Bengaluru-560104, in old birth certificate Reg No.178 its Mentioned as **S. DAIWIK** have changed our minor son's name to **LAKSHITH VIHAAN.S DOB: 16-06-2009** vide affidavit dated 21.06.2024, before notary M.K.Devaki, Bengaluru.

CHANGE OF NAME
I, Rtd **No. 6487910A** Rank Hav, Name B M Machaiah, R/a Muttlu (Village), Surlabbi (Post), Madikere (Taluk), Kodagu (Dist) Karnataka (State)-571251 declare that in my service record my wife's name is mentioned as **B MACHAIAH ASHWINI**, her correct name is **B M ASHWINI** vide affidavit dt: 25-04-2024 sworn before Notary A.R.Muneer Ahmed. B'lore.

CHANGE OF NAME
I, Rtd **No. 6487910A** Rank Hav, Name B M Machaiah, R/a Muttlu (Village), Surlabbi (Post), Madikere (Taluk), Kodagu (Dist) Karnataka (State)-571251 declare that in my service record my daughter's name is mentioned as **ANKITHA MACHAIAH B M**, her correct name is **ANKITHA MACHAIAH** vide affidavit dt: 25-04-2024 sworn before Notary A.R.Muneer Ahmed. B'lore.

CHANGE OF NAME
I, **No. 2788266L** Ex NK (ST) Navalagatti Gangappa, R/a No. 13, 1st Main, Subbanna Garden, Devaki Nandan Park, Vijayanagar, B'lore-40 have changed my Son's name from Vishwanath to **VISHWANATH GANGAPPA NAVALGATTI** and my daughter's Name from Vaishnavi to **VAISHNAVI NAVALAGATTI** vide affidavit dt: 19-06-2024 sworn before Notary B.V. Nagabhushna. B'lore.

CHANGE OF NAME
I, **MANGAL** W/o No. 2788266L Ex NK (ST), Navalagatti Gangappa, R/a No. 13, 1st Main, Subanna Garden, Devaki Nandan Park, Vijayanagar, Bangalore-40 have changed my name to **MANGAL NAVALAGATTI** vide affidavit dt: 19-06-2024 sworn before Notary B.V. Nagabhushana, B'lore

I,JAYANTHI R Prasad Residing at #202 1st Floor 12th Cross near VET School J.P.Nagar 2nd-Phase Bangalore-78. Hereby state that JAYANTHI R PRASAD and JAYANTHI MANJUNATH both names belongs to me. Sworn vide Affidavit dtd:11.06.2024 before Notary Hedge Ganapati Venkataraman Bangalore

CHANGE OF NAME
I, Rtd **No. 6487910A** Rank Hav, Name B M Machaiah, R/a Muttlu (Village), Surlabbi (Post), Madikere (Taluk), Kodagu (Dist) Karnataka (State)-571251 declare that in my service record my daughter's name and date of birth is mentioned as **NEELAMMA MACHAICH BM, DOB 17-03-2011** her correct name is **NEELAMMA MACHAIAH DOB: 13-03-2011** vide affidavit dt: 25-04-2024 sworn before Notary A.R.Muneer Ahmed. Bengaluru.

I, VENKATESH Iyengar Kyathanahalli Yethiraja S/o LateYethiraja Iyengar Kyathanahalli Rangaswamy Iyengar Residing at No. 54/30, 11th Main, 16th Cross, Malleswaram West, Bengaluru-560055. have changed my name to Venkatesh Kyathanahalli Yethiraj vide affidavit dated 24/06/2024 before notary M.S.Satish, Bangalore

DH ಪ್ರಜಾವಾಣಿ Classifieds More value, more impact
EDUCATION
Book your Educational Related Ads in DH All Karnataka + Prajavani Bengaluru City
*Conditions apply
www.dhclassifieds.com BOOK NOW
For more details contact: 9731810277 9886213331 9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಧರಣಿ

ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಅಂಗನವಾಡಿ ಕಾರ್ಯಕರ್ತೆಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅಹೋರಾತ್ರಿ ಧರಣಿ ಆರಂಭಿಸಿದ್ದು, ಕಾರ್ಯಕರ್ತೆಯರು ಪ್ರತಿಭಟನಾ ಸ್ಥಳದಲ್ಲಿಯೇ ಮಲಗಿದ್ದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಬಾಗಲಗುಂಟೆಯ ಸುತ್ತಮುತ್ತಲಿನ ನಿವಾಸಿಗಳ ಅಳಲು

ಬಡಾವಣೆಗಳಲ್ಲಿ ನೀರಿನ ಸಮಸ್ಯೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆ ಕೆರೆ ಹಿಂಭಾಗದ ಬೈರವೇಶ್ವರ ನಗರ, ಅಂದಾನಪ್ಪ ಲೇಔಟ್ ನಿವಾಸಿಗಳಿಗೆ ಸಿಎಂಸಿ ನೀರೂ ಇಲ್ಲ. ಇತ್ತ ಕಾವೇರಿ ನೀರೂ ಕೈಕೊಟ್ಟಿದೆ. ಇದರಿಂದಾಗಿ 50ಕ್ಕೂ ಅಧಿಕ ಮನೆಗಳು ಮಳೆಗಾಲದಲ್ಲೂ ನೀರಿನ ಸಮಸ್ಯೆ ಎದುರಿಸುತ್ತಿವೆ.

ಈ ಎರಡು ಲೇಔಟ್‌ಗಳಲ್ಲಿ ಬೋರ್‌ವೆಲ್ ಸೌಲಭ್ಯವಿಲ್ಲ. 8ನೇ ಮೈಲಿ ಸಮೀಪದಲ್ಲಿ ಉಂಟಾಗಿರುವ ಪೈಪ್‌ಲೈನ್ ಸಮಸ್ಯೆಯಿಂದ ಕಾವೇರಿ ನೀರು ಪೂರೈಕೆಯೂ ಸ್ಥಗಿತಗೊಂಡಿದೆ. ಹೀಗಾಗಿ ನೀರಿನ ಸಮಸ್ಯೆ ತಲೆದೋರಿದೆ.

'ನೀರಿನ ಕೊರತೆಯಿಂದಾಗಿ ಟ್ಯಾಂಕರ್ ನೀರನ್ನು ಆಶ್ರಯಿಸಬೇಕಿದೆ. ಆದರೆ, ದುಬಾರಿ ದರ ನೀಡಿ ನೀರು ತರಿಸಲು ಆಗದೇ ಜನರು ತತ್ತರಿಸುತ್ತಿದ್ದಾರೆ' ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.

'ಮನೆ ಬಾಡಿಗೆ ಕಟ್ಟಬೇಕು. ಜೊತೆಗೆ ಟ್ಯಾಂಕರ್ ನೀರಿಗಾಗಿ ತಿಂಗಳಿಗೆ ₹2,000 ಎತ್ತಿಡಬೇಕು. ಸಾಮಾನ್ಯ ಜನರಿಗೆ ಇದು ದುಬಾರಿ. ಸಂಬಂಧಪಟ್ಟ ಅಧಿಕಾರಿಗಳು ನೀರಿನ ಸಮಸ್ಯೆಗೆ ಬೇಗ ಪರಿಹಾರ ಒದಗಿಸಬೇಕು' ಎಂದು ಖಾಸಗಿ ಸಂಸ್ಥೆಯ ಕಾರ್ಮಿಕ ಬಾಣಗೆರೆ ವಿಶ್ವನಾಥ್ ನಾಯಕ ಆಗ್ರಹಿಸಿದರು.

'ಸುಮಾರು ನಾಲ್ಕು ತಿಂಗಳಿನಿಂದ ಈ ಪ್ರದೇಶದಲ್ಲಿ ನೀರಿನ ಹಾಹಾಕಾರ ಉಂಟಾಗಿದೆ. ಯಾರೊಬ್ಬರೂ ಈ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಉಳ್ಳವರು ಟ್ಯಾಂಕರ್ ನೀರು ತರಿಸಿಕೊಳ್ಳುತ್ತಿದ್ದಾರೆ. ಇಲ್ಲದವರು ಉಚಿತ ನೀರಿಗಾಗಿ ಕಾಯುತ್ತ ಕುಳಿತುಕೊಳ್ಳುವಂತಾಗಿದೆ. ಕಾವೇರಿ ನೀರನ್ನಾದರೂ ಸರಿಯಾಗಿ ಬಿಟ್ಟದ್ದರೆ ಪರಿಸ್ಥಿತಿ ಸುಧಾರಿಸುತ್ತಿತ್ತು' ಎಂದು ಗೃಹಿಣಿ ಪವಿತ್ರಾ ಹೇಳಿದರು.

'ಬೇಸಿಗೆಯಲ್ಲಿ ನೀರಿನ ಕೊರತೆ ನೀಗಿಸಲು ಜಲಮಂಡಳಿ ವಿಫಲವಾಗಿದೆ. ಮಳೆಗಾಲ ಆರಂಭವಾಗಿದ್ದು ಸಮಸ್ಯೆಯನ್ನು ಶೀಘ್ರ ಬಗೆಹರಿಸದಿದ್ದರೆ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ' ಎಂದು ಸ್ಥಳೀಯ ನಿವಾಸಿ ಬಿ.ಎಂ. ಜಗದೀಶ್ ಎಚ್ಚರಿಕೆ ನೀಡಿದರು.

'ನೀರಿನ ಸಮಸ್ಯೆಯ ಕಾರಣದಿಂದಾಗಿ ಈ ಪ್ರದೇಶದ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಶಾಲಾ–ಕಾಲೇಜಿನ ತರಗತಿಗಳಿಗೆ, ಪರೀಕ್ಷೆ ಹೋಗಲು ಸಾಧ್ಯವಾಗುತ್ತಿಲ್ಲ' ಎಂದು ವಿದ್ಯಾರ್ಥಿ ಗಣೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಬಾಗಲಗುಂಟೆಯಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಯಿತು

'ವಾರದೊಳಗೆ ಸಮಸ್ಯೆ ಪರಿಹಾರ'

'ಕಾವೇರಿ 5ನೇ ಹಂತದ ನೀರಿನ ಸಂಪರ್ಕದ ಕೆಲಸ ನಡೆಯುತ್ತಿದೆ. ಪೈಪ್‌ಲೈನ್ ಅಳವಡಿಸುವಾಗ ಅಡಚಣೆ ಉಂಟಾಗಿದೆ. ಯು-ಆಕಾರದ ಪೈಪ್‌ಲೈನ್‌ನಲ್ಲಿ ಕೆಲಸ ಬಾಕಿ ಇರುವುದರಿಂದ ತಾತ್ಕಾಲಿಕವಾಗಿ ನೀರು ಪೂರೈಕೆ ಕಡಿಮೆಯಾಗಿದೆ. ವಾರದೊಳಗೆ ಸರಿಪಡಿಸಿ ಸಮಸ್ಯೆ ಬಗೆಹರಿಸಲಾಗುವುದು' ಎಂದು ಜಲ ಮಂಡಳಿ ಕಾರ್ಯನಿರ್ವಾಹಕ ಎಂಜಿನಿಯರ್ ನಾಗರಾಜ್ ವಿಶ್ವಾಸ ವ್ಯಕ್ತಪಡಿಸಿದರು.

‘ತುರ್ತು ಪರಿಸ್ಥಿತಿ: ಕಾಂಗ್ರೆಸ್ ಕ್ಷಮೆ ಯಾಚಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿ ಸಂವಿಧಾನಕ್ಕೆ ಅಪಚಾರ ಮಾಡಿದ್ದಕ್ಕಾಗಿ ಕಾಂಗ್ರೆಸ್ ಪಕ್ಷವು ಇಡೀ ದೇಶದ ಜನರ ಕ್ಷಮೆ ಯಾಚಿಸಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಆರ್. ಅಶೋಕ

ಸ್ವಾತಂತ್ರ್ಯ ಉದ್ಯಾನದ ಹಳೆ ಕಾರಾಗೃಹದ ಬಳಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ತುರ್ತು ಪರಿಸ್ಥಿತಿ ನೆನಪಿನ ಪೋಸ್ಟರ್ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೆಹಲಿಯ ರಾಮಲೀಲಾ ಮೈದಾನದಲ್ಲಿ ತಲೆಬಾಗಿ ನಿಂತು ಜನರ ಕ್ಷಮೆ ಯಾಚಿಸಬೇಕು’ ಎಂದರು.

‘ಡಾ.ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಮೂಲೆಗೆ ತಳ್ಳಿ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸಿದ್ದ ಕಾಂಗ್ರೆಸ್ ನಾಯಕಿ ಇಂದಿರಾ ಗಾಂಧಿ ಅವರು ದೇಶದಲ್ಲಿ ರಾತ್ರೋರಾತ್ರಿ ತುರ್ತು ಪರಿಸ್ಥಿತಿ ಹೇರಿದ್ದರು. ನ್ಯಾಯಾಂಗ ವ್ಯವಸ್ಥೆಯನ್ನೇ ತಮ್ಮ ಕಪಿಮುಷ್ಟಿಗೆ ತೆಗೆದುಕೊಂಡು ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ ಸೇರಿದಂತೆ ರಾಜಕೀಯ ನಾಯಕರು ಮತ್ತು ಪತ್ರಕರ್ತರನ್ನು ಜೈಲಿಗೆ ತಳ್ಳಿದ್ದರು’ ಎಂದು ದೂರಿದರು.

‘ಆಗ ದ್ವಿತೀಯ ಪಿಯುಸಿ ವಿದ್ಯಾರ್ಥಿಯಾಗಿದ್ದ ನಾನು ಆರ್‌ಎಸ್‌ಎಸ್ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಇಂದಿರಾ ಗಾಂಧಿ ವಿರುದ್ಧ ಎರಡು ವಾಕ್ಯಗಳ ಘೋಷಣೆ ಕೂಗಿದ್ದೆ. ಪೊಲೀಸರು ಬಂಧಿಸಿ ಚಿತ್ರಹಿಂಸೆ ನೀಡಿದ್ದರು’ ಎಂದು ಅಶೋಕ ನೆನಪಿಸಿಕೊಂಡರು.

‘ಸಂವಿಧಾನಕ್ಕೆ ಅಪಚಾರ ಎಸಗಿ ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೆಸ್‌ನವರು ಈಗ ಬಿಜೆಪಿಯವರು ಸಂವಿಧಾನ ಬದಲಾವಣೆ ಮಾಡುತ್ತಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ’ ಎಂದು ಹೇಳಿದರು.

ಪಕ್ಷ ಸೂಚಿಸಿದರೆ ಸ್ಪರ್ಧಿಸುವೆ: ಡಿಕೆಶಿ

ಚನ್ನಪಟ್ಟಣ ಉಪ ಚುನಾವಣೆ: ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ ಅಭ್ಯರ್ಥಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸುವಂತೆ ಪಕ್ಷ ಸೂಚಿಸಿದರೆ ಅದಕ್ಕೆ ಸಿದ್ಧ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಶಿವಕುಮಾರ್

ತಾಲ್ಲೂಕಿನ ಕೋಡಂಬಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಡಿ.ಕೆ. ಸುರೇಶ್ ಅವರಿಗೆ ಜನ ವಿಶ್ರಾಂತಿ ಕೊಟ್ಟು, ತಿದ್ದಿಕೊಳ್ಳಲು ಅವಕಾಶ ನೀಡಿದ್ದಾರೆ. ಸದ್ಯ ಅವರು ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದಿದ್ದಾರೆ. ಆದರೆ, ಪಕ್ಷದ ಚುನಾವಣಾ ಸಮಿತಿ ನನ್ನ ಅಥವಾ ಸುರೇಶ್ ಹೆಸರನ್ನು ಸೂಚಿಸಿದರೆ ಕೇಳಲೇಬೇಕು’ ಎಂದರು.

ಉಪಚುನಾವಣೆ ಅಭ್ಯರ್ಥಿ ಆಯ್ಕೆ ಕುರಿತು ಕ್ಷೇತ್ರದ ಮತದಾರರು ಹಾಗೂ ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸುತ್ತೇವೆ. ಜೊತೆಗೆ ಮುಖ್ಯಮಂತ್ರಿ ಹಾಗೂ ಪ್ರಧಾನ ಕಾರ್ಯದರ್ಶಿಯೊಂದಿಗೆ ಚರ್ಚಿಸುತ್ತೇವೆ. ಬಳಿಕ ಯಾರು ಸ್ಪರ್ಧಿಸಬೇಕೆಂದು ಪಕ್ಷದ ಚುನಾವಣಾ ಸಮಿತಿಯಲ್ಲಿ ತೀರ್ಮಾನಿಸುತ್ತೇವೆ ಎಂದು ಹೇಳಿದರು.

‘ಸುರೇಶ್ ಅವರಿಗೆ ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡುವ ಆಸಕ್ತಿ ಇರಲಿಲ್ಲ. ಕಾರ್ಯಕರ್ತರ ಒತ್ತಾಯದ ಮೇರೆಗೆ ಅವರು ಸ್ಪರ್ಧಿಸಿದ್ದರು. ಅವರು ಎಂದಿಗೂ ಅಧಿಕಾರಕ್ಕೆ ಆಸೆ ಪಟ್ಟವರಲ್ಲ’ ಎಂದು ತಿಳಿಸಿದರು.

‘ಕನಕಪುರದ ಬೆದರಿಕೆ ಮತ್ತು ಭ್ರಷ್ಟಾಚಾರದ ಮಾದರಿ ನಮಗೆ ಬೇಡ’ ಎಂಬ ಬಿಜೆಪಿಯ ಸಿ.ಪಿ. ಯೋಗೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಕನಕಪುರದಲ್ಲಿ ಭ್ರಷ್ಟಾಚಾರದ ಬಗ್ಗೆ ಏನಾದರೂ ದೂರು ಬಂದಿದೆಯೇ?’ ಎಂದು ಪ್ರಶ್ನಿಸಿದರು.

‘ಚನ್ನಪಟ್ಟಣ: ಹಿಂದಿನ ಶಾಸಕ ಏನೂ ಕೆಲಸ ಮಾಡಲಿಲ್ಲ’

ಚನ್ನಪಟ್ಟಣ (ರಾಮನಗರ): ‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಹಿಂದಿನ ಜನಪ್ರತಿನಿಧಿ ಜನರ ಸಮಸ್ಯೆಗೆ ಪರಿಹಾರ ನೀಡುವ ಕೆಲಸ ಮಾಡಲಿಲ್ಲ. ಹಾಗಾಗಿ ನಾನು ಆ ಕೆಲಸ ಮಾಡುತ್ತಿದ್ದೇನೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಹೆಸರು ಪ್ರಸ್ತಾಪಿಸದೆ ಕುಟುಕಿದ್ದಾರೆ.

ಬಡವರ ಬದುಕಲ್ಲಿ ಬದಲಾವಣೆ ತರಲಿಲ್ಲ ಎಂದರೆ ಜನಪ್ರತಿನಿಧಿಯಾಗಿ ಯಾಕಿರಬೇಕು. ಜನರ ಕಷ್ಟ ಆಲಿಸಬೇಡಿ ಎಂದು ಅವರಿಗೆ ನಾವೇನಾದರೂ ಹೇಳಿದ್ದೆವಾ ಎಂದು ತಾಲ್ಲೂಕಿನ ಕೋಡಂಬಳ್ಳಿಯಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ಪ್ರಶ್ನಿಸಿದರು.

‘ಚನ್ನಪಟ್ಟಣದಲ್ಲಿ ಅಧಿಕಾರದಲ್ಲಿದ್ದ ದೊಡ್ಡ ಅನುಭವಿ ನಾಯಕರು ಜನರ ಸಮಸ್ಯೆ ಬಗೆಹರಿಸುತ್ತಾರೆ ಎಂದು ನಾನು ಭಾವಿಸಿದ್ದೆ. ಆದರೆ ಸಮಸ್ಯೆ ಬಗೆಹರಿಸಲಿಲ್ಲ. ಇಷ್ಟು ದಿನ ಕ್ಷೇತ್ರವೂ ಖಾಲಿ ಇರಲಿಲ್ಲ. ನಾವೀಗ, ನಮ್ಮದೇ ಶೈಲಿಯಲ್ಲಿ ಕಾರ್ಯಕ್ರಮ ಮಾಡುತ್ತಾ ಜನರ ಸಮಸ್ಯೆ ಆಲಿಸುತ್ತಿದ್ದೇವೆ’ ಎಂದು ಹೇಳಿದರು.

‘ಅಧಿಕಾರಕ್ಕಾಗಿ ನಾನು ಚನ್ನಪಟ್ಟಣ ಬಿಟ್ಟು ಓಡುವವನಲ್ಲ. ಬದಲಿಗೆ ಇಲ್ಲೇ ಇದ್ದು ಕ್ಷೇತ್ರದ ಜನರ ಋಣ ತೀರಿಸುವೆ. ಯಾರೇನೇ ಟೀಕಿಸಲಿ. ಜನರ ಸಮಸ್ಯೆಗೆ ಪರಿಹಾರ ನೀಡುವುದಷ್ಟೇ ನನಗೆ ಮುಖ್ಯ’ ಎಂದರು.

‘ಕ್ಷೇತ್ರದ ಹಿಂದಿನ ಜನಪ್ರತಿನಿಧಿ ಈ ಕೆಲಸ ಮಾಡಲಿಲ್ಲ. ನಾನು ಈ ಭಾಗದ ಶಾಸಕನಾಗಿದ್ದಾಗಲೂ ಅಧಿಕಾರಿಗಳನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಕೆಲಸ ಮಾಡುತ್ತಿದ್ದೆ. ಈಗಲೂ ಮುಂದುವರಿಸುತ್ತಿದ್ದೇನೆ’ ಎಂದು ಶಿವಕುಮಾರ್ ಹೇಳಿದರು.

‘ತಾಲ್ಲೂಕಿನ ಅಧಿಕಾರಿಗಳ ಸಭೆ ಮಾಡಿದಾಗ, ಕಳೆದ ಐದು ವರ್ಷಗಳಲ್ಲಿ ತಾಲ್ಲೂಕಿನ ಬಡವರಿಗೆ ನಿವೇಶನ ಹಂಚಿಲ್ಲ. ಬಗರ್ ಹುಕಂ ಸಾಗುವಳಿ ಜಮೀನು ನೀಡಿಲ್ಲ ಎಂಬುದು ಸೇರಿದಂತೆ ಹಲವು ವಿಷಯಗಳು ಗಮನಕ್ಕೆ ಬಂದಿವೆ’ ಎಂದು ಅವರು ತಿರುಗೇಟು ನೀಡಿದರು.

‘ಕ್ಷೇತ್ರಕ್ಕೆ ಏನು ಮಾಡಿದ್ದೀರಿ ಎಂದು ದೊಡ್ಡ ನಾಯಕ ಕುಮಾರಸ್ವಾಮಿ ಅವರು ಕೇಳಿದ್ದಾರೆ. ನಾನು ಇಂಧನ ಸಚಿವನಾಗಿದ್ದಾಗ ತಾಲ್ಲೂಕಿನ 18 ಸಾವಿರ ರೈತರಿಗೆ ಉಚಿತವಾಗಿ ವಿದ್ಯುತ್ ಪರಿವರ್ತಕ ನೀಡಿದ್ದೇನೆ. ಹತ್ತು ಕಡೆ ದೊಡ್ಡ ಸ್ಟೇಷನ್ ಹಾಕಿಸಿದ್ದೇನೆ. ಕುಮಾರಸ್ವಾಮಿ ಅವರು ಕೇಂದ್ರದಿಂದ ಹಣ ತಂದು ಮಂಡ್ಯ ಜನರಿಗೆ ಉಚಿತವಾಗಿ ಹಾಕಿಸಲಿ ನೋಡೋಣ’ ಎಂದು ಸವಾಲು ಹಾಕಿದರು.

‘ಕೈ ಬಿಟ್ಟಿರುವ ಮುಸ್ಲಿಮರ ಹೆಸರು ಸೇರಿಸಿ ಎಂದಿರುವೆ’

‘ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮುಸ್ಲಿಮರ ಹೆಸರು ಕೈ ಬಿಡಲಾಗಿದೆ ಎಂಬ ದೂರು ಬಂದಿದ್ದವು. ಹೀಗಾಗಿ, ಅಂತಹ ಮತದಾರರ ಮನೆಗೆ ಭೇಟಿ ನೀಡಿ ಅವರ ಹೆಸರನ್ನು ಮತ್ತೆ ಸೇರಿಸಲು ಜಿಲ್ಲಾಧಿಕಾರಿಗೆ ಸೂಚಿಸಿದ್ದೇನೆ. ಹೊಸ ತಂತ್ರಜ್ಞಾನದಲ್ಲಿ ಬೇರೆ ಕಡೆ ಇರುವವರ ಹೆಸರನ್ನು ಇಲ್ಲಿಗೆ ತಂದು ಸೇರಿಸಲು ಆಗುವುದಿಲ್ಲ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

‘ಯೋಗೇಶ್ವರ್ ಕಚೇರಿ ಮುಂದೆ ಮಲಗಲಿ’

ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ನನ್ನ ವಿರುದ್ಧ ಚುನಾವಣಾ ಆಯೋಗಕ್ಕೆ ಪತ್ರ ಯಾಕೆ ಬರೆಯುತ್ತಾರೆ. ಚುನಾವಣಾ ಆಯೋಗದ ಕಚೇರಿಗೆ ಹಾಸಿಗೆ, ದಿಂಬು ತೆಗೆದುಕೊಂಡು ಹೋಗಿ ಮಲಗಲಿ ಎಂದು ಶಿವಕುಮಾರ್ ವ್ಯಂಗ್ಯವಾಡಿದರು.

‘ಶಿವಕುಮಾರ್ ಚುನಾವಣಾ ಅಕ್ರಮ ಮಾಡುತ್ತಿದ್ದು ಈ ಕುರಿತು ಆಯೋಗಕ್ಕೆ ಪತ್ರ ಬರೆಯುತ್ತೇನೆ’ ಎಂದು ಯೋಗೇಶ್ವರ್ ಈಚೆಗೆ ಹೇಳಿಕೆ ನೀಡಿದ್ದರು.

ಕೆಲವರು ಮಾತಲ್ಲೇ ಮನೆ ಕಟ್ಟಲು ಪ್ರಯತ್ನಿಸುತ್ತಾರೆ. ನಾನು ಶ್ರಮದಿಂದ ಭದ್ರ ಅಡಿಪಾಯ ಹಾಕಿ ಮನೆ ಕಟ್ಟುವವನೇ ಹೊರತು, ಭಾವನೆ ಮೇಲೆ ರಾಜಕೀಯ ಮಾಡುವವನಲ್ಲ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಕುಮಾರಸ್ವಾಮಿ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿರುವ ಕುರಿತು ಕೇಳಿದಾಗ, ‘ಬಹಳ ಸಂತೋಷ, ಅವರಿಗೆ ಒಳ್ಳೆಯದಾಗಲಿ’ ಎಂದರು.

‘ರಾಮನಗರ ಅಭಿವೃದ್ಧಿ ಮಾಡಿದ್ದು ನಾನು, ಅವರು ಕಲ್ಲು ಒಡೆಯುತ್ತಿದ್ದರು’ ಎಂಬ ಟೀಕೆಗೆ, ‘ಹೌದು, ಕಲ್ಲು ಒಡೆಯುತ್ತಿದ್ದೇವೆ. ಈಗಲೂ ಒಡೆಯುತ್ತಿದ್ದೇವೆ’ ಎಂದು ವ್ಯಂಗ್ಯವಾಡಿದರು.

‘ಸಭೆಯಲ್ಲಿ ನಾನು ಅಧಿಕಾರಿಗಳನ್ನು ಬೆದರಿಸಿದ್ದರೆ ದೂರು ಕೊಡಲಿ’ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಮತ್ತೆ ಸ್ಪರ್ಧಿಸಿದರೆ ಜನ ನಗುತ್ತಾರೆ’

ಬೆಂಗಳೂರು: ‘ಜನ ನನ್ನನ್ನು ತಿರಸ್ಕರಿಸಿದ್ದಾರೆ. ಮತ್ತೆ ಚುನಾವಣೆಗೆ ಸ್ಪರ್ಧಿಸಿದರೆ ಜನ ನಗುತ್ತಾರೆ’ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಹೇಳಿದರು.

ಡಿ.ಕೆ. ಸುರೇಶ್

‘ಚನ್ನಪಟ್ಟಣದಲ್ಲಿ ನೀವು ಸ್ಪರ್ಧೆ ಮಾಡುವುದಿಲ್ಲವೇ’ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ‘ಜನ ಹೇಳಿದರೂ, ಸ್ಪರ್ಧಿಸುವ ಮನಸ್ಥಿತಿ ನಮಗೂ ಇರಬೇಕು. ಜನ ನನಗೆ ವಿಶ್ರಾಂತಿ ಪಡೆಯಲು ಹೇಳಿದ್ದು, ಬೇರೆಯವರಿಗೆ ಕೆಲಸ ಮಾಡಲು ಹೇಳಿದ್ದಾರೆ. ಬೇರೆಯವರು ಕೆಲಸ ಮಾಡಲಿ, ನಾವು ಅವರಿಗೆ ಸಹಕಾರ ನೀಡುತ್ತೇವೆ’ ಎಂದರು.

‘ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಯಾರು ಅಭ್ಯರ್ಥಿ’ ಎಂದು ಕೇಳಿದಾಗ, ‘ಜನ ಯಾರನ್ನು ಬಯಸುತ್ತಾರೋ ಅವರು ಸ್ಪರ್ಧಿಸಬೇಕು. ರಾಮನಗರ ಜಿಲ್ಲೆ ನಮ್ಮ ಸ್ವಂತ ಜಿಲ್ಲೆ. ಪಕ್ಷದ ಅಧ್ಯಕ್ಷರಾಗಿ, ಉಪಮುಖ್ಯಮಂತ್ರಿಯಾಗಿ ಶಿವಕುಮಾರ್ ಅವರ ಮೇಲೆ ಜವಾಬ್ದಾರಿ ಇದೆ. ಕ್ಷೇತ್ರದಲ್ಲಿ ಶಾಸಕರು ಇಲ್ಲದ ಕಾರಣ ಶಿವಕುಮಾರ್ ಅವರು ಜನರ ಸಮಸ್ಯೆ ಆಲಿಸುತ್ತಿದ್ದಾರೆ’ ಎಂದರು.

‘ಡಿ.ಕೆ. ಶಿವಕುಮಾರ್ ಮತ್ತು ನನ್ನನ್ನು ಸ್ಮರಿಸದಿದ್ದರೆ ಕುಮಾರಸ್ವಾಮಿ ಅವರ ರಾಜಕಾರಣ ಹಾಗೂ ದಿನಚರಿ ನಡೆಯುವುದಿಲ್ಲ. ಪ್ರತಿ ವಿಚಾರದಲ್ಲೂ ನಮ್ಮ ಹೆಸರು ಎಳೆದು ತರುತ್ತಾರೆ’ ಎಂದು ಟೀಕಿಸಿದರು.

ಮೈಗೆ ಸಗಣಿ ಹಚ್ಚಿಕೊಂಡು ರೈತರ ಪ್ರತಿಭಟನೆ

ಕರ್ನಾಟಕ ರಾಜ್ಯ ರೈತ ಸಂಘದ ಕಗ್ಗಲೀಪುರ ಶಾಖೆಯ ವತಿಯಿಂದ ಸೋಮನಹಳ್ಳಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ರೈತರು ಮೈಗೆ ಸಗಣಿ ಹಚ್ಚಿಕೊಂಡು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯ ಸೋಮನಹಳ್ಳಿ ಟೋಲ್ ಬಳಿ ಸರ್ವೀಸ್ ರಸ್ತೆ ನಿರ್ಮಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಗ್ಗಲೀಪುರ ಶಾಖೆಯ ಸದಸ್ಯರು ಸೋಮನಹಳ್ಳಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರೈತ ಮುಖಂಡರಾದ ನದೀಮ್ ಪಾಷ, ಸಿ. ಪುಟ್ಟಸ್ವಾಮಿ ಸೇರಿದಂತೆ ಕಗ್ಗಲಿಪುರ ಸುತ್ತಮುತ್ತಲಿನ ಗ್ರಾಮಗಳ ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಕೆಲ ರೈತರು ಮೈಗೆ ಸಗಣಿ ಹಚ್ಚಿಕೊಂಡು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

‘ಬಗರ್ ಹುಕುಂ ಸಾಗುವಳಿಯಲ್ಲಿ ರೈತರಿಗೆ ಮಂಜೂರಾದ ಕೃಷಿ ಜಮೀನನ್ನು ಸಕ್ರಮಗೊಳಿಸಿ ಪೋಡಿ, ದುರಸ್ತಿ ಮಾಡಿಕೊಡದೇ ರೈತರ ಹಕ್ಕನ್ನು ಕಸಿದುಕೊಳ್ಳಲಾಗಿದೆ’ ಎಂದು ಪ್ರತಿಭಟನಾಕಾರರು ಆರೋಪಿಸಿದರು.

‘ಕಗ್ಗಲೀಪುರ, ಸಾಲುಹುಣಸೆ, ಉದಿಪಾಳ್ಯ ಗ್ರಾಮಗಳಿಗೆ ಬೈಪಾಸ್ ರಸ್ತೆಗಳಿಲ್ಲದೇ ಸ್ಥಳೀಯರು ಓಡಾಡುವುದಕ್ಕೆ ತೊಂದರೆಯಾಗುತ್ತಿದೆ. ಇದನ್ನು ತಕ್ಷಣವೇ ಸರಿಪಡಿಸಬೇಕು. ಸಾಗುವಳಿ ರೈತರ ಮೇಲೆ ಅರಣ್ಯ ಇಲಾಖೆ ಮಾಡುತ್ತಿರುವ ದೌರ್ಜನ್ಯದಿಂದ ಮುಕ್ತಿ ನೀಡಬೇಕು. ಪಟ್ಟರೆಡ್ಡಿ ಪಾಳ್ಯ ಗ್ರಾಮಕ್ಕೆ ಪರ್ಯಾಯ ರಸ್ತೆ ನಿರ್ಮಿಸಲು ಅನುದಾನ ಒದಗಿಸಬೇಕು’ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

‘ಸರ್ಕಾರ ಕೂಡಲೇ ಹಾಲು ಉತ್ಪಾದಕರ ಪ್ರೋತ್ಸಾಹ ಧನ ಬಿಡುಗಡೆಗೊಳಿಸಬೇಕು. ಸಾಕಮ್ಮ ಬಡಾವಣೆ ಅಧಿಕೃತಗೊಳಿಸಬೇಕು. ಬೋಳಾರೆ ಗ್ರಾಮದ ವಾಸಿಗಳಿಗೆ ಇ–ಸ್ವತ್ತು ನೀಡಬೇಕು’ ಎಂದು ಒತ್ತಾಯಿಸಿದರು.

ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ದೂರು

ಮಕ್ಕಳಿಂದ ನೀರಿನ ಟ್ಯಾಂಕ್ ಸ್ವಚ್ಛಗೊಳಿಸಿದ ಶಿಕ್ಷಕರು!

ಪ್ರಜಾವಾಣಿ ವಾರ್ತೆ

ಕನಕಪುರ: ತಾಲ್ಲೂಕಿನ ಹುಲಿಬಲೆ ಸರ್ಕಾರಿ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳಿಂದ ನೀರಿನ ಟ್ಯಾಂಕ್ ಸ್ವಚ್ಛಗೊಳಿಸಿದ್ದಾರೆ ಎಂದು ಪೋಷಕರು ದೂರಿದ್ದಾರೆ.

ಐವರು ವಿದ್ಯಾರ್ಥಿಗಳನ್ನು ಶನಿವಾರ ಕೊಳವೆ ಆಕಾರದ ಹತ್ತು ಅಡಿ ಎತ್ತರದ ಸಿಮೆಂಟ್ ಟ್ಯಾಂಕ್‌ಗೆ ಏಣಿ ಸಹಾಯದಿಂದ ಮಕ್ಕಳನ್ನು ಒಳಗಡೆ ಇಳಿಸಿ ಸ್ವಚ್ಛಗೊಳಿಸಿದ್ದಾರೆ. ಇದಕ್ಕೆ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ಕಾರಣ ಎಂದು ಪೋಷಕರು, ಶಾಲೆಯ ಮುಖ್ಯ ಶಿಕ್ಷಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘ನೀರಿನ ತೊಟ್ಟಿ ಸ್ವಚ್ಛಗೊಳಿಸಲು ಶಾಲೆಯ ಸಿಬ್ಬಂದಿಗೆ ಸೂಚಿಸಲಾಗಿತ್ತು. ಅವರು ತಮ್ಮ ಜತೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿರುವುದು ಗೊತ್ತಿಲ್ಲ’ ಎಂದು ಮುಖ್ಯ ಶಿಕ್ಷಕಿ ರಾಜಲಕ್ಷ್ಮಿ ಅವರು ಪೋಷಕರನ್ನು ಸಮಾಧಾನಪಡಿಸಲು ಯತ್ನಿಸಿದರು. ಇದರಿಂದ ಸಮಾಧಾನಗೊಳ್ಳದ ಪೋಷಕರು, ಮುಖ್ಯ ಶಿಕ್ಷಕಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗೆ (ಬಿಇಒ) ಕರೆ ಮಾಡಿದ್ದಾರೆ.

ಕನಕಪುರ ಹುಲಿಬೆಲೆ ಸರ್ಕಾರಿ ಶಾಲೆಯಲ್ಲಿ ನೀರಿನ ಟ್ಯಾಂಕ್

‘ಹತ್ತು ಅಡಿ ಎತ್ತರದ ನೀರಿನ ತೊಟ್ಟಿಗೆ ಮಕ್ಕಳನ್ನು ಇಳಿಸಿ ಕೆಲಸ ಮಾಡಿಸಿದ್ದಾರೆ. ಒಂದು ವೇಳೆ ಏನಾದರೂ ಅನಾಹುತ ಆಗಿದ್ದರೆ ಅದಕ್ಕೆ ಯಾರು ಜವಾಬ್ದಾರರು’ ಎಂದು ಶಾಲೆಯ ಬಳಿ ಸೇರಿದ್ದ ಪೋಷಕರು ಆಕ್ರೋಶ ವ್ಯಕ್ತಪಡಿಸಿದರು. ಮುಂದೆ ಈ ರೀತಿ ಆಗದಂತೆ ಗಮನ ಹರಿಸಲಾಗುವುದು ಎಂದು ಮುಖ್ಯ ಶಿಕ್ಷಕಿ ರಾಜಲಕ್ಷ್ಮಿ ಭರವಸೆ ನೀಡಿದರು.

‘ಶಾಲೆಯಲ್ಲಿ ಶಿಕ್ಷಕರ ನಡುವೆ ಹೊಂದಾಣಿಕೆ ಕೊರತೆ ಇದೆ. ಇದರಿಂದ ಸಮಸ್ಯೆ ಉಲ್ಬಣಿಸಿದೆ. ಮಕ್ಕಳನ್ನು ಟ್ಯಾಂಕ್‌ಗೆ ಇಳಿಸಿದ ವಿಷಯ ವಿವಾದದ ಸ್ವರೂಪ ಪಡೆದಿದೆ’ ಎಂದು ಮೂಲಗಳು ತಿಳಿಸಿವೆ.

ಶಿಕ್ಷಣ ಇಲಾಖೆ ಅಧಿಕಾರಿಗಳು ಸ್ಥಳ ಮಹಜರು ಮಾಡಲಿದ್ದಾರೆ. ಶಿಕ್ಷಕರು ಮತ್ತು ಪೋಷಕರಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಜಿ.ರಾಮಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಅಜಿತ್ ಭಾರ್ತಿ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತಮ್ಮ ಭಾಷಣಗಳಲ್ಲಿ ರಾಮ ಮಂದಿರದ ಬದಲಿಗೆ ಬಾಬರಿ ಮಸೀದಿಯನ್ನು ಮರಳಿ ತರಲು ಉದ್ದೇಶಿಸಿದ್ದಾರೆ ಎಂದು ಅಜಿತ್ ಭಾರ್ತಿ ತಮ್ಮ ಎಕ್ಸ್ ಖಾತೆಯಲ್ಲಿ ಸುಳ್ಳು ಮಾಹಿತಿ ಪ್ರಚಾರ ಮಾಡಿದ್ದಾರೆ’ ಎಂಬ ಆರೋಪದಡಿ ಯೂ ಟ್ಯೂಬರ್ ಅಜಿತ್ ಭಾರ್ತಿ ವಿರುದ್ಧ ದಾಖಲಾಗಿದ್ದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

‘ತಮ್ಮ ವಿರುದ್ಧ ನಗರದ ಎಸಿಎಂಎಂ ಮೊದಲನೇ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆ ಹಾಗೂ ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಕೋರಿ ಬಿಹಾರದ ಬೆಗುಸರಾಯ್ ನಿವಾಸಿಯಾದ ಅಜಿತ್ ಭಾರ್ತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಅಜಿತ್ ಭಾರ್ತಿ ಸಂವಿಧಾನ ಕೊಡಮಾಡಿರುವ ತಮ್ಮ ಮೂಲಭೂತ ಹಕ್ಕಿನ ಅನುಸಾರವೇ ನಡೆದುಕೊಂಡಿದ್ದಾರೆ. ಅವರ ವಿವರಣೆಯನ್ನು ಕಾನೂನು ಬಾಹಿರ ಎಂದು ಆಕ್ಷೇಪಿಸಿರುವ ದೂರುದಾರರ ನಡೆಯು, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿಘ್ನ ಒಡ್ಡುವಂತಿದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಟರ್ ತಮ್ಮ ಆಕ್ಷೇಪಣೆ ಸಲ್ಲಿಸಲಿ. ಅಲ್ಲಿಯವರೆಗೂ ಅರ್ಜಿದಾರರ ವಿರುದ್ಧ ಯಾವುದೇ ಹೆಚ್ಚಿನ ತನಿಖೆಗೆ ಅನುಮತಿಸಲಾಗುವುದಿಲ್ಲ’ ಎಂದು ಹೇಳಿ ನ್ಯಾಯಪೀಠ ವಿಚಾರಣೆಯನ್ನು ಜುಲೈ 19ಕ್ಕೆ ಮುಂದೂಡಿದೆ.

ಪ್ರಕರಣವೇನು?: ‘ಅಜಿತ್ ಭಾರ್ತಿ ಅವರು ಇದೇ 13ರಂದು ತಮ್ಮ ಎಕ್ಸ್ ಖಾತೆಯಲ್ಲಿ ವಿಡಿಯೊ ಒಂದನ್ನು ಪೋಸ್ಟ್ ಮಾಡಿದ್ದರು. ಈ ವಿಡಿಯೊದಲ್ಲಿ ರಾಹುಲ್ ಗಾಂಧಿ ರಾಮ ಮಂದಿರದ ಬದಲಿಗೆ ಬಾಬರಿ ಮಸೀದಿಯನ್ನು ಮರಳಿ ತರಲು ಉದ್ದೇಶಿಸಿದ್ದಾರೆ ಎಂಬ ವಿವರಣೆಯನ್ನು ಹರಿಬಿಟ್ಟಿದ್ದರು. ಇದು ಸುಳ್ಳು ಮಾಹಿತಿ. ಈ ಮೂಲಕ ಅವರು ವಿವಿಧ ಧಾರ್ಮಿಕ ಗುಂಪುಗಳ ನಡುವೆ ದ್ವೇಷ ಉತ್ತೇಜಿಸಿದ್ದಾರೆ’ ಎಂದು ಆರೋಪಿಸಿ ಕೆಪಿಸಿಸಿ ಕಾನೂನು ಘಟಕದ ಕಾರ್ಯದರ್ಶಿ ಬಿ.ಕೆ.ಬೋಪಣ್ಣ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಎಫ್‌ಐಆರ್ ದಾಖಲಿಸಿದ್ದ ಪೊಲೀಸರು ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 153-ಎ ಮತ್ತು 502 (2)ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು.

ಕಲಬುರಗಿ ವಿಮಾನ ನಿಲ್ದಾಣಕ್ಕೆ ಹುಸಿ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕಲಬುರಗಿ ವಿಮಾನ ನಿಲ್ದಾಣ ಕಟ್ಟಡದಲ್ಲಿ ಬಾಂಬ್ ಇಟ್ಟಿರುವುದಾಗಿ ಸೋಮವಾರ ಬೆಳಿಗ್ಗೆ ಇ–ಮೇಲ್ ಮೂಲಕ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ತೀವ್ರ ತಪಾಸಣೆ ನಡೆಸಲಾಗಿದ್ದು, ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡುಬಂದಿಲ್ಲ.

ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಮತ್ತು ಭದ್ರತಾ ಸಿಬ್ಬಂದಿ ನಿಲ್ದಾಣಕ್ಕೆ ಬಂದು ಪರಿಶೀಲನೆ ನಡೆಸಿದರು. ಬಾಂಬ್ ಇರುವ ಬಗ್ಗೆ ಯಾವುದೇ ಕುರುಹುಗಳು ಲಭ್ಯವಾಗಲಿಲ್ಲ. ಇದನ್ನು ಹುಸಿ ಬೆದರಿಕೆ ಎಂದು ನಿರ್ಧರಿಸಲಾಯಿತು. ಬೆಂಗಳೂರಿನಿಂದ ಸ್ಟಾರ್‌ಏರ್ ವಿಮಾನದಲ್ಲಿ ಬಂದಿದ್ದ ಸಚಿವ ಕೃಷ್ಣ ಬೈರೇಗೌಡ ಹಾಗೂ ಇತರೆ ಪ್ರಯಾಣಿಕರು ಕೆಲ ಹೊತ್ತು ವಿಮಾನದಲ್ಲೇ ಕಾಲ ಕಳೆದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಪ್ಯಾಲೆಸ್ಟೀನ್ ಡಾಟ್.ನೆಟ್ ಹೆಸರಿನ ಮೇಲ್‌ನಿಂದ ಕಲಬುರಗಿ ಸೇರಿದಂತೆ ದೇಶದ ಸುಮಾರು 20 ನಿಲ್ದಾಣಗಳಿಗೆ ಬಾಂಬ್ ಇರಿಸಿದ ಸಂದೇಶ ಬಂದಿದೆ. ಆದರೆ, ತಪಾಸಣೆಯಲ್ಲಿ ಯಾವುದೇ ಸ್ಫೋಟಕ ವಸ್ತುಗಳು ಕಂಡುಬಂದಿಲ್ಲ’ ಎಂದು ವಿಮಾನ ನಿಲ್ದಾಣದ ನಿರ್ದೇಶಕ ಚಿಲಕಾ ಮಹೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕಲುಷಿತ ನೀರು: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ): ತಾಲ್ಲೂಕಿನ ಮಿಣಜೇನಹಳ್ಳಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ವಾಂತಿ, ಭೇದಿಯಿಂದ ವೆಂಕಟರಾಮಪ್ಪ (50) ಎಂಬುವರು ಸೋಮವಾರ ಮೃತಪಟ್ಟಿದ್ದಾರೆ.

ವಾಂತಿ, ಭೇದಿಯಿಂದ ತೀವ್ರ ಅಸ್ವಸ್ಥರಾಗಿರುವ ರಾಜಮ್ಮ, ಜಯಮ್ಮ, ಅಮರಮ್ಮ, ರತ್ನಮ್ಮ, ವೆಂಕಟರಾಮಪ್ಪ ಹಾಗೂ ವೆಂಕಟೇಶಪ್ಪ ಎಂಬುವರನ್ನು ಕೋಲಾರ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆ ಹಾಗೂ ಕೆಜಿಎಫ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸುದ್ದಿ ತಿಳಿಯುತ್ತಲೇ ಜಿಲ್ಲಾಧಿಕಾರಿ ಅಕ್ರಂ ಪಾಷಾ ಸೇರಿದಂತೆ ಜಿಲ್ಲೆಯ ಹಿರಿಯ ಅಧಿಕಾರಿಗಳ ದಂಡು ಗ್ರಾಮಕ್ಕೆ ಧಾವಿಸಿ ಪರಿಶೀಲನೆ ನಡೆಸಿದೆ.

‘ನನ್ನ ತಂದೆ ನಾಲ್ಕು ದಿನಗಳಿಂದ ವಾಂತಿ, ಭೇದಿಯಿಂದ ಬಳಲುತ್ತಿದ್ದರು. ಮುಳಬಾಗಿಲು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಮೃತರಾದರು’ ಎಂದು ಮೃತ ವೆಂಕಟರಾಮಪ್ಪ ಅವರ ಪುತ್ರ ಶ್ರೀಕಾಂತ್ ಹೇಳಿದ್ದಾರೆ.

ಕಲುಷಿತ ನೀರು ಕುಡಿದು ಗ್ರಾಮದ ಹಲವರು ನಾಲ್ಕು ದಿನಗಳಿಂದ ವಾಂತಿ ಭೇದಿಯಿಂದ ಬಳಲುತ್ತಿದ್ದಾರೆ. ಗ್ರಾಮದ ಬಹುತೇಕ ಮನೆಗಳಿಗೆ ಚರಂಡಿ ಮೂಲಕ ಕುಡಿಯುವ ನೀರಿನ ಪೈಪ್‌ಲೈನ್ ಹಾದು ಹೋಗಿದೆ. ಅಲ್ಲಲ್ಲಿ ಪೈಪ್‌ಲೈನ್ ಒಡೆದು ಚರಂಡಿ ನೀರು, ಕುಡಿಯುವ ನೀರಿನ ಜತೆ ಸೇರಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಆರು ತಿಂಗಳುಗಳಿಂದ ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ ಓವರ್ ಹೆಡ್ ಟ್ಯಾಂಕ್ ಸ್ವಚ್ಛಗೊಳಿಸಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ. ಅಧಿಕಾರಿಗಳು ಟ್ಯಾಂಕ್ ನೀರಿನ ಮಾದರಿಯನ್ನು ಪರೀಕ್ಷೆಗಾಗಿ ಸಂಗ್ರಹಿಸಿದರು.

ಘಟನೆ ನಂತರ ಟ್ಯಾಂಕ್ ಸ್ವಚ್ಛ ಮಾಡಿದಾಗ ಸುಮಾರು ಅರ್ಧ ಅಡಿಯಷ್ಟು ಕಸ ಕಡ್ಡಿ, ಪಾಚಿ ತುಂಬಿಕೊಂಡಿತ್ತು. ಶುದ್ಧ ಕುಡಿಯುವ ನೀರಿನ ಘಟಕವನ್ನೂ ಸರಿಯಾಗಿ ಸ್ವಚ್ಛಗೊಳಿಸಿಲ್ಲ.

ಗೋಕಾಕದಲ್ಲೂ ಮಹಿಳೆ ಸಾವು

ಗೋಕಾಕ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಕನಸಗೇರಿ ಗ್ರಾಮದಲ್ಲಿ ಹೊಳೆವ್ವ ಬಾಳಪ್ಪ ಧನದವರ (38) ಎಂಬುವರು ವಾಂತಿ–ಭೇದಿಯಿಂದ ಬಳಲಿ ಸೋಮವಾರ ಮೃತಪಟ್ಟಿದ್ದಾರೆ.

‘ಗ್ರಾಮಕ್ಕೆ ಪೂರೈಸಲಾಗುವ ಕೊಳವೆಬಾವಿ ನೀರನ್ನು ಕುಡಿದು 10 ಮಂದಿ ಭಾನುವಾರ ರಾತ್ರಿ ಅಸ್ವಸ್ಥಗೊಂಡಿದ್ದರು. ನಾಲ್ಕೈದು ಬಾರಿ ವಾಂತಿ–ಭೇದಿಯಿಂದ ನಿತ್ರಾಣಗೊಂಡ ಹೊಳೆವ್ವ ಆಸ್ಪತ್ರೆ ತಲುಪುವ ಮುನ್ನವೇ ಅಸ್ವಸ್ಥಗೊಂಡರು’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಮುತ್ತಣ್ಣ ಕೊಪ್ಪದ ತಿಳಿಸಿದರು.

‘ಮಹಿಳೆ ಕಲುಷಿತ ನೀರಿನಿಂದ ಮೃತಪಟ್ಟಿದ್ದಾರೆ ಎಂದು ಹೇಳಲಾಗದು. ಅವರು ಎಲ್ಲಿಯೂ ತಪಾಸಣೆಗೆ ಒಳಗಾಗಿಲ್ಲ ಎಂದು ಹೇಳಿದರು.

ಅಯೋಧ್ಯೆ: ಸೋರುತ್ತಿದೆ ರಾಮ ಮಂದಿರದ ಗರ್ಭಗೃಹ

ಅಯೋಧ್ಯೆ (ಪಿಟಿಐ): ರಾಮ ಮಂದಿರವು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾದ ನಂತರದಲ್ಲಿ ಸುರಿದ ಮೊದಲ ಭಾರಿ ಮಳೆಯ ಸಂದರ್ಭದಲ್ಲಿ ಗರ್ಭಗೃಹದಲ್ಲಿ ನೀರು ಸೋರುತ್ತಿತ್ತು ಎಂದು ಮಂದಿರದ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ ಅವರು ಸೋಮವಾರ ಹೇಳಿದ್ದಾರೆ.

ಮಂದಿರದ ನಿರ್ಮಾಣದ ವೇಳೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ದಾಸ ಅವರು ಆರೋಪಿಸಿದ್ದಾರೆ. ಶನಿವಾರ ಮಧ್ಯರಾತ್ರಿ ಮಳೆ ಸುರಿಯಿತು, ಮಂದಿರದ ಆವರಣದಲ್ಲಿ ಬಿದ್ದ ಮಳೆನೀರು ಹರಿದುಹೋಗಲು ಸೂಕ್ತವಾದ ವ್ಯವಸ್ಥೆ ಇರಲಿಲ್ಲ, ಮಂದಿರದ ಆಡಳಿತದ ಹೊಣೆ ಹೊತ್ತಿರುವವರು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಮೇಲ್ಛಾವಣಿಯಿಂದ ನೀರು ಸೋರುತ್ತಿರುವ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಾಗ, ಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಅವರು ಮಂದಿರಕ್ಕೆ ಬಂದು ಮೇಲ್ಛಾವಣಿಯ ರಿಪೇರಿಗೆ ಸೂಚನೆ ನೀಡಿದರು ಎಂದು ಮೂಲಗಳು ಹೇಳಿವೆ.

ಮಂದಿರ ನಿರ್ಮಾಣದಲ್ಲಿ ಆಗಿರುವ ಪ್ರಗತಿಯ ಬಗ್ಗೆ ಸುದ್ದಿಗಾರರ ಜೊತೆ ಪ್ರತ್ಯೇಕವಾಗಿ ಮಾತನಾಡಿದ ಮಿಶ್ರಾ ಅವರು, ಮೊದಲ ಮಹಡಿಯ ಕೆಲಸ ನಡೆಯುತ್ತಿದ್ದು ಅದು ಜುಲೈ ಅಂತ್ಯದೊಳಗೆ ಮುಕ್ತಾಯ ಆಗಲಿದೆ ಎಂದರು. ಡಿಸೆಂಬರ್ ವೇಳೆಗೆ ಮಂದಿರದ ನಿರ್ಮಾಣ ಕಾರ್ಯವು ಪೂರ್ಣಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಮಂದಿರದ ಉದ್ಘಾಟನೆ ಆದ ನಂತರ ಶನಿವಾರ ರಾತ್ರಿ ಮೊದಲ ಬಾರಿಗೆ ಭಾರಿ ಮಳೆ ಸುರಿದಿದೆ. ಆಗ ಗರ್ಭಗೃಹದ ಮೇಲ್ಛಾವಣಿಯಿಂದ ದೊಡ್ಡ ಮಟ್ಟದಲ್ಲಿ ನೀರು ಸೋರುತ್ತಿತ್ತು. ಬಾಲರಾಮನ ಮುಂದೆ ಅರ್ಚಕರು ಕುಳಿತುಕೊಳ್ಳುವ ಸ್ಥಳದಲ್ಲಿ ಹಾಗೂ ಅತಿಗಣ್ಯ ವ್ಯಕ್ತಿಗಳು ದರ್ಶನಕ್ಕೆ ಬರುವ ಸ್ಥಳದಲ್ಲಿ ನೀರು ಸೋರುತ್ತಿತ್ತು ಎಂದು ಸತ್ಯೇಂದ್ರ ದಾಸ ತಿಳಿಸಿದ್ದಾರೆ.

‘ದೇಶದ ಎಲ್ಲೆಡೆಗಳಿಂದ ಬಂದಿರುವ ಎಂಜಿನಿಯರ್‌ಗಳು ರಾಮ ಮಂದಿರವನ್ನು ನಿರ್ಮಿಸುತ್ತಿದ್ದಾರೆ. ಜನವರಿ 22ರಂದು ಮಂದಿರ ಉದ್ಘಾಟನೆಯಾಗಿದೆ. ಆದರೆ ಮಳೆ ಸುರಿದಾಗ ಮೇಲ್ಛಾವಣಿಯಿಂದ ನೀರು ಸೋರುತ್ತದೆ ಎಂಬುದು ಯಾರಿಗೂ ತಿಳಿದಿರಲಿಲ್ಲ. ವಿಶ್ವವಿಖ್ಯಾತ ಮಂದಿರ ಸೋರುತ್ತಿರುವುದು ಆಶ್ಚರ್ಯಕರ. ಇದು ಆಗಿದ್ದು ಹೇಗೆ’ ಎಂದು ದಾಸ್ ಪ್ರಶ್ನಿಸಿದ್ದಾರೆ.

ಶನಿವಾರ ರಾತ್ರಿ ಸುರಿದ ಮಳೆಯ ಕಾರಣದಿಂದಾಗಿ ರಾಮಪಥ ರಸ್ತೆಯಲ್ಲಿ ಹಾಗೂ ಅದಕ್ಕೆ ಹೊಂದಿಕೊಂಡಿರುವ ಬೀದಿಗಳಲ್ಲಿ ನೀರು ಭಾರಿ ಪ್ರಮಾಣದಲ್ಲಿ ನಿಂತಿತ್ತು. ಈ ಪ್ರದೇಶದ ಮನೆಗಳಿಗೆ ಕೊಳಚೆ ನೀರು ನುಗ್ಗಿದೆ. ರಾಮಪಥ ರಸ್ತೆ ಹಾಗೂ ಹೊಸದಾಗಿ ನಿರ್ಮಿಸಲಾದ ಕೆಲವು ರಸ್ತೆಗಳು ಅಲ್ಲಲ್ಲಿ ಕುಸಿದಿವೆ.

ಮಂದಿರ ನಿರ್ಮಾಣದಲ್ಲಿ ಹಾಗೂ ಅಯೋಧ್ಯೆಯಲ್ಲಿ ನಾಗರಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಬಿಜೆಪಿಯು ಭ್ರಷ್ಟಾಚಾರ ಎಸಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

‘ಹುತಾತ್ಮರ ಶವಪೆಟ್ಟಿಗೆ ಇರಲಿ, ದೇವಸ್ಥಾನವೇ ಇರಲಿ ಬಿಜೆಪಿಗೆ ಇವೆಲ್ಲವೂ ಭ್ರಷ್ಟಾಚಾರ ಎಸಗಲು ಒಂದು ಅವಕಾಶವಾಗಿ ಸಿಗುತ್ತವೆ. ನಂಬಿಕೆ ಮತ್ತು ಪಾವಿತ್ರ್ಯದ ಸಂಕೇತಗಳು ಕೂಡ ಅವರಿಗೆ ಲೂಟಿ ಮಾಡಲು ಒಂದು ಅವಕಾಶ’ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಅಜಯ್ ರಾಯ್ ದೂರಿದ್ದಾರೆ.

ಮುಖ್ಯಾಂಶಗಳು

- ಮೊದಲ ಭಾರಿ ಮಳೆಗೆ ಸೋರಿದ ಮೇಲ್ಛಾವಣಿ
- ಪ್ರಧಾನ ಅರ್ಚಕ ಸತ್ಯೇಂದ್ರ ದಾಸ ಅಸಮಾಧಾನ
- ಬಿಜೆಪಿಯಿಂದ ಭ್ರಷ್ಟಾಚಾರ: ಕಾಂಗ್ರೆಸ್ ಆರೋಪ

‘ವಿದೇಶಗಳಲ್ಲಿ ನಡೆಯುವ ಆಹಾರ ಮೇಳಗಳಲ್ಲಿ ರಾಜ್ಯದಿಂದ ಮಳಿಗೆ ಹಾಕಲು ನೆರವು’

‘ಎಲ್ಲ ಜಿಲ್ಲೆಗಳಲ್ಲಿ 2 ದಿನ ಸಿರಿಧಾನ್ಯ ಮೇಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿ ಜಿಲ್ಲೆಯಲ್ಲೂ ಎರಡು ದಿನ ಸಿರಿಧಾನ್ಯ ಮೇಳ ಆಯೋಜಿಸುವ ಜೊತೆಗೆ, ವಿದೇಶಗಳಲ್ಲಿ ನಡೆಯುವ ಆಹಾರ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ರಾಜ್ಯದಿಂದ ಮಳಿಗೆ ಹಾಕಲು ಕೂಡಾ ನೆರವು ನೀಡಲಾಗುವುದು’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಭರವಸೆ ನೀಡಿದರು.

ಚಲುವರಾಯ ಸ್ವಾಮಿ

ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಫುಡ್ ಪಾರ್ಕ್‌ಗಳ ಪುನಶ್ಚೇತನ ಮತ್ತು ಸಿರಿಧಾನ್ಯಗಳಿಗೆ ಸಂಬಂಧಿಸಿದ ಕಾರ್ಯಾಚರಣೆಯಲ್ಲಿರುವ ನವೋದ್ಯಮಗಳಿಗೆ ಇಲಾಖೆಯ ಸಹಭಾಗಿತ್ವದಲ್ಲಿ ರೈತರ ಜೊತೆ ಸಂಪರ್ಕ ಸಾಧಿಸುವ ಕುರಿತು ಸೋಮವಾರ ಸಭೆ ನಡೆಸಿ ಅವರು, ‘ಕೃಷಿ ಸಂಬಂಧಿಸಿದ ನವೋದ್ಯಮಗಳ ಪುನಃಶ್ಚೇತನಕ್ಕೆ ಸರ್ಕಾರ ಸಿದ್ಧವಾಗಿದೆ’ ಎಂದರು.

‘ಸಿರಿಧಾನ್ಯ ಬೇಡಿಕೆ ಹೆಚ್ಚಿದ್ದರೂ ಪೂರೈಕೆ ಕೊರತೆಯಿದೆ. ಹೀಗಾಗಿ ಪ್ರೋತ್ಸಾಹ ಧನ ಯೋಜನೆ ಮುಂದುವರೆಸುವ ಜೊತೆಗೆ ಉತ್ಪಾದನೆಯನ್ನು 30 ಸಾವಿರ ಹೆಕ್ಟೇರ್‌ನಿಂದ 50 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಲು ಯೋಜನೆ ರೂಪಿಸಬೇಕು’ ಎಂದು ಅಧಿಕಾರಿಗಳಿಗೆ ಅವರು ಸೂಚಿಸಿದರು.

ಕೃಷಿ ನವೋದ್ಯಮಗಳ ಸ್ಥಿತಿಗತಿ, ಅವುಗಳು ಎದುರಿಸುತ್ತಿರುವ ಸವಾಲುಗಳು, ಸಿರಿಧಾನ್ಯ ಆಧಾರಿತ ಉದ್ಯಮಗಳನ್ನು ಬಲಪಡಿಸಲು ಸರ್ಕಾರದ ನೆರವಿನ ಕುರಿತು ಸಚಿವರು ನವೋದ್ಯಮಿಗಳಿಂದ ಅಭಿಪ್ರಾಯ ಪಡೆದರು.

ಸಿರಿಧಾನ್ಯ ಪುಡಿಗೆ ಜಿಎಸ್‌ಟಿಯನ್ನು ಶೇ 18ರಿಂದ 5ಕ್ಕೆ ಇಳಿಕೆ ಮಾಡಿರುವಂತೆ, ಅದನ್ನು ಇತರ ಮೌಲ್ಯವರ್ಧಿತ ಕೃಷಿ ಆಹಾರ ಉತ್ಪನ್ನಗಳಿಗೂ ವಿಸ್ತರಿಸಬೇಕು ಎಂದು ನವೋದ್ಯಮಿಗಳು ಮನವಿ ಮಾಡಿದರು. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪೂರಕ ಪ್ರಸ್ತಾವ ಕಳುಹಿಸಲಾಗುವುದು. ಸಿರಿಧಾನ್ಯ ಆಹಾರ ಉತ್ಪಾದಕರಿಗೆ ತಂತ್ರಜ್ಞಾನ ವಿಸ್ತರಣೆ ಜೊತೆಗೆ ದೀರ್ಘಾವಧಿಗೆ ಆಹಾರ ಪದಾರ್ಥ ಸಂಸ್ಕರಣೆಗೆ ಸಿಎಫ್‌ಟಿಆರ್‌ಐ ಮೂಲಕ ನೆರವು ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದೂ ಸಚಿವರು ಭರವಸೆ ನೀಡಿದರು.

ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್, ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅನ್ಬುಕುಮಾರ್, ಕೃಷಿ ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನದ ವಿಶೇಷ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಆಯುಕ್ತರಾದ ವೈ.ಎಸ್. ಪಾಟೀಲ ಇದ್ದರು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: 26/2024 ದಿನಾಂಕ: 18.06.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತ ವಿವರಣೆ: 2 ವರ್ಷಗಳ ವಾರಂಟಿಯೊಂದಿಗೆ 140ಟಿ ಬಿಡಿ ಗಾಟ್ವಾಲ್ಡ್ ಕ್ರೇನ್‌ಗಾಗಿ ಸುಧಾರಿತ ಟಚ್ ಸ್ಕ್ರೀನ್ ಆಧಾರಿತ ಎಸ್‌ಎಲ್‌ಐ ಸಿಸ್ಟಮ್‌ನ (ಮೆಕ್ಯಾನಿಕಾ ಮಾಡೆಲ್: MSTS9000 ಅನ್ನು ಹೋಲುವ) ಪೂರೈಕೆ ಮತ್ತು ಫಿಟ್‌ಮೆಂಟ್.

ಟೆಂಡರ್ ಸಂಖ್ಯೆ: L8245765A ಪ್ರಮಾಣ: 01 ಸಂ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12-07-2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು ಬೆಂಗಳೂರು

PUB/178/AAMO/PRB/SWR/2024-25

South Western Railway-SWR | SWRRLY | SWRRLY

ಗೌರವಾನ್ವಿತ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ, ಮೈಸೂರು

ಅಸಲು ದಾವಾ ಸಂಖ್ಯೆ: 480/2023

ವಾದಿಗಳು : ಶ್ರೀಮತಿ ಶಿವಮ್ಮ ಮತ್ತು ಇನ್ನೊಬ್ಬರು

ವಿರುದ್ಧ

ಪ್ರತಿವಾದಿಗಳು : ಶ್ರೀ ಬಿ.ಆರ್. ಚಾಮರಾಜ ಮತ್ತು ಇತರರು

2ನೇ ಪ್ರತಿವಾದಿ : 2. ಶ್ರೀಮತಿ ಬಿ.ಆರ್. ಪ್ರತಿಮ, ಕೋಂ ಪವೀಣ್ ಬಿನ್ ಲೇಟ್ ಸಿ.ಆರ್. ರಂಗರಾಮು, ವಯಸ್ಸು ಸುಮಾರು 47 ವರ್ಷ, ವಾಸ ಮನೆ ನಂ. 30, ಮಂಜುನಾಥ ನಿಲಯ, ಸೀತಾ ರಾಮಯ್ಯ ಬಡಾವಣೆ, ಗೋವಿಂದಪ್ಪ ರಸ್ತೆ, ಯಶವಂತಪುರ, ಬೆಂಗಳೂರು–22.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ವಾದಿಗಳು ಪ್ರತಿವಾದಿಗಳ ವಿರುದ್ಧ ಮೇಲ್ಕಂಡ ದಾವೆಯನ್ನು ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಈ ಮೇಲ್ಕಂಡ ದಾವೆಗೆ ಸಂಬಂಧಿಸಿದಂತೆ ಈ ಪತ್ರಿಕಾ ಪ್ರಕಟಣೆಯ ಮೂಲಕ 2ನೇ ಪ್ರತಿವಾದಿಯಾದ ತಮಗೆ ತಿಳಿಯಪಡಿಸುವುದೇನೆಂದರೆ ತಾವುಗಳು ದಿನಾಂಕ: 16/7/2024 ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದ ಮುಂದೆ ತಾವಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಹಾಜರಾಗಿ ಸದರಿ ದಾವೆಗೆ ತಮ್ಮ ತಕರಾರುಗಳೇನಾದರೂ ಇದ್ದಲ್ಲಿ ಸಲ್ಲಿಸುವುದು. ಸದರಿ ದಿನಾಂಕದಂದು ನೀವು ನ್ಯಾಯಾಲಯಕ್ಕೆ ಗೈರು ಹಾಜರಾದ ಪಕ್ಷದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶವನ್ನು ಮಾಡಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

2024ನೇ ವರ್ಷದ ಜೂನ್ ತಿಂಗಳಿನ 192ನೇ ದಿವಸದಂದು ಇದನ್ನು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತಾಧಿಕಾರಿಗಳು
ಗೌರವಾನ್ವಿತ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ, ಮೈಸೂರು.

ವಾದಿಗಳ ಪರ ವಕೀಲರು
ಬಿ.ಎಸ್. ಸಿದ್ದನಾಯಕ, ವಕೀಲರು,
ನಂ. 2393, ಎಸ್.ಜಿ. ಕಾಂಪ್ಲೆಕ್ಸ್, ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು – 570 009.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ರಾಮನಗರ ಜಿಲ್ಲಾ ಪಂಚಾಯತ್, ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 03/ಕಾ.ಅ./ಪಂ.ರಾ.ಇಂ.ವಿ./ರಾ./ಟೆಂಡರ್/ಕಿ.ಇಂ.–1/198–206/2024–25 ದಿನಾಂಕ : 20–06–2024

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2024–25 ನೇ ಸಾಲಿಗೆ ಈ ವಿಭಾಗ ಕಛೇರಿ ಮತ್ತು ವ್ಯಾಪ್ತಿಯ ರಾಮನಗರ, ಚನ್ನಪಟ್ಟಣ, ಕನಕಪುರ ಹಾಗೂ ಮಾಗಡಿ ಉಪ ವಿಭಾಗ ಕಛೇರಿಗಳಿಗೆ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅಧಿಕೃತ ಅರ್ಹ ಸಂಸ್ಥೆಯಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. 1) ಡೇಟಾ ಎಂಟ್ರಿ ಆಪರೇಟರ್ – 07, 2) ವಾಹನ ಚಾಲಕರು – 03 ಮತ್ತು ಡಿ–ಗ್ರೂಪ್ – 03 ಆಗಿರುತ್ತದೆ.

1) ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 28–06–2024 ರ ಸಂಜೆ 5.00 ಗಂಟೆಯವರೆಗೆ, 2) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 29–06–2024 ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : 01–07–2024 ರ ಸಂಜೆ 5.00 ಗಂಟೆ ನಂತರ. (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ರಾಮನಗರ.

ಡಿಐಪಿಆರ್/ರಾಮನಗರ/97/ಮಣಿಪಾಲ್/2024–25

ಕೇಂದ್ರ ರೇಷ್ಮೆ ಮಂಡಳಿ

(ಜವಳಿ ಸಚಿವಾಲಯ–ಭಾರತ ಸರ್ಕಾರ)

ಸಿ.ಎಸ್.ಬಿ. ಕಾಂಪ್ಲೆಕ್ಸ್, ಬಿ.ಟಿ.ಎಂ. ಲೇಔಟ್, ಮಡಿವಾಳ, ಬೆಂಗಳೂರು–560 068, ಕರ್ನಾಟಕ
ಫೋನ್: +91 80 26282699 ಫ್ಯಾಕ್ಸ್: +91 80 26681511
ಇ–ಮೇಲ್: estab.csb@nic.in

ಸಂ: CSB-5(8)/2022-ES-II **ವಾಲ್ಕ್–ಇನ್–ಇಂಟರ್‌ವ್ಯೂ** ದಿನಾಂಕ: 25–6–2024

ಜೂನಿಯರ್ ರಿಸರ್ಚ್ ಫೆಲೋಗಾಗಿ 1) ವಾಕ್–ಇನ್–ಇಂಟರ್‌ವ್ಯೂನ್ನು ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ ಕೆಳಗೆ ವಿವರಿಸಿದಂತೆ ದಿನಾಂಕ: 05–7–2024 ರಂದು ಬೆಂಗಳೂರಿನ ಸಿ.ಎಸ್.ಬಿ. ಕಚೇರಿಯಲ್ಲಿ ನಡೆಸಲಾಗುತ್ತದೆ.

ಕ್ರ. ಸಂ	ಪೋಸ್ಟ್ ಮತ್ತು ಯೋಜನೆ ಮತ್ತು ಪಾವತಿ	ಪೋಸ್ಟ್	ಅವಧಿ	ಅರ್ಹತೆ	ದಿನಾಂಕದಂದು	ಸಂದರ್ಶನದ ಸಮಯ
1	JRF (1) : ಭಾರತದ ಮಲ್ಬೆರಿ ರೇಷ್ಮೆ ಕೃಷಿಯಲ್ಲಿ ತಂತ್ರಜ್ಞಾನಗಳ ಪರಿಣಾಮದ ಮೌಲ್ಯಮಾಪನ ವೇತನ: ರೂ. 21000/– ಮತ್ತು ಸ್ವೀಕಾರಾರ್ಹ HRA	1	ಜೂನ್ 2025 ಅಥವಾ ಯೋಜನೆ ಪೂರ್ಣಗೊಳಿಸುವ ಮೊದಲು	ಪೂರ್ಣ ಸಮಯದ ಎಂ.ಎಸ್ಸಿ. (ಕೃಷಿ/ರೇಷ್ಮೆ ಕೃಷಿ/ವಿಜ್ಞಾನ) ಕೊಬೊಟೂಲ್ ಬಾಕ್ಸ್ ಬಳಸಿಕೊಂಡು ರೈತರ ಮಟ್ಟದಲ್ಲಿ ಸಮೀಕ್ಷೆ/ಡೇಟಾ ಸಂಗ್ರಹಣೆ/ ವಿಶ್ಲೇಷಣೆ ಕುರಿತ ಜ್ಞಾನ/ಅನುಭವ	05–07–2024	10.00 AM (ವರದಿ ಸಮಯ: 09–30 AM)

ವಿವರಗಳಿಗಾಗಿ CSB ವೆಬ್‌ಸೈಟ್ www.csb.gov.in ಅನ್ನು ನೋಡಿ

ಸಹಿ/–
ಸಕ್ಷಮ ಪ್ರಾಧಿಕಾರ

CBC 41109/12/0001/2425

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಕ್ರಮ ತಡೆಗೆ ತಂತ್ರಜ್ಞಾನ ಬಳಕೆಗೆ ಯೋಜನೆ, ಟೆಂಡರ್ ಆಹ್ವಾನಿಸಿದ ಆಯೋಗ

ಯುಪಿಎಸ್‌ಸಿ ಪರೀಕ್ಷೆಗೆ ಎಐ– ಸಿ.ಸಿ.ಟಿ.ವಿ ನಿಗಾ



ನವದೆಹಲಿ (ಪಿಟಿಐ): ನೀಟ್, ನೆಟ್ ಅಕ್ರಮಗಳು ವಿವಾದದ ಸ್ವರೂಪ ಪಡೆದಿರುವ ಬೆನ್ನಲ್ಲೇ, ದೇಶದ ಪ್ರಮುಖ ನೇಮಕಾತಿ ಸಂಸ್ಥೆ ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ವಿವಿಧ ಪರೀಕ್ಷೆಗಳಲ್ಲಿ ಪರೀಕ್ಷಾ ವಂಚನೆ ತಡೆಗಟ್ಟಲು ಮುಖ ಚಹರೆ ಗುರುತಿಸುವ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸಿ.ಸಿ.ಟಿ.ವಿ ನಿಗಾ ವ್ಯವಸ್ಥೆ ಅಳವಡಿಸಲು ಚಿಂತನೆ ನಡೆಸಿದೆ.

ಆಧಾರ್ ಆಧರಿತ ಬೆರಳಚ್ಚು ದೃಢೀಕರಣ (ಅಥವಾ ಡಿಜಿಟಲ್ ಬೆರಳಚ್ಚು ಸೆರೆಹಿಡಿಯುವುದು) ಮತ್ತು ಅಭ್ಯರ್ಥಿಗಳ ಮುಖಚಹರೆ ಗುರುತು ಪತ್ತೆಹಚ್ಚುವುದು ಹಾಗೂ ಇ-ಪ್ರವೇಶ ಪತ್ರದ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡುವ ವ್ಯವಸ್ಥೆ ಅಭಿವೃದ್ಧಿಪಡಿಸಲು ಅನುಭವಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಯುಪಿಎಸ್‌ಸಿ ಇತ್ತೀಚೆಗೆ ಟೆಂಡರ್ ಆಹ್ವಾನಿಸಿದೆ.

ಸಾಂವಿಧಾನಿಕ ಸಂಸ್ಥೆಯಾಗಿರುವ ಯುಪಿಎಸ್‌ಸಿಯು ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳನ್ನು ನೇಮಕಾತಿ ಮಾಡಲು ನಡೆಸುವ ದೇಶದ ಪ್ರತಿಷ್ಠಿತ ನಾಗರಿಕ ಸೇವಾ ಪರೀಕ್ಷೆ, ಕೇಂದ್ರ ಸರ್ಕಾರದ 'ಎ' ಮತ್ತು 'ಬಿ' ಶ್ರೇಣಿಯ ಅಧಿಕಾರಿಗಳ ನೇಮಕಾತಿಗಾಗಿ ಪ್ರತಿ ವರ್ಷ ಪರೀಕ್ಷೆ, ಸಂದರ್ಶನ ಸೇರಿದಂತೆ ವಿವಿಧ ರೀತಿಯ 14 ಪ್ರಮುಖ ಪರೀಕ್ಷೆಗಳನ್ನು ನಡೆಸುತ್ತದೆ.

ಇಂತಹ ನೇಮಕಾತಿಗಳಲ್ಲಿ ಅಂದಾಜು 26 ಲಕ್ಷದಷ್ಟು ಅಭ್ಯರ್ಥಿಗಳು ಪಾಲ್ಗೊಳ್ಳುತ್ತಾರೆ. ಲೇಹ್, ಕಾರ್ಗಿಲ್, ಶ್ರೀನಗರ, ಇಂಫಾಲ, ಅಗರ್ತಲಾ, ಐಜ್ವಾಲ್ ಮತ್ತು ಗ್ಯಾಂಗ್ಟಕ್ ಸೇರಿದಂತೆ ದೇಶದಾದ್ಯಂತ ಪ್ರಮುಖ ನಗರಗಳ 80ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತವೆ.

'ಪರೀಕ್ಷೆಗಳನ್ನು ಮುಕ್ತ, ಪಾರದರ್ಶಕ ಮತ್ತು ನಿಷ್ಪಕ್ಷಪಾತವಾಗಿ ನಡೆಸಲು ಯುಪಿಎಸ್‌ಸಿ ಹೆಚ್ಚು ಪ್ರಾಮುಖ್ಯ ನೀಡುತ್ತದೆ. ತನ್ನ ಈ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಆಯೋಗವು ಅತ್ಯಾಧುನಿಕ ಡಿಜಿಟಲ್ ತಂತ್ರಜ್ಞಾನವನ್ನು ಬಳಸಲು ಬಯಸಿದೆ. ಅದರ ಆಧಾರದಲ್ಲಿ ಅಭ್ಯರ್ಥಿಗಳ ಬಯೊಮೆಟ್ರಿಕ್ ವಿವರಗಳನ್ನು ಪರಿಶೀಲಿಸಲು ಮತ್ತು ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಗಳು ಮಾಡಬಹುದಾದ ವಂಚನೆ, ಅಕ್ರಮ, ನಕಲಿ ಅಭ್ಯರ್ಥಿ ಹಾಜರಿ ಸೇರಿದಂತೆ ವಿವಿಧ ಚಟುವಟಿಕೆಗಳ ಮೇಲೆ ನಿಗಾ ಇಡಲು ಉದ್ದೇಶಿಸಿದೆ' ಎಂದು ಯುಪಿಎಸ್‌ಸಿಯು ಜೂನ್ 3ರಂದು ಹೊರಡಿಸಿರುವ ಟೆಂಡರ್ ದಾಖಲೆಯಲ್ಲಿ ಹೇಳಲಾಗಿದೆ.

ನೀಟ್ ಅಕ್ರಮ: ಎನ್‌ಟಿಎ, ಕೇಂದ್ರಕ್ಕೆ ನೋಟಿಸ್

ಜೈಪುರ (ಪಿಟಿಐ): ಅಕ್ರಮಗಳ ಹಿನ್ನೆಲೆಯಲ್ಲಿ ನೀಟ್-ಯುಜಿ ರದ್ದುಪಡಿಸಲು ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ಸಂಬಂಧ ಪ್ರತಿಕ್ರಿಯೆ ನೀಡುವಂತೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮತ್ತು ಕೇಂದ್ರ ಸರ್ಕಾರಕ್ಕೆ ರಾಜಸ್ಥಾನ ಹೈಕೋರ್ಟ್ ಸೋಮವಾರ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿ ಅಶೋಕ್ ಕುಮಾರ್ ಜೈನ್, ಎನ್‌ಟಿಎ ಮತ್ತು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದ್ದಾರೆ. ನ್ಯಾಯಾಲಯವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಜುಲೈ 10ರಂದು ವಿಚಾರಣೆ ನಡೆಸಲು ದಿನಾಂಕ ನಿಗದಿಗೊಳಿಸಿದೆ ಎಂದು ಅರ್ಜಿದಾರರ ಪರ ವಕೀಲ ರಾಮಪ್ರತಾಪ್ ಸೈನಿ ತಿಳಿಸಿದ್ದಾರೆ.

ನೀಟ್-ಯುಜಿ ರದ್ದುಪಡಿಸುವುದು ಮತ್ತು ನ್ಯಾಯಾಲಯದ ಉಸ್ತುವಾರಿಯಲ್ಲಿ ತನಿಖೆ ನಡೆಸುವುದನ್ನು ಕೋರಿ ಸುಪ್ರೀಂ ಕೋರ್ಟ್‌ಗೂ ಅರ್ಜಿಗಳು ಸಲ್ಲಿಕೆಯಾಗಿದ್ದು, ಅವುಗಳ ವಿಚಾರಣೆ ಜೂನ್ 8ರಂದು ನಡೆಯಲಿದೆ.

ಮೇ 5ರಂದು ನಡೆದ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿರುವುದರಿಂದ ಅದನ್ನು ರದ್ದುಪಡಿಸಿ ಮರು ಪರೀಕ್ಷೆ ನಡೆಸುವಂತೆ ಆದೇಶಿಸಬೇಕು ಎಂದು ಅರ್ಜಿದಾರರು ನ್ಯಾಯಾಲಯವನ್ನು ಕೋರಿದ್ದಾರೆ.

'ನೇಮಕಾತಿ: ಹೆಚ್ಚುವರಿ ಅಂಕ ಅಸಮರ್ಥನೀಯ'

ನವದೆಹಲಿ (ಪಿಟಿಐ): ಹರಿಯಾಣ ಸರ್ಕಾರವು ನೇಮಕಾತಿ ಪರೀಕ್ಷೆಗಳಲ್ಲಿ ರಾಜ್ಯದ ಕೆಲವು ವರ್ಗಗಳಿಗೆ ಹೆಚ್ಚುವರಿ ಅಂಕ ನೀಡುವ ವ್ಯವಸ್ಥೆಯನ್ನು ರದ್ದುಗೊಳಿಸಿದ್ದ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿಹಿಡಿದಿದೆ.

ಕೆಲವರಿಗೆ ಹೆಚ್ಚುವರಿ ಅಂಕ ನೀಡುವುದು 'ಜನಪ್ರಿಯ ಕ್ರಮ' ಎಂದು ಅಭಿಪ್ರಾಯಪಟ್ಟಿರುವ ನ್ಯಾಯಮೂರ್ತಿ ಅಭಯ್ ಓಕಾ ಮತ್ತು ನ್ಯಾಯಮೂರ್ತಿ ರಾಜೇಶ್ ಬಿಂದಾಲ್ ಅವರ ರಜಾಕಾಲದ ಪೀಠವು, ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿದೆ.

ರಾಜ್ಯ ಸರ್ಕಾರದ ಉದ್ಯೋಗಗಳಲ್ಲಿ ಕೆಲವು ವರ್ಗದ ಅಭ್ಯರ್ಥಿಗಳಿಗೆ ಸಾಮಾಜಿಕ ಆರ್ಥಿಕ ಪರಿಗಣನೆಯ ಮೇಲೆ ಹೆಚ್ಚುವರಿ ಅಂಕ ನೀಡುವ ಹರಿಯಾಣ ಸರ್ಕಾರದ ಕ್ರಮವು ಅಸಾಂವಿಧಾನಿಕ ಎಂದು ಹೈಕೋರ್ಟ್ ಆದೇಶ ನೀಡಿತ್ತು.

'ಪ್ರತಿಭಾವಂತ ಅಭ್ಯರ್ಥಿಯು ಪರೀಕ್ಷೆಯಲ್ಲಿ 60 ಅಂಕ ಪಡೆಯುತ್ತಾನೆ. ಮತ್ತೊಬ್ಬನೂ ಪರೀಕ್ಷೆಯಲ್ಲಿ 60 ಅಂಕ ಪಡೆದು, ಆತನಿಗೆ ಹೆಚ್ಚುವರಿ 5 ಅಂಕ ಸಿಕ್ಕರೆ, ಆತ ಅಂಕದಲ್ಲಿ ಮೇಲೇರುತ್ತಾನೆ. ಇವೆಲ್ಲವೂ ಜನಪ್ರಿಯ ಕ್ರಮಗಳಾಗಿವೆ. ಒಬ್ಬ ಹೆಚ್ಚುವರಿ 5 ಅಂಕ ಪಡೆಯುವ ಈ ಕ್ರಮವನ್ನು ನೀವು ಹೇಗೆ ಸಮರ್ಥಿಸಿಕೊಳ್ಳುತ್ತೀರಿ' ಎಂದು ಪೀಠವು ಪ್ರಶ್ನಿಸಿದೆ.

'ಕೇರಳಂ' ಎಂದು ಹೆಸರು ಬದಲಿಸಲು ಒಮ್ಮತದ ನಿರ್ಣಯ

ತಿರುವನಂತಪುರ (ಪಿಟಿಐ): ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಕೇರಳ ವಿಧಾನಸಭೆಯಲ್ಲಿ ಸೋಮವಾರ ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಲಾಗಿದೆ.

ಕೇರಳ ವಿಧಾನಸಭೆಯಲ್ಲಿ ಹೀಗೆ ನಿರ್ಣಯ ಅಂಗೀಕರಿಸುತ್ತಿರುವುದು ಇದು ಎರಡನೇ ಬಾರಿ. ಮೊದಲ ಬಾರಿ ಕಳುಹಿಸಿದ್ದ ನಿರ್ಣಯವನ್ನು ಪರಿಶೀಲಿಸಿದ್ದ ಕೇಂದ್ರ ಗೃಹ ಸಚಿವಾಲಯವು ಕೆಲ ತಾಂತ್ರಿಕ ಬದಲಾವಣೆ ಮಾಡುವಂತೆ ಸಲಹೆ ಮಾಡಿತ್ತು.

ಹೆಸರು ಬದಲಿಸಬೇಕು ಎಂದು ಕೋರುವ ನಿರ್ಣಯವನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮಂಡಿಸಿದರು. ಇಂಗ್ಲಿಷ್ ಸೇರಿ ಸಂವಿಧಾನದ 8ನೇ ಪರಿಚ್ಛೇದ ದಲ್ಲಿ ಉಲ್ಲೇಖಿಸಿರುವ ಎಲ್ಲ ಭಾಷೆಗಳಲ್ಲಿಯೂ 'ಕೇರಳಂ' ಎಂದೇ ಉಲ್ಲೇಖಿಸಬೇಕು ಎಂದು ಕೋರಿದರು.

ಈ ನಿರ್ಣಯ ಕುರಿತು ಆದಷ್ಟು ಶೀಘ್ರ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಕೇರಳ ವಿಧಾನಸಭೆಯು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ನೀಟ್ ಅಕ್ರಮ: ಸಿಬಿಐ ತನಿಖೆ ಚುರುಕು

ಒಂದನೇ ಪುಟದಿಂದ...

'ಪ್ರಕರಣದ ತನಿಖೆಯ ಭಾಗವಾಗಿ ಸಿಬಿಐ ಹಲವು ಎಫ್‌ಐಆರ್‌ಗಳನ್ನು ದಾಖಲಿಸಬಹುದು. ಪ್ರಕರಣದ ಪ್ರಮುಖ ಆರೋಪಿ, ದನಾಪುರ ಪುರಸಭೆಯ ಕಿರಿಯ ಎಂಜಿನಿಯರ್ ಸಿಕಂದರ್ ಪ್ರಸಾದ್ ಯುದುವೇಂದು ಸೇರಿದಂತೆ ಆರೋಪಿಗಳಾಗಿರುವ ಸರ್ಕಾರಿ ನೌಕರರ ವಿರುದ್ಧ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಸಂಪಾದನೆ (ಡಿಎ) ಮಾಡಿರುವ ಪ್ರಕರಣ ದಾಖಲಿಸುವ ಸಾಧ್ಯತೆಯೂ ಇದೆ' ಎಂದು ಅವರು ವಿವರಿಸಿದ್ದಾರೆ.

ಗೋಧ್ರಾದಲ್ಲಿ ಸಿಬಿಐ ತಂಡ: ಇತ್ತ, ಗುಜರಾತ್‌ನ ಪಂಚಮಹಲ್ ಜಿಲ್ಲೆಯ ಗೋಧ್ರಾ ನಗರಕ್ಕೆ ಸೋಮವಾರ ತಲುಪಿರುವ ಸಿಬಿಐ ಅಧಿಕಾರಿಗಳ ತಂಡ ಸ್ಥಳೀಯ ಪೊಲೀಸರಿಂದ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿದೆ.

27 ಅಭ್ಯರ್ಥಿಗಳಿಂದ ತಲಾ ₹10 ಲಕ್ಷ ಪಡೆದು, ನೀಟ್‌ನಲ್ಲಿ ತೇರ್ಗಡೆಯಾಗಲು ಅವರಿಗೆ ನೆರವು ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಗೋಧ್ರಾ ಪೊಲೀಸರು ಮೇ 8ರಂದು ಪ್ರಕರಣ ದಾಖಲಿಸಿದ್ದರು. ಶಾಲೆಯೊಂದರ ಪ್ರಾಂಶುಪಾಲ, ಶಿಕ್ಷಕ ಸೇರಿದಂತೆ ಐವರನ್ನು ಬಂಧಿಸಿದ್ದರು.

'ಸಿಬಿಐ ಅಧಿಕಾರಿಗಳ ತಂಡವು ಗೋಧ್ರಾ ತಲುಪಿದ್ದು, ಸ್ಥಳೀಯ ಪೊಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿದೆ. ಪ್ರಕರಣದ ತನಿಖೆಯಲ್ಲಿ ಸಿಬಿಐ ಅಧಿಕಾರಿಗಳಿಗೆ ನೇಕಾದ ಎಲ್ಲ ನೆರವನ್ನೂ ನಾವು ನೀಡಲಿದ್ದೇವೆ' ಎಂದು ಪಂಚಮಹಲ್‌ನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಿಮಾಂಶು ಸೋಲಂಕಿ ಹೇಳಿದ್ದಾರೆ.

5 ಹೊಸ ಪ್ರಕರಣಗಳು: ಈ ಮಧ್ಯೆ, ಬಿಹಾರ, ಗುಜರಾತ್ ಮತ್ತು ರಾಜಸ್ಥಾನದಲ್ಲಿ ದಾಖಲಾಗಿರುವ ಹೊಸ 5 ಪ್ರಕರಣಗಳ ತನಿಖೆಯನ್ನು ಸಿಬಿಐ ಸೋಮವಾರ ತನ್ನ ಸುಪರ್ದಿಗೆ ತೆಗೆದುಕೊಂಡಿದೆ.

'ಗುಜರಾತ್ ಮತ್ತು ಬಿಹಾರದಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಅದು ಮರು ದಾಖಲು ಮಾಡಿಕೊಂಡಿದ್ದರೆ, ರಾಜಸ್ಥಾನದಲ್ಲಿ ಮೂರು ಪ್ರಕರಣಗಳನ್ನು ದಾಖಲಿಸಿಕೊಂಡಿದೆ. ಮಹಾರಾಷ್ಟ್ರದ ಲಾತೂರ್‌ನಲ್ಲಿ ವರದಿಯಾದ ಇನ್ನೊಂದು ಪ್ರಕರಣವನ್ನೂ ಸಿಬಿಐ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಬಿಹಾರದ ಪ್ರಕರಣಗಳನ್ನು ಬಿಟ್ಟು, ಉಳಿದ 4 ಪ್ರತ್ಯೇಕ ಪ್ರಕರಣಗಳು ಎನ್ನಲಾಗಿದ್ದು, ನಕಲಿ ಅಭ್ಯರ್ಥಿ ಹಾಜರು, ಸ್ಥಳೀಯ ಅಧಿಕಾರಿಗಳು, ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಮತ್ತು ಅಭ್ಯರ್ಥಿಗಳು ಮಾಡಿರುವ ವಂಚನೆಗೆ ಸಂಬಂಧಿಸಿದ್ದಾಗಿದೆ' ಎಂದು ಹೇಳಿದ್ದಾರೆ.

ನೀಟ್–ಯುಜಿ ಅಕ್ರಮ, ಯುಜಿಸಿ ನೆಟ್ ರದ್ದು ಮಾಡಿರುವುದರ ವಿರುದ್ಧ ಸೋಮವಾರ ನವದೆಹಲಿಯಲ್ಲಿ ಸಂಸತ್ತಿಗೆ ಮುತ್ತಿಗೆ ಹಾಕಲು ಯತ್ನಿಸಿದ ಎನ್‌ಎಸ್‌ಯುಐ ಕಾರ್ಯಕರ್ತರನ್ನು ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ತಡೆದರು–ಪಿಟಿಐ ಚಿತ್ರ

ನಿಯಮ ಜಾರಿ ಮಾಡಿದ ಕೇಂದ್ರ

ನವದೆಹಲಿ (ಪಿಟಿಐ): ಇತ್ತೀಚೆಗೆ ಜಾರಿಗೆ ಬಂದಿದ್ದ ಪ್ರಶ್ನೆಪತ್ರಿಕೆ ಸೋರಿಕೆ ತಡೆ ಕಾನೂನಿನ ಅಡಿಯಲ್ಲಿ ಬರುವ ನಿಯಮಗಳನ್ನು ಜಾರಿಗೊಳಿಸಿ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದ್ದು, ರಾಷ್ಟ್ರೀಯ ನೇಮಕಾತಿ ಸಂಸ್ಥೆಯು (ಎನ್‌ಆರ್‌ಎ) ಕಂಪ್ಯೂಟರ್ ಆಧಾರಿತ ಪರೀಕ್ಷೆಗಳಿಗೆ ನಿಯಮಗಳು, ಮಾನದಂಡಗಳನ್ನು ರೂಪಿಸುವುದನ್ನು ಕಡ್ಡಾಯಗೊಳಿಸಿದೆ.

ವಿವಿಧ ಸರ್ಕಾರಿ ಸಂಸ್ಥೆಗಳು ನಡೆಸುವ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗುವುದನ್ನು ತಡೆಯುವುದಕ್ಕಾಗಿ ಕೇಂದ್ರ ಸರ್ಕಾರವು ರೂಪಿಸಿದ್ದ ರಾಷ್ಟ್ರೀಯ ಮಟ್ಟದ ಮೊದಲ ಕಾನೂನು ಆದ 'ಸಾರ್ವಜನಿಕ ಪರೀಕ್ಷೆಗಳ (ಅಕ್ರಮ ತಡೆ) ಕಾಯ್ದೆ–2024' ಕಾರ್ಯಾಚರಣೆಗೆ ಬಂದ ಕೆಲವೇ ದಿನಗಳಲ್ಲಿ ನಿಯಮಗಳನ್ನು ನಿಗದಿಗೊಳಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಈ ಮಸೂದೆಯನ್ನು ರಾಜ್ಯಸಭೆಯು ಫೆಬ್ರುವರಿ 9ರಂದು ಮತ್ತು ಲೋಕಸಭೆಯು ಫೆಬ್ರುವರಿ 6ರಂದು ಅಂಗೀಕರಿಸಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಫೆ.12ರಂದು ಮಸೂದೆಗೆ ಅಂಕಿತ ಹಾಕಿದ್ದರು.

ನೀಟ್–ಪಿಜಿ ಪ್ರಕ್ರಿಯೆ ಪರಿಶೀಲನೆ: ಈ ಮಧ್ಯೆ, ಕೇಂದ್ರ ಆರೋಗ್ಯ ಸಚಿವಾಲಯ ಮತ್ತು ವೈಜ್ಞಾನಿಕ ವಿಜ್ಞಾನ ಸಂಸ್ಥೆಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿಯ ಉನ್ನತ ಅಧಿಕಾರಿಗಳು ನೀಟ್ ಪಿಜಿ ಪ್ರಕ್ರಿಯೆಯನ್ನು ಪರಿಶೀಲಿಸಿದರು.

ಪ್ರತಿಭಟನೆ: 24 ವಿದ್ಯಾರ್ಥಿಗಳು ವಶಕ್ಕೆ

ನವದೆಹಲಿ (ಪಿಟಿಐ): ನೀಟ್ ಯುಜಿಯಲ್ಲಿ ಅಕ್ರಮ, ಯುಜಿಸಿ ನೆಟ್ ರದ್ದು ಮಾಡಿರುವುದರ ವಿರುದ್ಧ ಸೋಮವಾರ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿ, ಸಂಸತ್ತಿನತ್ತ ಹೆಜ್ಜೆ ಹಾಕಿದ ಎನ್‌ಎಸ್‌ಯುಐ ಕಾರ್ಯಕರ್ತರು ಸೇರಿದಂತೆ 24ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ಪಡೆದರು.

ಕಾಂಗ್ರೆಸ್ ಪಕ್ಷದೊಂದಿಗೆ ಗುರುತಿಸಿಕೊಂಡಿರುವ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿಗಳ ಒಕ್ಕೂಟವು (ಎನ್‌ಎಸ್‌ಯುಐ) 18ನೇ ಲೋಕಸಭೆಯ ಮೊದಲ ಅಧಿವೇಶನ ಆರಂಭದ ಸಂದರ್ಭದಲ್ಲಿ ಸಂಸತ್ತಿಗೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಂಡಿತ್ತು.

'ಜೋಶಿ ವಿರುದ್ಧ ಕ್ರಮ ಕೈಗೊಳ್ಳದ ಕೇಂದ್ರ'

ನವದೆಹಲಿ (ಪಿಟಿಐ): ನೀಟ್ ಅಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅಧ್ಯಕ್ಷ ಪಿ.ಕೆ.ಜೋಶಿ ವಿರುದ್ಧ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದು ಕಾಂಗ್ರೆಸ್ ಆರೋಪಿಸಿದೆ.

'ಅಕ್ರಮಗಳ ಕಾರಣಕ್ಕೆ ಎನ್‌ಟಿಎ ಎಲ್ಲರ ಕೆಂಗಣ್ಣಿಗೆ ಗುರಿಯಾಗಿದೆ. ಹೀಗಿದ್ದರೂ, ಅದರ ಅಧ್ಯಕ್ಷ ಪಿ.ಕೆ.ಜೋಶಿ ಅವರು ಕಳೆದ ವಾರ ವರ್ಧಾದ ಮಹಾತ್ಮ ಗಾಂಧಿ ವಿವಿಯ ಕುಲಪತಿ ಹುದ್ದೆಗೆ ಸಂದರ್ಶನ ನಡೆಸಿದ್ದಾರೆ. ಸೋಮವಾರ ಶಿಮ್ಲಾದ ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡಿಯ ನಿರ್ದೇಶಕರ ಸ್ಥಾನಕ್ಕೆ ಅಭ್ಯರ್ಥಿಗಳ ಸಂದರ್ಶನ ಮಾಡಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಪವನ್ ಖೇರಾ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಹಲವು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿರುವಾಗ ಎನ್‌ಟಿಎ ಅಥವಾ ಪಿ.ಕೆ.ಜೋಶಿ ಅವರು ವಿವಿಧ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯ ಭಾಗವಾಗಲು ಅವಕಾಶ ನೀಡಬಹುದೇ' ಎಂದೂ ಅವರು ಪ್ರಶ್ನಿಸಿದ್ದಾರೆ.

ಪ್ರಧಾನಿ ಮಾತನಾಡಬೇಕಿತ್ತು: ಒಮರ್

ಶ್ರೀನಗರ (ಪಿಟಿಐ): ಲೋಕಸಭಾ ಅಧಿವೇಶನದ ಮೊದಲ ದಿನ ಪ್ರಧಾನಿ ನರೇಂದ್ರ ಮೋದಿಯವರು ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸುವುದರ ಬದಲು ನೀಟ್ ವಿವಾದದ ಬಗ್ಗೆ ಮಾತನಾಡಬೇಕಿತ್ತು ಎಂದು ನ್ಯಾಷನಲ್ ಕಾನ್ಫರೆನ್ಸ್ ಮುಖಂಡ ಒಮರ್ ಅಬ್ದುಲ್ಲಾ ಸೋಮವಾರ ಹೇಳಿದ್ದಾರೆ.

'ವಿರೋಧ ಪಕ್ಷಗಳನ್ನು ಹಳಿಯುವ ಹಕ್ಕು ಪ್ರಧಾನಿಯವರಿಗೆ ಇದೆ. ಇತ್ತೀಚೆಗಿನ ಚುನಾವಣೆಯ ಬಳಿಕ ಬಿಜೆಪಿ ನಮ್ರತೆಯಿಂದ ಮಾತನಾಡುತ್ತದೆ ಎಂಬುದನ್ನು ನಾವು ನಿರೀಕ್ಷಿಸುವುದಿಲ್ಲ. ಆದರೆ, ನೀಟ್ ಹಗರಣದ ವಿಚಾರವೇ ಹೆಚ್ಚು ಪ್ರಾಮುಖ್ಯವಾಗಿರುವ ಯುವಕ ಯುವತಿಯರಿಗಾಗಿ ಪ್ರಧಾನಿ ಕೆಲವು ಮಾತುಗಳನ್ನು ಹೇಳಿದ್ದರೆ ಹೆಚ್ಚು ಸಮಂಜಸವಾಗುತ್ತಿತ್ತು' ಎಂದು ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

'ಪರೀಕ್ಷಾ ಪೇ ಚರ್ಚೆ ಎಂಬುದು ಒಂದು ದಿನದ ಕಾರ್ಯಕ್ರಮವಲ್ಲ. ಅದು ವಿದ್ಯಾರ್ಥಿಗಳ ಹಿತಾಸಕ್ತಿ ಮತ್ತು ಕಳವಳಗಳಿಗೆ ಸಂಬಂಧಿಸಿದ ದೀರ್ಘಾವಧಿಯ ಬದ್ಧತೆಯಾಗಿದೆ' ಎಂದು ಒಮರ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕೇರಳದಲ್ಲಿ ಆರ್ಥಿಕ ಬಿಕ್ಕಟ್ಟಿಗೆ ಕೇಂದ್ರವೇ ಕಾರಣ: ಸಚಿವ

ತಿರುವನಂತಪುರ (ಪಿಟಿಐ): ದೇಶದ ಸಂಯುಕ್ತ ರಚನೆಗೆ ವಿರುದ್ಧವಾದ ನಿಲುವನ್ನು ಕೇಂದ್ರ ಸರ್ಕಾರ ತಳೆದಿದೆ. ಇದೇ ಕಾರಣದಿಂದಲೇ ಕೇರಳದಲ್ಲಿ ಕೃತಕ ಆರ್ಥಿಕ ಬಿಕ್ಕಟ್ಟು ಸೃಷ್ಟಿಯಾಗಿದೆ ಎಂದು ಕೇರಳದ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಆರೋಪಿಸಿದ್ದಾರೆ.



ಕೇರಳ ವಿಧಾನಸಭೆಯಲ್ಲಿ ಸೋಮವಾರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಕೇಂದ್ರ ಸರ್ಕಾರದ ನಿಲುವಿನಿಂದ ಕೇರಳ ಸರ್ಕಾರದ ಸಂಪನ್ಮೂಲ ಕ್ರೋಡೀಕರಣ ಕ್ರಮಗಳಿಗೆ ಹಿನ್ನಡೆಯಾಗಿದೆ. ಕೇರಳ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿಯು (ಕೆಐಐಎಫ್‌ಬಿ) ಕೇಂದ್ರದಿಂದ ಪಡೆದಿರುವ ಸಂಪೂರ್ಣ ಅನುದಾನವನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಒಟ್ಟಾರೆ ಸಾಲಕ್ಕೆ ಸೇರಿಸಿದೆ. ಈ ಮೂಲಕ ಉದ್ದೇಶಪೂರ್ವಕವಾಗಿ ರಾಜ್ಯದಲ್ಲಿ ಕೃತಕ ಆರ್ಥಿಕ ಬಿಕ್ಕಟ್ಟು ಸೃಷ್ಟಿಸಿದೆ ಎಂದು ಆರೋಪಿಸಿದ್ದಾರೆ.

ಗುಜರಾತ್‌ನಲ್ಲಿ 87 ಸಾವಿರ ಕೆ.ಜಿ. ಮಾದಕ ವಸ್ತು ವಶ

ಅಹಮದಾಬಾದ್ (ಪಿಟಿಐ): ಗುಜರಾತ್‌ನಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ₹9,679 ಕೋಟಿ ಮೌಲ್ಯದ ಒಟ್ಟು 87,605 ಕೆ.ಜಿ.ಗಿಂತ ಹೆಚ್ಚಿನ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ, 2,607 ಮಂದಿಯನ್ನು ಬಂಧಿಸಲಾಗಿದೆ ಎಂದು ಗೃಹ ಖಾತೆ ರಾಜ್ಯ ಸಚಿವ ಹರ್ಷ ಸಂಘವಿ ತಿಳಿಸಿದ್ದಾರೆ.

ಮಾದಕ ವಸ್ತುಗಳ ವಿರೋಧಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ವರ್ಷದಲ್ಲೇ 251 ಪ್ರಕರಣಗಳನ್ನು ದಾಖಲಿಸಲಾಗಿದೆ, 353 ಮಂದಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ. 'ಮಾದಕ ವಸ್ತುಗಳ ವಿರುದ್ಧ ನಾವು ಸಮರ ಸಾರಿದ್ದೇವೆ. ಸಮರವನ್ನು ನಗರಗಳಿಂದ ಹಳ್ಳಿಗಳವರೆಗೆ ಒಯ್ಯಲು ಅಭಿಯಾನ ಆರಂಭಿಸುತ್ತಿದ್ದೇವೆ. ಇದರ ಭಾಗವಾಗಿ, ಅಭಿಯಾನದ ಅನುಷ್ಠಾನಕ್ಕೆ ಎಡಿಜಿಪಿ ಶ್ರೇಣಿಯ ಪೊಲೀಸ್ ಅಧಿಕಾರಿಗಳು ಬೇರೆ ಬೇರೆ ಜಿಲ್ಲೆಗಳನ್ನು ದತ್ತು ಪಡೆಯಲಿದ್ದಾರೆ' ಎಂದಿದ್ದಾರೆ.

ಅಧಿಕಾರಿಗಳು ಪ್ರತಿ ತಿಂಗಳು ಕೆಲವು ದಿನಗಳ ಮಟ್ಟಿಗೆ ಜಿಲ್ಲೆಗಳಿಗೆ ಭೇಟಿ ನೀಡಿ, ಅರಿವು ಮೂಡಿಸಲು ಕೆಲಸ ಮಾಡುತ್ತಾರೆ ಎಂದು ಹೇಳಿದ್ದಾರೆ.

ಗುಜರಾತ್ ರಾಜ್ಯವು ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಮೊದಲ ಸ್ಥಾನದಲ್ಲಿ ಇದೆಯೇ ವಿನಾ ಮಾದಕ ವಸ್ತುಗಳ ಸೇವನೆಯಲ್ಲಿ ಅಲ್ಲ ಎಂದು ಸಂಘವಿ ಹೇಳಿದ್ದಾರೆ. ಆದರೆ ರಾಜಕೀಯ ಲಾಭಕ್ಕಾಗಿ ಗುಜರಾತ್ ರಾಜ್ಯವನ್ನು ಅವಹೇಳನ ಮಾಡುವುದು ಈಗ ಒಂದು ಫ್ಯಾಷನ್ ಆಗಿಬಿಟ್ಟಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ 6 ಮಂದಿ ಬಂಧನ

ಲಖನೌ (ಪಿಟಿಐ): ಪರಿಶೀಲನಾ ಅಧಿಕಾರಿ ಮತ್ತು ಸಹಾಯಕ ಪರಿಶೀಲನಾ ಅಧಿಕಾರಿ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಪೊಲೀಸರ ವಿಶೇಷ ಕಾರ್ಯಪಡೆಯು (ಎಸ್‌ಟಿಎಫ್) ಭಾನುವಾರ ಪ್ರಿಂಟಿಂಗ್ ಪ್ರೆಸ್‌ನ ನೌಕರ ಸೇರಿದಂತೆ ಆರು ಮಂದಿಯನ್ನು ಬಂಧಿಸಿದೆ.

ಆರು ಮಂದಿಯನ್ನು ಪ್ರಯಾಗ್‌ರಾಜ್‌ನಲ್ಲಿ ಬಂಧಿಸಲಾಗಿದೆ ಎಂದು ಎಸ್‌ಟಿಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಉತ್ತರ ಪ್ರದೇಶ ಲೋಕಸೇವಾ ಆಯೋಗವು (ಯುಪಿಪಿಎಸ್‌ಸಿ) ಫೆಬ್ರುವರಿ 11ರಂದು ಪರೀಕ್ಷೆ ನಡೆಸಿತ್ತು. ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಮಾರ್ಚ್ 2ರಂದು ಪರೀಕ್ಷೆಯನ್ನು ರದ್ದುಗೊಳಿಸಿತ್ತು.

ಭೋಪಾಲ್‌ನ ಸುನಿಲ್ ರಘುವಂಶಿ, ಪ್ರಿಂಟಿಂಗ್ ಪ್ರೆಸ್ ನೌಕರನಾದ ಬಿಹಾರದ ಮಧುಬನಿಯ ಸುಭಾಷ್ ಪ್ರಕಾಶ್, ಪ್ರಯಾಗ್‌ರಾಜ್‌ನ ವಿಶಾಲ್ ದುಬೆ ಮತ್ತು ಸಂದೀಪ್ ಪಾಂಡೆ, ಗಯಾದ ಅಮರ್‌ಜೀತ್ ಶರ್ಮಾ ಹಾಗೂ ಬಲ್ಲಿಯಾದ ವಿವೇಕ್ ಉಪಾಧ್ಯಾಯ ಬಂಧಿತರು. ಬಂಧಿತರಿಂದ ಒಂದು ಲ್ಯಾಪ್‌ಟಾಪ್, ಆರು ಮೊಬೈಲ್ ಫೋನ್‌ಗಳು, ಐದು ಖಾಲಿ ಚೆಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್‌ಟಿಎಫ್ ತಿಳಿಸಿದೆ.

ಈ ಹಿಂದೆ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಜನರನ್ನು ಬಂಧಿಸಲಾಗಿತ್ತು.

ಬಂಧಿತರ ಪೈಕಿ ಸುನಿಲ್ ರಘುವಂಶಿ ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದು, ಉಳಿದವರು ಆತನ ಸಹಪಾಠಿಗಳಾಗಿದ್ದಾರೆ.

ಜಮ್ಮುವಿನಲ್ಲಿ ಒಬ್ಬನ ಸೆರೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ 2022ರಲ್ಲಿ ನಡೆದಿದ್ದ ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿಯನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಯತಿನ್ ಯಾದವ್ ಎಂಬಾತನನ್ನು ಜಮ್ಮುವಿನಲ್ಲಿ ಬಂಧಿಸಲಾಗಿದೆ ಎಂದು ಅಧಿಕೃತ ಮೂಲಗಳು ಹೇಳಿವೆ. ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷೆಯು 2022ರ ಮಾರ್ಚ್ 27ರಂದು ನಡೆದಿತ್ತು.

ರೋಹಿಂಗ್ಯಾಗಳ ಕಳ್ಳಸಾಗಣೆ: 8 ಮಂದಿ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ನಕಲಿ ದಾಖಲೆ ಸೃಷ್ಟಿಸಿ ರೋಹಿಂಗ್ಯಾಗಳು ಮತ್ತು ಬಾಂಗ್ಲಾದೇಶಿಗರನ್ನು ಭಾರತಕ್ಕೆ ಕಳ್ಳಸಾಗಣೆ ಮಾಡುತ್ತಿದ್ದ ಆರೋಪ ಹೊತ್ತ ಎಂಟು ಮಂದಿ ವಿರುದ್ಧ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸೋಮವಾರ ದೋಷಾರೋಪ ಪಟ್ಟಿ ದಾಖಲಿಸಿದೆ.

ಗುವಾಹಟಿಯ ವಿಶೇಷ ನ್ಯಾಯಾಲಯದಲ್ಲಿ ಪೂರಕ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದು ಎನ್‌ಐಎ ಹೇಳಿಕೆಯಲ್ಲಿ ತಿಳಿಸಿದೆ.

ಆರೋಪಿಗಳ ಪೈಕಿ ಬಾಂಗ್ಲಾದೇಶದ ಪ್ರಜೆ ರಬಿಯಲ್ ಹಸನ್ ಅಲಿಯಾಸ್ ರಬಿಯುಲ್ ಹಸನ್ ಸಹ ಒಬ್ಬ. ಅಸ್ಸಾಂ, ಪಶ್ಚಿಮ ಬಂಗಾಳ, ತ್ರಿಪುರಾ, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಬಂಧಿಸಿರುವ ಆರೋಪಿಗಳೊಂದಿಗೆ ಈತ ಸಂಪರ್ಕ ಹೊಂದಿದ್ದ ಎಂದು ತನಿಖೆ ವೇಳೆ ತಿಳಿದಿದೆ ಎಂದು ಹೇಳಿದೆ.

ಇದಕ್ಕೂ ಮುನ್ನ 24 ಮಂದಿ ಬಾಂಗ್ಲಾ ಪ್ರಜೆಗಳ ವಿರುದ್ಧ ಎನ್‌ಐಎ ದೋಷಾರೋಪ ಪಟ್ಟಿ ದಾಖಲಿಸಿದೆ.

ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಆರೋಪಿಗಳು ಮತ್ತು ಇತರ ಶಂಕಿತರ ಪತ್ತೆಗೆ ಎನ್‌ಐಎ ತನಿಖೆ ನಡೆಸುತ್ತಿದೆ.

'ಕವಚ್' ಸುಧಾರಿತ ಆವೃತ್ತಿ: ಹೊಸ ಮಾರ್ಗಗಳಲ್ಲಿ ಜಾರಿಗೆ ರೈಲ್ವೆ ಸಿದ್ಧತೆ

ನವದೆಹಲಿ (ಪಿಟಿಐ): ಸ್ವಯಂಚಾಲಿತ ರೈಲು ಸುರಕ್ಷತಾ ವ್ಯವಸ್ಥೆಯಾಗಿರುವ (ಎಟಿಪಿ) ಸುಧಾರಿತ ಆವೃತ್ತಿ 'ಕವಚ್ 4.0'ರ ಕಾರ್ಯಶೈಲಿಯನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಇಲ್ಲಿ ಪರಿಶೀಲಿಸಿದರು.

ರೈಲು ಭವನದಲ್ಲಿ ಜೂನ್ 22ರಂದು ಪರಿಶೀಲನೆ ಸಭೆ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸ್ತುತ ಕವಚ್ 3.2 ಆವೃತ್ತಿಯನ್ನು ಹೆಚ್ಚು ಕಾರ್ಯದೊತ್ತಡ ಇರುವ ರೈಲು ಮಾರ್ಗಗಳಲ್ಲಿ ಅಳವಡಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನವೀನ ಮತ್ತು ಸುಧಾರಿತ ಆವೃತ್ತಿಯಾದ ಕವಚ್ 4.0 ಅನ್ನು ಹೊಸ ಮಾರ್ಗಗಳಲ್ಲಿ ಅಳವಡಿಸಲಿದ್ದು, ಅಲ್ಪಾವಧಿಯಲ್ಲಿ ಹೆಚ್ಚಿನ ರೈಲ್ವೆ ಜಾಲವನ್ನು ಸುರಕ್ಷತಾ ವ್ಯಾಪ್ತಿಗೆ ತರಬಹುದಾಗಿದೆ ಎಂದು ಹೇಳಿದ್ದಾರೆ.

ಕವಚ್ ವ್ಯವಸ್ಥೆ ಅಭಿವೃದ್ಧಿಪಡಿಸಿರುವ ಸಂಸ್ಥೆಯವರು ಹೊಸ ಆವೃತ್ತಿಯನ್ನು ಪರೀಕ್ಷೆಗೆ ಒಳಪಡಿಸಿದ್ದು, ಸಚಿವರಿಗೆ ಪ್ರಗತಿ ಪರಿಶೀಲನೆ ವರದಿ ಸಲ್ಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಭಾರತೀಯ ರೈಲ್ವೆಯು ಕವಚ್ ಮೊದಲ ಆವೃತ್ತಿಯಾದ 'ರೈಲು ಅಪಘಾತ ತಡೆ ವ್ಯವಸ್ಥೆ'ಗೆ 2016ರಲ್ಲಿ ಅನುಮೋದನೆ ನೀಡಿತ್ತು. 2019ರಲ್ಲಿ ವಿಸ್ತೃತ ಪರೀಕ್ಷೆಗಳನ್ನು ನಡೆಸಿದ ಬಳಿಕ ಸುರಕ್ಷತಾ ವ್ಯವಸ್ಥೆಗೆ 'ಎಸ್‌ಐಎಲ್4' (ಉನ್ನತ ಸುರಕ್ಷತಾ ಪ್ರಮಾಣಪತ್ರ) ಲಭಿಸಿತ್ತು. ಕೋವಿಡ್ ಕಾಲಘಟ್ಟದ ನಡುವೆಯೂ ರಾಷ್ಟ್ರೀಯ ಎಟಿಪಿ ವ್ಯವಸ್ಥೆಗೆ 2020ರಲ್ಲಿ ಇಲಾಖೆಯು ಅನುಮೋದನೆ ನೀಡಿತ್ತು.

ಕವಚ್ 3.2 ಆವೃತ್ತಿಗೆ 2022ರ ಕಡೇ ತ್ರೈಮಾಸಿಕದಲ್ಲಿ ಅನುಮೋದನೆ ನೀಡಿದ್ದು, ಅಧಿಕ ಪ್ರಯಾಣದಟ್ಟಣೆಯ ದೆಹಲಿ–ಮುಂಬೈ, ದೆಹಲಿ–ಹೌರಾ ಮಾರ್ಗಗಳಲ್ಲಿ ಅಳವಡಿಸಲಾಯಿತು.

ಇದರ ಹೊರತಾಗಿ ಕವಚ್‌ನ ಉಪ ವ್ಯವಸ್ಥೆಯನ್ನು ಪ್ರತಿ ರೈಲು ಮತ್ತು ಲೊಕೋಮೋಟಿವ್‌ಗಳಲ್ಲಿ ಅಳವಡಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

BANGALORE ELEVATED TOLLWAY PVT. LIMITED

Office: Main Base Camp, Opp. Moog Controls Limited, KIADB Road, Electronic City Phase I, Bangalore-560100. BETPL

Tele: 080-28520758 / 27821760 Email: betpl@highwayconcessions.com

PUBLIC NOTICE

The public is hereby informed that, user fee for the use of Elevated section from Km 8.765 to Km 18.750 (Central Silk Board Junction to Electronics City) and grade section from Km 18.750 to Km 33.130 (Central Silk Board Junction to Karnataka-Tamilnadu Boarder) in Bangalore-Hosur section of NH-44(Old NH-7) in the State of Karnataka are revised as per Wholesale Price Index (WPI) as on 31st March 2024 (Ref.:NHAI/11015/NH-7/2024-25/PIU-BNG(EXP)/349 dt. 21.06.2024).

The revised fee for the period from 1st July 2024 to 30th June 2025 calculated based on WPI As on 31st March 2024 (Final), are indicated in Tables 1 and 2 below.

Fee Rate for use of Elevated Section

Sl. No.	Category of Vehicle	Single journey	Multiple Journey	Monthly pass
1	Two Wheeler	25	35	735
2	Car, Jeep and Van	60	90	1845
3	LCV/Mini Bus	85	130	2580
4	Truck and Bus	170	260	5160
5	MAV	345	515	10320

Fee Rate for Fee Plaza at KM 32.700

Sl No	Category of Vehicle	Single journey	Multiple Journey	Monthly pass
1	Two Wheeler	0	0	0
2	Car, Jeep and Van	35	55	1105
3	LCV/Mini Bus	60	90	1845
4	Truck and Bus	125	185	3685
5	MAV	260	385	7740

Sd/- AUTHORIZED OFFICER

BANGALORE ELEVATED TOLLWAY PRIVATE LIMITED

ಸಂಕ್ಷಿಪ್ತ ಸುದ್ದಿ

ಸೀಟು ಕೊರತೆ ಪ್ರತಿಭಟನೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಪ್ರಥಮ ಪಿಯು(10+1) ಪ್ರವೇಶಾತಿಗೆ ಸೀಟು ಕೊರತೆ ಉಂಟಾಗಿದ್ದು, ಸೋಮವಾರ ಹಲವು ವಿದ್ಯಾರ್ಥಿ ಸಂಘಟನೆಗಳು ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದ್ದಾರೆ.

ಸೀಟು ಕೊರತೆ ಸಂಬಂಧ ಕೇರಳ ವಿಧಾನಸಭೆಯಲ್ಲಿ ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಮುಗಿಬಿದ್ದ ಬೆನ್ನಲ್ಲೆ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿದೆ. ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕವಾದ 'ಕೇರಳ ವಿದ್ಯಾರ್ಥಿ ಸಂಘಟನೆ'(ಕೆಎಸ್‌ಯು) ಹಾಗೂ ಕಾಂಗ್ರೆಸ್ ಮಿತ್ರ ಪಕ್ಷ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ ವಿದ್ಯಾರ್ಥಿ ಘಟಕ 'ಮುಸ್ಲಿಂ ವಿದ್ಯಾರ್ಥಿಗಳ ಒಕ್ಕೂಟಗಳು'(ಎಮ್‌ಎಸ್‌ಎಫ್) ಪ್ರತಿಭಟನೆಯ ಮುಂದಾಳತ್ವ ವಹಿಸಿಕೊಂಡಿವೆ.

ಪ್ರತಿಭಟನೆಯ ಭಾಗವಾಗಿ ಕೆಎಸ್‌ಯು ಹಾಗೂ ಎಮ್‌ಎಸ್‌ಎಫ್ ಕಾರ್ಯಕರ್ತರು ಕೇರಳ ವಿಧಾನಸಭೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದು, ಪೊಲೀಸರು ತಡೆದಿದ್ದಾರೆ. ಕೊಲ್ಲಂನಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸುವ ವೇಳೆ ಉದ್ರಿಕ್ತರು ಪೊಲೀಸರತ್ತ ಕಲ್ಲು ತೂರಿರುವುದಾಗಿ ವರದಿಯಾಗಿದೆ. ಕೋಯಿಕ್ಕೋಡ್, ವಯನಾಡ್ ಹಾಗೂ ಮಲಪ್ಪುರಂ ಸೇರಿದಂತೆ ಹಲವೆಡೆ ಪ್ರತಿಭಟನೆ ನಡೆದಿದೆ.

ಪ್ರಥಮ ಪಿಯುಗೆ ದಾಖಲಾಗಲು ಸೀಟು ಸಿಗುವುದೋ ಇಲ್ಲವೋ ಎಂಬ ಆತಂಕದಿಂದ ಜೂ.11ರಂದು ಮಲಪ್ಪುರಂ ಜಿಲ್ಲೆಯಲ್ಲಿ ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆಗೆ ಶರಣಾಗಿರುವ ಆರೋಪ ಕೇಳಿಬಂದಿದೆ.

ವಿದ್ಯುತ್ ಪ್ರವಹಿಸಿ ಇಬ್ಬರು ಮಕ್ಕಳು ಸಾವು

ಅಕೋಲಾ (ಮಹಾರಾಷ್ಟ್ರ): ಇಲ್ಲಿನ ಅಕೋಲಾ ಜಿಲ್ಲೆಯಲ್ಲಿ ಇಬ್ಬರು ಮಕ್ಕಳು ಏರ್ ಕೂಲರ್ ಮುಟ್ಟಿದಾಗ ವಿದ್ಯುದಾಘಾತವಾಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದರು.

'ಇಲ್ಲಿನ ತೆಲ್ಹಾರಾ ತಾಲ್ಲೂಕಿನ ಕಾಳೇಗಾಂವ್‌ನಲ್ಲಿ ಬೇಸಿಗೆ ರಜೆ ಕಳೆಯಲು ಚಿಕ್ಕಪ್ಪನ ಮನೆಗೆ ಬಂದಿದ್ದ 4 ಹಾಗೂ 5 ವರ್ಷದ ಮಕ್ಕಳು ಆಟವಾಡುತ್ತಿದ್ದ ವೇಳೆ ಏರ್ ಕೂಲರ್ ಮುಟ್ಟಿದ್ದಾರೆ. ಈ ವೇಳೆ ವಿದ್ಯುದಾಘಾತದಿಂದಾಗಿ ಇಬ್ಬರೂ ಅದಲ್ಲೇ ಮೃತಪಟ್ಟರು' ಎಂದು ಹಿವರ್‌ಖೇಡ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದರು.

ತೆಲಂಗಾಣ: ಮುಂದುವರಿದ ಪಕ್ಷಾಂತರ, ಕಾಂಗ್ರೆಸ್ ಸೇರಿದ ಸಂಜಯ್

ಕಾನೂನು ಕ್ರಮಕ್ಕೆ ಬಿಆರ್‌ಎಸ್ ನಿರ್ಧಾರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣದಲ್ಲಿ ಬಿಆರ್‌ಎಸ್ ತ್ಯಜಿಸಿ ಕಾಂಗ್ರೆಸ್ ಸೇರುವ ಶಾಸಕರ ಸಂಖ್ಯೆ ಹೆಚ್ಚುತ್ತಲೇ ಇದೆ. ಭಾನುವಾರ ಸಂಜೆ ಜಗಿತ್ಯಾಲ ಕ್ಷೇತ್ರದ ಬಿಆರ್‌ಎಸ್ ಶಾಸಕ ಡಾ.ಎಂ.ಸಂಜಯ್ ಕುಮಾರ್ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಕೆ.ಚಂದ್ರಶೇಖರ ರಾವ್

ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್ ಕುಟುಂಬಕ್ಕೆ ಅತ್ಯಾಪ್ತರಾಗಿದ್ದ ಸಂಜಯ್ ಪಕ್ಷ ತ್ಯಜಿಸಿರುವುದು ಭಾರಿ ಅಚ್ಚರಿಗೆ ಕಾರಣವಾಗಿದೆ.

ವಿಧಾನಸಭಾ ಚುನಾವಣೆಯಲ್ಲಿ ಸೋತು ಅಧಿಕಾರದಿಂದ ಕೆಳಗಿಳಿದ ನಂತರ ಬಿಆರ್‌ಎಸ್ ಶಾಸಕರು ಪಕ್ಷ ತ್ಯಜಿಸುತ್ತಿದ್ದು, ಈ ಪೈಕಿ ಸಂಜಯ್ ಕುಮಾರ್ ಅವರು ಐದನೆಯವರಾಗಿದ್ದಾರೆ. ಈ ಹಿಂದೆ ಇದೇ ರೀತಿ ದಾನಂ ನಾಗೇಂದರ್, ತಲ್ಲಂ ವೆಂಕಟರಾವ್, ಕಡಿಯಂ ಶ್ರೀಹರಿ ಮತ್ತು ಪೋಚಾರಂ ಶ್ರೀನಿವಾಸ ರೆಡ್ಡಿ ಬಿಆರ್‌ಎಸ್ ತ್ಯಜಿಸಿ ಕಾಂಗ್ರೆಸ್ ಸೇರಿದ್ದರು.

> **ಕ್ಷೇತ್ರಕ್ಕಾಗಿ ಅನುದಾನ ಕೇಳಲು ಸಿ.ಎಂ ರೇವಂತ್ ರೆಡ್ಡಿ ಅವರನ್ನು ಭೇಟಿ ಆಗಿದ್ದೆ. ಅವರು ನನ್ನನ್ನು ತಮ್ಮ ಪಕ್ಷ ಸೇರುವಂತೆ ಆಹ್ವಾನಿಸಿದರು. ಕ್ಷೇತ್ರದ ಅಭಿವೃದ್ಧಿಗಾಗಿ ಕಾಂಗ್ರೆಸ್ ಸೇರಿದೆ**
> **ಸಂಜಯ್ ಕುಮಾರ್,** ಶಾಸಕ

ಇನ್ನೂ ಕನಿಷ್ಠ 15 ಮಂದಿ ಬಿಆರ್‌ಎಸ್ ಶಾಸಕರು ಕಾಂಗ್ರೆಸ್ ಪಕ್ಷದೊಂದಿಗೆ ಸಂಪರ್ಕದಲ್ಲಿದ್ದು, ಜುಲೈ 15ರ ನಂತರ ನಡೆಯಲಿರುವ ಬಜೆಟ್ ಅಧಿವೇಶನಕ್ಕೆ ಮುನ್ನ ಪಕ್ಷ ತ್ಯಜಿಸಲು ಸಿದ್ಧರಾಗಿದ್ದಾರೆ. ಆದರೆ, ಅವರನ್ನು ಬಿಆರ್‌ಎಸ್ ಮುಖಂಡರು ತಡೆಯುತ್ತಿದ್ದಾರೆ ಎನ್ನಲಾಗುತ್ತಿದೆ. ಭಾನುವಾರ ಸಂಜೆ ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ್ ರಾವ್ ಅವರು ಕಾಂಗ್ರೆಸ್ ಸೇರುವ ಸಾಧ್ಯತೆ ಇರುವ ಕರೀಂನಗರದ ಶಾಸಕ ಗಂಗುಲ ಕಮಲಾಕರ್ ಜತೆ ಮಾತುಕತೆ ನಡೆಸಿದ್ದಾರೆ.

ಇದೇ ವೇಳೆ, ಪಕ್ಷಾಂತರಿಗಳನ್ನು ಅನರ್ಹಗೊಳಿಸಲು ಬಿಆರ್‌ಎಸ್ ಕಾನೂನು ದಾರಿ ಹಿಡಿಯುವ ಬಗ್ಗೆ ಚಿಂತನೆ ನಡೆಸುತ್ತಿದೆ.

ಬಿಆರ್‌ಎಸ್ ತ್ಯಜಿಸಿ ತಮ್ಮ ಪಕ್ಷ ಸೇರಿದ ಶಾಸಕರನ್ನು ರಕ್ಷಿಸಿಕೊಳ್ಳಲು ಕಾಂಗ್ರೆಸ್ ಮುಂದಿರುವ ದಾರಿ ಎಂದರೆ ಬಿಆರ್‌ಎಸ್ ಅನ್ನು ತಮ್ಮ ಪಕ್ಷದಲ್ಲಿ ವಿಲೀನಗೊಳಿಸಿಕೊಳ್ಳುವುದು. ಅದಾಗಬೇಕು ಎಂದರೆ, ಬಿಆರ್‌ಎಸ್‌ನ 39 ಶಾಸಕರ ಪೈಕಿ ಕನಿಷ್ಠ 26 ಮಂದಿಯಾದರೂ ಬಿಆರ್‌ಎಸ್ ಪಕ್ಷವನ್ನು ತ್ಯಜಿಸಿ ಕಾಂಗ್ರೆಸ್ ಸೇರಬೇಕು. ಮೂರನೇ ಎರಡರಷ್ಟು ಶಾಸಕರು ಪಕ್ಷ ತ್ಯಾಗ ಮಾಡಿದರೆ, ಆಗ ಆ ಪಕ್ಷವು ಇನ್ನೊಂದು ಪಕ್ಷದಲ್ಲಿ ವಿಲೀನವಾದಂತೆ. ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯವಾಗುವುದಿಲ್ಲ. 2019ರ ಲೋಕಸಭಾ ಚುನಾವಣೆx ನಂತರ ಬಿಆರ್‌ಎಸ್ ಇದೇ ರೀತಿ ಕಾಂಗ್ರೆಸ್ ಶಾಸಕರನ್ನು ತನ್ನತ್ತ ಸೆಳೆದುಕೊಂಡಿತ್ತು.

ಬಿಆರ್‌ಎಸ್‌ನ ದಾನಂ ನಾಗೇಂದರ್ ಅವರು ಪಕ್ಷ ತ್ಯಜಿಸಿ ಕಾಂಗ್ರೆಸ್ ಸೇರಿ ಈಗಾಗಲೇ ಮೂರು ತಿಂಗಳಾಗಿದೆ. ಈ ಹಿನ್ನೆಲೆಯಲ್ಲಿ ಪಕ್ಷವು ಶಾಸಕರ ಅನರ್ಹತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಿದ್ದು, ಅದರಲ್ಲಿ ಇತರ ಪಕ್ಷಾಂತರಿ ಶಾಸಕರನ್ನೂ ಸೇರಿಸಲಾಗುವುದು ಎಂದು ಬಿಆರ್‌ಎಸ್ ಮುಖಂಡರೊಬ್ಬರು ಹೇಳಿದ್ದಾರೆ.

ಕೇಜ್ರಿವಾಲ್ ಜಾಮೀನಿನ ತಡೆಗೆ ಸುಪ್ರೀಂ ಕೋರ್ಟ್ ಅಚ್ಚರಿ • ಅರ್ಜಿ ವಿಚಾರಣೆ ನಾಳೆ

ಹೈಕೋರ್ಟ್ ಆದೇಶ 'ರೂಢಿಗತವಲ್ಲದ್ದು'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ತಮಗೆ ಮಂಜೂರು ಮಾಡಿದ ಜಾಮೀನಿಗೆ ಮಧ್ಯಂತರ ತಡೆ ಹೇರಿದ ದೆಹಲಿ ಹೈಕೋರ್ಟ್ ಆದೇಶದ ವಿರುದ್ಧ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿರುವ ಅರ್ಜಿಯ ತ್ವರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯನ್ನು ಜೂನ್ 26ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುವುದು ಎಂದು ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಎಸ್‌ವಿಎನ್ ಭಟ್ಟಿ ಅವರಿದ್ದ ಪೀಠ ಸೋಮವಾರ ತಿಳಿಸಿತು. ಇದರಿಂದ ಕೇಜ್ರಿವಾಲ್ ಅವರ ಬಿಡುಗಡೆ ಮತ್ತಷ್ಟು ತಡವಾಗಿದೆ.

ಆದರೆ, ಕೇಜ್ರಿವಾಲ್ ಅವರಿಗೆ ವಿಚಾರಣಾ ನ್ಯಾಯಾಲಯ ನೀಡಿದ್ದ ಜಾಮೀನಿಗೆ ತಡೆಯಾಜ್ಞೆ ನೀಡಿರುವ ದೆಹಲಿ ಹೈಕೋರ್ಟ್ ಆದೇಶ 'ರೂಢಿಗತವಲ್ಲದ್ದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಸಾಧಾರಣವಾಗಿ ಜಾಮೀನಿಗೆ ತಡೆಯಾಜ್ಞೆ ಕೋರಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಆದೇಶವನ್ನು ಕಾಯ್ದಿರಿಸುವುದಿಲ್ಲ. ಅರ್ಜಿಯ ವಿಚಾರಣೆ ನಡೆದ ದಿನವೇ ಆದೇಶವನ್ನೂ ನೀಡಲಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಮಾತ್ರ ಹೈಕೋರ್ಟ್ ರೂಢಿಗತವಲ್ಲದ ಹೆಜ್ಜೆ ಇಟ್ಟಿದೆ' ಎಂದು ಪೀಠವು ಅಭಿಪ್ರಾಯಪಟ್ಟಿತು.

ಜಾಮೀನಿಗೆ ಮಧ್ಯಂತರ ತಡೆಯಾಜ್ಞೆ ನೀಡಿರುವ ಹೈಕೋರ್ಟ್ ಆದೇಶವನ್ನು ರದ್ದುಪಡಿಸುವಂತೆ ಕೇಜ್ರಿವಾಲ್ ಪರ ವಕೀಲರಾದ ಅಭಿಷೇಕ್ ಸಿಂಘ್ವಿ ಅವರು ಪೀಠವನ್ನು ಕೇಳಿಕೊಂಡರು.

ಆದರೆ, ಹೈಕೋರ್ಟ್ ತನ್ನ ಆದೇಶ ಹೊರಡಿಸಿದ ಬಳಿಕವಷ್ಟೇ ಕೇಜ್ರಿವಾಲ್ ಅವರ ಅರ್ಜಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಪೀಠ ಹೇಳಿತು.

'ಈ ಹಂತದಲ್ಲಿ ನಾವು ಯಾವುದೇ ಆದೇಶವನ್ನು ನೀಡಿದರೆ ಅದು ಅವರ ನಿಲುವನ್ನು ತೀರ್ಮಾನಿಸಿಕೊಂಡಂತೆ ಆಗುತ್ತದೆ' ಎಂದು ಪೀಠವು ಸಿಂಘ್ವಿ ಅವರಿಗೆ ತಿಳಿಸಿತು.

'ಜಾಮೀನಿಗೆ ಮಧ್ಯಂತರ ತಡೆ ನೀಡಿರುವುದಕ್ಕೆ ಸಂಬಂಧಿಸಿದಂತೆ ಆದೇಶ ಕಾಯ್ದಿರಿಸಿರುವ ಹೈಕೋರ್ಟ್, ಜೂನ್ 24ರ ಒಳಗಾಗಿ ಅಭಿಪ್ರಾಯ ತಿಳಿಸಬೇಕು ಎಂದು ಹೇಳಿದೆ. ಆದ್ದರಿಂದ ಹೈಕೋರ್ಟ್ ಆದೇಶ ಬರುವವರೆಗೆ ಕಾಯೋಣ' ಎಂದಿತು.

ಜಾರಿ ನಿರ್ದೇಶನಾಲಯದ (ಇ.ಡಿ) ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು, ದೆಹಲಿ ಹೈಕೋರ್ಟ್ ಮಂಗಳವಾರ ತನ್ನ ಆದೇಶ ನೀಡಲಿದೆ ಎಂದು ಪೀಠಕ್ಕೆ ತಿಳಿಸಿದರು.

ದೆಹಲಿ ಹೈಕೋರ್ಟ್ ಆದೇಶ ಇಂದು

ವಿಚಾರಣಾ ನ್ಯಾಯಾಲಯವು ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿರುವುದಕ್ಕೆ ತಡೆ ಕೋರಿ, ಇ.ಡಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್ ಮಂಗಳವಾರ ತನ್ನ ತೀರ್ಪು ಪ್ರಕಟಿಸಲಿದೆ.

ಪೀಠವು ಮಂಗಳವಾರ ಮಧ್ಯಾಹ್ನ 2.30ಕ್ಕೆ ತೀರ್ಪು ಪ್ರಕಟಿಸಲಿದೆ. ವಿಚಾರಣಾ ನ್ಯಾಯಾಲಯವು ಹೊರಡಿಸಿದ್ದ ಆದೇಶಕ್ಕೆ ನ್ಯಾಯಮೂರ್ತಿಗಳಾದ ಸುಧೀರ್ ಕುಮಾರ್ ಜೈನ್ ಅವರ ರಜಾಕಾಲದ ಪೀಠವು ಜೂನ್ 21 ರಂದು ಮಧ್ಯಂತರ ತಡೆ ನೀಡಿತ್ತು, ಆದರ ತನ್ನ ಆದೇಶವನ್ನು ಕಾಯ್ದಿರಿಸಿತ್ತು.

'ತುರ್ತು ಪರಿಸ್ಥಿತಿ'ಗೆ 50 ವರ್ಷ



'ತುರ್ತು ಪರಿಸ್ಥಿತಿ'ಯು ಸ್ವತಂತ್ರ ಭಾರತದ ಇತಿಹಾಸದಲ್ಲೊಂದು ಕರಾಳವಾದ ಅಧ್ಯಾಯ. 1975ರ ಜೂನ್ 25ರಂದು ಅಂದಿನ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದರು. ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಸಲಹೆಯ ಆಧಾರದಲ್ಲಿ ರಾಷ್ಟ್ರಪತಿ ಅಂತಹ ಕ್ರಮ ತೆಗೆದುಕೊಂಡಿದ್ದರು. ತುರ್ತು ಪರಿಸ್ಥಿತಿ ಜಾರಿಯಾಗಿ ಈ ಜೂನ್ 25ಕ್ಕೆ 49 ವರ್ಷ ತುಂಬಲಿದ್ದು, 50ನೇ ವರ್ಷ ಆರಂಭವಾಗಲಿದೆ...

- ಚುನಾವಣೆಯಲ್ಲಿ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಆಯ್ಕೆಯನ್ನು ರದ್ದುಗೊಳಿಸಿ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶವನ್ನು, 1975ರ ಜೂನ್ 24ರಂದು ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು. ಅದರ ಮರುದಿನವೇ ರಾಷ್ಟ್ರಪತಿ ತುರ್ತು ಪರಿಸ್ಥಿತಿ ಘೋಷಿಸಿದ್ದರು
- ಆಂತರಿಕ ಕ್ಷೋಭೆ ಮತ್ತು ಬಾಹ್ಯ ದಾಳಿಯ ಕಾರಣದಿಂದ ದೇಶದ ಭದ್ರತೆಗೆ ಅಪಾಯ ಒದಗಿದಾಗ ತುರ್ತು ಪರಿಸ್ಥಿತಿ ಘೋಷಿಸಲು ಸಂವಿಧಾನವು ಅವಕಾಶ ಮಾಡಿಕೊಡುತ್ತದೆ. 1975ರ ಜೂನ್ 25ರಂದು ಆಂತರಿಕ ಕ್ಷೋಭೆಯ ಕಾರಣ ನೀಡಿ, ಸಂವಿಧಾನದ 352(1)ನೇ ವಿಧಿಯ ಅಡಿಯಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು. ಆದರೆ, ಅಂದಿನ ಸರ್ಕಾರದ ಈ ಕ್ರಮಕ್ಕೆ ದೇಶದಾದ್ಯಂತ ತೀವ್ರ ಟೀಕೆ ವ್ಯಕ್ತವಾಗಿತ್ತು
- ತುರ್ತು ಪರಿಸ್ಥಿತಿ ಜಾರಿಯಲ್ಲಿ ಇದ್ದಾಗ, ದೇಶದ ನಾಗರಿಕರ ಕೆಲವು ಮೂಲಭೂತ ಹಕ್ಕುಗಳು ಅಮಾನತಿಲ್ಲಿರುತ್ತವೆ. ಈ ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಪ್ರಧಾನವಾಗಿ ಹೇಬಿಯಸ್ ಕಾರ್ಪಸ್ ಅನ್ನು ಅಮಾನತಿನಲ್ಲಿ ಇರಿಸಲಾಗಿತ್ತು
- ಆ ಸಂದರ್ಭದ ಮತ್ತೊಂದು ಪ್ರಮುಖ ಘಟನೆ ಎಂದರೆ 'ಮಾಧ್ಯಮ ಸೆನ್ಸರ್‌ಶಿಪ್'. ಮಾಧ್ಯಮಗಳಿಗೆಂದೇ ಕೇಂದ್ರ ಸರ್ಕಾರವು ಒಂದು ಮಾರ್ಗಸೂಚಿಯನ್ನು ಜಾರಿ ಮಾಡಿತ್ತು. ಪ್ರಕಟಣೆಗೂ ಮುನ್ನ ಪತ್ರಿಕೆಗಳು, ಸರ್ಕಾರದ 'ಪತ್ರಿಕಾ ಸಲಹೆಗಾರ'ರಿಂದ ಅನುಮತಿ ಪಡೆಯಬೇಕಿತ್ತು
- ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಅಂದಿನ ವಿರೋಧ ಪಕ್ಷಗಳ ನಾಯಕರನ್ನು, ಸರ್ಕಾರದ ಟೀಕಾಕಾರನ್ನು ಸೆರೆಮನೆಗೆ ತಳ್ಳಲಾಗಿತ್ತು.

'...ತೆವಳಿದ ಮಾಧ್ಯಮ'

ಮಾಧ್ಯಮ ಸೆನ್ಸರ್‌ಶಿಪ್ ಕ್ರಮವನ್ನು ಆರಂಭದಲ್ಲಿ ಬಹುತೇಕ ಪತ್ರಿಕೆಗಳು ಕಟುವಾಗಿ ಟೀಕಿಸಿದವು. ಆದರೆ ನಂತರದ ದಿನಗಳಲ್ಲಿ ಅದನ್ನು ಪಾಲಿಸಿದವು ಎನ್ನಲಾಗುತ್ತದೆ. ಅಂದಿನ ವಿರೋಧ ಪಕ್ಷಗಳ ನಾಯಕರಲ್ಲಿ ಪ್ರಮುಖರಾಗಿದ್ದ ಎಲ್.ಕೆ.ಆಡ್ವಾಣಿ ಮತ್ತು ಅಟಲ್ ಬಿಹಾರಿ ವಾಜಪೇಯಿ ಅವರು ಇದನ್ನು ವಿಡಂಬನೆ ಮಾಡಿದ್ದರು.

ಈ ಇಬ್ಬರೂ ನಾಯಕರು, 'ಇಂದಿರಾ ಗಾಂಧಿ ಅವರು ಮಾಧ್ಯಮಗಳಿಗೆ ಬಾಗಲು ಹೇಳಿದ್ದರು. ಆದರೆ, ಅವು ತೆವಳಿದವು' ಎಂದಿದ್ದರು.

1977ರ ಮಾರ್ಚ್ **21**

ತುರ್ತು ಪರಿಸ್ಥಿತಿ ಹಿಂಪಡೆದ ದಿನ

ತಿದ್ದುಪಡಿ

ತುರ್ತು ಪರಿಸ್ಥಿತಿ ಅಂತ್ಯವಾದ ನಂತರ ನಡೆದ ಚುನಾವಣೆಯಲ್ಲಿ, ಸರ್ಕಾರ ಬದಲಾಗಿತ್ತು. 1978ರಲ್ಲಿ ಸಂವಿಧಾನದ 352ನೇ ವಿಧಿಗೆ ಕೆಲ ತಿದ್ದುಪಡಿ ತರಲಾಯಿತು. ತಿದ್ದುಪಡಿಗೂ ಮುನ್ನ 352ನೇ ವಿಧಿಯಲ್ಲಿ, ಆಂತರಿಕ ಕ್ಷೋಭೆಯ ಕಾರಣಕ್ಕೆ ತುರ್ತು ಪರಿಸ್ಥಿತಿ ಜಾರಿ ಮಾಡಬಹುದು ಎಂದು ಹೇಳಲಾಗಿತ್ತು. ತಿದ್ದುಪಡಿಯ ವೇಳೆ 'ಆಂತರಿಕ ಕ್ಷೋಭೆ' ಎಂಬುದನ್ನು ತೆಗೆದು ಹಾಕಲಾಯಿತು ಮತ್ತು ಅದರ ಬದಲಿಗೆ 'ಸಶಸ್ತ್ರ ಬಂಡಾಯ' ಎಂಬುದನ್ನು ಸೇರಿಸಲಾಯಿತು.

ಆಧಾರ: ಪಿಟಿಐ, ಬಿಬಿಸಿ

ಕೈ ವಿರುದ್ಧ ವಾಗ್ದಾಳಿ

ದೇಶದ ಪ್ರಜಾಪ್ರಭುತ್ವ ಸಂಪ್ರದಾಯಗಳಲ್ಲಿ ನಂಬಿಕೆ ಇರುವವರಿಗೆ ಜೂನ್ 25 ಮರೆಯಲಾಗದ ದಿನ. 50 ವರ್ಷಗಳ ಹಿಂದೆ ಇದೇ ದಿನ ಸಂವಿಧಾನ ತಿರಸ್ಕರಿಸಿ ತುರ್ತು ಪರಿಸ್ಥಿತಿ ಹೇರಲಾಯಿತು. ಸಂವಿಧಾನವನ್ನು ಛಿದ್ರಗೊಳಿಸಲಾಯಿತು, ದೇಶವನ್ನು ಸೆರೆಮನೆಯಾಗಿ ಪರಿವರ್ತಿಸಲಾಯಿತು ಹಾಗೂ ಪ್ರಜಾಪ್ರಭುತ್ವವನ್ನು ಹೇಗೆ ಸಂಪೂರ್ಣವಾಗಿ ನಿಗ್ರಹಿಸಲಾಯಿತು ಎಂಬುದನ್ನು ಹೊಸ ಪೀಳಿಗೆ ಎಂದಿಗೂ ಮರೆಯಬಾರದು. ಇದೊಂದು ಪ್ರಜಾಪ್ರಭುತ್ವಕ್ಕೆ ಕಪ್ಪು ಚುಕ್ಕೆ. ಇಂತಹ ವಿಕೃತಿ ಮತ್ತೆ ಸಂಭವಿಸಲು ಅವಕಾಶ ನೀಡುವುದಿಲ್ಲ ಎಂದು ದೇಶವಾಸಿಗಳು ಸಂಕಲ್ಪ ಮಾಡಬೇಕು.

ನರೇಂದ್ರ ಮೋದಿ, ಪ್ರಧಾನಿ

ಅವಧಿ ಮೀರಿ ತೆರೆದಿದ್ದ ಬಾರ್ 14 ಮಂದಿ ಬಂಧನ: ತನಿಖೆ

ಪ್ರಜಾವಾಣಿ ವಾರ್ತೆ/ಪಿಟಿಐ

ಪುಣೆ/ಮುಂಬೈ: ಪುಣೆಯ ಬಾರ್ ಒಂದು ಅನುಮತಿಯ ಅವಧಿಯನ್ನು ಮೀರಿ ಕಾರ್ಯಾಚರಣೆ ನಡೆಸುತ್ತಿದ್ದುದು ಪೊಲೀಸರ ಗಮನಕ್ಕೆ ಬಂದಿದ್ದು, ಎಂಟು ಮಂದಿಯನ್ನು ಬಂಧಿಸಿದ್ದಾರೆ. ಅಲ್ಲದೆ, ನಾಲ್ಕು ಮಂದಿ ಪೊಲೀಸರನ್ನು ಅಮಾನತು ಮಾಡಲಾಗಿದೆ. ಮಹಾರಾಷ್ಟ್ರದ ಅಬಕಾರಿ ಇಲಾಖೆ ಅಧಿಕಾರಿಗಳು ಬಾರ್‌ನ ಆರು ಮಂದಿ ಕೆಲಸಗಾರರನ್ನು (ವೇಯ್ಟರ್) ಬಂಧಿಸಿದ್ದಾರೆ.

ಫರ್ಗ್ಯುಸನ್ ಕಾಲೇಜು ರಸ್ತೆಯಲ್ಲಿ ಇರುವ 'ಲಿಕ್ವಿಡ್ ಲೀಷರ್ ಲೌಂಜ್' (ಎಲ್3) ಬಾರ್‌ನಲ್ಲಿ ಕೆಲವರು ಮಾದಕ ಪದಾರ್ಥವನ್ನು ಹೋಲುವ ವಸ್ತುಗಳನ್ನು ಹೊಂದಿರುವ ವಿಡಿಯೊ ಒಂದು ವ್ಯಾಪಕವಾಗಿ ಹರಿದಾಡಿದ ನಂತರ ಪೊಲೀಸರು ತನಿಖೆ ಆರಂಭಿಸಿದ್ದರು.

ಈ ಬಾರ್ ಭಾನುವಾರ ಮುಂಜಾನೆ 5 ಗಂಟೆಯವರೆಗೂ ಕಾರ್ಯಾಚರಣೆ ನಡೆಸುತ್ತಿತ್ತು ಎಂದು ಪೊಲೀಸರು ಹೇಳಿದ್ದಾರೆ. ಪುಣೆಯಲ್ಲಿ ನಸುಕಿನ 1.30ರವರೆಗೂ ಮದ್ಯ ಸರಬರಾಜು ಮಾಡಲು ಅವಕಾಶ ಇದೆ. ಆದರೆ ಈ ಬಾರ್‌ನಲ್ಲಿ ಈ ಸಮಯಮಿತಿಯನ್ನು ಮೀರಿ ಮದ್ಯ ಪೂರೈಸಲಾಗುತ್ತಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಪುಣೆಯ ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ಜೊತೆ ಮಾತುಕತೆ ನಡೆಸಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು, ಅಕ್ರಮವಾಗಿ ಕಾರ್ಯ ನಿರ್ವಹಿಸುತ್ತಿರುವ ಪಬ್‌ಗಳ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಸೂಚಿಸಿದ್ದಾರೆ. ಅಲ್ಲದೆ, ಕಟ್ಟಡ ನಿರ್ಮಾಣ ನಿಯಮಗಳನ್ನು ಉಲ್ಲಂಘಿಸಿರುವ ಎಲ್ಲ ಕಟ್ಟಡಗಳನ್ನು ನೆಲಸಮಗೊಳಿಸುವಂತೆ ಹೇಳಿದ್ದಾರೆ.

ಜನರ ಹರ್ಷ... ಮುಂಬೈನಲ್ಲಿರುವ ಮರೀನ್ ಡ್ರೈವ್‌ನಲ್ಲಿ ಸೋಮವಾರ ಸಮುದ್ರದಿಂದ ಚಿಮ್ಮಿದ ನೀರಿನ ಅಲೆಗಳಿಗೆ ಮೈಯೊಡ್ಡಿ ಪ್ರವಾಸಿಗರು ಸಂಭ್ರಮಿಸಿದರು –ಪಿಟಿಐ ಚಿತ್ರ

ರೈಲ್ವೆ ಇಲಾಖೆಗೆ ₹1 ಲಕ್ಷ ದಂಡ ವಿಧಿಸಿದ ಗ್ರಾಹಕ ಆಯೋಗ

ನವದೆಹಲಿ (ಪಿಟಿಐ): ಪ್ರಯಾಣಿಕರೊಬ್ಬರ ಬ್ಯಾಗ್ ಕಳ್ಳತನವಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಭಾರತೀಯ ರೈಲ್ವೆಗೆ ಗ್ರಾಹಕ ಆಯೋಗವು ₹1.08 ಲಕ್ಷ ದಂಡ ವಿಧಿಸಿದೆ.

2016ರ ಜನವರಿ ತಿಂಗಳಲ್ಲಿ ಮಾಲ್ವ ಎಕ್ಸ್‌ಪ್ರೆಸ್‌ನಲ್ಲಿ ಪ್ರಯಾಣಿಸಿದ್ದ ವ್ಯಕ್ತಿಯೊಬ್ಬರ ಬ್ಯಾಗ್ ಝಾನ್ಸಿ–ಗ್ವಾಲಿಯರ್ ಮಧ್ಯೆ ಕಳ್ಳತನವಾಗಿತ್ತು. ಅದರಲ್ಲಿ ₹80 ಸಾವಿರ ಮೌಲ್ಯದ ವಸ್ತುಗಳಿದ್ದವು. ಈ ಬಗ್ಗೆ ಅವರು ಗ್ರಾಹಕ ಆಯೋಗಕ್ಕೆ ದೂರು ನೀಡಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕ ಆಯೋಗವು, 'ತನ್ನ ವಸ್ತುಗಳ ಕಳ್ಳತನವಾಗಿರುವ ಬಗ್ಗೆ ದೂರುದಾರರು ರೈಲ್ವೆಗೆ ದೂರು ನೀಡಲು ಪ್ರಯತ್ನಿಸಿದ್ದರು. ಆದರೆ ಅವರು ಸಾಕಷ್ಟು ಮಾನಸಿಕ ವೇದನೆ ಅನುಭವಿಸಿದ್ದಾರೆ. ರೈಲ್ವೆ ಸಿಬ್ಬಂದಿ ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದ ಘಟನೆ ನಡೆದಿದೆ' ಎಂದು ತಿಳಿಸಿದೆ.

ಸಹಿ ನಕಲು: ಗೃಹ ಇಲಾಖೆಗೆ ವಂಚನೆ!

ಒಂದನೇ ಪುಟದಿಂದ...

ರಾಜಧಾನಿಯ ವ್ಯಾಪ್ತಿಯಲ್ಲಿ ಹಲವು ಖಾಸಗಿ ಭದ್ರತಾ ಏಜೆನ್ಸಿಗಳ ಮಾಲೀಕರು ಇದೇ ರೀತಿ ಗೃಹ ಇಲಾಖೆಯನ್ನು ವಂಚಿಸಿರುವ ಮಾಹಿತಿ ಇಲಾಖೆಗೆ ಲಭಿಸಿದೆ ಎಂದು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಖಾಸಗಿ ಭದ್ರತಾ ಏಜೆನ್ಸಿಗಳ ಮಾಲೀಕರು ಪಸಾರ ಕಾಯ್ದೆಯಡಿ ಗೃಹ ಇಲಾಖೆಯಿಂದ ಪರವಾನಗಿ ಪಡೆಯುವುದು ಕಡ್ಡಾಯ. ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳು, ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವವರಿಗೆ ಪರವಾನಗಿ ವಿತರಿಸುವಂತಿಲ್ಲ.

ಪ್ರಕರಣ ಬಯಲಾದದ್ದು ಹೇಗೆ?: ಭುವನೇಶ್ವರಿ ಎಂಟರ್‌ಪ್ರೈಸಸ್ ಮಾಲೀಕ ಗಿರೀಶ್ ವಿರುದ್ಧ ಆರಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ಇವೆ. ಅದೇ ವ್ಯಕ್ತಿ ಬಿಬಿಎಂಪಿಯ ದಕ್ಷಿಣ, ಪಶ್ಚಿಮ, ಮಹದೇವಪುರ, ಯಲಹಂಕ ಸೇರಿದಂತೆ ಹಲವು ವಲಯಗಳ ವಿವಿಧ ಸರ್ಕಾರಿ ಕಚೇರಿಗಳಿಗೆ ಭದ್ರತಾ ಸಿಬ್ಬಂದಿ ಒದಗಿಸುತ್ತಿದ್ದಾರೆ.

2023ರ ಆಗಸ್ಟ್ 24ರಂದು ಸಂಸ್ಥೆಯ ಪಸಾರ ಪರವಾನಗಿ ಅವಧಿ ಅಂತ್ಯಗೊಂಡಿತ್ತು. 2023ರ ನವೆಂಬರ್ 28ರಂದು ಗೃಹ ಇಲಾಖೆ ಹೊಸ ಪರವಾನಗಿ ನೀಡಿತ್ತು. ಕ್ರಿಮಿನಲ್ ಪ್ರಕರಣಗಳಿದ್ದರೂ ಪಸಾರ ಪರವಾನಗಿ ನೀಡಿರುವ ಕುರಿತು ಚಂದ್ರಶೇಖರ್ ಗೌಡ ಎಂಬುವವರು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ದೂರು ಸಲ್ಲಿಸಿದ್ದರು. ದೂರಿನ ಕುರಿತು ತನಿಖೆ ನಡೆಸುವಂತೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರಿಗೆ ಪತ್ರ ಬರೆದಿದ್ದರು.

ಗುಪ್ತಚರ ವಿಭಾಗದ ಡಿಸಿಪಿ ಪ್ರಾಥಮಿಕ ಹಂತದ ತನಿಖೆ ನಡೆಸಿ ವರದಿ ಸಲ್ಲಿಸಿದ್ದರು. ಪೊಲೀಸ್ ಐಟಿ ತಂತ್ರಾಂಶದ ಮೂಲಕ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಿಂದ ಪಡೆದಂತೆ ನಕಲಿ ಪರಿಶೀಲನಾ ಪ್ರಮಾಣಪತ್ರ ಸೃಜಿಸಿ, ಸ್ಪೆಷಲ್ ಬ್ರಾಂಚ್ ಎಸಿಪಿ ವಿಜಯ್ ಹಡಗಲಿ ಅವರ ಡಿಜಿಟಲ್ ಸಹಿಯನ್ನು ನಕಲು ಮಾಡಿ ಪಸಾರ ನಿಯಂತ್ರಣ ಪ್ರಾಧಿಕಾರಕ್ಕೆ ಸಲ್ಲಿಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಪ್ರಾಥಮಿಕ ತನಿಖೆ ವರದಿ ಆಧರಿಸಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುವಂತೆ ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ನಿರ್ದೇಶನ ನೀಡಿದ್ದರು. ಜೂನ್ 6ರಂದು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಲಾಗಿದೆ.

ಭುವನೇಶ್ವರಿ ಎಂಟರ್‌ಪ್ರೈಸಸ್‌ಗಾಗಿ ಎ.ವಿ. ಗಿರೀಶ್ ಎಂಬ ಹೆಸರಿನಲ್ಲಿ ಜಯನಗರ ಒಂದನೇ ಬ್ಲಾಕ್ ವಿಳಾಸ ನೀಡಿ 2018ರಲ್ಲಿ ಪಸಾರ ಪರವಾನಗಿ ಪಡೆಯಲಾಗಿತ್ತು. 2023ರಲ್ಲಿ ನಾಗರಬಾವಿ ವಿಳಾಸ ನೀಡಿ ಗಿರೀಶ ಎ.ವಿ. ಎಂಬ ಹೆಸರಿನಲ್ಲಿ ಪರವಾನಗಿ ಪಡೆಯಲಾಗಿದೆ. ಪೊಲೀಸ್ ಪರಿಶೀಲನಾ ಪ್ರಮಾಣಪತ್ರಕ್ಕೆ 15 ಅಂಕಿಗಳ ನೋಂದಣಿ ಸಂಖ್ಯೆಗಳಿರುತ್ತವೆ. ಆದರೆ, 2023ರಲ್ಲಿ ಗಿರೀಶ್ ಸಲ್ಲಿಸಿದ್ದ ನಕಲಿ ದಾಖಲೆಯಲ್ಲಿ 14 ಅಂಕಿಗಳ ನೋಂದಣಿ ಸಂಖ್ಯೆ ಮಾತ್ರ ಇರುವುದು ತನಿಖೆಯಲ್ಲಿ ಕಂಡುಬಂದಿದೆ.

ರಾಜ್ಯಸಭೆ ಸಭಾ ನಾಯಕರಾಗಿ ನಡ್ಡಾ

ನವದೆಹಲಿ (ಪಿಟಿಐ): ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಮತ್ತು ಕೇಂದ್ರ ಸಚಿವ ಜೆ.ಪಿ ನಡ್ಡಾ ಅವರನ್ನು ರಾಜ್ಯಸಭೆಯ ಸಭಾನಾಯಕರಾಗಿ ನೇಮಕ ಮಾಡಲಾಗಿದೆ ಎಂದು ಅಧಿಕೃತ ಮೂಲಗಳು ಸೋಮವಾರ ತಿಳಿಸಿವೆ.

ಪೀಯೂಷ್ ಗೋಯಲ್ ಅವರ ನಿರ್ಗಮನದಿಂದ ತೆರವಾಗಿರುವ ಸ್ಥಾನವನ್ನು ನಡ್ಡಾ ತುಂಬಲಿದ್ದಾರೆ. ಈಚೆಗೆ ನಡೆದ ಚುನಾವಣೆಯಲ್ಲಿ ಗೆದ್ದಿದ್ದ ಗೋಯಲ್ ಅವರು ಲೋಕಸಭಾ ಸದಸ್ಯರಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ನಡ್ಡಾ ಸೇರಿದಂತೆ ರಾಜ್ಯಸಭೆಯ 11 ಸದಸ್ಯರು ಕೇಂದ್ರ ಸಂಪುಟದಲ್ಲಿ ಇದ್ದಾರೆ.

ಮೃತರ ಸಂಖ್ಯೆ 58ಕ್ಕೆ ಏರಿಕೆ

ಚೆನ್ನೈ/ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ ನಡೆದ ವಿಷಯುಕ್ತ ಮದ್ಯ ಕುಡಿದ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 58ಕ್ಕೆ ಏರಿದೆ.

ಆರೋಗ್ಯ ಸಚಿವ ಮಾ ಸುಬ್ರಹ್ಮಣಿಯನ್, ದುರಂತದಲ್ಲಿ ಮೂವರು ಮಹಿಳೆಯರು, ಒಬ್ಬರು ಲಿಂಗತ್ವ ಅಲ್ಪಸಂಖ್ಯಾತರು ಸೇರಿ 58 ಜನ ಸತ್ತಿದ್ದಾರೆ ದೃಢಪಡಿಸಿದ್ದಾರೆ. ಒಟ್ಟು 219 ಜನರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಈ ದುರಂತದ ಕುರಿತು ಕಾಂಗ್ರೆಸ್ 'ಗಾಢ ಮೌನ' ವಹಿಸಿದೆ ಎಂದು ಆರೋಪಿಸಿ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಆದಿ ಕೈಲಾಸ ಯಾತ್ರೆ ತಾತ್ಕಾಲಿಕ ಸ್ಥಗಿತ

ಪಿಥೌರಗಢ (ಉತ್ತರಾಖಂಡ): ಇಲ್ಲಿಯ ಆದಿ ಕೈಲಾಸ ಮತ್ತು ಓಂ ಪರ್ವತ ಯಾತ್ರೆಯನ್ನು ಮುಂಗಾರು ಮಳೆಯ ಕಾರಣಕ್ಕಾಗಿ ಜೂನ್ 25ರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಈ ಯಾತ್ರೆಯು ಮೇ 13ರಿಂದ ಆರಂಭವಾಗಿತ್ತು. ಸುಮಾರು 600 ಯಾತ್ರಿಕರು ಭಾಗಿಯಾಗಿದ್ದರು.

ಎತ್ತರದ ಪ್ರದೇಶಗಳಲ್ಲಿ ಮಳೆಯಿಂದ ಯಾತ್ರಿಕರು ಪ್ರಯಾಸ ಪಡಬೇಕಾಗುತ್ತದೆ ಎಂಬ ಕಾರಣಕ್ಕೆ ಈ ನಿರ್ಧಾರ ತೆಗೆದುಕೊಳ್ಳಲಾಯಿತು. ಸೆಪ್ಟೆಂಬರ್‌ನಿಂದ ಯಾತ್ರೆಯ ಬುಕಿಂಗ್ ಪುನಃ ಆರಂಭವಾಗಲಿದೆ ಎಂದು ಕುಮೋನ್ ಮಂಡಲ್ ವಿಕಾಸ ನಿಗಮದ ಅಧಿಕಾರಿ ಎಲ್.ಎಂ. ತಿವಾರಿ ಹೇಳಿದರು.

ಮಣಿಪುರ: ಶಾಂತಿ ಮರುಸ್ಥಾಪನೆಗಾಗಿ ಮೆರವಣಿಗೆ

ಚುರಚಾಂದಪುರ/ ಇಂಫಾಲ್ (ಪಿಟಿಐ): ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವಿನ ಹಿಂಸಾಚಾರದಿಂದ ತತ್ತರಿಸಿರುವ ಮಣಿಪುರದಲ್ಲಿ ಶಾಂತಿ ಮರು ಸ್ಥಾಪಿಸಲು ಪರಿಹಾರ ಮಾರ್ಗಕ್ಕೆ ಒತ್ತಾಯಿಸಿ ಕುಕಿ ಸಮುದಾಯದ ಸಾವಿರಾರು ಮಂದಿ ವಿವಿಧ ಜಿಲ್ಲೆಗಳಲ್ಲಿ ಸೋಮವಾರ ಸರಣಿ ರ‍್ಯಾಲಿಗಳನ್ನು ನಡೆಸಿದರು.

ಈ ಪ್ರತಿಭಟನಾ ಮೆರವಣಿಗೆಯಲ್ಲಿ ಚುರಚಾಂದಪುರ, ಕಾಂಗ್‌ಪೋಕ್‌ಪಿ ಹಾಗೂ ತೆಂಗ್‌ನೌಪಾಲ್ ಜಿಲ್ಲೆಗಳ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ಸಮುದಾಯದ ಸಾವಿರಾರು ಮಂದಿ, ತಮ್ಮ ಸಮುದಾಯಕ್ಕೆ ಪ್ರತ್ಯೇಕ ಆಡಳಿತ ವ್ಯವಸ್ಥೆ ರೂಪಿಸಬೇಕು ಒತ್ತಾಯಿಸಿದರು. ಜೊತೆಗೆ ಭಾರತ–ಮ್ಯಾನ್ಮಾರ್ ಗಡಿಯಲ್ಲಿರುವ ಮುಕ್ತ ಸಂಚಾರ ವ್ಯವಸ್ಥೆ ರದ್ದತಿ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಬಳಿಕ ಸಮುದಾಯವು, ರಾಜ್ಯದಲ್ಲಿ ಶಾಂತಿ ಪುನರ್ ಸ್ಥಾಪನೆಯ ಕುರಿತಾದ ಪತ್ರವನ್ನು ಚುರಚಾಂದಪುರದ ಆಯುಕ್ತರ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸಲ್ಲಿಸಿತು.

ಅಸ್ಸಾಂನಲ್ಲಿ ತಗ್ಗಿದ ಪ್ರವಾಹ ಪರಿಸ್ಥಿತಿ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿಯು ಸೋಮವಾರ ಸ್ವಲ್ಪ ಮಟ್ಟಿಗೆ ಸುಧಾರಿಸಿದ್ದು, ಪ್ರಮುಖ ನದಿಗಳ ನೀರಿನ ಮಟ್ಟ ಇಳಿಕೆಯಾಗಿದೆ.

'ಪ್ರವಾಹದಿಂದಾಗಿ ರಾಜ್ಯದ 9 ಜಿಲ್ಲೆಗಳಲ್ಲಿನ 2.07 ಲಕ್ಷ ಜನ ನಿರಾಶ್ರಿತರಾಗಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕರೀಂಗಂಜ್‌ನಲ್ಲಿ ಕುಶಿಯಾರ ನದಿಯು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಕಳೆದ ಎರಡು ದಿನಗಳಿಂದ ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ ಇತರ ಪ್ರಮುಖ ನದಿಗಳ ನೀರಿನ ಮಟ್ಟ ಇಳಿಕೆಯಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಾರ್ಖಂಡ್: 7 ನಕ್ಸಲರ ಬಂಧನ

ಲಾತೇಹಾರ್ (ಜಾರ್ಖಂಡ್): ಮಾವೋವಾದಿ ಸಂಘಟನೆಯಾದ ತ್ರಿತೀಯ ಸಮ್ಮೇಳನ್ ಪ್ರಸ್ತುತಿ ಸಮಿತಿ (ಟಿಎಸ್‌ಪಿಸಿ)ಗೆ ಸೇರಿದ ಏಳು ಸದಸ್ಯರನ್ನು ಸೋಮವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು ದೇಸಿ ಗನ್‌ಗಳು, ಆರು ಕ್ಯಾಟ್ರಿಜ್‌ಗಳು, ನಾಲ್ಕು ಮೊಬೈಲ್ ಫೋನ್‌ಗಳು, ₹5,000 ನಗದು ಹಾಗೂ ಮೂರು ಮೋಟರ್‌ಸೈಕಲ್‌ಗಳನ್ನು ವಶಪಡಿಸಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಜಮ್ಮು–ಕಾಶ್ಮೀರ– ವ್ಯಕ್ತಿ ಬಂಧನ (ಮೆಂಧರ್/ ಜಮ್ಮು ವರದಿ: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಸಮೀಪ ಶಂಕಾಸ್ಪದ ಚಟುವಟಿಕೆಯಲ್ಲಿ ತೊಡಗಿದ್ದ ವ್ಯಕ್ತಿಯನ್ನು ಸೈನಿಕರು ಸೋಮವಾರ ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸೈನಿಕರು ಧರಿಸುವ ರೀತಿಯ ಶರ್ಟ್ ಮತ್ತು ಖಾಕಿ ಪ್ಯಾಂಟ್ ಧರಿಸಿದ್ದ ವ್ಯಕ್ತಿಯನ್ನು ಮಂಕೋಟೆ ಸೆಕ್ಟರ್ ಬಳಿ ಬಂಧಿಸಲಾಗಿದೆ. ಆತನ ಬಳಿ ಇದ್ದ ಬಟ್ಟೆಗಳ ರಾಶಿಯನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ ಆರೋಪಿಯು ಮಾನಸಿಕ ಅಸ್ವಸ್ಥನಂತೆ ಕಾಣುತ್ತಿದ್ದಾನೆ ಎಂದು ಅವರು ತಿಳಿಸಿದ್ದಾರೆ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
ಟೆಂಡರ್ ಪ್ರಕಟಣೆ ಸಂಖ್ಯೆ:
ಆರ್‌ಡಬ್ಲ್ಯೂಎಫ್/ಡಬ್ಲ್ಯೂ/24-25/03 ದಿನಾಂಕ: 22/06/2024
ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು ಕೆಳಕಂಡ ಕೆಲಸಕ್ಕೆ ವೆಬ್‌ಸೈಟ್ http://www.ireps.gov.in (WORKS) ಆನ್‌ಲೈನ್ ಮೂಲಕ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಟೆಂಡರ್ ಸಂಖ್ಯೆ : ಡಬ್ಲ್ಯೂ.496/ ಆರ್‌ಡಬ್ಲ್ಯೂಎಫ್/ವೈಎನ್‌ಕೆ/1031 ವಿವರ: ವೀಲ್ ಶಾಪ್ ಶಟ್‌ಡೌನ್ ಕಾಮಗಾರಿಗಳು 2024
ಅಂದಾಜು ಮೌಲ್ಯ : ರೂ.3,26,46,452/– ಟೆಂಡರ್‌ನ ಕೊನೆಯ ದಿನಾಂಕ & ಸಮಯ : 19/07/2024 ರಂದು 11.00 ಗಂಟೆಗೆ.
ಉಪ ಮುಖ್ಯ ಇಂಜಿನಿಯರ್

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಹಟ್ಟಿ – 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ.
ದೂರವಾಣಿ: 08537-275041,
CIN No. U85110KA1947SGC001321
ಕಾನೂನು ಸಲಹೆಗಾರರ (Legal Consultant) ನೇಮಕಾತಿ
ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೊಳಪಟ್ಟ ಉದ್ದಿಮೆಯಾಗಿದ್ದು, ಕಂಪನಿಯಲ್ಲಿ ಕಾನೂನು ಸಲಹೆಗಾರರಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಇಚ್ಛಿಸುವ ನಿವೃತ್ತ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದಂತೆ, ಅರ್ಹತೆ ಮತ್ತು ಇನ್ನಿತರ ವಿವರಗಳಿಗಾಗಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ವೆಬ್‌ಸೈಟ್ https://huttigold.karnataka.gov.in ನ್ನು ವೀಕ್ಷಿಸಿ, ನಿವೃತ್ತ ನ್ಯಾಯಾಧೀಶರು ದಿನಾಂಕ: 05.07.2024 ರಂದು ನೇರ ಸಂದರ್ಶನಕ್ಕೆ ಅಧಿಕೃತ ಕಛೇರಿ: 3ನೇ ಮಹಡಿ, ಕರ್ನಾಟಕ ಹೌಸಿಂಗ್ ಬೋರ್ಡ್ ಶಾಪಿಂಗ್ ಕಾಂಪ್ಲೆಕ್ಸ್, ರಾಷ್ಟ್ರೀಯ ಕ್ರೀಡಾ ಗ್ರಾಮ, ಕೋರಮಂಗಲ, ಬೆಂಗಳೂರು–560047 ಇಲ್ಲಿ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು
ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರು, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕೊಪ್ಪಳ
eepredkpl@gmail.com,
ಸಂ.ಪಂರಾಇಂ/ ವಿಕೊ/ತಾ.ಶಾ/ಕಿ.ಇಂ/ಟೆಂಡರ/2024–25/451 ದಿನಾಂಕ:24.06.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW– 1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹಗುತ್ತಿಗೆದಾರರಿಂದ "ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್" ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2022–23ನೇ ಸಾಲಿನ ನಬಾರ್ಡ್ ಆರ್.ಐ.ಡಿ.ಎಫ್–28 ಟ್ರಂಚ್ ಅನುದಾನದಡಿ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in ಮುಖಾಂತರ ಭಾಗವಹಿಸಬಹುದು.
ಸಾಮಾನ್ಯ ಸೂಚನೆಗಳು: 1)ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2)ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3)ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 08539–220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ http://eproc.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ: 02.01.2024 ರ ನಂತರ ದಿಂದ Download ಮಾಡಿಕೊಳ್ಳಬಹುದಾಗಿದೆ.
ಟೆಂಡರ್ ಪ್ರೋಸೆಸಿಂಗ್ ಶುಲ್ಕ: ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : 11 ತಿಂಗಳು. ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : 24.06.2024 ಸಮಯ 10.00 ಗಂಟೆ ನಂತರ ದಿಂದ 02.07.2024 ಸಮಯ 16.00 ಗಂಟೆವರೆಗೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : 24.06.2024 ಸಮಯ 10.00 ಗಂಟೆ ನಂತರ ದಿಂದ: 02.07.2024 ಸಮಯ 16.00 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ : 03.07.2024 ಕಚೇರಿ ಸಮಯದಲ್ಲಿ. ಕೆಡಬ್ಲ್ಯೂ 4 ರ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು
ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸಹಿ/–ಕಾರ್ಯನಿರ್ವಾಹಕ ಇಂಜಿನಿಯರರು ಪಂ.ರಾ.ಇಂ. ವಿಭಾಗ ಕೊಪ್ಪಳ.
ಡಿಐಪಿಆರ್/ಕೊಪ್ಪಳ/73/ಕೆಎಸ್ಎಂಸಿಎ/2024–25

ವೈದ್ಯಕೀಯ ಅಧೀಕ್ಷಕರವರ ಕಾರ್ಯಾಲಯ,
ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು–560 008.
ಪ್ರಕಟಣೆ ಸಂಖ್ಯೆ: ESIH/INR/DISP/BMW/06/2023-24/Call-2 Date: 18.06.2024
ಇ–ಟೆಂಡರ್ ಪ್ರಕಟಣೆ
Re-Tender is invited for Collection and Disposal of Bio-Medical Waste for One year on Rate Contract basis at 20 ESI Dispensaries attached to E.S.I. Hospital, Indiranagar, Bangalore-38, ಇಲ್ಲಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್ ವೇಳಾಪಟ್ಟಿ: 1) ಮುಂಗಡ ಠೇವಣಿ: ಒಟ್ಟು ಟೆಂಡರ್ ಮೌಲ್ಯದ 2.5% 2) ಟೆಂಡರ್ ನಮೂನೆ ವಿವರಗಳಿಗೆ ಹಾಗೂ ದಾಖಲಿಸಲು ಸಂಪರ್ಕಿಸಬಹುದಾದ ವೆಬ್‌ಸೈಟ್: https://kppp.karnataka.gov.in 3) ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 18.07.2024 ರ ಸಂಜೆ 4.00 ಗಂಟೆಯೊಳಗೆ. 4) ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 20.07.2024 ರ ಬೆಳಿಗ್ಗೆ 11.30 ಗಂಟೆಗೆ.
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು.
ಸಹಿ/– ವೈದ್ಯಕೀಯ ಅಧೀಕ್ಷಕರು, ಕಾ.ರಾ.ವಿ. ಆಸ್ಪತ್ರೆ, ಇಂದಿರಾನಗರ, ಬೆಂಗಳೂರು.
ವಾಸಾಸಂಇ/ವಾ.ಪ್ರ/485/ಎಂಎಎ/24–25

ವೈದ್ಯಕೀಯ ಅಧೀಕ್ಷಕರವರ ಕಾರ್ಯಾಲಯ,
ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು–560 008.
ಪ್ರಕಟಣೆ ಸಂಖ್ಯೆ: ESIH/INR/BMW/06/2023-24/Call-2 Date: 18.06.2024
ಇ–ಟೆಂಡರ್ ಪ್ರಕಟಣೆ
Sealed Re-Tender is invited for Collection and Disposal of Bio-Medical Waste and Supply of Plastic Bag for E.S.I. Hospital, Indiranagar, Bangalore-38, on one year Rate Contract basis for the year 2024-25.
ಟೆಂಡರ್ ವೇಳಾಪಟ್ಟಿ: 1) ಮುಂಗಡ ಠೇವಣಿ: ಒಟ್ಟು ಟೆಂಡರ್ ಮೌಲ್ಯದ 2.5% 2) ಟೆಂಡರ್ ನಮೂನೆ ವಿವರಗಳಿಗೆ ಹಾಗೂ ದಾಖಲಿಸಲು ಸಂಪರ್ಕಿಸಬಹುದಾದ ವೆಬ್‌ಸೈಟ್: https://kppp.karnataka.gov.in 3) ಟೆಂಡರ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕ: 18.07.2024 ರ ಸಂಜೆ 4.00 ಗಂಟೆಯೊಳಗೆ. 4) ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 20.07.2024 ರ ಬೆಳಿಗ್ಗೆ 11.30 ಗಂಟೆಗೆ.
ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದು.
ಸಹಿ/– ವೈದ್ಯಕೀಯ ಅಧೀಕ್ಷಕರು, ಕಾ.ರಾ.ವಿ. ಆಸ್ಪತ್ರೆ, ಇಂದಿರಾನಗರ, ಬೆಂಗಳೂರು.
ವಾಸಾಸಂಇ/ವಾ.ಪ್ರ/484/ಎಂಎಎ/24–25

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿ ನಗರ ಧಾರವಾಡ–580005 ಮಿಂಚಂಚೆ: spo@uasd.in
ದೂರವಾಣಿ ಸಂಖ್ಯೆ: 08336–2214384/231
ನಂ. ನಿ.ಅ/ಆಅ/ಟೆಂಡರ್.ಇಪ್ರೋಕ್–01/2024–25 ದಿನಾಂಕ :20.06.2024
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ವೈಜ್ಞಾನಿಕ ಉಪಕರಣಗಳು, ಕೃಷಿ ಸಲಕರಣೆಗಳು, ಇನ್ನಿತರ ಸಾಮಗ್ರಿಗಳ ಖರೀದಿಗಾಗಿ ಟೆಂಡರನ್ನು ಆಹ್ವಾನಿಸಿದ್ದು ನೋಂದಾಯಿತ ಅಧಿಕೃತ ಸರಬರಾಜುದಾರರು ಟೆಂಡರಿನಲ್ಲಿ ಭಾಗವಹಿಸಲು ಮುಂದೆ ಹೇಳಿದ ವೆಬ್‌ಸೈಟನ್ನು ಆನ್‌ಲೈನ ಮುಖಾಂತರ ಸಂಪರ್ಕಿಸುವುದು http://kppp.karnataka.gov.in (Goods Tender Category) ಹಾಗೂ ಟೆಂಡರ ದಸ್ತಾವೇಜುಗಳನ್ನು ಡೌನಲೋಡ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : 11.07.2024 (ಗುರುವಾರ) ಬೆಳಿಗ್ಗೆ 11.30 ಗಂಟೆಯವರೆಗೆ. ಟೆಂಡರ ವೇಳಾಪಟ್ಟಿಯ ಇತರ ಮಾಹಿತಿಯನ್ನು ಇ ಪೋರ್ಟಲ್‌ನಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ 0836–2214231 ದೂರವಾಣಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಟೆಂಡರಿನಲ್ಲಿ ಭಾಗವಹಿಸಲಿಚ್ಛಿಸುವ ಸರಬರಾಜುದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಬೆಂಗಳೂರು, ಇವರಲ್ಲಿ ನೋಂದಣಿ ಮಾಡಿಕೊಂಡಿರಬೇಕು. ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–46010000. ಭಾಗವಹಿಸುವ ಸರಬರಾಜುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು. ಬಿಡ್‌ದಾರರು ಟೆಂಡರಿನ ಒಟ್ಟಾರೆ ಅವಧಿಯಲ್ಲಿ ಆನ್‌ಲೈನ್ ಮೂಲಕ http://kppp.karnataka.gov.in ನಲ್ಲಿ ನೀಡಲಾಗುವ ತಿದ್ದುಪಡಿ / ಸೇರ್ಪಡೆ (ಇದ್ದಲ್ಲಿ) ತಪ್ಪದೇ ಗಮನಿಸುವುದು.
ಸಹಿ/– ಆಸ್ತಿ ಅಧಿಕಾರಿಗಳು ಕೃ.ವಿ.ವಿ. ಧಾರವಾಡ.
ವಾಸಾಸಂಇ/ಧಾರವಾಡ/ಕೆಎಸ್ಎಂಸಿಎ/80/2024–25

ಮಂಗಳೂರು ಮಹಾನಗರಪಾಲಿಕೆ
DMA/WORK INDENT No.15703/2024-25/EE3 ದಿನಾಂಕ: 24.06.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
E-PROCUREMENT OF KARNATAKA
2023-24ನೇ ಸಾಲಿನ 15ನೇ ಹಣಕಾಸು ಮುಕ್ತ ಅನುದಾನದಲ್ಲಿ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕಂಡತ್‌ಪಳ್ಳಿ ವೆಟ್‌ವೆಲ್ ಪುನರ್ ನಿರ್ಮಾಣ ಕಾಮಗಾರಿ (ಸಿವಿಲ್, ಇಲೆಕ್ಟ್ರೋಮೆಕ್ಯಾನಿಕಲ್) ಕಾಮಗಾರಿ ಅಂದಾಜುಪಟ್ಟಿ ಮೊತ್ತ ರೂ. 400.00 ಲಕ್ಷಗಳು WORK INDENT NO. 15703ಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 09.07.2024 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ ಮಂಗಳೂರು
DIPR / MNG /126/ MPL / 24-25

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು–560 009, ದೂರವಾಣಿ ಸಂ: 080–22876553, ಫ್ಯಾಕ್ಸ್: 080–22340139. ಇ–ಮೇಲ್: directorayush.eproc@gmail.com
ಸಂಖ್ಯೆ: ಆಯುಷ್/42/ಸಂಗ್ರಹಣಾ/2022-23 ದಿನಾಂಕ: 19-06-2024
ಇ–ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
2022–23ನೇ ಸಾಲಿಗೆ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯಡಿಯಲ್ಲಿ 100 ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಉಪಕರಣಗಳನ್ನು ಮತ್ತು ಪೀಠೋಪಕರಣಗಳನ್ನು ಇ–ಟೆಂಡರ್ ಮುಖಾಂತರ ಖರೀದಿಸಿ ಸರಬರಾಜು ಮಾಡುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ನಿಯಮಗಳನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಾಗಿ, ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ http://kppp.karnataka.gov.in ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ನೋಡಬಹುದಾಗಿದೆ.
ಇ–ಟೆಂಡರ್ ಪ್ರಕ್ರಿಯೆ: 1. ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ : 24–06–2024 ಸಂಜೆ 5.30 ಗಂಟೆಗೆ 2. ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 15–07–2024 ಸಂಜೆ 3.30 ಗಂಟೆಗೆ. 3. ಟೆಂಡರ್ ತೆರೆಯುವ (ತಾಂತ್ರಿಕ ಬಿಡ್) ದಿನಾಂಕ : 16–07–2024 ಸಂಜೆ 4.00 ಗಂಟೆಗೆ.
ಸಹಿ/– ಲೆಕ್ಕಾಧಿಕಾರಿಗಳು / ಅಧ್ಯಕ್ಷರು
DIPR/CP/RO543/AAPL/2024-25

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ
(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571402
ಸಂಖ್ಯೆ : ಎಂ.ಎಸ್.ಕೋ/ಎಮ್.ಎಮ್/ /2024–25 ದಿನಾಂಕ : 22–06–2024
ಇ–ಟೆಂಡರ್ ಪ್ರಕಟಣೆ
ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ ಈ ಕೆಳಕಂಡ ಕೆಲಸಕ್ಕೆ ಕಂಟ್ರಾಕ್ಟರ್/ಏಜೆನ್ಸಿದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಸಾಮಾಗ್ರಿಗಳ ವಿವರ	ಪರಿಮಾಣ	ಇ.ಎಂ.ಡಿ ಹಣ
1.	ವೇ–ಬ್ರಿಡ್ಜ್ ಗಳಲ್ಲಿರುವ ಅನಲಾಗ್ ಲೋಡ್ ಸೆಲ್‌ಗಳನ್ನು ತೆಗೆದು ಹೊಸ ಡಿಜಿಟಲ್ ಲೋಡ್ ಸೆಲ್‌ಗಳನ್ನು ಅಳವಡಿಸುವುದು	04 ಸಂಖ್ಯೆ	ರೂ. 30,000.00

ಇ–ಪ್ರಕ್ಯೂರ್‌ಮೆಂಟ್ ಟೆಂಡರನ್ನು www.eproc.karnataka.gov.in ಮುಖಾಂತರ ತುಂಬುವುದು.
1. ಟೆಂಡರನ್ನು ತುಂಬಲು ಕೊನೆಯ ದಿನಾಂಕ : 03–07–2024 ಸಂಜೆ 4.00 ರವರೆಗೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : 05–07–2024. 4) ವಾಣಿಜ್ಯ ಬಿಡ್ ತೆರೆಯುವ ದಿನಾಂಕ : 06–07–2024.
ಟೆಂಡರನ್ನು ಪ್ರಧಾನ ವ್ಯವಸ್ಥಾಪಕರ ಕಛೇರಿ, ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರಕ್ಯೂರ್‌ಮೆಂಟ್ ಸೆಲ್ 080–25501216/ 25501227 or 9448238763 ಸಂಪರ್ಕಿಸುವುದು. ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.
ಸಹಿ/– ಪ್ರಧಾನ ವ್ಯವಸ್ಥಾಪಕರು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಹೃದಯ ವಿಶಾಲವಾಗಿದ್ದರೆ ಮಾತ್ರ ಅಲ್ಲಿ ನಿಜವಾದ ಜ್ಞಾನ ಹೊಮ್ಮಲು ಸಾಧ್ಯ.

–ಸ್ವಾಮಿ ವಿವೇಕಾನಂದ

ನಿವೃತ್ತರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಯುವಸಮೂಹಕ್ಕೆ ಅವಕಾಶ ಕಲ್ಪಿಸಿ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 370ಕ್ಕೂ ಹೆಚ್ಚು ನಿವೃತ್ತ ಅಧಿಕಾರಿಗಳು, ನೌಕರರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಆದೇಶಿಸಿ ಆರು ತಿಂಗಳು ಕಳೆದರೂ ಅದು ಜಾರಿಯಾಗದಿರುವುದು ಆಡಳಿತ ಜಡ್ಡುಗಟ್ಟಿರುವುದಕ್ಕೆ ಜ್ವಲಂತ ನಿದರ್ಶನ. ಕರ್ತವ್ಯದಲ್ಲಿದ್ದಾಗ ಸಿಗುತ್ತಿದ್ದ ಸೌಲಭ್ಯಗಳನ್ನು ನಿವೃತ್ತಿಯ ನಂತರವೂ ಪಡೆಯಬೇಕು ಎಂಬ ಕಾರಣಕ್ಕೆ ಆಯಕಟ್ಟಿನ ಸ್ಥಾನವೊಂದನ್ನು ಪ್ರಭಾವಿಗಳು ಹುಡುಕಿಕೊಳ್ಳುವುದು ಅಥವಾ ತಾವೇ ಸೃಷ್ಟಿಸಿಕೊಳ್ಳುವುದು ಹೊಸದೇನಲ್ಲ. ನಿವೃತ್ತಿಗೆ ಕೆಲ ತಿಂಗಳು ಬಾಕಿ ಇರುವಾಗಲೇ ಆಯಕಟ್ಟಿನ ಹುದ್ದೆಯೊಂದಕ್ಕೆ ಹೊಂಚು ಹಾಕಿ, ಅದಕ್ಕಾಗಿ 'ಬಂಡವಾಳ'ವನ್ನೂ ತೊಡಗಿಸಿ, ನಿವೃತ್ತಿಯ ಕೊನೆಯ ದಿನಕ್ಕೆ ಮೊದಲೇ ಹುದ್ದೆ ಗಿಟ್ಟಿಸುವುದು ಕೆಲವರಿಗೆ ಕರಗತ. ಅದರಲ್ಲೂ ಐಎಎಸ್ ಶ್ರೇಣಿಯ ಅಧಿಕಾರಿಗಳು ಈ ವಿಷಯದಲ್ಲಿ ಹೆಚ್ಚು ಪರಿಣತರು. ನಿವೃತ್ತಿಯ ನಂತರವೂ ಕೆಲವರು 18–20 ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 75 ವರ್ಷ ಪೂರ್ಣಗೊಳಿಸಿದವರು 40ಕ್ಕೂ ಹೆಚ್ಚು ಮಂದಿ ಇದ್ದಾರೆ ಎಂಬ ಮಾಹಿತಿಯು ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯಕಾರ್ಯದರ್ಶಿಯವರು ಕಳುಹಿಸಿರುವ ಟಿಪ್ಪಣಿಯಲ್ಲೇ ಇದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಚೇರಿಯಲ್ಲಿ 82 ವರ್ಷದವರೊಬ್ಬರಿದ್ದಾರೆ ಎಂಬ ಮಾಹಿತಿಯನ್ನೂ ಪಟ್ಟಿ ಒಳಗೊಂಡಿದೆ. ಕೆಲವರು ತಿಂಗಳಿಗೆ ₹ 2.5 ಲಕ್ಷದವರೆಗೂ ವೇತನ ಪಡೆಯುತ್ತಿದ್ದಾರೆ.

ಹೊಸ ತಲೆಮಾರಿನವರನ್ನು ನೇಮಕ ಮಾಡಿಕೊಂಡರೆ ಆಡಳಿತಕ್ಕೆ ಆಧುನಿಕ ಸ್ಪರ್ಶ, ನವಚೈತನ್ಯ ಬರಬಹುದೆಂಬ ನಿರೀಕ್ಷೆ ಹೊಂದಬಹುದು

ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳನ್ನು ಗಿಟ್ಟಿಸಿಕೊಂಡಿರುವ ನಿವೃತ್ತರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಯವರು ಈ ವರ್ಷದ ಜನವರಿ 23 ಮತ್ತು ಫೆಬ್ರುವರಿ 22ರಂದು ಮುಖ್ಯ ಕಾರ್ಯದರ್ಶಿ ಅವರಿಗೆ ಟಿಪ್ಪಣಿ ಕಳುಹಿಸಿದ್ದರು. ಈ ಹುದ್ದೆಗಳಿಗೆ ಸೇವಾನಿರತರನ್ನೇ ನಿಯೋಜಿಸಿ ವರದಿ ಮಂಡಿಸುವಂತೆ ಸೂಚಿಸಿದ್ದರು. ಆದರೆ, ಜೂನ್ ಕಳೆಯುತ್ತಾ ಬಂದರೂ ಅನೇಕ ಇಲಾಖೆಗಳಲ್ಲಿ, ನಿಗಮ–ಮಂಡಳಿಗಳಲ್ಲಿ ಈ ಆದೇಶ ಜಾರಿಯೇ ಆಗಿಲ್ಲ. ಮುಖ್ಯಮಂತ್ರಿ ಎರಡು ಬಾರಿ ಟಿಪ್ಪಣಿ ಕಳುಹಿಸಿದರೂ ಅದು ಅನುಷ್ಠಾನ ಆಗಿಲ್ಲವೆಂದರೆ, ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹಿಡಿತ ತಪ್ಪಿದೆ, ಆಡಳಿತ ಸರಿದಾರಿಯಲ್ಲಿ ಸಾಗುತ್ತಿಲ್ಲ ಎಂದೇ ಭಾವಿಸಬೇಕಾಗುತ್ತದೆ.

2023ರಲ್ಲಿ ನಡೆದ ವಿಧಾನಸಭೆ ಚುನಾವಣೆ ಹೊತ್ತಿಗೆ ಆಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್, ಬಹುಮುಖ್ಯವಾಗಿ ಜನರ ಮುಂದಿಟ್ಟಿದ್ದ ವಿಷಯಗಳ ಪೈಕಿ ನಿರುದ್ಯೋಗ ಸಮಸ್ಯೆಯೂ ಒಂದು. ಉದ್ಯೋಗ ಸೃಷ್ಟಿಯಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಿರ್ಲಕ್ಷ್ಯ ತೋರಿದೆ ಎಂಬುದನ್ನು ಚುನಾವಣೆ ವೇಳೆ ಅಬ್ಬರದ ಧ್ವನಿಯಲ್ಲೇ ಕಾಂಗ್ರೆಸ್ ಪ್ರಸ್ತಾಪಿಸಿತ್ತು. ಖಾಲಿ ಇರುವ ಸರ್ಕಾರಿ ಹುದ್ದೆಗಳಲ್ಲಿ ಕನಿಷ್ಠ ಒಂದು ಲಕ್ಷ ಹುದ್ದೆಗಳನ್ನು ಒಂದು ವರ್ಷದೊಳಗೆ ಭರ್ತಿ ಮಾಡುವ ವಾಗ್ದಾನವನ್ನೂ ತನ್ನ ಪ್ರಣಾಳಿಕೆಯಲ್ಲಿ ನೀಡಿತ್ತು. ಈ ಭರವಸೆ ಕಾಲುಭಾಗದಷ್ಟೂ ಈಡೇರಿಲ್ಲ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳ ಪೈಕಿ 2.58 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಆಸಕ್ತಿಯೇ ಸರ್ಕಾರಕ್ಕೆ ಇದ್ದಂತಿಲ್ಲ. ಏತನ್ಮಧ್ಯೆ, ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಸರ್ಕಾರ, ಸಂಪನ್ಮೂಲ ಕ್ರೋಡೀಕರಣಕ್ಕೆ ವಿವಿಧ ಮಾರ್ಗಗಳನ್ನು ಹುಡುಕುತ್ತಿದೆ. ಇಂತಹ ಹೊತ್ತಿನೊಳಗೆ, ನಿವೃತ್ತರಿಗೆ ಮಣೆ ಹಾಕುವ ಉಸಾಬರಿ ಆರ್ಥಿಕವಾಗಿ ಹೊರೆ ಎಂಬುದನ್ನು ತಿಳಿಯಲು ವಿಶೇಷ ಜ್ಞಾನವೇನೂ ಬೇಕಿಲ್ಲ. ನಿವೃತ್ತಿ ನಂತರವೂ ಜಾತಿ, ಹಣ ಹೀಗೆ ನಾನಾ ಕಾರಣಗಳಿಂದ ವಿವಿಧ ಇಲಾಖೆಗಳಲ್ಲಿ ಕುಳಿತಿರುವವರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವ ಕೆಲಸ ಆಗಬೇಕಿದೆ. ನಿವೃತ್ತಿ ನಂತರ ಹಲವಾರು ವರ್ಷಗಳವರೆಗೂ ಹುದ್ದೆಯಲ್ಲಿ ಮುಂದುವರಿದವರಿಂದ ಆಡಳಿತಕ್ಕೆ ಚುರುಕು ಮತ್ತು ಹೊಸತನ ತರಲು ಸಾಧ್ಯವಾಗದು. ಸರ್ಕಾರಿ ಸೇವೆಯಲ್ಲಿದ್ದಾಗಲೇ ಇಲಾಖೆಯನ್ನು ಅಥವಾ ಕನಿಷ್ಠ ತಮ್ಮ ವಿಭಾಗವನ್ನು ಜನಸ್ನೇಹಿಯಾಗಿ, ಭ್ರಷ್ಟಾಚಾರರಹಿತವಾಗಿ ಮಾಡಲಾಗದವರು ನಿವೃತ್ತಿಯ ಬಳಿಕ ಇನ್ನೇನು ಮಾಡಲು ಸಾಧ್ಯ? ಅಂತಹವರನ್ನೆಲ್ಲ ಮನೆಗೆ ಕಳುಹಿಸಿ, ಅವರ ಜಾಗಕ್ಕೆ ಹೊಸಬರನ್ನು ನೇಮಕ ಮಾಡಿಕೊಳ್ಳುವ ಕೆಲಸ ತುರ್ತಾಗಿ ಆಗಬೇಕಾಗಿದೆ. ಹೊಸ ತಲೆಮಾರಿನವರನ್ನು ನೇಮಕ ಮಾಡಿಕೊಂಡರೆ ಆಡಳಿತಕ್ಕೆ ಆಧುನಿಕ ಸ್ಪರ್ಶ, ನವಚೈತನ್ಯ ಬರಬಹುದು ಎಂಬ ನಿರೀಕ್ಷೆ ಹೊಂದಬಹುದು. ಸುದೀರ್ಘ ಅವಧಿಯ ಆಡಳಿತದ ಅನುಭವ ಇರುವ ಮುಖ್ಯಮಂತ್ರಿಯವರು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾದರೆ ಯುವಕರಿಗೆ ಉದ್ಯೋಗವೂ ಲಭಿಸುತ್ತದೆ, ಆಡಳಿತವೂ ಚುರುಕಾಗುತ್ತದೆ. ಅಲ್ಲದೆ, ವೆಚ್ಚಕ್ಕೆ ಕಡಿವಾಣವೂ ಬೀಳುತ್ತದೆ. ಆ ವಿವೇಕಯುತ ಮಾರ್ಗದಲ್ಲಿ ಹೆಜ್ಜೆ ಇಡುವ ಇಚ್ಛಾಶಕ್ತಿಯನ್ನು ತೋರಬೇಕಿದೆ.

ಸ್ವಪ್ರಶಂಸೆಯಿಂದ ಸ್ವವಿಮರ್ಶೆಯೆಡೆಗೆ ಚಲಿಸಲು ಕನ್ನಡ ಸಾಹಿತ್ಯವಲಯಕ್ಕಿದು ಸಕಾಲ

ಸಾಹಿತಿಗಳಿಗಿದು ಸ್ವವಿಮರ್ಶೆಯ ಸಮಯ

ಪಡಸಾಲೆ

ರಘುನಾಥ ಚ.ಹ.

ಕನ್ನಡ ಸಾಹಿತ್ಯಕ್ಕೆ ಇತ್ತೀಚಿನ ಮಹತ್ವದ ಕೊಡುಗೆ ಯಾವುದು? ಆ ಕೀರ್ತಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಲ್ಲಬೇಕು. 'ಸಾಹಿತಿಗಳೂ ರಾಜಕಾರಣಿಗಳೇ, ಅವರೂ ರಾಜಕಾರಣಕ್ಕೆ ಬರಬಹುದು' ಎನ್ನುವ ಅವರ ಮಾತು ಬರೀ ಒಂದು ಹೇಳಿಕೆಯಲ್ಲ; ಅದು, ಸಮಕಾಲೀನ ಸಾಹಿತ್ಯ ಸಂದರ್ಭದ ಬಗ್ಗೆ ಜನಸಾಮಾನ್ಯರಲ್ಲಿ ಇರುವ ಭಾವನೆಯ ಅಭಿವ್ಯಕ್ತಿ ಹಾಗೂ ಸಾಹಿತ್ಯ–ಸಂಸ್ಕೃತಿಯ ವಲಯಕ್ಕೆ ಒದಗಿಬಂದಿರುವ ಆತ್ಮಾವಲೋಕನದ ಒಂದು ಅವಕಾಶ. ದುರದೃಷ್ಟದ ಸಂಗತಿಯೆಂದರೆ, ಉಪಮುಖ್ಯಮಂತ್ರಿ ಹೇಳಿಕೆಗೆ ಕನ್ನಡ ಸಾಹಿತ್ಯಲೋಕ ಧನ್ಯವಾದ ಹೇಳುವ ಬದಲು ಅಪಮಾನ ಆಯಿತೆನ್ನುವ ರೀತಿಯಲ್ಲಿ ಸಿಡಿದೆದ್ದು ನಿಂತಿದೆ.

ಸಾಹಿತ್ಯ–ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ ಅಕಾಡೆಮಿ–ಪ್ರಾಧಿಕಾರಗಳ ಅಧ್ಯಕ್ಷರ ಸಭೆಯನ್ನು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ನಡೆಸಿದ ಉಪಮುಖ್ಯಮಂತ್ರಿ ಅವರ ಕ್ರಮ ಸಾಹಿತ್ಯವಲಯದ ಒಂದು ಗುಂಪಿನ ಆಕ್ಷೇಪ, ಆಕ್ರೋಶಕ್ಕೆ ಕಾರಣವಾಗಿದೆ. ಸಭೆ ನಡೆಸಿದ್ದು ಮಾತ್ರವಲ್ಲ, ಅಕಾಡೆಮಿ–ಪ್ರಾಧಿಕಾರಗಳು ಸ್ವಾಯತ್ತ ಸಂಸ್ಥೆಗಳಲ್ಲ ಹಾಗೂ ಅವುಗಳ ಅಧ್ಯಕ್ಷ ಸ್ಥಾನದಲ್ಲಿರುವವರು ಅಂಬೆಗಾಲಿನ ರಾಜಕಾರಣಿಗಳೂ ಹೌದು ಎನ್ನುವ ಅರ್ಥದಲ್ಲಿ ಹೇಳಿರುವ ಉಪಮುಖ್ಯಮಂತ್ರಿಯವರ ಮಾತು ಸಾಹಿತ್ಯದ ಸ್ವಾಯತ್ತೆಯ ಅಪೇಕ್ಷೆಯಿಂದ ಖಂಡಿತವಾಗಿಯೂ ಆಕ್ಷೇಪಾರ್ಹವೇ. ಆದರೆ, ಹೀಗೆ ಆಕ್ಷೇಪಿಸುವವರು ಸಾಹಿತ್ಯ ಕ್ಷೇತ್ರದ ಸ್ವಾಯತ್ತತೆ ಹಾಗೂ ಘನತೆ ಈಗ ಎಷ್ಟರಮಟ್ಟಿಗೆ ಉಳಿದಿದೆ ಎನ್ನುವುದನ್ನೂ ಗಮನಿಸಬೇಕು. ಸಾಹಿತಿಗಳ ಮರ್ಮಸ್ಥಾನಕ್ಕೆ ಕೈ ಹಾಕಿರುವ ವ್ಯಕ್ತಿಯನ್ನು ಟೀಕಿಸುವಾಗ, ಅದಕ್ಕೆ ಅವಕಾಶ ಮಾಡಿಕೊಟ್ಟಿರುವ ವ್ಯಕ್ತಿತ್ವಗಳ ಬಗ್ಗೆ ಯೋಚಿಸದೇ ಹೋದರೆ ನಮ್ಮ ಟೀಕೆಗಳು ಧ್ವನಿಯಿಲ್ಲದ ಶಬ್ದಗಳಾಗಿ ಉಳಿದುಬಿಡುತ್ತವೆ.

ತುರಿಕೆಯ ಸುಖಕ್ಕಾಗಿ ಕೆರೆದುಕೊಂಡು ಗಾಯ ಮಾಡಿಕೊಂಡ ನಂತರವೂ ಮತ್ತೆ ಮತ್ತೆ ತುರಿಸಿಕೊಂಡಂತೆ, ಕಳೆದ ಎರಡು ದಶಕಗಳ ಅವಧಿಯಲ್ಲಿ ಸಾಹಿತ್ಯ ಕ್ಷೇತ್ರ ತನ್ನನ್ನು ತಾನು ಮತ್ತೆ ಮತ್ತೆ ಗಾಸಿಗೊಳಿಸಿಕೊಂಡಿದೆ, ವಿಘಟನೆಗೆ ಒಳಪಡಿಸಿಕೊಂಡಿದೆ. ಅಂಥ ಗಾಯಗಳಲ್ಲೊಂದು 'ಬಲಪಂಥೀಯ ಸಾಹಿತ್ಯ' ಎನ್ನುವ ಗುಂಪನ್ನು ಬಲಪಡಿಸಿರುವುದು. ಕನ್ನಡ ಸಾಹಿತ್ಯದಲ್ಲಿ ಬಲಪಂಥದ ಕೀರಲು ದನಿಯೊಂದು ಮೊದಲಿನಿಂದಲೂ ಇತ್ತು. ಗುಣಮಟ್ಟದಲ್ಲಾಗಲೀ ಪರಿಣಾಮದಲ್ಲಾಗಲೀ ಗಮನಸೆಳೆಯದ ಆ ಲೇಖಕವರ್ಗ ಕನ್ನಡ ಸಾಹಿತ್ಯದ ಪ್ರಧಾನಧಾರೆಯೊಳಗೇ ಒಂದು ಮಗ್ಗುಲಲ್ಲಿತ್ತು ಹಾಗೂ ತೀರಾ ಇತ್ತೀಚಿನವರೆಗೆ ಅದಕ್ಕೆ ಯಾವ ಬಗೆಯ ಮಹತ್ವವೂ ಇರಲಿಲ್ಲ. ಯಂಡಮೂರಿ ವೀರೇಂದ್ರನಾಥ್ ಅವರಂತೆ ಜನಪ್ರಿಯ ಕಾದಂಬರಿಕಾರರಾಗಿಯಷ್ಟೇ ಚಾಲ್ತಿಯಲ್ಲಿದ್ದ, ಸಾಹಿತ್ಯಿಕವಾಗಿ ಹಾಗೂ ಸಾಮಾಜಿಕವಾಗಿ ಯಾವ ಮಹತ್ವವೂ ಇಲ್ಲದ ಬರಹಗಾರರನ್ನು ಸಿದ್ಧಾಂತದ ಕಾರಣಕ್ಕಾಗಿ ನಿರಂತರವಾಗಿ ದೂರೀಕರಿಸಿ ಅವರನ್ನು ರಾಜಕೀಯಪ್ರೇರಿತ ಓದುಗ ವಲಯವೊಂದರ ಡಾರ್ಲಿಂಗ್ ಮಾಡಲಾಯಿತು. ಹುತಾತ್ಮರ ಪೋಷಾಕು ತೊಟ್ಟ ಆ ಕಾದಂಬರಿಕಾರರಿಗೆ ಬದಲಾದ ರಾಜಕೀಯ ಸನ್ನಿವೇಶ ಸರ್ಕಾರಿ ಮನ್ನಣೆಯನ್ನೂ ಸಾಮಾಜಿಕ ಪ್ರಭೆಯನ್ನೂ ದೊರಕಿಸಿಕೊಟ್ಟಿತು. ಆವರೆಗೆ ಚಾಲ್ತಿಯಲ್ಲಿದ್ದ ಪ್ರತಿಭೆ, ವಿದ್ವತ್ತು, ಸಾಮಾಜಿಕ ನ್ಯಾಯ ಎನ್ನುವ ಮಾನದಂಡಗಳು ಹಿನ್ನೆಲೆಗೆ ಸರಿದು, ಸಿದ್ಧಾಂತದ ಬಲದಿಂದಲೇ ಸಾಹಿತಿಗಳ ಹೆಸರಿನ ಕೆಲವರು ಚಲಾವಣೆಗೆ ಬಂದರು. ಇದಕ್ಕೆ ತಕ್ಕಹಾಗೆ, ಕನ್ನಡದ ಓದುಗವರ್ಗವೂ ಒಡೆದುಹೋಯಿತು; ಒಂದು ವರ್ಗದ ಓದುಗ ಇನ್ನೊಂದು ವರ್ಗದ ಲೇಖಕನನ್ನು ಓದದಿರುವ ಅಥವಾ ನಿರಾಕರಿಸುವ ಪರಿಸ್ಥಿತಿ ಸೃಷ್ಟಿಯಾಯಿತು. ಮನಸ್ಸುಗಳನ್ನು ಬೆಸೆಯಬೇಕಾದ ಸಾಹಿತ್ಯದ ಆಶಯ ಸೀಮಿತಗೊಂಡು, 'ಒಂದು ವರ್ಗದ ಮನಸ್ಸುಗಳನ್ನು ಮಾತ್ರ ಬೆಸೆಯುವ ಸಾಹಿತ್ಯ' ಎನ್ನುವ ಚೌಕಟ್ಟು ರೂಪುಗೊಂಡಿತು. ಅಖಂಡ ಕನ್ನಡ ಓದುಗ ವರ್ಗದ ಗೌರವಕ್ಕೆ ಪಾತ್ರವಾಗುವ ಕೃತಿ ರೂಪುಗೊಳ್ಳಲಿಕ್ಕೆ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಇಂದಿನ 'ಒಡಕಲು ಕರ್ನಾಟಕ'ದ್ದು. ಈ ಹೊತ್ತಿನ ಒಳ್ಳೆಯ ಅಥವಾ ಜನಪ್ರಿಯ ಪುಸ್ತಕ ಎನ್ನುವುದನ್ನು ನಿರ್ದಿಷ್ಟ ಗುಂಪಿನ ಹಿನ್ನೆಲೆಯಲ್ಲಿಯಷ್ಟೇ ಗುರ್ತಿಸಬೇಕಾಗಿದೆ.

ಬರಹಗಾರನ ರಾಜಕೀಯ ಪ್ರಜ್ಞೆ ಯಾವ ರೀತಿಯದಾಗಿರಬೇಕು ಎನ್ನುವುದಕ್ಕೆ ನಿದರ್ಶನದಂತೆ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಇಡೀ ಕನ್ನಡ ಲೇಖಕವರ್ಗ ಆಡಳಿತ ವರ್ಗದ ವಿರುದ್ಧ ನಿಂತಿತ್ತು. ಆ ಒಕ್ಕೊರಲನ್ನು ಇಂದಿನ ಇಕ್ಕಟ್ಟಿನ ಸಂದರ್ಭದಲ್ಲಿ ಕಾಣಲು ಸಾಧ್ಯವೆ?

ಸಾಹಿತ್ಯ ಕ್ಷೇತ್ರದಲ್ಲಿನ ಒಡಕಲು ಬಿಂಬಗಳು ಸಾಂಸ್ಕೃತಿಕ ವಲಯಕ್ಕೆ ಹಾನಿ ಮಾಡಿದುದರ ಜೊತೆಗೆ ಸಾಮಾಜಿಕ ಸ್ವಾಸ್ಥ್ಯಕ್ಕೂ ಧಕ್ಕೆಯುಂಟು ಮಾಡಿದವು. ಲೇಖಕರ ಗುಂಪುಗಾರಿಕೆಯಿಂದಾಗಿ ಸಾಹಿತ್ಯ–ಸಾಹಿತಿಯ ಮೇಲಿದ್ದ ಸಮಾಜದ ವಿಶ್ವಾಸಕ್ಕೆ ಕುಂದುಂಟಾಯಿತು. ರಾಜಕಾರಣದ ನಡೆಗಳನ್ನು ನಿರ್ದೇಶಿಸಲು ಹಾಗೂ ವರ್ತಮಾನದ ಬಿಕ್ಕಟ್ಟುಗಳನ್ನು ಪರಿಶೀಲಿಸಲು ತಾತ್ವಿಕ ಮಾದರಿಗಳನ್ನು ಸೃಷ್ಟಿಸಿಕೊಡುವ ನಿಟ್ಟಿನಲ್ಲಿ ಲೇಖಕನೊಬ್ಬನ ಪ್ರತಿಕ್ರಿಯೆಯನ್ನು ಗೌರವ ಹಾಗೂ ಕುತೂಹಲದಿಂದ ಗಮನಿಸುತ್ತಿದ್ದ ಸಮಾಜ, ಬರಹಗಾರರು ವರ್ತಮಾನದ ಬಿಕ್ಕಟ್ಟುಗಳ ಬಗ್ಗೆ ಮಾತನಾಡುವುದನ್ನು ಗುಮಾನಿಯಿಂದ ನೋಡುವಂತಾಯಿತು. ಈ ಗುಮಾನಿ ಅಸಹನೆಯ ರೂಪವನ್ನೂ ತಾಳಿ, ಲೇಖಕರ ಬಾಯಿಮುಚ್ಚಿಸುವ ಕೆಲಸವೂ ನಡೆಯಿತು, ನಡೆಯುತ್ತಿದೆ. ಗುಂಪೊಂದರ ಅಸಹನೆಗೆ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಬರಹಗಾರರು ಜೀವ ಕಳೆದುಕೊಂಡರು. ಯಾವುದೇ ಸಮಾಜಕ್ಕೆ ಕಳಂಕಪ್ರಾಯವಾದ ಇಂಥ ಘಟನೆಗಳು ರೂಪುಗೊಳ್ಳುವಲ್ಲಿ ಸಾಹಿತ್ಯದ ಎಲ್ಲ ಗುಂಪುಗಳ ಪಾತ್ರವೂ ಇದೆ. ಆದರೆ, ಹೊಣೆಗಾರಿಕೆಯನ್ನು ಇನ್ನೊಬ್ಬರಿಗೆ ವರ್ಗಾಯಿಸುವ ಆಟದಲ್ಲಿ ನಿರತರಾದ ಲೇಖಕರು ಮತ್ತೊಂದು ಗುಂಪಿನ ಕುರಿತು ಟೀಕೆ ಟಿಪ್ಪಣಿಗಳಲ್ಲಿ ಆಸಕ್ತರೇ ಹೊರತು, ಸ್ವವಿಮರ್ಶೆಯಿಂದ ದೂರ ಉಳಿದಿದ್ದಾರೆ.

ನಾಡಿಗೆ ನೈತಿಕ–ತಾತ್ವಿಕ ಮಾದರಿಗಳನ್ನು ಸೃಷ್ಟಿಸಿಕೊಡುವ ಹೊಣೆಗಾರಿಕೆಯಿಂದ ಸಾಹಿತ್ಯಕ್ಷೇತ್ರ ದೂರವಾದಂತೆಲ್ಲ, ಆ ಸ್ಥಾನದಲ್ಲಿ ಮಠಗಳು, ಜಾತೀಯ ಸಂಘಟನೆಗಳು ಕಾಣಿಸಿಕೊಂಡಿದ್ದು ಆಧುನಿಕ ಕರ್ನಾಟಕದ ಬಹು ದೊಡ್ಡ ವ್ಯಂಗ್ಯ. ಈ ಸ್ಥಿತ್ಯಂತರಕ್ಕೂ ರಾಜಕೀಯ ಹಾಗೂ ಸಾಮಾಜಿಕ ಭ್ರಷ್ಟತೆಯ ಕಾರಣದಿಂದಾಗಿ ಕರ್ನಾಟಕ ವಿಶ್ವಮಟ್ಟದಲ್ಲಿ ಸುದ್ದಿಯಾಗುತ್ತಿರುವುದಕ್ಕೂ ಸಂಬಂಧವಿದೆ.

ಸಾಮಾಜಿಕ ಸಂವೇದನೆಗಳನ್ನು ರೂಪಿಸಬೇಕಾಗಿದ್ದ ಸಾಹಿತ್ಯಕ್ಷೇತ್ರವೇ ಎಷ್ಟರಮಟ್ಟಿಗೆ ಜಡಗೊಂಡಿದೆ ಎಂದರೆ, ಜನರ ವಿಶ್ವಾಸವನ್ನು ಮರಳಿ ಪಡೆಯುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ನಡೆಸುವ ಅಗತ್ಯವೂ ಅದಕ್ಕೆ ಮುಖ್ಯವೆನ್ನಿಸಿದಂತಿಲ್ಲ. ರಾಜಕಾರಣಿಗಳ ವಿಶ್ವಾಸ ಪಡೆಯಲು ಕೆಲವು ಬರಹಗಾರರು ತಮ್ಮ ಪ್ರತಿಭೆಯನ್ನೆಲ್ಲ ಧಾರೆಯೆರೆದಿದ್ದು, ಅವರನ್ನು ಮತ್ತೆ ಕೆಲವರು ಅನುಸರಿಸುತ್ತಾ ಇಲ್ಲವೇ ದೂರುತ್ತಾ ತಾವೂ 'ಅರೆ ರಾಜಕಾರಣ'ದ ದಾಳಗಳಾಗಿ ಬದಲಾಗಿದ್ದಾರೆ. ಮತ್ತೆ ಕೆಲವರು, ಯಾರು ಯಾವ ಕಾರ್ಯಕ್ರಮಕ್ಕೆ ಹೋಗಬೇಕು ಹೋಗಬಾರದು ಎನ್ನುವುದನ್ನು ನಿರ್ಣಯಿಸುವ ಯಜಮಾನಿಕೆಯನ್ನು ತಮ್ಮಷ್ಟಕ್ಕೆ ತೆಗೆದುಕೊಂಡಿದ್ದಾರೆ. ಕನ್ನಡ ಓದುಗ ಸಮುದಾಯ ಈವರೆಗೆ ಮಾತೃ ಮಾದರಿಗಳಂತೆ ನಂಬಿಕೊಂಡು ಬಂದಿದ್ದ ರೂಪಕಗಳನ್ನು ಒಡೆಯುವ ಪ್ರಯತ್ನವೂ ನಡೆದಿದೆ. ಯಾವುದೇ ಹೊಸ ಮಾದರಿಗಳನ್ನು ಸೃಷ್ಟಿಸುವ ಉತ್ತರದಾಯಿತ್ವವಿಲ್ಲದೆ ನಡೆಸುವ ಭಂಜನ ಪ್ರಕ್ರಿಯೆಯೂ ಸಾಹಿತ್ಯವಲಯದ ಬಗ್ಗೆ ಸಹೃದಯರ ವಿಶ್ವಾಸ ಕುಂದಲಿಕ್ಕೆ ಕಾರಣಗಳಲ್ಲೊಂದು.

ಸಾಹಿತಿಯೊಬ್ಬ ರಾಜಕೀಯ ವಿದ್ಯಮಾನಗಳಲ್ಲಿ ಆಸಕ್ತನಾಗುವುದು ತಪ್ಪೇನೂ ಅಲ್ಲ. ಆದರೆ, ಆ ತೊಡಗಿಸಿಕೊಳ್ಳುವಿಕೆ ಸಾಹಿತಿಯೇ ರಾಜಕಾರಣಿಯಾಗುವ ಮಟ್ಟಿಗೆ ತೀವ್ರವಾಗಬಾರದು. ಕನ್ನಡದ ಸಾಹಿತ್ಯ ಪರಂಪರೆಯ ರಾಜಕಾರಣ ಗುರ್ತಿಸಿಕೊಂಡಿರುವುದು ಪ್ರತಿಪಕ್ಷಗಳ ಸ್ಥಾನದಲ್ಲಿ. ಆದರೆ, ಈ ಹೊತ್ತಿನ ಸಾಹಿತ್ಯಿಕ ರಾಜಕಾರಣದ್ದು ಅಧಿಕಾರದೊಂದಿಗಿನ ಅನುಸಂಧಾನ. ರಾಜಕಾರಣದ ಉದ್ದೇಶವೇ ಅಧಿಕಾರ ಪಡೆಯುವುದು ಎನ್ನುವ ರಾಜಕಾರಣಿಗಳ ನಂಬಿಕೆಯನ್ನು ಪ್ರಶ್ನಿಸಬೇಕಾದ ಬರಹಗಾರರೇ, ತಮ್ಮ ರಾಜಕೀಯ ಪ್ರಜ್ಞೆಯನ್ನೇ ಅಧಿಕಾರಕ್ಕೆ ಅಡವಿಟ್ಟಿರುವ ಸನ್ನಿವೇಶ ಇಂದಿನದು. ಇಂಥ ಸಂದರ್ಭದಲ್ಲಿ, ಅಸಲಿ ರಾಜಕಾರಣಿಯ ಕಣ್ಣಿಗೆ ಲೇಖಕರೂ ರಾಜಕಾರಣಿಗಳಂತೆ ಕಾಣಿಸಿದರೆ ಆಶ್ಚರ್ಯವೇನು?

ರಾಜಕಾರಣಿಯೊಬ್ಬ ಸಾಹಿತಿಗಳ ನೈತಿಕತೆಯನ್ನು ಅನುಮಾನಿಸುವಂತೆ ಆಡುವ ಮಾತಿಗೆ ಉತ್ತರ ಕೊಡಬೇಕಾದುದು ಸಾಹಿತ್ಯ ವಲಯದ ಜವಾಬ್ದಾರಿಯಲ್ಲ. ಆ ಕೆಲಸವನ್ನು ಸಮಾಜ ಮಾಡಬೇಕು. ಬರಹಗಾರರ ವಿಶ್ವಾಸಾರ್ಹತೆಗೆ ಪ್ರಶ್ನೆ ಎದುರಾದಾಗ ಸಮಾಜ ಮೌನವಾಗಿದ್ದರೆ, ಅದು ಸಾಹಿತಿಗಳ ಆತ್ಮಾವಲೋಕನದ ಸಮಯ ಎಂದರ್ಥ.

ಚುರುಮುರಿ



ಮದ್ಯಮಾರ್ಗ

• ಲಿಂಗರಾಜು ಡಿ.ಎಸ್.

'ಕೃಷಿಕರಿಗೆ ಅನುಕೂಲಾಗಲೀ ಅಂತ ದೋಟಿಗ್ಯಾಂಗ್ ಹುಟ್ಟಕ್ಯಂಡದಂತೆ? ನಾವು ಕಾಯಿ ಕೀಳಕ್ಕೆ ಜಾವಣಿಗೆ ಅಂತ ಮನೆಗೊಂದು ಮಡಿಕತಿದ್ವಲ್ಲ, ಆ ಥರದ್ದು' ಅಂತಂದ ಚಂದ್ರು.

'ಈ ತುರೇಮಣೆ ಇದಕ್ಕೊಂದು ಇಪರೀತದ ಕತೆ ಕಟ್ತನೆ ಕೇಳು' ಅಂತ ಯಂಟಪ್ಪಣ್ಣ ಪಿಸುಗುಟ್ಟಿತು.

'ನಾವೇನು ಕಮ್ಮಿ ಇಲ್ಲ ಕಣಿರ್ಲಾ, ನಮ್ಮದೂ ಬೋಟಿಗ್ಯಾಂಗ್ ಅಂತ ಅದೆ. ಎಲ್ಲೆಲ್ಲಿ ಬೀಗರೂಟ ನಡೀತದೋ ಅಲ್ಲಿಗೆಲ್ಲಾ ಹೋಗಿ ಅಡಿಗೆಗೆ ಕೈಲಾದ ಸಹಾಯ ಮಾಡಿ ಬತ್ತೀವಿ' ತುರೇಮಣೆ ಕ್ಲಾರಿಫಿಕೇಶನ್ ಕೊಟ್ಟರು.

'ನೀನು ಮಾಡದು ಕಂಡಿವ್ನಿ ತಕ್ಕಳಪ್ಪಾ. ಟೇಸ್ಟು ನೋಡ್ತೀನಿ ಅಂತ ದಬರಿಗಟ್ಲೇ ಬೋಟಿ, ಕಳ್ಳು-ಪಚ್ಚಿ ಅಲ್ಲೇ ತಿಂದುಬುಡ್ತೀಯ. ರೇಟು ಇಳಿದದೆ ಅಂತ ಪುಗಸಟ್ಟೆ ಪಾರಿನ್ ಲಿಕ್ಕರ್ರೇ ಕೇಳಿ ತರಿಸ್ಗತೀಯ. ಊಟ ಮಾಡ್ಸಿದೋರು ಅನ್ನಂಗುಲ್ಲ ಆಡಂಗುಲ್ಲ. ನಿಮ್ದು ಜೂಟಗ್ಯಾಂಗು ಕಲಾ' ಅಂತ ಯಂಟಪ್ಪಣ್ಣ ತಿವಿಯಿತು.

'ಅಣ್ಣೈ, ಹಂಗೆಲ್ಲ ಜರೀಬ್ಯಾಡಿ. ಸರ್ಕಾರಕ್ಕೆ ಗ್ಯಾರಂಟ ಖರ್ಚು ಹುಟ್ಟಲಿ ಅಂತ ಸ್ಯಾನೆ ಕಷ್ಟ-ಬೀಳ್ತಿದೀವಿ. ಬಸ್ಸು ಟಿಕೆಟ್ ರೇಟು ಜಾಸ್ತಿಯಾತು ಅಂತ ತೂರಾಡಿಕ್ಯಂದು ನಡಕೋಯ್ತೀವಿ, ಕರಂಟು ರೇಟು ಜಾಸ್ತಿಯಾಗಿದ್ಕೆ ಮನೆ ಲೈಟೇ ಹಾಕ್ತಿಲ್ಲ, ನೀರಿನ ರೇಟು ಜಾಸ್ತಿಯಾಗಿರೋತ್ಗೆ ಶೇಕುತ್ರೈಲ ಕುಡಕಂದೇ ಬದುಕಾಟ ಮಾಡ್ತಾದವಿ!' ತುರೇಮಣೆ ಕ್ಲಾರಿಫಿಕೇಶನ್ ಕೊಟ್ಟರು.

'ಯಂಟಪ್ಪಣ್ಣ, ಕುಡುಕರು ಅಪಾಯಕಾರಿ-ಗಳಲ್ಲ. ಹೊಟ್ಟುಂಬ ಕುಡದು ತೆಪ್ಪಗೆ ಮಕ್ಕಂತರೆ. ರಾಜಕಾರಣಿಗಳಂಗೆ ತಡಕಾಡಿಕ್ಯಂದು ಬೆರಣಿ ಸುಂಟ ತಿನ್ನಕ್ಕುಲ್ಲ. ಇವರದ್ದು ಮದ್ಯ ಮಾರ್ಗ' ಅಂತ ಸಪೋರ್ಟು ಮಾಡಿದೆ.

'ಕುರಿತೇಟಾಗಿ ಹೇಳಿದೆ ಕಲಾ. ಇಲ್ಲೀಗಂಟ ಮಕಮಕ ನೋಡ್ದೇ ಇದ್ದ ರಾಜಕಾರಣಿಗಳು ಈವತ್ತು ಅಧಿಕಾರಕ್ಕೋಸ್ಕರ ಅಣ್ಣ-ತಮ್ಮದೀರು ಆಗ್ಯವರೆ. ಜನ ಹೇಳಿದರು ಅಂತ ತಮ್ಮ ಆಸೆನೆಲ್ಲಾ ಪಬ್ಲಿಕ್ ಮ್ಯಾಲೆ ಹೇರ್ತರೆ. ಇವರದ್ದು ವಯಾಮೀಡಿಯಾ ಮಧ್ಯಮ ಮಾರ್ಗ' ಅಂತ ಷರಾ ಬರೆಯಿತು ಯಂಟಪ್ಪಣ್ಣ.

ಇದ ಒಪ್ಪಿಕ್ಯಣದು ಬುಟ್ರೆ ನಮಗೆ ಬ್ಯಾರೆ ಮಾರ್ಗವೇ ಇರನಿಲ್ಲ!

ದಿನದ ಟ್ವೀಟ್

ಪ್ರಜಾಪ್ರಭುತ್ವಕ್ಕೆ ಬಲ ಬರಲಿ

ಸಂಸತ್ತಿನಲ್ಲಿ ಶಿಕ್ಷಣ ಸಚಿವರು ಪ್ರಮಾಣವಚನ ಸ್ವೀಕರಿಸುವಾಗ 'ನೀಟ್ ನೀಟ್' ಎಂಬ ಕೂಗು ಹಿನ್ನೆಲೆಯಲ್ಲಿ ಕೇಳಿಬರುತ್ತಿತ್ತು. ಸದೃಢ ವಿರೋಧ ಪಕ್ಷವು ಉತ್ತಮ ಪ್ರಜಾಪ್ರಭುತ್ವಕ್ಕೆ ಕಾರಣವಾಗುತ್ತದೆ.

ನರುಂದರ್

ಕಿಡಿನುಡಿ

ತಮ್ಮ ರಾಜಕೀಯ ಪಕ್ಷವು ಯಾವ ತಪ್ಪನ್ನೂ ಎಸಗುವುದಿಲ್ಲ ಮತ್ತು ಬೇರೊಂದು ಪಕ್ಷವು ಏನೂ ಒಳ್ಳೆಯದು ಮಾಡುವುದಿಲ್ಲ ಎಂದು ಯಾರಾದರೂ ಹೇಳಿದರೆ ಅವರು ಒಬ್ಬ ಸುಳ್ಳುಗಾರ ಅಥವಾ ಮೂರ್ಖನಾಗಿರುತ್ತಾರೆ ಇಲ್ಲವೇ ಎರಡೂ ಆಗಿರುತ್ತಾರೆ.

ಎಲಾನ್ ಮಸ್ಕ್, ಉದ್ಯಮಿ

25 ವರ್ಷಗಳ ಹಿಂದೆ

ಶುಕ್ರವಾರ, 25-6-1999

• ಬಿಜೆಪಿಯಿಂದ ಲೋಕಶಕ್ತಿ ಜತೆ ಹೊಂದಾಣಿಕೆಗೆ ಒಪ್ಪಿಗೆ

ಬೆಂಗಳೂರು, ಜೂನ್ 24– ಮುಂಬರುವ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ನೇತೃತ್ವದ ಲೋಕಶಕ್ತಿಯೊಂದಿಗೆ ಹೊಂದಾಣಿಕೆಗೆ, ಪಕ್ಷದ ಅಧ್ಯಕ್ಷ ಕುಶಭಾವು ಠಾಕ್ರೆ ಅವರ ಸಮ್ಮುಖದಲ್ಲಿ ಇಂದು ಇಲ್ಲಿ ನಡೆದ ರಾಜ್ಯ ಬಿಜೆಪಿ ಪದಾಧಿಕಾರಿಗಳ ಸಭೆ ಒಪ್ಪಿಗೆ ಸೂಚಿಸಿತು.

'ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಲೋಕಶಕ್ತಿಯ ಜತೆ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿ; ಹೊಂದಾಣಿಕೆಯನ್ನು ದೆಹಲಿ ವರಿಷ್ಠರು ಬಲವಂತವಾಗಿ ನಿಮ್ಮ ಮೇಲೆ ಹೇರುತ್ತಿದ್ದಾರೆ ಎಂಬ ಭಾವನೆ ನಿಮಗೆ ಬೇಡ' ಎಂದು ಕುಶಭಾವು ಠಾಕ್ರೆ ಅವರು ನೇರವಾಗಿ ಕೇಳಿದಾಗ, ಸಭೆಯಲ್ಲಿ ಭಾಗವಹಿಸಿದ್ದ ಪಕ್ಷದ ಪದಾಧಿಕಾರಿಗಳು ಲೋಕಶಕ್ತಿಯ ಜತೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಿದರು ಎಂದು ತಿಳಿದುಬಂದಿದೆ.

• ಕಾರ್ಗಿಲ್ ಬಿಕ್ಕಟ್ಟು: ಪಾಕ್ ಜತೆ ಅಮೆರಿಕ ಸೇನಾ ಅಧಿಕಾರಿ ಚರ್ಚೆ

ಇಸ್ಲಾಮಾಬಾದ್, ಜೂನ್ 24 (ಪಿಟಿಐ)– 'ಕಾರ್ಗಿಲ್‌ನಿಂದ ಅತಿಕ್ರಮಣಕಾರರನ್ನು ವಾಪಸ್ ಕರೆಸಿಕೊಳ್ಳಬೇಕು ಮತ್ತು ಗಡಿ ನಿಯಂತ್ರಣ ರೇಖೆಯನ್ನು ಗೌರವಿಸಬೇಕು' ಎಂಬ ಅಮೆರಿಕದ ನಿಲುವಿನ ಬಗ್ಗೆ ಅತೃಪ್ತಗೊಂಡಿರುವ ಪಾಕಿಸ್ತಾನ, ಅಮೆರಿಕದ ಹಿರಿಯ ಸೇನಾ ಅಧಿಕಾರಿ ಈ ಸಂಬಂಧ ಪಾಕಿಸ್ತಾನಕ್ಕೆ ತಂದ ಸಂದೇಶ 'ನ್ಯಾಯ ಬದ್ಧವಾಗಿಲ್ಲ ಮತ್ತು ಸಮತೋಲನದಿಂದ ಕೂಡಿಲ್ಲ' ಎಂದು ಹೇಳಿದೆ.

ಸಂಕುಚಿತ ದೃಷ್ಟಿಕೋನ ಹೊಂದಿರುವ ಅಮೆರಿಕದ ನಿಲುವು ಯುದ್ಧದ ಬಗ್ಗೆ ಮಾತನಾಡಲು ಭಾರತಕ್ಕೆ ಉತ್ತೇಜನ ನೀಡಿದಂತಾಗಿರುವುದಲ್ಲದೆ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಪಾಕಿಸ್ತಾನದ ವಿದೇಶಾಂಗ ಕಾರ್ಯಾಲಯದ ವಕ್ತಾರ ತಾರಿಕ್ ಅಲ್ತಾಫ್ ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 25-6-1974

• ತಾಳ್ಮೆಯ ಮೂಲ ಔದಾರ್ಯ

ಬೆಂಗಳೂರು, ಜೂನ್ 24– ಇಂದು ಅನೇಕ ಕಷ್ಟಕಾರ್ಪಣ್ಯಗಳನ್ನು ಎದುರಿಸುತ್ತಿರುವ ಜನಸಾಮಾನ್ಯರ ತಾಳ್ಮೆಯ ಮೂಲ ಯಾವುದು?

ಕಂದಾಯ ಮಂತ್ರಿ ಎನ್.ಹುಚ್ಚಮಾಸ್ತಿಗೌಡರ ಅಭಿಪ್ರಾಯದಲ್ಲಿ 'ಇತರರ ಅಪರಾಧಗಳನ್ನು ಮರೆಯುವ' ಔದಾರ್ಯ ಮತ್ತು ಕಷ್ಟಕ್ಕೆಲ್ಲಾ ತನ್ನ 'ದುರದೃಷ್ಟ' ಕಾರಣ ಎನ್ನುವ ಹತಾಶ ಭಾವನೆ.

ಸರ್ಕಾರಗಳು ಉಳಿದಿರುವುದಕ್ಕೂ ಅದೇ ಕಾರಣ, 'ಇಲ್ಲದಿದ್ದರೆ ದಂಗೆ ಏಳುತ್ತಿದ್ದರು'.

• ಮತ್ಸ್ಯ ರಕ್ಷಣೆಗೆ ಸಮಗ್ರ ವಿಧೇಯಕ ಶೀಘ್ರವೇ ಸಿದ್ಧ

ಹೊಸಪೇಟೆ, ಜೂನ್ 24– ಮತ್ಸ್ಯ ರಕ್ಷಣೆ, ಅಭಿವೃದ್ಧಿ ಹಾಗೂ ಈ ಉದ್ಯಮದ ನಿಯಂತ್ರಣಕ್ಕೆ ಶಾಸನೋಕ್ತ ಅವಕಾಶ ಕಲ್ಪಿಸಲು, ರಾಜ್ಯಕ್ಕೆಲ್ಲ ಅನ್ವಯವಾಗುವ ಸಮಗ್ರ ಸ್ವರೂಪದ ವಿಧೇಯಕವೊಂದು ಸಿದ್ಧವಾಗುತ್ತಿದೆ.

ಸರ್ಕಾರದ ಅನುಮತಿಯಿಲ್ಲದೇ ಮೀನುಗಾರಿಕೆ ನಿಷೇಧ, ವಿಷ ಹಾಗೂ ಸ್ಫೋಟಕ ವಸ್ತುಗಳಿಂದ ಮತ್ಸ್ಯ ನಾಶಕ್ಕೆ ನಿರ್ಬಂಧ, ಸಾರ್ವಜನಿಕ ಕೊಳ, ಜಲಾಶಯಗಳಿಂದ ಮೀನು ಹಿಡಿಯಲು ಸರ್ಕಾರಿ ಪರವಾನಗಿ ವ್ಯವಸ್ಥೆ ಮುಂತಾದ ವಿಧಿಗಳು ವಿಧೇಯಕದಲ್ಲಿವೆ ಎಂದು ಮತ್ಸ್ಯ ವ್ಯವಸಾಯ ಹಾಗೂ ತೋಟಗಾರಿಕೆ ಇಲಾಖೆ ರಾಜ್ಯ ಮಂತ್ರಿ ಕೆ.ಟಿ. ರಾಠೋಡ್ ಅವರು ವರದಿಗಾರರಿಗೆ ತಿಳಿಸಿದರು.

ಸಂಗತ

ಕಾಂಗ್ರೆಸ್ ಪಕ್ಷಕ್ಕೆ ಕಿವಿಮಾತು

ಮಾನವೀಯ ಅಂತಃಕರಣದ ಸಂಗತಿಗಳ ಬಗ್ಗೆ ಸರ್ಕಾರ ಎಚ್ಚೆತ್ತುಕೊಳ್ಳಬೇಕು

• ದೇವನೂರ ಮಹಾದೇವ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿವಿಧ ಅಕಾಡೆಮಿಗಳ ಅಧ್ಯಕ್ಷರನ್ನು ಕಾಂಗ್ರೆಸ್ ಕಚೇರಿಗೆ ಕರೆಸಿಕೊಂಡದ್ದು, ಅಲ್ಲಿ ಅವರನ್ನು ಉದ್ದೇಶಿಸಿ ಆಡಿದ ಮಾತುಗಳು, ನಡೆದುಕೊಂಡ ವೈಖರಿ ನಾಗರಿಕ ಸಮಾಜಕ್ಕೆ ಇರಿಸುಮುರಿಸು ಉಂಟುಮಾಡಿ, ಕಹಿ ಅನುಭವವನ್ನು ಉಳಿಸಿದೆ. ಇದನ್ನು ಪ್ರತಿರೋಧಿಸಿ ಹೇಳಿಕೆ ನೀಡಿದ ಲೇಖಕರು, ಕಲಾವಿದರು, ಪ್ರಜ್ಞಾವಂತರು ಸಮಾಜದಲ್ಲಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಈ ನಡುವೆ, ಸಾಮಾನ್ಯವಾಗಿ ಸಮತೋಲನದಿಂದ ಮಾತನಾಡುತ್ತಿದ್ದ ಕಾಂಗ್ರೆಸ್ ವಕ್ತಾರರಾದ ರಮೇಶ್ ಬಾಬು ಅವರು ಸಚಿವರ ನಡೆನುಡಿಗಳನ್ನು ಸಮರ್ಥಿಸಿಕೊಳ್ಳುತ್ತಾ ಸಮತೋಲನ ತಪ್ಪಿದ್ದಾರೆ. ಜೊತೆಗೆ ನನ್ನ ಹೆಸರನ್ನು ಪ್ರಸ್ತಾಪಿಸಿ, ದೇವನೂರ ಮಹಾದೇವ ಅವರಿಗೆ ಮಾತ್ರ ಸರ್ಕಾರವನ್ನು, ರಾಜಕಾರಣಿಗಳನ್ನು ಟೀಕಿಸುವ ನೈತಿಕತೆ ಇದೆ ಎಂದಿದ್ದಾರೆ. ಈ ಮೂಲಕ ನನ್ನನ್ನು ಉಳಿದ ಸಾಹಿತಿಗಳಿಂದ ಬೇರ್ಪಡಿಸಿ ಮುಜುಗರಕ್ಕೆ ಈಡು ಮಾಡಿದ್ದಾರೆ. ಹಾಗಾಗಿ ಈ ಸ್ಪಷ್ಟನೆ:

ಲೇಖಕರು ಪ್ರತಿರೋಧದ ಹೇಳಿಕೆ ನೀಡುವ ಬಗ್ಗೆ ನನ್ನೊಡನೆ ಪ್ರಸ್ತಾಪಿಸಿದ್ದರು. ಹೇಳಿಕೆಯ ಪ್ರತಿಯನ್ನು ಕಳುಹಿಸಿಕೊಡಿ ಎಂದಿದ್ದೆ. ಅವರೇನಾದರೂ ಕಳುಹಿಸಿದ್ದಿದ್ದರೆ ಆ ಹೇಳಿಕೆಗೆ ನಾನೂ ರುಜು ಮಾಡುತ್ತಿದ್ದೆ. ತದನಂತರ ಬಂದ ಬರಗೂರು ರಾಮಚಂದ್ರಪ್ಪ ಅವರ ಹೇಳಿಕೆ ಅತ್ಯಂತ ಸೂಕ್ತವಾಗಿತ್ತು. ಹಾಗಾಗಿ ಸುಮ್ಮನಾದೆ.

ಈ ಸಂದರ್ಭದಲ್ಲೇ ಒಂದು ಮಾತನ್ನು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಚರಿತ್ರೆಯ ಏರಿಳಿತದ ಕಾರಣವಾಗಿ, ಸಂವಿಧಾನವನ್ನೇ ಬುಡಮೇಲು ಮಾಡಲು ಹೊರಟಿದ್ದ ಬಿಜೆಪಿಯನ್ನು ಕೆಲವು ಹೋರಾಟದ ಸಂಘಟನೆಗಳು, ಝರಿ ಮತ್ತು ಹೊಳೆ ರೀತಿಯ ಮಾಧ್ಯಮಗಳು ಹಾಗೂ ನಾಗರಿಕ ಸಮಾಜಗಳು ಜೊತೆಗೂಡಿ ತಮ್ಮ ಅಳಿವು-ಉಳಿವು ಎಂಬಂತೆ ವಿರೋಧಿಸಿವೆ. ಇದು, ಪರೋಕ್ಷವಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದಂತೆ ಆಗಿದೆ.

ಹೀಗೆ ಬೆಂಬಲಿಸಿದವರಲ್ಲಿ ಈ ಹಿಂದೆ ಕಾಂಗ್ರೆಸ್ ವಿರೋಧಿಗಳಾಗಿದ್ದವರೂ ಇದ್ದಾರೆ. ಅಷ್ಟೇಕೆ, ಜೆಡಿಎಸ್ ಪಕ್ಷವು ಬಿಜೆಪಿ ಸಖ್ಯ ಬೆಳೆಸಿದ್ದನ್ನು ಸಹಿಸದ, ಈ ಮೊದಲು ಜೆಡಿಎಸ್ ಅನ್ನು ಬೆಂಬಲಿಸುತ್ತಿದ್ದ ಪ್ರಗತಿಪರರೂ ಇವರಲ್ಲಿ ಇದ್ದಾರೆ. ಈ ವಿದ್ಯಮಾನವನ್ನು ಕಾಂಗ್ರೆಸ್ ಪಕ್ಷದೊಳಗೇ ಪರಸ್ಪರ ಸೋಲಿಸಿಕೊಳ್ಳುವ ಕ್ಷುಲ್ಲಕ ರಾಜಕಾರಣವೂ ಇರುವುದರೊಡನೆ ಹೋಲಿಕೆ ಮಾಡಿದರೆ– ಎಚ್ಚೆತ್ತ ಮಾಧ್ಯಮಗಳು, ನಾಗರಿಕ ಸಮಾಜ ಹಾಗೂ ಜನಮುಖಿ ಸಂಘಟನೆಗಳ ಮಹತ್ವ ಅರ್ಥವಾಗುತ್ತದೆ. ಇವೆಲ್ಲವೂ ಸಂವಿಧಾನ, ಒಕ್ಕೂಟ ವ್ಯವಸ್ಥೆ, ಸ್ವಾಯತ್ತ ಸಂಸ್ಥೆಗಳ ಅಸ್ತಿತ್ವ ಉಳಿಸಿಕೊಳ್ಳಲೋಸುಗ ತಮ್ಮ ಶಕ್ತಿ ಮೀರಿ ಕ್ರಿಯಾಶೀಲವಾದ್ದರಿಂದಲೂ ಕಾಂಗ್ರೆಸ್‌ಗೆ ಇಷ್ಟಾದರೂ ಫಲ ಸಿಕ್ಕಿದೆ.

ಬಹಳ ಮುಖ್ಯವಾಗಿ, ನಾಗರಿಕ ಸಮಾಜದ ಈ ಎಲ್ಲ ಕಾರ್ಯಚಟುವಟಿಕೆಯ ಕಾರಣವಾಗಿ ಕಾಂಗ್ರೆಸ್‌ಗೆ ನೈತಿಕ ಮುಖ ಬಂದಂತೆ ಆಗಿರುವುದನ್ನು ರಾಜ್ಯ ಸರ್ಕಾರ ಅರ್ಥ ಮಾಡಿಕೊಂಡರೆ ಅವರಿಗೂ ಕ್ಷೇಮ, ಸಮಾಜಕ್ಕೂ ಕ್ಷೇಮ.

ಹಾಗೇ ಕಾಂಗ್ರೆಸ್ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳಬೇಕು- ಕೆಳಮನೆಯಲ್ಲಿ ಸಂಖ್ಯಾಬಲದಿಂದ ಪ್ರಾತಿನಿಧ್ಯ ಪಡೆಯುವ ಸಮುದಾಯಗಳು ಮೇಲ್ಮನೆಯಲ್ಲೂ ಪ್ರಾತಿನಿಧ್ಯ ಪಡೆದುಕೊಳ್ಳುವುದಾದರೆ, ಹೇಳುವವರು ಕೇಳುವವರು ಇಲ್ಲದ ಬುಡಕಟ್ಟು, ಅಲೆಮಾರಿ, ದೇವದಾಸಿ, ಪೌರಕಾರ್ಮಿಕ, ಅಗಸ, ಕುಂಬಾರ, ಕ್ಷೌರಿಕ, ಅಕ್ಕಸಾಲಿಗದಂತಹ ಅಲ್ಪಸಂಖ್ಯಾತ ಸಮುದಾಯಗಳಿಗೆ ಪ್ರಾತಿನಿಧ್ಯ ಇಲ್ಲದಿದ್ದರೆ, ಕರ್ನಾಟಕ ಹೇಗೆ ತಾನೇ ಸರ್ವಜನಾಂಗದ ಶಾಂತಿಯ ತೋಟವಾಗುತ್ತದೆ? ಎಲ್ಲರ ಒಳಗೊಳ್ಳುವಿಕೆಯೂ ಇಲ್ಲದಿದ್ದರೆ ಅದು ಹೇಗೆ ಒಳ್ಳೆಯ ಸರ್ಕಾರವಾಗುತ್ತದೆ? ಇದನ್ನು ಈ ಸರ್ಕಾರದಿಂದ ನಿರೀಕ್ಷಿಸುವುದು ತಪ್ಪಲ್ಲ ಎಂದುಕೊಂಡಿದ್ದೇನೆ.

ದಲಿತರಿಗೆ ಹೊರಗುತ್ತಿಗೆಯ ನೇಮಕಾತಿಯಲ್ಲಿ ಮೀಸಲಾತಿಯನ್ನು ಅನ್ವಯ ಮಾಡುವ ಸರ್ಕಾರದ ನಿರ್ಧಾರ ಖಂಡಿತ ಸ್ವಾಗತಾರ್ಹ. ಆದರೂ ಮೊದಲನೆಯ ಷರತ್ತಿನಲ್ಲಿ, ಹೊರಗುತ್ತಿಗೆ ಮೀಸಲಾತಿ ನೀತಿಯು 45 ದಿನಗಳಷ್ಟು ಕಡಿಮೆ ಅವಧಿಯ ನೇಮಕಾತಿಗಳಿಗೆ ಅನ್ವಯಿಸುವುದಿಲ್ಲ ಎಂದಿರುವುದರಿಂದ, ಹೀಗೆಯೇ 6ನೇ ಷರತ್ತಿನಲ್ಲಿ 'ಯಾವುದೇ ಇಲಾಖೆಯಲ್ಲಿ ಕನಿಷ್ಠ 20 ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿಯನ್ನು ಜಾರಿಗೊಳಿಸತಕ್ಕದ್ದು ಎಂದಿರುವುದರಿಂದ ಪರಿಣಾಮ ಏನಾಗುತ್ತದೆ? ಇದರಿಂದ, ಘೋಷಣೆಯಲ್ಲಿ ಇಂತಹ ಅವಕಾಶ ನೀಡುತ್ತೇವೆ, ಆದರೆ ವಾಸ್ತವದಲ್ಲಿ ಅಲ್ಲ ಎಂದಂತೆ ಆಗುವುದಿಲ್ಲವೇ?



ಇದು ಹೇಗೆ ಕಾಣುತ್ತದೆ ಎಂದರೆ, ದಲಿತನ ಬಾಯಿಗೆ ತುತ್ತು ಹಾಕುವಂತೆ ನಟಿಸಿ, ಆತ ತುತ್ತಿಗೆ ಬಾಯಿ ತೆರೆದಾಗ ಅದನ್ನು ಬೇರೆಯವರಿಗೆ ತಿನ್ನಿಸಿದಂತೆ ಕಾಣಿಸುತ್ತದೆ. ವಂಚಿತರಿಗೆ ಮೊದಲ ಆದ್ಯತೆ ಎಂದು ಇರಬೇಕಿತ್ತು ಅಥವಾ ರೋಸ್ಟರ್ ಪದ್ಧತಿಯನ್ನು ಅಳವಡಿಸಬೇಕಿತ್ತು. ಇದಾಗದಿದ್ದರೆ, ನೋವಿನ ಮೇಲೆ ಬರೆ ಎಳೆದಂತೆ ಆಗುತ್ತದೆ.

ಮಾನವೀಯ ಅಂತಃಕರಣದ ಇಂತಹ ಸಂಗತಿಗಳ ಬಗ್ಗೆ ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಅದು ಈಗ ಪಡೆದುಕೊಂಡಿರುವ ಜನಾಭಿಪ್ರಾಯವನ್ನು ಕಳೆದುಕೊಳ್ಳುತ್ತಾ ಹೋಗಬೇಕಾಗುತ್ತದೆ.

ಕೊನೆಯದಾಗಿ- ಸಾಹಿತ್ಯ, ಭಾಷೆ, ಸಾಂಸ್ಕೃತಿಕ ಅಕಾಡೆಮಿಗಳಿಗೆ ಸರ್ಕಾರವು ನಾಮಿನೇಷನ್ ಮೂಲಕ ನೇಮಕಾತಿ ಮಾಡುವ ಪದ್ಧತಿಯ ಬದಲು ಕೇಂದ್ರ ಸಾಹಿತ್ಯ ಅಕಾಡೆಮಿಯ ಮಾದರಿಯಂತೆ ಚುನಾವಣಾ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಸೂಕ್ತ. ಈ ಮೂಲಕ, ಆಯ್ಕೆ ಪದ್ಧತಿಯನ್ನು ಇನ್ನಷ್ಟು ಉತ್ತಮಗೊಳಿಸಿಕೊಂಡು ಅಕಾಡೆಮಿಯ ಪದಾಧಿಕಾರಿಗಳನ್ನು ಚುನಾಯಿಸಿಕೊಳ್ಳುವುದು ಆರೋಗ್ಯಕರ ಎಂದೆನ್ನಿಸುತ್ತದೆ. ಈ ದಿಕ್ಕಿನಲ್ಲೂ ನಾವು ಆಲೋಚಿಸಬೇಕಾಗಿದೆ.

ವಾಚಕರ ವಾಣಿ

ರೇಣುಕಸ್ವಾಮಿ ಪ್ರಕರಣ: ಜಾತಿಯ ಸೋಂಕು ಸಲ್ಲ

ಸಿನಿಮಾ ನಟ ದರ್ಶನ್ ತಂಡ ಕಾರಣ ಎಂದು ಆರೋಪಿಸಲಾಗಿರುವ ರೇಣುಕಸ್ವಾಮಿ ಕೊಲೆ ಪ್ರಕರಣವನ್ನು ಖಂಡಿಸಿ ಚಿತ್ರದುರ್ಗ, ದಾವಣಗೆರೆ ಮತ್ತಿತರೆಡೆ ವೀರಶೈವ ಲಿಂಗಾಯತರು ಅದರಲ್ಲೂ ವೀರಶೈವ ಜಂಗಮರು ಪ್ರತಿಭಟಿಸುತ್ತಿರುವುದನ್ನು ಗಮನಿಸಿದ್ದೇವೆ. ಆದರೆ ರೇಣುಕಸ್ವಾಮಿ ವೀರಶೈವ ಲಿಂಗಾಯತ ಮಾತ್ರ ಅಲ್ಲ. ಆತ ಮೊದಲು ಮನುಷ್ಯ. ನಂತರ ಬಂದವು ಈ ಜಾತಿ, ಕುಲ, ಧರ್ಮ, ಗೋತ್ರ ಎಲ್ಲವೂ. ಮನುಷ್ಯರಾದ ನಾವು ಮೊದಲು ಬಸವಣ್ಣನ 'ಇವ ನಮ್ಮವ, ಇವ ನಮ್ಮವ' ಎಂಬ ಸರ್ವಸಮಾನತೆಯ ಮಾನವೀಯ ಮೌಲ್ಯಗಳನ್ನು ಇಟ್ಟುಕೊಳ್ಳಬೇಕು.

ಬಲಿಯಾದವನು ಯಾವ ಜಾತಿಯವನಾದರೇನು? ಮಾನವರಾದ ಪ್ರತಿಯೊಬ್ಬರೂ ಈ ಸಂದರ್ಭದಲ್ಲಿ ಸತ್ಯ, ನ್ಯಾಯ, ಜೀವಪರವಾಗಿ ನಿಲ್ಲಬೇಕು. ರೇಣುಕಸ್ವಾಮಿಯ ಕೊಲೆಯನ್ನು ಎಲ್ಲರೂ ಖಂಡಿಸಬೇಕು. ಮಣ್ಣಿಗೇ ಇಲ್ಲದ ಭೇದಭಾವ, ಮಣ್ಣಾಗಿ ಹೋಗುವ ಮನುಷ್ಯನಿಗೆ ಏಕೆ?

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ದೇವದಾರಿಯಲ್ಲಿ ದಾನವ ಹೆಜ್ಜೆ ಯಾಕೆ?

'ದೇವದಾರಿ ಗಣಿಗಾರಿಕೆ ನಡೆಯುವ ಪ್ರದೇಶದಲ್ಲಿ ದಟ್ಟ ಅರಣ್ಯವಿಲ್ಲ, ದೊಡ್ಡ ಮರಗಳಿಲ್ಲ; ಅಲ್ಲಿರುವುದು ಕುರುಚಲು ಕಾಡು ಅಷ್ಟೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ (ಪ್ರ.ವಾ., ಜೂನ್ 23). ದೊಡ್ಡ ಅರಣ್ಯಗಳಿಗಿಂತ ಕುರುಚಲು ಕಾಡಿನಲ್ಲೇ ಹೆಚ್ಚಿನ ಸಂಖ್ಯೆಯ, ವೈವಿಧ್ಯಮಯ ಜೀವಿಗಳು ಮತ್ತು ವನೌಷಧ ಸಸ್ಯಗಳು ಇರುತ್ತವೆ. ಅಲ್ಲಿ ಜಿಂಕೆ, ಮುಳ್ಳುಹಂದಿ, ಮೊಲ, ಉಡ, ಕಾಡುಹಂದಿ, ನರಿ, ಕರಡಿ, ಇರುವೆ ಭಕ್ಷಕ, ನಕ್ಷತ್ರ ಆಮೆ, ಚಿರತೆ ಮತ್ತು ಬೂದುಕೌಜುಗದಂಥ ನಾನಾ ಪಕ್ಷಿಗಳು ಇವೆ ಎಂಬುದು ಅರಣ್ಯತಜ್ಞರ ಸಮೀಕ್ಷೆಗಳಲ್ಲಿ ದಾಖಲಾಗಿದೆ.

ನೆಲದೊಳಗಿನ ನಿಧಿಯ ಮೇಲೆ ಕಣ್ಣಿಟ್ಟವರೆಲ್ಲ ನೆಲದ ಮೇಲಿನ ಅಕ್ಷಯ ನಿಧಿ ನಗಣ್ಯವೆಂದೇ ಸದಾ ವಾದಿಸುತ್ತಾರೆ. ಸದ್ಯಕ್ಕಂತೂ ಭಾರತದ ಉಕ್ಕು ಉದ್ಯಮಕ್ಕೆ ಕಬ್ಬಿಣದ ಅದಿರಿನ ಅಭಾವ ಇಲ್ಲವೇ ಇಲ್ಲ. ದೇಶದಾದ್ಯಂತ ಬೇಕಾದಷ್ಟು ಗಣಿಗಳು ಬಾಯ್ತೆರೆದು ಅದಿರನ್ನು ಮೇಲೆತ್ತುತ್ತಿವೆ. ದೇವದಾರಿಗೆ ಈಗ ರಕ್ಷಣೆ ಬೇಕಾಗಿದೆ, ಡೈನಮೈಟ್ ಅಲ್ಲ.

ನಾಗೇಶ ಹೆಗಡೆ, ಕೆಂಗೇರಿ

ಫಲಿತಾಂಶ ಕುಸಿತಕ್ಕೆ ಡಿಡಿಪಿಐ ಮಾತ್ರ ಹೊಣೆಯಲ್ಲ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ವಿಜಯನಗರ ಜಿಲ್ಲೆಯು ಕುಸಿತ ಕಂಡಿರುವುದಕ್ಕೆ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಯುವರಾಜ ನಾಯ್ಕ್ ಅವರನ್ನು ಅಮಾನತು ಮಾಡಿರುವುದು ಸರಿಯಾದ ನಿರ್ಧಾರವಲ್ಲ. ಈ ಸಾರಿಯ ಪರೀಕ್ಷೆಯನ್ನು ಸಿ.ಸಿ. ಟಿ.ವಿ. ಕ್ಯಾಮೆರಾ ಮೂಲಕ ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ನಡೆಸಲಾಗಿತ್ತು. ಪರೀಕ್ಷೆಗಳು ಕ್ರಮಬದ್ಧವಾಗಿ ನಡೆದಾಗಲೆಲ್ಲಾ ಫಲಿತಾಂಶದಲ್ಲಿ ಏರುಪೇರಾಗುವುದು ಸಹಜ.

ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಿದರೆ ಇಂತಹ ದುರವಸ್ಥೆಗಳು ಇಲ್ಲವಾಗುತ್ತವೆ. ಕಳಪೆ ಫಲಿತಾಂಶಕ್ಕೆ ಡಿಡಿಪಿಐ ಒಬ್ಬರನ್ನೇ ಹೊಣೆ ಮಾಡುವುದರ ಬದಲು, ಅದಕ್ಕಿಂತಲೂ ಮುಖ್ಯವಾಗಿ ಶಾಲೆಗಳಲ್ಲಿ ಕೊಠಡಿಗಳ ಕೊರತೆ, ನೈರ್ಮಲ್ಯ ಸಮಸ್ಯೆ, ಪೀಠೋಪಕರಣ ಕೊರತೆಯಂತಹವನ್ನು ಕ್ಷಿಪ್ರವಾಗಿ ಬಗೆಹರಿಸಬೇಕಾಗಿದೆ.

ಶಾಲೆಗೆ ಪ್ರತಿನಿತ್ಯವೂ ತಡವಾಗಿ ಬರುವ ಶಿಕ್ಷಕ ಮತ್ತು ಮುಖ್ಯ ಗುರುಗಳು, ಬಂದರೂ ಸರಿಯಾಗಿ ಪಾಠ ಮಾಡದೆ ಕೈಯಲ್ಲಿ ಫೋನ್ ಹಿಡಿದುಕೊಂಡು ಅಲೆಯುವ ಮೇಷ್ಟ್ರುಗಳು, ಬಿಇಒ ಜೊತೆಯಲ್ಲಿ ಸದಾ ತಾಲ್ಲೂಕಿನಾದ್ಯಂತ ಅಲೆಯುತ್ತಾ ಶಾಲೆಯನ್ನೇ ಮರೆಯುವ ಶಿಕ್ಷಕರು, ಮುಂದಿನ ಸ್ಪರ್ಧಾತ್ಮಕ ಪರೀಕ್ಷೆಗಾಗಿ ಸಿದ್ಧರಾಗುವ ಸಲುವಾಗಿ ಇಲ್ಲಿಗೆ ಬರುವ ಪ್ರತಿಭಾವಂತ ಶಿಕ್ಷಕರು... ಹೀಗೆ ಫಲಿತಾಂಶದ ಮೇಲೆ ಹಲವು ವಿಚಾರಗಳು ಪ್ರಭಾವ ಬೀರುತ್ತವೆ (ಶಿಸ್ತಿನಿಂದ ಪಾಠ ಪ್ರವಚನ ಮಾಡುವ ಸಾವಿರಾರು ಶಿಕ್ಷಕರು ನಮ್ಮಲ್ಲಿ ಇದ್ದಾರೆ. ಅವರನ್ನು ಹೊರತುಪಡಿಸಿ). ಇವೆಲ್ಲಾ ಸಮಸ್ಯೆಗಳನ್ನು ಪರಿಹರಿಸದೆ ಬರೀ ಇಲಾಖಾ ಅಧಿಕಾರಿಗಳನ್ನು ಶಿಕ್ಷಿಸುವುದು ವಿವೇಕದ ನಡೆಯಾಗುವುದಿಲ್ಲ. ಶಿಕ್ಷಣ ಇಲಾಖೆ ಈಗಾಗಲೇ ತನ್ನ ಒಡಲಲ್ಲಿ ನೂರಾರು ಸಮಸ್ಯೆಗಳನ್ನು ಗಂಟುಹಾಕಿಕೊಂಡಿದೆ. ಆದ್ದರಿಂದ ಬರೀ ಹುತ್ತವನ್ನು ಬಡಿದರೆ ಹಾವು ಸಾಯುವುದಿಲ್ಲ. ಶಿಕ್ಷಣ ವ್ಯವಸ್ಥೆಯ ಸಮಗ್ರ ಬದಲಾವಣೆಯೊಂದೇ ಇದಕ್ಕೆ ಪರಿಹಾರ.

ಮೋದೂರು ಮಹೇಶಾರಾಧ್ಯ, ಹುಣಸೂರು

ತುರ್ತು ಪರಿಸ್ಥಿತಿ: ಅಂದು, ಇಂದು!

ಇಂದಿನ ತಲೆಮಾರಿನ ಅದೆಷ್ಟು ಜನರಿಗೆ ನೆನಪಿದೆಯೋ ಗೊತ್ತಿಲ್ಲ. ಆಗಿನ್ನೂ ನನಗೆ 11 ವರ್ಷ. 1975ರ ಜೂನ್ 25ರ ಮಧ್ಯರಾತ್ರಿ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ಕರಾಳ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದರು (ನೆನಪಿರಲಿ, ನಮಗೆ ಸ್ವಾತಂತ್ರ್ಯ ಬಂದದ್ದು ಮಧ್ಯರಾತ್ರಿಯಲ್ಲೇ. ನಮ್ಮ ಮೇಲೆ ಜಿಎಸ್‌ಟಿ ಸವಾರಿ ಆರಂಭವಾಗಿದ್ದು ಕೂಡ ಮಧ್ಯರಾತ್ರಿಯಲ್ಲೇ. ಆದರೆ ನೋಟು ರದ್ದತಿ ಆರಂಭವಾದದ್ದು ಮಾತ್ರ ರಾತ್ರಿ 8 ಗಂಟೆಗೆ). ಮೊದಲಿನ ಎರಡಕ್ಕೂ ತಮಗೂ ಸಂಬಂಧವಿಲ್ಲ ಎಂದು ನಿದ್ದೆ ಹೋದವರಿದ್ದರೂ, ಮೂರನೆಯದು ಮಾತ್ರ ಮಧ್ಯರಾತ್ರಿ ಕಳೆದರೂ ಯಾರೂ ಮಲಗದಂತೆ ಮಾಡಿತ್ತು.

ಅಂದು ಇಂದಿನಂತೆ ಟಿ.ವಿ., ಮೊಬೈಲ್, ಇಂಟರ್ನೆಟ್, ಗೂಗಲ್ ಯಾವುದೂ ಇರಲಿಲ್ಲ. ತಕ್ಷಣದ ಸುದ್ದಿ ತಿಳಿಯಲು ಸರ್ಕಾರಿ ನಿಯಂತ್ರಿತ ಆಕಾಶವಾಣಿ ಹಾಗೂ ನಿಖರ ಸುದ್ದಿಗಾಗಿ ಅಂದಿನ ದಿನಪತ್ರಿಕೆಗಳನ್ನೇ ಅವಲಂಬಿಸಬೇಕಾಗಿತ್ತು. ಬೆಳಿಗ್ಗೆ 7.35ಕ್ಕೆ ದೆಹಲಿ ಕೇಂದ್ರದಿಂದ ಪ್ರಸಾರವಾಗುತ್ತಿದ್ದ ಕನ್ನಡ ವಾರ್ತೆಗಳನ್ನು ಬೆಂಗಳೂರು ಆಕಾಶವಾಣಿ ಬಿತ್ತರಿಸಿದಾಗಲೇ ತಿಳಿದದ್ದು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಗಿದೆ ಎಂದು! ಜಯಪ್ರಕಾಶ ನಾರಾಯಣ, ಎಲ್.ಕೆ.ಅಡ್ವಾಣಿ ಸೇರಿದಂತೆ ಸಾಲು ಸಾಲು ವಿರೋಧಿ ನಾಯಕರ ಬಂಧನ, ಪತ್ರಿಕಾ ಸೆನ್ಸಾರ್ ಅತ್ತ ರಾಜಕೀಯ ವಲಯದಲ್ಲಿ ನಡೆದರೆ, ಇತ್ತ ಜಮೀನುದಾರರ ಮನೆಗಳಲ್ಲಿ ಕೆಲಸಕ್ಕಿದ್ದ ಜೀತದಾಳುಗಳೆಲ್ಲ ಊರಿಂದಲೇ ನಾಪತ್ತೆಯಾದರು. ಇದರಿಂದ ಕೆಲಸಗಾರರು ಇಲ್ಲದೆ ಮನೆ ಯಜಮಾನರೇ ಕೊಟ್ಟಿಗೆ ಕಸ ಗುಡಿಸುವಂತೆ ಆಗಿತ್ತು. ಅಂಗಡಿಗಳಲ್ಲಿ ಗಿರವಿ ಇಟ್ಟಿದ್ದ ಒಡವೆಗಳನ್ನು ಪೊಲೀಸರೇ ಮುಂದೆ ನಿಂತು ಬಿಡಿಸಿಕೊಟ್ಟಿದ್ದರು. ಆದರೆ 1977ರ ಲೋಕಸಭಾ ಚುನಾವಣೆಯಲ್ಲಿ ಇಡೀ ದೇಶದ ಜನರು ಅಂತಹ ಮಹಾನ್ ನಾಯಕಿ ಇಂದಿರಾ ಗಾಂಧಿಯವರನ್ನೇ ಹೀನಾಯವಾಗಿ ಸೋಲಿಸಿ, ದೇಶದ ಪ್ರಥಮ ಕಾಂಗ್ರೆಸ್ಸೇತರ ಅಂದರೆ ಜನತಾ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತಂದದ್ದು ಮತ್ತೊಂದು ಇತಿಹಾಸ. ಅದು ದೇಶದ ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮವೇ ಸರಿ. ಯಾರು ಏನೇ ಹೇಳಲಿ, ಇದೀಗ ನಡೆದ ಲೋಕಸಭಾ ಚುನಾವಣೆಯ ಫಲಿತಾಂಶ ಕೂಡ ಅದಕ್ಕೆ ತೀರಾ ಹತ್ತಿರವಾಗಿದೆ.

ಮುಳ್ಳೂರು ಪ್ರಕಾಶ್, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಸಿಲಿನ ಝಳಕ್ಕೆ 1,301 ಮಂದಿ ಬಲಿ

ಹಜ್ ಯಾತ್ರೆಗೆ ಬಿಸಿಯಾಘಾತ

• ಸುಕೃತ ಎಸ್.

ಹಜ್ ಯಾತ್ರೆ ಎಂಬುದು ಪರಂಪರಾಗತವಾಗಿ ಅತ್ಯಂತ ಕ್ಲಿಷ್ಟಕರವಾದ ಒಂದು ಯಾತ್ರೆ. ಹಜ್ ಯಾತ್ರೆಗೆ ಹೋಗಿ ಅಲ್ಲಿಯೇ ನಿಧನರಾದರೆ ಅದೇ ಪುಣ್ಯ ಎಂಬ ಭಾವನೆ ಬಹಳ ಹಿಂದಿನಿಂದ ಇತ್ತು. ಆದರೆ ಆಧುನಿಕತೆಗೆ ತೆರೆದುಕೊಂಡಂತೆ ಹಜ್ ಯಾತ್ರೆ ಕೂಡ ಹೆಚ್ಚು ಹೆಚ್ಚು ಸರಳವಾಗುತ್ತಾ ಸಾಗಿದೆ. ಮೆಕ್ಕಾ ಸೌದಿ ಅರೇಬಿಯಾದಲ್ಲಿ ಇದೆ. ಅಲ್ಲಿನ ಸರ್ಕಾರ ಹಜ್ ಯಾತ್ರೆಯನ್ನು ಸುರಳೀತಗೊಳಿಸಲು ಹತ್ತು ಹಲವು ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಅತಿ ಹೆಚ್ಚಿನ ಕಾಳಜಿಯನ್ನೂ ವಹಿಸುತ್ತಿದೆ. ಹಾಗಿದ್ದರೂ ಹಜ್ ಯಾತ್ರೆಯಲ್ಲಿ ಆಗಾಗ ದೊಡ್ಡ ದೊಡ್ಡ ದುರಂತಗಳು ಘಟಿಸುತ್ತಿವೆ. ಈ ಬಾರಿಯ ಹಜ್ ಯಾತ್ರೆಯಲ್ಲಿ 1,300ಕ್ಕೂ ಹೆಚ್ಚು ಜನರು ಬಿಸಿಲಾಘಾತದಿಂದ ಮೃತಪಟ್ಟಿದ್ದಾರೆ. ಮೃತಪಟ್ಟವರದಲ್ಲಿ 98 ಮಂದಿ ಭಾರತೀಯರೂ ಇದ್ದಾರೆ ಎಂದು ವರದಿಯಾಗಿದೆ. ಇದು ಹೆಚ್ಚು ಕಳವಳಕಾರಿಯಾದ ವಿಚಾರ. ಈ ಬಾರಿ ಈ ಮಟ್ಟದ ಸಾವು ನೋವು ಆಗಿರುವುದು ಹಲವು ವಿಚಾರಗಳ ಕಡೆಗೆ ನಾವೆಲ್ಲರೂ ಗಮನ ಹರಿಸುವಂತೆ ಮಾಡಿದೆ.

ಈ ಬಾರಿಯ ಹಜ್ ಯಾತ್ರೆಯು ಸಮಸ್ಯೆಯ ಹಲವು ಮಜಲುಗಳನ್ನು ತೆರೆದಿಟ್ಟಿದೆ. ಹಜ್ ವೀಸಾ ಇಲ್ಲದೆಯೇ ಯಾತ್ರೆಯಲ್ಲಿ ಅಕ್ರಮವಾಗಿ ಪಾಲ್ಗೊಳ್ಳುವುದು, ಅಕ್ರಮವಾಗಿ ಪಾಲ್ಗೊಂಡ ಕಾರಣಕ್ಕಾಗಿಯೇ ಹಲವು ಅನುಕೂಲಗಳು ದೊರೆಯದೇ ಇರುವುದು, ವಿವಿಧ ದೇಶಗಳಿಂದ ಜನರನ್ನು ಅಕ್ರಮವಾಗಿ ಯಾತ್ರೆಯಲ್ಲಿ ಸೇರಿಸುವ ಏಜೆನ್ಸಿಗಳ ಭ್ರಷ್ಟಾಚಾರ, ಅಕ್ರಮ ಜಾಲವನ್ನು ಭೇದಿಸುವಲ್ಲಿ ಸೌದಿ ಅರೇಬಿಯಾ ಸರ್ಕಾರ ಸೋತಿರುವುದು... ಇವೆಲ್ಲದರ ಜೊತೆಗೆ, ಬಿಸಿಗಾಳಿಯಿಂದ ಈ ಬಾರಿ 1,301 ಮಂದಿ ಮೃತಪಟ್ಟಿದ್ದಾರೆ. ಹೀಗೆ ಸಮಸ್ಯೆ ಮತ್ತು ದುರಂತಗಳ ಮಧ್ಯೆಯೇ ಈ ಯಾತ್ರೆ ಸಮಾಪ್ತಿಯಾಗಿದೆ.

'ಬಿಸಿಗಾಳಿಯಿಂದಾಗಿ ಮೃತಪಟ್ಟಿರುವವರಲ್ಲಿ ಶೇ 83ರಷ್ಟು ಜನರು ಹಜ್ ವೀಸಾ ಇಲ್ಲದೆಯೇ, ಅಕ್ರಮವಾಗಿ ಯಾತ್ರೆಯಲ್ಲಿ ಭಾಗಿಯಾದವರು' ಎಂದು ಸೌದಿ ಅರೇಬಿಯಾ ಸರ್ಕಾರ ಹೇಳಿಕೆ ನೀಡಿದೆ. ಬಿಸಿಗಾಳಿಯಲ್ಲಿ ಮೃತಪಡುವುದಕ್ಕೂ ಅಕ್ರಮ ಯಾತ್ರಿಗಳಿಗೂ ಏನು ಸಂಬಂಧ ಎಂಬ ಪ್ರಶ್ನೆ ಉದ್ಭವಿಸದೇ ಇರದು. ಇದಕ್ಕೆ ಉತ್ತರ ಕಂಡುಕೊಳ್ಳುವುದರಲ್ಲಿಯೇ ಸಮಸ್ಯೆಗಳು ಅರ್ಥವಾಗುತ್ತವೆ. ಸಾಮಾನ್ಯವಾಗಿ ಬೇಸಿಗೆಯಲ್ಲಿ, ಮೆಕ್ಕಾದಲ್ಲಿ 40 ಡಿಗ್ರಿ ಸೆಲ್ಸಿಯಸ್ ಉಷ್ಣತೆ ಇರುತ್ತದೆ. ಆದರೆ, ಈ ಬಾರಿ ಗರಿಷ್ಠ ಉಷ್ಣತೆಯು 51 ಡಿಗ್ರಿ ಸೆಲ್ಸಿಯಸ್ ತಲುಪಿತ್ತು. 6 ದಿನಗಳ ಈ ಯಾತ್ರೆಯಲ್ಲಿ ಯಾತ್ರಾರ್ಥಿಗಳು ಪಾದಯಾತ್ರೆ ನಡೆಸುತ್ತಾರೆ, ಹಲವು ಸಂಪ್ರದಾಯಗಳನ್ನು ಬಯಲಿನಲ್ಲಿಯೇ ಆಚರಿಸುತ್ತಾರೆ. ಹೀಗೆ ಸೂರ್ಯನಿಗೆ ತೆರೆದುಕೊಂಡಿರುವುದರಿಂದ ಬಿಸಿಗಾಳಿಯ ಪರಿಣಾಮಕ್ಕೆ ಬಲಿಯಾಗುವ ಸಂಭವ ಹೆಚ್ಚು ಎಂದು ವಿಶ್ಲೇಷಿಸಲಾಗಿದೆ.

ಈ ಬಾರಿ ಸುಮಾರು 18 ಲಕ್ಷ ಜನರು ಹಜ್ ವೀಸಾ ಪಡೆದು ಯಾತ್ರೆ ಕೈಗೊಂಡಿದ್ದಾರೆ. ಇಷ್ಟು ಜನರಿಗಾಗಿ ಎಲ್ಲ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿತ್ತು. ಬಿಸಿಯಾಘಾತದಿಂದ ಯಾತ್ರಾರ್ಥಿಗಳಿಗೆ ತೊಂದರೆಯಾಗುವುದನ್ನು ತಡೆಯಲೂ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಬಿಸಿಯಾಘಾತಕ್ಕೆ ತುತ್ತಾದವರಿಗೆಂದೇ ತುರ್ತು ಚಿಕಿತ್ಸಾ ಕೇಂದ್ರಗಳು, ವಿಶ್ರಾಂತಿ ಕೇಂದ್ರಗಳನ್ನು ತೆರೆಯಲಾಗಿತ್ತು. ಆದರೆ, ಅಕ್ರಮವಾಗಿ ಯಾತ್ರೆ ಕೈಗೊಂಡವರು ಬಿಸಿಲಿನಿಂದ ಬಳಲಿದರೂ, ಈ ನೆರವನ್ನು ಪಡೆದುಕೊಂಡಿಲ್ಲ. ನೆರವು ಪಡೆಯಲು ಅಧಿಕಾರಿಗಳನ್ನು ಸಂಪರ್ಕಿಸಿದರೆ, ದಂಡ ಮತ್ತು ಬಂಧನದ ಕ್ರಮ ಎದುರಿಸಬೇಕಾಗುತ್ತದೆ ಎಂದು ನೆರವು ಪಡೆದುಕೊಂಡಿಲ್ಲ. ಅಂತಹವರಲ್ಲೇ ಹೆಚ್ಚಿನ ಮಂದಿ ಮೃತಪಟ್ಟಿದ್ದಾರೆ ಎಂದು ಸರ್ಕಾರ ಹೇಳಿದೆ.

ಈಚಿನ ಕೆಲವು ಅವಘಡಗಳು

2001: ಯಾತ್ರೆಯ ಕೊನೆಯ ದಿನ ಮೀನಾದಲ್ಲಿ ನಡೆದ ಕಾಲ್ತುಳಿತದಲ್ಲಿ 35 ಮಂದಿ ಮೃತಪಟ್ಟಿದ್ದರು

2003: ಸೈತಾನನಿಗೆ ಕಲ್ಲೆಸೆಯುವ ಸಂದರ್ಭದಲ್ಲಿ 14 ಮಂದಿ ಮೃತಪಟ್ಟಿದ್ದರು

2004: ಯಾತ್ರೆಯ ಕೊನೆಯ ದಿನ ನಡೆದ ಕಾಲ್ತುಳಿತದಿಂದಾಗಿ ಮೀನಾದಲ್ಲಿ 250 ಮಂದಿ ಮೃತಪಟ್ಟಿದ್ದರು

2005: ಸೈತಾನನಿಗೆ ಕಲ್ಲೆಸೆಯುವ ಸಂದರ್ಭದಲ್ಲಿ ಮೂವರ ಮೃತಪಟ್ಟಿದ್ದರು

2006: ಸೈತಾನನಿಗೆ ಕಲ್ಲೆಸೆಯುವ ಸಂದರ್ಭದಲ್ಲಿ ನಡೆದ ಕಾಲ್ತುಳಿತದಲ್ಲಿ 360 ಮಂದಿ ಮೃತಪಟ್ಟಿದ್ದಾರೆ. ಇದೇ ವರ್ಷದ ಜನವರಿ 12ರಂದು ಇನ್ನೊಂದು ಘಟನೆಯಲ್ಲಿ ಮೆಕ್ಕಾದ ಮಸೀದಿ ಬಳಿ ಇರುವ ಹಾಸ್ಟೆಲ್‌ವೊಂದು ಕುಸಿದು ಬಿದ್ದು 73 ಮಂದಿ ಮೃತಪಟ್ಟಿದ್ದರು. ಜನವರಿ 6ರಂದು ಇಂಥದ್ದೆ ಘಟನೆ ನಡೆದಿತ್ತು ಮತ್ತು 76 ಮಂದಿ ಮೃತಪಟ್ಟಿದ್ದರು

2015: ಮೆಕ್ಕಾದ ಮಸೀದಿಯ ಮೇಲೆ ಕ್ರೇನ್ ಬಿದ್ದು, 107 ಜನರು ಮೃತಪಟ್ಟು ಸುಮಾರು 400 ಜನರು ಗಾಯಗೊಂಡಿದ್ದರು. ಇನ್ನೊಂದು ಘಟನೆಯಲ್ಲಿ, ಮೀನಾದಲ್ಲಿ ಘಟಿಸಿದ ಕಾಲ್ತುಳಿತದಿಂದಾಗಿ 310 ಜನರು ಮೃತಪಟ್ಟಿದ್ದರು

ಬಿಸಿಲಿನಿಂದ ರಕ್ಷಿಸಿಕೊಳ್ಳಲು ಜನರು ಕೊಡೆ ಹಿಡಿದು, ಕ್ಷಮೆ ಬೆಟ್ಟವನ್ನು ಪಾದಯಾತ್ರೆಯ ಮೂಲಕ ತಲುಪಿದರು —ಎಎಫ್‌ಪಿ ಚಿತ್ರ

₹4.17 ಲಕ್ಷ – ₹8.34 ಲಕ್ಷ
ಹಜ್ ವೀಸಾ ಪಡೆದು ಯಾತ್ರೆಯಲ್ಲಿ ಪಾಲ್ಗೊಳ್ಳುವವರಿಗೆ ತಗುಲುವ ವೆಚ್ಚ

₹1.66 ಲಕ್ಷ
ಅಕ್ರಮವಾಗಿ ಯಾತ್ರೆಯಲ್ಲಿ ಭಾಗವಹಿಸಲು ಈಜಿಪ್ಟ್ ಪ್ರಜೆಗಳು ವಿವಿಧ ಏಜೆನ್ಸಿಗಳಿಗೆ ನೀಡಿದ ಹಣ

₹19.18 ಲಕ್ಷ
ಪ್ರವಾಸಿ ಏಜೆನ್ಸಿಯೊಂದು ಅಮೆರಿಕದ ಇಬ್ಬರು ಪ್ರಜೆಗಳಿಂದ ಅಕ್ರಮವಾಗಿ ಯಾತ್ರೆಯಲ್ಲಿ ಪಾಲ್ಗೊಳ್ಳಲು ಪಡೆದುಕೊಂಡ ಹಣ

ಜೀವಕ್ಕೆ ಸವಾಲೊಡ್ಡುವ ಬಿಸಿಲಿನಲ್ಲಿ ನಡಿಗೆ

ವಿಶ್ವದಾದ್ಯಂತ ನಾನಾ ಭಾಗಗಳಿಂದ ಲಕ್ಷಾಂತರ ಮಂದಿ ಮೆಕ್ಕಾಗೆ 6 ದಿನಗಳ ಹಜ್ ಯಾತ್ರೆಯನ್ನು ಕೈಗೊಳ್ಳುತ್ತಾರೆ. ಸೌದಿ ಅರೇಬಿಯಾ ಸರ್ಕಾರವು ಇದಕ್ಕಾಗಿ ಒಂದು ಸಚಿವಾಲಯವನ್ನೇ ರಚಿಸಿದೆ. ಮಾಹಿತಿ, ಆರೋಗ್ಯ, ಸಂಚಾರ ಸೇರಿದಂತೆ ಹಲವು ಇತರ ಇಲಾಖೆಗಳು ಯಾತ್ರೆಯ ತಯಾರಿಯಲ್ಲಿ ಮತ್ತು ನಿರ್ವಹಣೆಯಲ್ಲಿ ತೊಡಗಿಕೊಳ್ಳುತ್ತವೆ. ಲಕ್ಷಾಂತರ ಮಂದಿ ಭಾಗವಹಿಸುವುದರಿಂದ ಆಯೋಜನೆಯೂ ವ್ಯವಸ್ಥಿತವಾಗಿ ಇರಬೇಕು. ವ್ಯವಸ್ಥೆಯ ಲೋಪದಿಂದಾಗಿ ಈ ಹಿಂದೆಯೂ ಹಲವು ಅವಘಡ ಸಂಭವಿಸಿದೆ



ಬಿಸಿಗಾಳಿಯ ತಾಪ ತಡೆಯಲು ಹಲವಾರು ವ್ಯವಸ್ಥೆ

- ಯಾತ್ರೆಯಲ್ಲಿ ಒಟ್ಟು 50–60 ಕಿ.ಮೀ ಪಾದಯಾತ್ರೆ ಮಾಡಬೇಕಾಗುತ್ತದೆ. ಈ ಕಾರಣದಿಂದ ರಸ್ತೆಯುದ್ದಕ್ಕೂ ಅಲ್ಲಲ್ಲಿ, ಸ್ಪ್ರಿಂಕ್ಲರ್ ವ್ಯವಸ್ಥೆಯನ್ನು ಮಾಡಲಾಗಿದೆ. ವಿಶೇಷ ರಬ್ಬರ್‌ಗಳನ್ನು ಬಳಸಿ ರಸ್ತೆಗಳನ್ನು ನಿರ್ಮಿಸಲಾಗಿದ್ದು, ಇದು ಉಷ್ಣಾಂಶವನ್ನು 10 ಡಿಗ್ರಿ ಸೆಲ್ಸಿಯಸ್‌ನಿಂದ 20 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಮಾಡಲಿದೆ
- ಕಾಬಾ ಇರುವ ಮಸೀದಿಯಲ್ಲಿ ಸಂಪೂರ್ಣ ಹವಾನಿಯಂತ್ರಿತ ವ್ಯವಸ್ಥೆ ಇದೆ. ಜಗತ್ತಿನ ಅತಿ ದೊಡ್ಡ ಹವಾನಿಯಂತ್ರಿತ ವ್ಯವಸ್ಥೆ ಇದಾಗಿದೆ. ಬಿಸಿ ತಡೆದುಕೊಳ್ಳುವ ಕ್ಷಮತೆಯ ಮಾರ್ಬಲ್‌ನ ಅಡಿಹಾಸು ಹಾಕಲಾಗಿದೆ
- ಜಮಾರತ್ ಸೇತುವೆಯು ಒಮ್ಮೆಗೇ ಅತಿ ಹೆಚ್ಚು ಜನರು ಸೇರುವ ಸ್ಥಳವಾಗಿದೆ. ಕಲ್ಲು ಎಸೆಯುವ ಸಂಪ್ರದಾಯ ಇರುವುದರಿಂದ ಜನರಿಗೆ ಅಪಾಯವಿದೆ. ಈಗ ಇದನ್ನು 6ಲಕ್ಷಕ್ಕೆ ಏರಿಸಲಾಗಿದೆ ಮತ್ತು ಇದಕ್ಕೆ ತಕ್ಕಂತೆ ಕಟ್ಟಡವನ್ನು ವಿಸ್ತರಿಸಿ, ನಿರ್ಮಿಸಲಾಗಿದೆ. ಒಂದೇ ಮಹಡಿಯ ಕಟ್ಟಡವು ಈಗ ಬಹುಮಹಡಿಯ ಕಟ್ಟಡವಾಗಿದೆ. ಈ ಸಂದರ್ಭದಲ್ಲಿ ಸಾವಾಗದಂತೆ ತಡೆಯಲು, ಬ್ಯಾಚ್ ವ್ಯವಸ್ಥೆ ಮಾಡಲಾಗಿದೆ. ತುರ್ತು ನಿರ್ಗಮನ ವ್ಯವಸ್ಥೆಯೂ ಇದೆ
- ಅರಾಫತ್‌ನಲ್ಲಿ ಆಸ್ಪತ್ರೆಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಇಲ್ಲಿಯೇ 42 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಮೆಕ್ಕಾದಲ್ಲಿ 27, ಮಿನಾನಾದಲ್ಲಿ 30 ಹಾಗೂ ಮುಜ್ದಲಿಫಾದಲ್ಲಿ 7 ಇಂಥ ಕೇಂದ್ರಗಳಿವೆ. ಬಿಸಿಗಾಳಿಯ ಕಾರಣಕ್ಕಾಗಿ ಈ ಬಾರಿ ಹಲವು ಕೇಂದ್ರಗಳಲ್ಲಿ ಬಿಸಿಗಾಳಿಗೆ ತುತ್ತಾಗುವ ಜನರಿಗಾಗಿಯೇ ಪ್ರತ್ಯೇಕ ವಿಭಾಗಗಳನ್ನು ತೆರೆಯಲಾಗಿತ್ತು
- ಅರಾಫತ್‌ನಲ್ಲಿ ಸುಮಾರು 6 ಲಕ್ಷ ಹೆಬ್ಬೇವಿನ ಮರಗಳಿವೆ. ಈ ಮರಗಳಿಗೆ ಹೊಂದಿಕೊಂಡಂತೆ ಹವಾನಿಯಂತ್ರಿತ ಟೆಂಟ್ ವ್ಯವಸ್ಥೆ ಮಾಡಲಾಗಿತ್ತು. ಬಿಸಿಲಿನಿಂದ ಬಳಲಿದವರು ಇಲ್ಲಿ ವಿಶ್ರಾಂತಿ ಪಡೆಯಬಹುದಾಗಿತ್ತು

ಪ್ರಜಾವಾಣಿ 2ನೇ ಆವೃತ್ತಿ
ಕನ್ನಡ ಸಿನಿ ಸಮ್ಮಾನ

ಜೂನ್ 28ಕ್ಕೆ ಅದ್ದೂರಿ ಕಾರ್ಯಕ್ರಮ

ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿರುವ **'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'**ದ ಎರಡನೇ ಆವೃತ್ತಿ ಜೂನ್ 28ರಂದು ಅದ್ದೂರಿಯಾಗಿ ನಡೆಯಲಿದೆ.

ತನ್ನ 'ಅಮೃತ ಸಂಭ್ರಮ'ದ ಸಂದರ್ಭದಲ್ಲಿ 'ಪ್ರಜಾವಾಣಿ' ಪ್ರಾರಂಭಿಸಿದ್ದ ಈ 'ಸಿನಿ ಸಮ್ಮಾನ'ವೆಂಬ ವರ್ಣರಂಜಿತ, ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಈ ಬಾರಿ ಚಂದನವನದ ಪ್ರಸಿದ್ಧ ನಟ–ನಟಿಯರು, ಚಿತ್ರರಂಗದ ಗಣ್ಯರು ಭಾಗವಹಿಸಲಿದ್ದಾರೆ. 2023ರಲ್ಲಿ ತೆರೆಕಂಡ ಸಿನಿಮಾಗಳನ್ನು ಈ ಬಾರಿಯ ಪ್ರಶಸ್ತಿಗೆ ಪರಿಗಣಿಸಲಾಗಿದ್ದು, ತಲಾ ಐವರಂತೆ ಒಟ್ಟು 25 ವಿಭಾಗಗಳಲ್ಲಿ ಪ್ರಶಸ್ತಿಗೆ ನೂರಕ್ಕೂ ಅಧಿಕ ಜನರು ನಾಮನಿರ್ದೇಶನಗೊಂಡಿದ್ದಾರೆ. ಈ ಪೈಕಿ ಯಾರ ಮುಡಿಗೆ ಈ ಚೆಂದದ ಸಮ್ಮಾನ ಎನ್ನುವುದು ಜೂನ್ 28ರಂದೇ ಘೋಷಣೆಯಾಗಲಿದೆ.

ವರ್ಷದ ಅತ್ಯುತ್ತಮ ಚಿತ್ರ (2023) ವಿಭಾಗದಲ್ಲಿ 'ಪಿಂಕಿ ಎಲ್ಲಿ?', 'ಸ್ವಾತಿ ಮುತ್ತಿನ ಮಳೆ ಹನಿಯೇ', 'ವಿರಾಟಪುರ ವಿರಾಗಿ', 'ಕಾಟೇರ' ಹಾಗೂ 'ಡೇರ್‌ಡೆವಿಲ್ ಮುಸ್ತಾಫಾ' ನಾಮನಿರ್ದೇಶನಗೊಂಡಿದೆ.

ಅತ್ಯುತ್ತಮ ನಟ ವಿಭಾಗದಲ್ಲಿ 'ಘೋಸ್ಟ್' ಚಿತ್ರದಲ್ಲಿನ ನಟನೆಗಾಗಿ ಶಿವರಾಜ್‌ಕುಮಾರ್, 'ಸ್ವಾತಿ ಮುತ್ತಿನ ಮಳೆ ಹನಿಯೇ' ಹಾಗೂ 'ಟೋಬಿ' ಚಿತ್ರದಲ್ಲಿನ ನಟನೆಗಾಗಿ ರಾಜ್ ಬಿ.ಶೆಟ್ಟಿ, 'ಡೇರ್‌ಡೆವಿಲ್ ಮುಸ್ತಾಫಾ' ಚಿತ್ರದಲ್ಲಿನ ನಟನೆಗಾಗಿ ಶಿಶಿರ ಬೈಕಾಡಿ ನಾಮನಿರ್ದೇಶನಗೊಂಡಿದ್ದಾರೆ.

ಅತ್ಯುತ್ತಮ ನಟಿ ವಿಭಾಗದಲ್ಲಿ 'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರದಲ್ಲಿನ ನಟನೆಗಾಗಿ ಸಿರಿ ರವಿಕುಮಾರ್, 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದಲ್ಲಿನ ನಟನೆಗಾಗಿ ರುಕ್ಮಿಣಿ ವಸಂತ್, 'ಪಿಂಕಿ ಎಲ್ಲಿ?' ಚಿತ್ರದಲ್ಲಿನ ನಟನೆಗಾಗಿ ಅಕ್ಷತಾ ಪಾಂಡವಪುರ, 'ಆಚಾರ್ ಆ್ಯಂಡ್ ಕೋ.' ಚಿತ್ರದಲ್ಲಿನ ನಟನೆಗಾಗಿ ಸಿಂಧು ಶ್ರೀನಿವಾಸ ಮೂರ್ತಿ, 'ಕೌಸಲ್ಯಾ ಸುಪ್ರಜಾ ರಾಮ' ಸಿನಿಮಾದಲ್ಲಿನ ನಟನೆಗಾಗಿ ಮಿಲನ ನಾಗರಾಜ್ ನಾಮನಿರ್ದೇಶನಗೊಂಡಿದ್ದಾರೆ.

ಅತ್ಯುತ್ತಮ ನಿರ್ದೇಶನ ವಿಭಾಗದಲ್ಲಿ ಬಿ.ಎಸ್.ಲಿಂಗದೇವರು, ಹೇಮಂತ್ ಎಂ.ರಾವ್, ಪೃಥ್ವಿ ಕೊಣನೂರು, ಸಿಂಧು ಶ್ರೀನಿವಾಸ ಮೂರ್ತಿ, ಶಶಾಂಕ್ ಸೋಗಾಲ್ ನಾಮನಿರ್ದೇಶನಗೊಂಡಿದ್ದಾರೆ.

ಜೊತೆಗೆ 'ಜನ ಮೆಚ್ಚಿದ ನಟ', 'ಜನ ಮೆಚ್ಚಿದ ನಟಿ', 'ಜನ ಮೆಚ್ಚಿದ ಸಿನಿಮಾ', 'ಜನ ಮೆಚ್ಚಿದ ಸಂಗೀತ' ಹೀಗೆ ನಾಲ್ಕು ವಿಭಾಗಗಳಲ್ಲಿ ಜನರೇ ಮತದಾನ ಮಾಡಿ ಕಲಾವಿದರ ಮುಡಿಗೆ ವಿಜಯದ ಕಿರೀಟ ತೊಡಿಸಬಹುದು. ವೋಟ್ ಮಾಡಲು ಈ ಲಿಂಕ್‌ಗೆ ಭೇಟಿ ನೀಡಿ.

bit.ly/prajavanicinesammanS2

ವೋಟ್ ಮಾಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಗೊತ್ತಿದ್ದೂ ತಪ್ಪು ಮಾಡುವುದೇ?

ನುಡಿ ಬೆಳಗು



ಪಿ. ಚಂದ್ರಿಕಾ

ನದಿಯ ದಂಡೆಯ ಮೇಲೆ ಕುಳಿತ ಆಮೆಯನ್ನು ಚೇಳು ಕೇಳಿತು. 'ಪ್ರವಾಹ ಇದೆ, ದಯಮಾಡಿ ನನ್ನನ್ನು ಆ ದಡಕ್ಕೆ ಸೇರಿಸು. ನಿನ್ನ ಬೆನ್ನ ಮೇಲೆ ಕುಳಿತು ನಾನು ನದಿಯನ್ನು ದಾಟುವೆ' ಎಂಬುದಾಗಿ. 'ನಿನ್ನ ನಾನು ಹೇಗೆ ನಂಬಲಿ? ಬೆನ್ನ ಮೇಲೆ ಏರಿ ನಾನು ನದಿ ಮಧ್ಯಕ್ಕೆ ಹೋದಾಗ ನೀನು ಕುಟುಕಿ ಬಿಟ್ಟರೆ ನಾನಲ್ಲೇ ಸಾಯುತ್ತೇನಲ್ಲ. ನಿನ್ನ ಕುಟುಕುವ ಮೂಲಗುಣದಿಂದ ನೀನು ಹೇಗೆ ದೂರವಾಗುತ್ತೀಯಾ' ಎಂದು ಆಮೆ ಕೇಳಿತು. ಆಗ ಚೇಳು, 'ಅಲ್ಲಪ್ಪಾ ನದೀಮಧ್ಯದಲ್ಲಿದ್ದಾಗ ನಾನು ಕುಟುಕಿ ನೀನು ಸತ್ತರೆ ಈಜುಬಾರದ ನಾನು ಬದುಕುತ್ತೇನೆಯೇ? ನಾನೂ ಸಾಯುತ್ತೇನಲ್ಲವೇ ಇಷ್ಟೂ ಸರಳ ಸತ್ಯ ನನಗೆ ತಿಳಿಯದೆ? ನೀನೂ ಅರ್ಥ ಮಾಡಿಕೊಂಡು ನನ್ನನ್ನು ನಿನ್ನೊಂದಿಗೆ ಕರೆದೊಯ್ಯು' ಎಂದಿತು.

ಜೊತೆಗಾರ ಆಮೆಗಳು ಇಂಥಾ ಕೆಲಸಕ್ಕೆ ಕೈ ಹಾಕಬೇಡವೆಂದು ಬುದ್ಧಿ ಹೇಳಿದವು. 'ಗೊತ್ತಿರುವ ಸತ್ಯಗಳನ್ನು ಮತ್ತೆ ಮತ್ತೆ ಪ್ರಮಾಣೀಕರಿಸುವುದರಲ್ಲಿ ಯಾವ ಅರ್ಥವಿದೆ?' ಎಂದು ಪದೇ ಪದೇ ಸಾರಿ ಹೇಳಿದರೂ ಕೇಳದ ಆಮೆ ಮಾತ್ರ ಚೇಳಿನ ಮಾತಲ್ಲಿ ಸತ್ಯ ಕಂಡು, ತನ್ನ ಜೀವವನ್ನು ಪಣಕ್ಕಿಟ್ಟು 'ನನ್ನನ್ನು ಅದು ಹೇಗೆ ಕುಟುಕೀತು' ಎಂದು ಮರುಪ್ರಶ್ನೆ ಮಾಡಿತು. 'ನಿನ್ನ ಬುದ್ಧಿಯನ್ನು ಯಾರೂ ತಿದ್ದಲಿಕ್ಕೆ ಸಾಧ್ಯವಿಲ್ಲ' ಎಂದು ಬೇಸರಗೊಂಡ ಆಮೆಗಳಿಗೆ, 'ಇದು ಜೀವದ ಪ್ರಶ್ನೆ. ನಾನಿಲ್ಲೇ ಇದನ್ನು ಬಿಟ್ಟು ಹೋದರೆ ಈ ಪ್ರವಾಹದಲ್ಲಿ ಪಾಪ ಸತ್ತೇ ಹೋಗುತ್ತದೆ. ಅದಕ್ಕೆ ಆ ದಡಕ್ಕೆ ದಾಟಿಸುವೆ' ಎಂದು ನಿರ್ಧರಿಸಿಬಿಟ್ಟಿತು.

ಪ್ರವಾಹದಲ್ಲಿ ಆಮೆಯ ಬೆನ್ನೇರಿ ಹೊರಟ ಚೇಳು ನೀರಿನ ಪ್ರವಾಹಕ್ಕೆ ಹೆದರಿ ಸ್ವಲ್ಪ ದೂರ ಹೋಗುವಾಗಲೇ ಕಚ್ಚಿಬಿಟ್ಟಿತು. ವಿಷವೇರಿ ಆಮೆ ನದಿಯಲ್ಲಿ ಸಾವು ಬದುಕಿನ ಕ್ಷಣಗಳನ್ನು ಎದುರಿಸುತ್ತಾ ಕೇಳಿತು, 'ನನ್ನ ಕಚ್ಚುವುದಿಲ್ಲ ಎಂದು ಹೇಳಿದೆಯಲ್ಲಾ? ನಿನ್ನ ಮಾತನ್ನು ನಂಬಿದ್ದಕ್ಕೆ ನಾನು ಈಗ ಸಾಯುತ್ತಿರುವೆ. ಇದು ನಿನಗೆ ನ್ಯಾಯವೇ?' ಎಂದಿತು. ಆಗ ಚೇಳೂ ಮುಳುಗುತ್ತಾ, 'ಮಾತು ಕೊಟ್ಟಿದ್ದೆ. ಕಚ್ಚಬಾರದು ಎಂದೂ ಮನಸ್ಸೂ ಮಾಡಿದ್ದೆ. ಆದರೆ ಸಂದರ್ಭ ಬಂದಾಗ ನನ್ನ ಸ್ವಭಾವವೇ ಎದ್ದು ನಿಲ್ಲುತ್ತದೆ. ಅದು ನನ್ನ ದೌರ್ಬಲ್ಯವೂ ಹೌದು' ಎಂದಿತು. ಆಗ ಆಮೆ, 'ನಿನ್ನ ಬದಲಾಗದ ಸ್ವಭಾವದಿಂದ ನಾವಿಬ್ಬರೂ ಸಾಯುತ್ತಿದ್ದೇವೆ. ಕೊನೆಗೂ ನನ್ನ ಜೊತೆಗಾರ ಆಮೆಗಳೆಲ್ಲಾ ಹೇಳಿದ್ದೇ ಸತ್ಯವಾಯಿತು' ಎಂದಿತು. ಪ್ರವಾಹದಲ್ಲಿ ಆಮೆ ಮತ್ತು ಚೇಳು ಎರಡು ಜೀವ ಬಿಟ್ಟವು.

ಯಾವುದನ್ನು ಮಾಡಬೇಕು ಮತ್ತು ಮಾಡಬಾರದು ಎನ್ನುವುದನ್ನು ವಿವೇಕದಿಂದ ತಿಳಿದುಕೊಳ್ಳಬೇಕು. ಬದಲಾಗದು ಎಂದು ಗೊತ್ತಿರುವ ಸತ್ಯವನ್ನು ಮತ್ತೆ ಮತ್ತೆ ಒರೆಹಚ್ಚಿ ನೋಡಬಾರದು. ನಮಗೆ ಇಂಥವರು ತೊಂದರೆ ಕೊಡಬಹುದು ಎನ್ನುವ ಸಣ್ಣ ಸೂಕ್ಷ್ಮತೆ ಗೊತ್ತಿದ್ದರೆ ಅಂಥವರಿಂದ, ಅಂಥಾ ಸಂಗತಿಗಳಿಂದ ದೂರವಿರಬೇಕು. ಪುಟ್ಟ ಮಗು ಒಮ್ಮೆ ದೀಪವನ್ನು ಮುಟ್ಟಿ ಕೈಸುಟ್ಟುಕೊಂಡಿದ್ದನ್ನು ಮರೆಯದೆ, ಮತ್ತೆಂದೂ ಅದನ್ನು ಮುಟ್ಟುವುದಿಲ್ಲ. ಅಂಥಾದ್ದರಲ್ಲಿ ಗೊತ್ತಿದ್ದರೂ ತಪ್ಪನ್ನು ಮಾಡಿದರೆ ನಮ್ಮಷ್ಟು ಮೂರ್ಖರು, ಅಸಮರ್ಥರು ಬೇರೆ ಯಾರೂ ಇರುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಚತುರ್ಥಿ ಗಂ. 23-12 ನಕ್ಷತ್ರ: ಶ್ರವಣ ಗಂ. 14-33 ಯೋಗ: ವೈಧೃತಿ ಗಂ. 09-06 ಕರಣ: ಬವ ಗಂ. 12-18, ಮಿಥುನ ಮಾಸದ 11 ನೇ ದಿನ, ಮಳೆನಕ್ಷತ್ರ: ಆರ್ದ್ರಾ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-10 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 19 ಜುಲ್‌ಹಿಜಾ , ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ: ರಾತ್ರಿ 10:02), ಅದೃಷ್ಟ ಸಂಖ್ಯೆ : 1, 6

ಮೇಷ: ಸಹಜೀವನದಲ್ಲಿ ದೊರೆಯುವ ಸಹಕಾರ ಹಾಗೂ ಖುಷಿಯನ್ನು ಒಬ್ಬಂಟಿಯಾಗಿ ಜೀವಿಸುತ್ತಿರುವ ನೀವು ಬಹಳವಾಗಿ ನೆನೆಸಿಕೊಳ್ಳುವಿರಿ. ಏಕ ಕಾಲದಲ್ಲಿ ಹತ್ತಾರು ಕೆಲಸಗಳನ್ನು ಮಾಡುವ ಉತ್ಸಾಹ ನಿಮ್ಮಲ್ಲುಂಟಾಗುವುದು.

ವೃಷಭ: ವಿದ್ಯಾಧಿದೇವತೆಯ ಕೃಪಾಕಟಾಕ್ಷದಿಂದ ಬೌದ್ಧಿಕ ಸ್ಪರ್ಧೆಯಲ್ಲಿ ಉತ್ತಮ ಸ್ಥಾನವನ್ನು ಪಡೆಯುವಿರಿ. ದಿನನಿತ್ಯದ ಕೆಲಸಗಳಲ್ಲಿ ಅನಪೇಕ್ಷಿತವಾದ ತೊಡಕುಗಳು ಉಂಟಾಗುತ್ತವೆ.

ಮಿಥುನ: ಮನೆಯಲ್ಲಿ ನಿಮ್ಮ ಶಕ್ತಿಗೂ ಮೀರಿ ನೀವು ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಿದ್ದರೂ ನಿಮ್ಮ ಬಗ್ಗೆ ಲಘುವಾಗಿ ಮಾತನಾಡಿದಾಗ ಕೋಪ ಬಂದರೂ ಸುಮ್ಮನಿರಬೇಕಾದ ಪರಿಸ್ಥಿತಿ ಇರುತ್ತದೆ.

ಕರ್ಕಾಟಕ: ಪ್ರತಿದಿನವು ಗಣಕಯಂತ್ರದ ಮುಂದೆ ನಡೆಯುವ ಕೆಲಸದ ಮೇಲೆ ಬೇಸರ ಬರಬಹುದು. ತನು, ಮನ, ಧನವನ್ನು ಅರ್ಪಿಸಿ ಮಾಡಿದಂಥ ಸಮಾಜಕಾರ್ಯವು ಜನಮನ್ನಣೆಗೊಳಗಾಗುವುದು.

ಸಿಂಹ: ಅತಿಯಾಗಿ ಆಸೆಪಟ್ಟು ಇತರರೊಂದಿಗೆ ವಾಗ್ವಾದ ನಡೆಸಿ ಪಡೆದ ವಸ್ತುವನ್ನು ಬೇಜವಾಬ್ದಾರಿಯಿಂದ ಹಾಳು ಮಾಡಿಕೊಳ್ಳುವಿರಿ. ವಕೀಲೀ ವೃತ್ತಿಯವರಿಗೆ ಗೆಲುವು ಸಾಧಿಸಲು ಬೇಕಾದ ಅವಕಾಶ ಸಿಗಲಿದೆ.

ಕನ್ಯಾ: ಈವರೆಗೂ ನೀವು ಗಳಿಸಿದ ಒಳ್ಳೆಯ ಹೆಸರಿಗೆ ಕುತಂತ್ರಿಗಳು ಮಸಿ ಬಳಿಯುವ ಉಪಾಯವನ್ನು ಮಾಡುವರು. ವೃತ್ತಿರಂಗದಲ್ಲಿ ಅನಿಶ್ಚಿತ ಸ್ಥಾನವು ಉತ್ತಮ ನಡೆಯಿಂದಾಗಿ ನಿಶ್ಚಯವಾಗುತ್ತದೆ.

ತುಲಾ: ಆತುರದಲ್ಲಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮಗನಿಗೆ ತಿಳಿಸುವುದು ಉತ್ತಮ. ವದಂತಿಗಳಿಗೆ ಬೆಲೆಕೊಟ್ಟು ಯಾವುದೇ ತೀರ್ಮಾನಕ್ಕೆ ಬರುವುದು ಸರಿಯಲ್ಲ. ವೃತ್ತಿರಂಗದಲ್ಲಿ ಪರಿಶ್ರಮಕ್ಕೆ ತಕ್ಕ ಯಶಸ್ಸು ಸಿಗಲಿದೆ.

ವೃಶ್ಚಿಕ: ದುಷ್ಟರ ಸಹವಾಸದಿಂದಾಗಿ ಹಾದಿ ತಪ್ಪುತ್ತಿರುವ ಮಕ್ಕಳ ಬಗ್ಗೆ ಎಷ್ಟು ಮೇಲ್ವಿಚಾರಣೆ ನಡೆಸಿದರೂ ಕಡಿಮೆಯೇ. ಕಠಿಣ ಪರಿಶ್ರಮದ ಮೂಲಕ ಮೇಲಧಿಕಾರಿಗಳ ಮನವನ್ನು ಗೆಲ್ಲಲು ಪ್ರಯತ್ನಿಸಿ.

ಧನು: ಅನ್ಯರ ಸಮಸ್ಯೆಗಳಿಗೆ ನಿಮ್ಮ ಮಾತುಗಳಿಂದಾಗಿ ಪರಿಹಾರ ದೊರೆಯುತ್ತದೆ. ಉತ್ಪ್ರೇಕ್ಷೆ ಎನ್ನಿಸುವ ಕೆಲವು ಹೊಗಳಿಕೆಯ ಮಾತುಗಳಿಗೆ ಮರುಳಾಗದಿರಿ. ರಾಜೇಶ್ವರಿಯನ್ನು ಆರಾಧಿಸಿ.

ಮಕರ: ಕಾರ್ಯಸಾಧನೆಗೆ ನಿಮ್ಮ ಪ್ರಯತ್ನದ ಹೊರತಾಗಿ ದೈವಬಲವು ಇರಬೇಕಾಗುತ್ತದೆ ಎಂದು ಅರಿತುಕೊಂಡು ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನಕ್ಕೇರಲು ಇದು ಸಕಾಲವಾಗಿದೆ.

ಕುಂಭ: ಸಭೆಯಲ್ಲಿ ನಿಮ್ಮ ಸ್ಥಾನ ಹಾಗೂ ಇತಿಮಿತಿಗಳನ್ನು ಅರಿಯದ ಹೊರತು ಕನಿಷ್ಠ ಗೌರವ ಸಿಗದು. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ವ್ಯವಸ್ಥಾಪಕರಿಂದ ಈಡೇರಲಿವೆ. ವ್ಯಾಪಾರಿಗಳಿಗೆ ಉತ್ತಮ ದಿನ.

ಮೀನ: ಬಹುಕಾಲದ ಬಳಿಕ ವೃತ್ತಿ ಕ್ಷೇತ್ರದಿಂದ ಮರಳಿ ಬಂದು ಪಾಲಕ, ಪೋಷಕ ಹಾಗು ಸಂಬಂಧಿಗಳನ್ನು ಭೇಟಿಯಾಗುವ ಭಾಗ್ಯ ನಿಮ್ಮದಾಗುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಲಾಭವನ್ನು ಪಡೆಯುವಿರಿ.

ಪದಬಂಧ 5722

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಣಿಯಲ್ಲಿ ಹುಟ್ಟಿದುದು (3)
5.ಗೌರವಪೂರ್ವಕವಾಗಿ ಕೈಮುಗಿದು ತಲೆಬಾಗುವುದು (4)
6.ಭೇದಿಯಾಗಲು ಕೊಡುವ ಔಷಧ (4)
8.ಈತ ಮುಸಲ್ಮಾನ ದೊರೆ (3)
11.ಇದು ಬಹಳ ಶ್ರೇಷ್ಠ (3)
13.ಸಮಾಧಾನವನ್ನು ಹೊಂದಿರುವವನು (4)
17.ಕೈ ಮುಂದು ಮಾಡಿರುವ ಶಿಷ್ಯ! (4)
18.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)

ಮೇಲಿಂದ ಕೆಳಕ್ಕೆ
1.ಆಕಾಶದಲ್ಲಿ ಸಂಚರಿಸುವಂಥದ್ದು (3)
2.ಮಂದಿಯ ಮನಸ್ಸಿದು (4)
3.ಕೊಡದಂತಿರುವ ದೊಡ್ಡ ಪಾತ್ರೆ (3)
4.ಇದು ಪುಷ್ಪದ ಪಲ್ಲಂಗ (3)
7.ಆನೆಯ ವಂದರಿ ಇಲ್ಲಿದೆ (3)
9.ಸ್ಲೇಟಿನ ಮೇಲೆ ಬರೆಯುವ ಸಾಧನ (3)
10.ಏನೇನೂ ಸತ್ವ ಇಲ್ಲದಿರುವುದು (3)
12.ಪರಿವರ್ತನೆಯ ಕಾಲವಿದು (4)
14.ಮಾವನಲ್ಲಿ ಮೂಡಿದ ಕೋಮಲತೆ ಕಾಣುತ್ತಿದೆಯೇ? (3)
15. ಕರ ಕೊನೆಗಿಟ್ಟಿರುವ ಸಮೂಹ (3)
16.ಈತ ನೆಲೆಗೊಳಿಸುವವನು (3)



5721ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಎಗರಿಸು 5.ವಾತಾಯನ
6.ಸಸಿ 7.ಲಿಖಾವಟ್ಟು
10.ವನವಾಸ 13.ಹಾಳೆ
14.ಅಂತರಂಗ 15.ಜಮಖಾನ

ಮೇಲಿಂದ ಕೆಳಕ್ಕೆ:
1.ಕವಾಡಿಗ 2.ಜಯಶಾಲಿ
3.ಎಡವಟ್ಟು 4.ಸುಹಾಸಿನಿ
8.ವದನ 9.ಮಹಾರಾಜ
10.ವರ್ತಮಾನ 11.ಸನಾತನ
12.ರಣಾಂಗಣ

ಸುಡೊಕು 6107

		6			8	5		1
	5		2	1				
1		2			5			8
6		9				8		
			5	4	6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6106 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,501
ಇಂದಿನ ಅಂತ್ಯ	23,537
▲	36
ದಿನದ ಗರಿಷ್ಠ	23,558

ವಿನಿಮಯ ದರ

$ ಡಾಲರ್	83.47
£ ಪೌಂಡ್	105.76
€ ಯೂರೊ	89.52
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹560
12 ಕ್ಕೆ	₹75
ಮೈಸೂರು 100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1510 (1500)
ಸೋಯಾ (ರಿಫೈನ್ಡ್)	₹975 (975)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹943 (915)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹366-490
ದ್ವಿತಳಿ (ಬಿ.ವಿ)	₹385-610

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15500
ಎಸಿ	₹9240
ಆರ್‌ಪಿ	₹16750
ಆರ್‌ಸಿ	₹9700

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹200.50
ಆರ್‌ಎಸ್‌ಎಸ್-5	₹192
ಗುಡ್ ಲಾಟ್	₹180

(ಪ್ರತಿ ಕೆಜಿಗೆ)

ಮುಂಬೈ ಧಾರಣೆ

ಶೇಂಗಾ 24-6-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1500)
ಒಂದು ವಾರದ ಡೆಲಿವರಿ	1515 (1505)
ಸೋಯಾ ಕಚ್ಚಾ	920 (925)
ಪಾಮ್ ವಾರದ ಡೆಲಿವರಿ	911 (913)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹71,450 (71,375)
ಬೆಳ್ಳಿ ಕೆ.ಜಿ	₹88,750 (88,700)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುಧಾ, ಮಯೂರ ಓದಿರಿ

40 ಲಕ್ಷ ರೈತರಿಗೆ ₹4,100 ಕೋಟಿ ಪರಿಹಾರ: ಕಂದಾಯ ಸಚಿವ ಕೃಷ್ಣ ಬೈರೇಗೌಡ

ಜಮೀನಿಗೆ ಆಧಾರ್ ಲಿಂಕ್ ಜುಲೈಗೆ ಪೂರ್ಣ

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಜ್ಯದಲ್ಲಿನ ಎಲ್ಲ ಆಸ್ತಿಗಳಿಗೆ ಆಧಾರ್ ಲಿಂಕ್ ಮಾಡುವ ಪ್ರಕ್ರಿಯೆ ಜುಲೈ ಅಂತ್ಯಕ್ಕೆ ಮುಕ್ತಾಯಗೊಳ್ಳಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ನಗರದಲ್ಲಿ ಸೋಮವಾರ ವಿಭಾಗ ಮಟ್ಟದ ಕಂದಾಯ ಅಧಿಕಾರಿಗಳ ಸಭೆಯ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಈಗಾಗಲೇ 1.75 ಕೋಟಿ ಆಸ್ತಿಗಳಿಗೆ ಆಧಾರ್ ಲಿಂಕ್ ಮಾಡಲಾಗಿದೆ' ಎಂದರು.

'ರಾಜ್ಯದಲ್ಲಿ ಒಟ್ಟಾರೆ 4 ಕೋಟಿ ಆಸ್ತಿಗಳ ಮಾಲೀಕರಿದ್ದು, ಅದರಲ್ಲಿ 24 ಲಕ್ಷ ರೈತರು ಮೃತಪಟ್ಟಿದ್ದಾರೆ. ಅವರಿಗೆ ಪೌತಿ ಖಾತೆ ಮಾಡಿಕೊಡಬೇಕಿದೆ. ಇನ್ನೂ ಕೆಲವು ಪಹಣಿಯಲ್ಲಿ ಮಾತ್ರ ಜಮೀನಾಗಿದ್ದು, ಕೃಷಿಯೇತರ ಉದ್ದೇಶಗಳಿಗೆ ಬಳಕೆಯಾಗುತ್ತಿವೆ. ಎನ್‌ಎ ಆದ ಜಮೀನುಗಳಿಗೆ ಆಧಾರ್ ಲಿಂಕ್ ಮಾಡಲು ಸಾಧ್ಯವಾಗುವುದಿಲ್ಲ' ಎಂದು ಹೇಳಿದರು.

'ಆಸ್ತಿಗಳ ಮಾಲೀಕರು ಮೃತಪಟ್ಟ ಪ್ರಕರಣಗಳಲ್ಲಿ ಗ್ರಾಮಗಳ ಹಂತದಲ್ಲಿ ವಿಶೇಷ ಪೌತಿ ಅಭಿಯಾನ ನಡೆಸಿ ವಾರಸುದಾರರಿಗೆ ಒಪ್ಪಿಗೆ ಮೇರೆಗೆ ಭೂಮಿಯ ಹಕ್ಕನ್ನು ವರ್ಗಾಯಿಸಲಾಗುವುದು' ಎಂದರು.

ಸರ್ಕಾರಿ ಆಸ್ತಿ ರಕ್ಷಣೆಗೆ ಲ್ಯಾಂಡ್ ಬ್ಯಾಂಕ್: ರಾಜ್ಯದ ವಿವಿಧ ಕಡೆ ಇರುವ ಸರ್ಕಾರಿ ಆಸ್ತಿಗಳನ್ನು ರಕ್ಷಿಸುವ ಉದ್ದೇಶದಿಂದ ಇಲಾಖೆಯು ಲ್ಯಾಂಡ್ ಬ್ಯಾಂಕ್ ಅಭಿಯಾನವನ್ನು ನಡೆಸುತ್ತಿದ್ದು, ಇಲಾಖೆ ಅಧೀನದಲ್ಲಿರುವ ಭೂಮಿಯನ್ನು ಗುರುತಿಸುವ ಕಾರ್ಯ ಭರದಿಂದ ನಡೆಯುತ್ತಿದೆ.

ಒಟ್ಟಾರೆ ಇಲಾಖೆಯ ಅಧೀನದಲ್ಲಿ 14.50 ಲಕ್ಷ ಸರ್ಕಾರಿ ಜಾಗಗಳಿವೆ. ನಮ್ಮ ಗ್ರಾಮ ಲೆಕ್ಕಾಧಿಕಾರಿಗಳು ಇದುವರೆಗೆ 9.70 ಲಕ್ಷ ಆಸ್ತಿಗಳಿಗೆ ಭೇಟಿ ನೀಡಿದ್ದಾರೆ. ಈ ಆಸ್ತಿಗಳ ಮಾಹಿತಿಯನ್ನು ಮೊಬೈಲ್‌ನಲ್ಲೇ ಪಡೆಯಲು ಸಾಫ್ಟ್‌ವೇರ್ ರೂಪಿಸಲಾಗಿದ್ದು, ಬೆರಳ ತುದಿಯಲ್ಲೇ ಯಾವ ಭೂಮಿ ಎಲ್ಲಿದೆ ಎಂಬ ಮಾಹಿತಿ ಲಭ್ಯವಾಗಲಿದೆ. ಜಿಪಿಎಸ್ ಅಳವಡಿಸುವುದರಿಂದ ಒತ್ತುವರಿಯಾಗಿದ್ದರೆ ಅದರ ಮಾಹಿತಿಯೂ ಸಿಗಲಿದೆ. ಎಲ್ಲ ಆಸ್ತಿಗಳಿಗೆ ಭೇಟಿ ನೀಡಿ ವರದಿ ನೀಡಿದ ನಂತರ, ಯಾವುದಾದರೂ ಭೂಮಿ ಒತ್ತುವರಿಯಾಗಿದ್ದರೆ ಅದನ್ನು ತೆರವುಗೊಳಿಸುವ ಪ್ರಕ್ರಿಯೆ ನಡೆಯಲಿದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಕಳೆದ ಬಾರಿ ಬರಗಾಲದಿಂದ ತತ್ತರಿಸಿದ 40 ಲಕ್ಷ ರೈತರಿಗೆ ವಿಪತ್ತು ಪರಿಹಾರವಾಗಿ ₹4,100 ಕೋಟಿ ಪರಿಹಾರ ನೀಡಲಾಗಿದೆ. ಇದೇ ಮೊದಲ ಬಾರಿಗೆ ಸಣ್ಣ ರೈತರ ಜೀವನೋ ಪಾಯಕ್ಕಾಗಿ ತಲಾ ₹3 ಸಾವಿರದಂತೆ 18 ಲಕ್ಷ ರೈತರಿಗೆ ₹500 ಕೋಟಿ ಪರಿಹಾರ ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ವಾಡಿಕೆಗಿಂತ ಹೆಚ್ಚಾಗಿದ್ದು, ಇಲ್ಲಿಯವರೆಗೆ 33 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಕಳೆದ ಬಾರಿ ಈ ಅವಧಿಯಲ್ಲಿ 8.37 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿತ್ತು

ಕೃಷ್ಣ ಬೈರೇಗೌಡ ಕಂದಾಯ ಸಚಿವ

ಸುದ್ದಿ 2 ನಿಮಿಷ

ಜಿಡಿಪಿ ಪ್ರಗತಿ ಶೇ 6.8: ಎಸ್ ಆ್ಯಂಡ್ ಪಿ ಅಂದಾಜು

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6.8ರಷ್ಟು ಇರಲಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆ ಸೋಮವಾರ ಅಂದಾಜಿಸಿದೆ.

ಬಡ್ಡಿ ದರ ಹೆಚ್ಚಿನ ಮಟ್ಟದಲ್ಲಿ ಇರುವುದು ಮತ್ತು ಕೃಷಿಯೇತರ ವಲಯದಲ್ಲಿ ಬೇಡಿಕೆ ಕಡಿಮೆ ಇರುವ ಕಾರಣದಿಂದಾಗಿ ಜಿಡಿಪಿ ಬೆಳವಣಿಗೆಯು ಮಂದಗತಿಯಲ್ಲಿ ಇರಲಿದ್ದು, ಶೇ 6.8ರಷ್ಟು ಬೆಳವಣಿಗೆ ಸಾಧ್ಯವಾಗಲಿದೆ ಎಂದು ನಿರೀಕ್ಷಿಸಲಾಗಿದೆ ಎಂದು ತಿಳಿಸಿದೆ.

2025–26 ಮತ್ತು 2026–27ನೇ ಹಣಕಾಸು ವರ್ಷದಲ್ಲಿ ಕ್ರಮವಾಗಿ ಶೇ 6.9 ಮತ್ತು ಶೇ 7ರಷ್ಟು ಆರ್ಥಿಕ ಬೆಳವಣಿಗೆ ಆಗಲಿದೆ ಎಂದು ಅದು ಅಂದಾಜಿಸಿದೆ.

ಎಸ್ ಆ್ಯಂಡ್ ಪಿ ಅಂದಾಜು ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜಿಸಿರುವ ಶೇ 7.2ಕ್ಕಿಂತಲೂ ಕಡಿಮೆ ಇದೆ.

ಫಿಚ್ ರೇಟಿಂಗ್ ಶೇ 7.2, ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ಶೇ 7, ಮೂಡೀಸ್ ಮತ್ತು ಡೆಲಾಯ್ಟ್ ಇಂಡಿಯಾ ಶೇ 6.6ರಷ್ಟು, ಮೋರ್ಗನ್ ಸ್ಟ್ಯಾನ್ಲಿ ಶೇ 6.8ರಷ್ಟು ಭಾರತದ ಜಿಡಿಪಿ ಬೆಳವಣಿಗೆ 2024–25ರಲ್ಲಿ ಇರಲಿದೆ ಎಂದು ಅಂದಾಜಿಸಿವೆ.

ವಿಆರ್‌ಎಸ್ ಒಪ್ಪಿದ ಬ್ರಿಟಾನಿಯಾ ಕಾಯಂ ಕಾರ್ಮಿಕರು

ಕೋಲ್ಕತ್ತ (ಪಿಟಿಐ): ಪ್ರಮುಖ ಎಫ್‌ಎಂಸಿಜಿ ಕಂಪನಿ ಬ್ರಿಟಾನಿಯಾ ಇಂಡಸ್ಟ್ರೀಸ್ ಲಿಮಿಟೆಡ್‌ನ ಕೋಲ್ಕತ್ತದ ತಾರಾತಲಾ ಕಾರ್ಖಾನೆಯಲ್ಲಿನ ಎಲ್ಲ ಕಾಯಂ ಕಾರ್ಮಿಕರು ಸ್ವಯಂ ನಿವೃತ್ತಿ ಯೋಜನೆಯನ್ನು (ವಿಆರ್‌ಎಸ್) ಒಪ್ಪಿಕೊಂಡಿದ್ದಾರೆ ಎಂದು ಕಂಪನಿ ಹೇಳಿದೆ.

ಈ ಬದಲಾವಣೆಯು ತನ್ನ ಕಾರ್ಯಾಚರಣೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಕಂಪನಿ ತಿಳಿಸಿದೆ.

ಕಾಯಂ ನೌಕರರ ಸ್ವಯಂ ನಿವೃತ್ತಿ ಯೋಜನೆ ಬಗ್ಗೆ ಕಂಪನಿಯು ಈಚೆಗೆ ಷೇರುಪೇಟೆಗೆ ಮಾಹಿತಿ ನೀಡಿತ್ತು. ತಾರಾತಲಾ ಘಟಕವು ಬ್ರಿಟಾನಿಯಾದ ಅತ್ಯಂತ ಹಳೆಯ ಬಿಸ್ಕತ್ತು ತಯಾರಿಕಾ ಘಟಕವಾಗಿದ್ದು, ಏಳು ದಶಕದಿಂದ ಕಾರ್ಯಾಚರಣೆ ನಡೆಸುತ್ತಿದೆ.

ಕಳೆದ 20 ದಿನಗಳಿಂದ ಘಟಕದಲ್ಲಿ ಉತ್ಪಾದನೆ ನಿಲ್ಲಿಸಲಾಗಿದೆ. ಎಲ್ಲ 122 ಕಾಯಂ ನೌಕರರು ವಿಆರ್‌ಎಸ್ ಒಪ್ಪಿದ್ದು, 250 ಗುತ್ತಿಗೆ ಕಾರ್ಮಿಕರೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ಸಿಐಟಿಯುನ ಹಿರಿಯ ಮುಖಂಡ ಗೌತಮ್ ರೇ ತಿಳಿಸಿದ್ದಾರೆ.

ಹಳೆ ಪಿಂಚಣಿ ವ್ಯವಸ್ಥೆ ಜಾರಿಗೆ ಆಗ್ರಹ

ನವದೆಹಲಿ (ಪಿಟಿಐ): ಎಂಟನೆಯ ವೇತನ ಆಯೋಗ ರಚಿಸಬೇಕು, ವೇತನ ಪಡೆಯುವ ವರ್ಗದವರಿಗೆ ಆದಾಯ ತೆರಿಗೆ ವಿನಾಯಿತಿ ಹೆಚ್ಚು ಮಾಡಬೇಕು ಮತ್ತು ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತರಬೇಕು ಎನ್ನುವ ಬೇಡಿಕೆಗಳನ್ನು ಕಾರ್ಮಿಕ ಸಂಘಟನೆಗಳ ಮುಖಂಡರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಮುಂದಿರಿಸಿದ್ದಾರೆ.

ನಿರ್ಮಲಾ ಅವರು ಕೇಂದ್ರ ಬಜೆಟ್‌ಗೆ ಪೂರ್ವಭಾವಿಯಾಗಿ ಕಾರ್ಮಿಕ ಸಂಘಟನೆಗಳ ಮುಖಂಡರ ಜೊತೆ ಸೋಮವಾರ ಸಭೆ ನಡೆಸಿದರು. ಕೇಂದ್ರ ಸರ್ಕಾರದ ಮಾಲೀಕತ್ವದ ಉದ್ದಿಮೆಗಳ ಖಾಸಗೀಕರಣವನ್ನು ಸ್ಥಗಿತಗೊಳಿಸಬೇಕು ಎಂದು ಮುಖಂಡರು ಸಚಿವರನ್ನು ಒತ್ತಾಯಿಸಿದರು.

ಕಾರ್ಪೊರೇಟ್ ತೆರಿಗೆ, ಸಂಪತ್ತಿನ ಮೇಲೆ ತೆರಿಗೆ ಹಾಗೂ ಪಿತ್ರಾರ್ಜಿತ ಆಸ್ತಿ ತೆರಿಗೆಯ ಮೂಲಕ ಹಣಕಾಸಿನ ಸಂಪನ್ಮೂಲ ಒಗ್ಗೂಡಿಸಲು ಮುಂದಾಗಬೇಕು ಎಂದು ಸಲಹೆ ನೀಡಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳ ಜೊತೆ ಸೋಮವಾರ ಬಜೆಟ್ ಪೂರ್ವಭಾವಿ ಸಭೆ ನಡೆಸಿದರು —ಪಿಟಿಐ ಚಿತ್ರ

ಹೀರೊ ಬೈಕ್ ಬೆಲೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ದ್ವಿಚಕ್ರ ವಾಹನ ತಯಾರಕ ಹೀರೊ ಮೋಟೊಕಾರ್ಪ್ ತನ್ನ ಆಯ್ದ ಮೋಟರ್‌ಸೈಕಲ್ ಮತ್ತು ಸ್ಕೂಟರ್‌ಗಳ ಮಾದರಿಗಳ ಬೆಲೆಯನ್ನು ₹1,500ವರೆಗೆ ಹೆಚ್ಚಳ ಮಾಡುತ್ತಿರುವುದಾಗಿ ಸೋಮವಾರ ತಿಳಿಸಿದೆ.

ಹೊಸ ದರವು ಜುಲೈ 1ರಿಂದ ಜಾರಿಗೆ ಬರಲಿದೆ. ನಿರ್ದಿಷ್ಟ ಮಾದರಿ ಮತ್ತು ಪ್ರದೇಶಕ್ಕೆ ಅನುಗುಣವಾಗಿ ದರ ಹೆಚ್ಚಳದಲ್ಲಿ ವ್ಯತ್ಯಾಸ ಇರಲಿದೆ. ತಯಾರಿಕಾ ವೆಚ್ಚದ ಹೆಚ್ಚಳವನ್ನು ಭಾಗಶಃ ಸರಿದೂಗಿಸಿಕೊಳ್ಳಲು ಬೆಲೆ ಪರಿಷ್ಕರಣೆ ಅಗತ್ಯವಾಗಿದೆ ಎಂದು ಕಂಪನಿ ತಿಳಿಸಿದೆ.

ಚಾಲ್ತಿ ಖಾತೆ ಮಿಗತೆ ₹47,570 ಕೋಟಿ

ಮುಂಬೈ (ಪಿಟಿಐ): ಮಾರ್ಚ್ ತ್ರೈಮಾಸಿಕದಲ್ಲಿ ದೇಶದ ಚಾಲ್ತಿ ಖಾತೆ ಮಿಗತೆಯು ₹47,570 ಕೋಟಿ ಆಗಿದೆ. ಇದು ದೇಶದ ಜಿಡಿಪಿಯ ಗಾತ್ರದ ಶೇ 0.6ರಷ್ಟಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಸೋಮವಾರ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಚಾಲ್ತಿ ಖಾತೆ ಕೊರತೆ ₹10,849 ಕೋಟಿ ಮತ್ತು ಡಿಸೆಂಬರ್ ತ್ರೈಮಾಸಿಕದಲ್ಲಿ ₹72,602 ಕೋಟಿ ದಾಖಲಾಗಿತ್ತು. ಸೇವೆಗಳ ರಫ್ತು ಹೆಚ್ಚಳ ಆಗಿದೆ ಮತ್ತು ವಿದೇಶಗಳಲ್ಲಿ ಉದ್ಯೋಗದಲ್ಲಿರುವ ಭಾರತೀಯರು ದೇಶಕ್ಕೆ ಕಳುಹಿಸಿದ ಹಣದ ಮೊತ್ತದಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

2023–24ರ ಹಣಕಾಸು ವರ್ಷದಲ್ಲಿ ಚಾಲ್ತಿ ಖಾತೆ ಕೊರತೆ ₹1.93 ಲಕ್ಷ ಕೋಟಿ ಆಗಿದೆ. ಇದರ ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹5.59 ಲಕ್ಷ ಕೋಟಿ ಇತ್ತು.

ಜನವರಿ-ಮಾರ್ಚ್‌ನಲ್ಲಿ ಸರಕುಗಳ ವ್ಯಾಪಾರ ಕೊರತೆಯು ₹4.2 ಲಕ್ಷ ಕೋಟಿ, ನಿವ್ವಳ ಸೇವೆಗಳ ಸ್ವೀಕೃತಿ ₹3.56 ಲಕ್ಷ ಕೋಟಿಯಾಗಿದೆ ಎಂದು ಆರ್‌ಬಿಐನ ಅಂಕಿ–ಅಂಶಗಳು ತಿಳಿಸಿವೆ.

ವಿದೇಶದಲ್ಲಿ ಉದ್ಯೋಗದಲ್ಲಿರುವ ಭಾರತೀಯರು ತಾಯ್ನಾಡಿಗೆ ಕಳುಹಿಸಿದ ಹಣವು ಮಾರ್ಚ್ ತ್ರೈಮಾಸಿಕದಲ್ಲಿ ₹2.66 ಲಕ್ಷ ಕೋಟಿ (ಶೇ 11.9ರಷ್ಟು ಏರಿಕೆ) ಆಗಿದೆ. ಅನಿವಾಸಿ ಠೇವಣಿಗಳು ₹45,053 ಕೋಟಿ, ನಿವ್ವಳ ವಿದೇಶಿ ನೇರ ಹೂಡಿಕೆಯ ಹರಿವು ₹16,686 ಕೋಟಿಯಾಗಿದೆ. ಭಾರತಕ್ಕೆ ಬಾಹ್ಯ ವಾಣಿಜ್ಯ ಸಾಲಗಳ ನಿವ್ವಳ ಒಳಹರಿವು ₹21,692 ಕೋಟಿ ದಾಖಲಾಗಿದೆ ಎಂದು ಆರ್‌ಬಿಐ ಹೇಳಿದೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-8200
ಕೆ.ಆರ್.ಪೇಟೆ	₹9356-9431
ಮಧುಗಿರಿ	₹8000-9000
ತಿಪಟೂರು	₹8700-9500
ತುರುವೇಕೆರೆ	₹8400-9300

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ಲಕ್ಷ್ಮಮ್ಮ
ಲೇಟ್ ಚಿನ್ನಸ್ವಾಮಿಯವರ ಧರ್ಮ ಪತ್ನಿ, ಹೆಬ್ಬಾಳ, ಬೆಂಗಳೂರು ಇವರು ದಿನಾಂಕ 24-06-2024 ರಂದು ನಿಧನ ಹೊಂದಿರುತ್ತಾರೆ ಇವರ ಅಂತ್ಯಕ್ರಿಯೆಯನ್ನು ದಿನಾಂಕ 25-06-2024 ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಹೆಬ್ಬಾಳ ರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು
ಇಂತಿ ದುಃಖತಪ್ತರು: ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು
ಸಂಪರ್ಕಿಸಿ: 98451 95748, 98453 95659

ನಮ್ಮ ಪ್ರಾಮಾಣಿಕತೆ, ಖ್ಯಾತಿ ಮೇಲೆ ದಾಳಿ ನಡೆದಿತ್ತು: ಅದಾನಿ

ನವದೆಹಲಿ (ಪಿಟಿಐ): ಹಿಂಡನ್‌ಬರ್ಗ್ ವರದಿಯ ಬಗ್ಗೆ ಮಾತನಾಡಿರುವ ಉದ್ಯಮಿ ಗೌತಮ್ ಅದಾನಿ, 'ಅದು ಎರಡು ಮಗ್ಗುಲಿನ ದಾಳಿಯಾಗಿತ್ತು. ನಮ್ಮ ಹಣಕಾಸು ಸ್ಥಿತಿಯನ್ನು ಮನಬಂದಂತೆ ಟೀಕಿಸಲಾಯಿತು. ಅದೇ ವೇಳೆ, ಸುಳ್ಳು ಮಾಹಿತಿ ಮೂಲಕ ನಮಗೆ ರಾಜಕೀಯ ಬಣ್ಣ ಬಳಿಯಲಾಯಿತು' ಎಂದು ಹೇಳಿದ್ದಾರೆ.



ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ವಾರ್ಷಿಕ ಷೇರುದಾರರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಗೌತಮ್ ಅದಾನಿ, ಹಿಂಡನ್‌ಬರ್ಗ್ ವರದಿಯಿಂದ ತಾವು ಬಿಕ್ಕಟ್ಟು ಅನುಭವಿಸಿದ್ದಾಗಿ ತಿಳಿಸಿದರು.

'ಆಧಾರರಹಿತ ಆರೋಪಗಳ ಮೂಲಕ ನಮ್ಮ ದಶಕಗಳ ಕಠಿಣ ಪರಿಶ್ರಮವನ್ನು ಪ್ರಶ್ನಿಸಲಾಯಿತು. ನಮ್ಮ ಪ್ರಾಮಾಣಿಕತೆ ಮತ್ತು ಖ್ಯಾತಿಯ ಮೇಲೆ ಹಿಂದೆಂದೂ ಇಲ್ಲದ ರೀತಿಯಲ್ಲಿ ದಾಳಿಗಳು ನಡೆದವು. ನಾವು ಅದರ ವಿರುದ್ಧ ಹೋರಾಡಿದೆವು ಮತ್ತು ನಮ್ಮ ಸಂಸ್ಥೆಯ ಅಡಿಪಾಯವನ್ನು ಯಾರೂ ಅಲುಗಾಡಿಸಲಾರರು ಎಂಬುದನ್ನು ಸಾಬೀತುಪಡಿಸಿದೆವು' ಎಂದರು.

'ಉತ್ತಮ ಹಣಕಾಸು ಸ್ಥಿತಿ, ಕಡಿಮೆ ಸಾಲ ಮತ್ತು ದಾಖಲೆಯ ಗಳಿಕೆಯ ಮೂಲಕ ಹಿಂದೆಂದಿಗಿಂತಲೂ ಈಗ ತಾವು ಬಲಿಷ್ಠವಾಗಿದ್ದೇವೆ' ಎಂದ ಶತಕೋಟ್ಯಧಿಪತಿ ಗೌತಮ್ ಅದಾನಿ, ಅತ್ಯುತ್ತಮವಾದದ್ದು ತಮ್ಮಿಂದ ಇನ್ನೂ ಬರಬೇಕಿದೆ ಎಂದೂ ಅಭಿಪ್ರಾಯಪಟ್ಟರು.

ತಯಾರಿಕಾ ಸೇವೆ ಶುರು: ಟಿವಿಎಸ್

ನವದೆಹಲಿ (ಪಿಟಿಐ): ಕರ್ನಾಟಕದ ತುಮಕೂರಿನಲ್ಲಿರುವ ತನ್ನ ಘಟಕದಲ್ಲಿ ಎಲೆಕ್ಟ್ರಾನಿಕ್ಸ್ ತಯಾರಿಕಾ ಸೇವೆಗಳನ್ನು ಆರಂಭಿಸಿರುವುದಾಗಿ ಟಿವಿಎಸ್ ಎಲೆಕ್ಟ್ರಾನಿಕ್ಸ್ ಸೋಮವಾರ ತಿಳಿಸಿದೆ.

ತುಮಕೂರಿನಲ್ಲಿನ ತಯಾರಿಕಾ ಘಟಕವು ಪಿಸಿಬಿ ಜೋಡಣೆ, ಉತ್ಪನ್ನದ ಪರೀಕ್ಷೆ, ಪೂರೈಕೆ ಸೇರಿದಂತೆ ವಿವಿಧ ಕಾರ್ಯಗಳನ್ನು ನಿರ್ವಹಿಸಲಿದೆ. ಈ ಘಟಕವು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಸುಸಜ್ಜಿತವಾಗಿದೆ. ಉದ್ಯೋಗಿಗಳಲ್ಲಿ ನಾವೀನ್ಯತೆಯನ್ನು ಉತ್ತೇಜಿಸುವ ಜೊತೆಗೆ ತಯಾರಿಕಾ ಸಾಮರ್ಥ್ಯವನ್ನು ಹೆಚ್ಚಿಸಲಿದೆ ಎಂದು ಕಂಪನಿ ತಿಳಿಸಿದೆ.

ಭಾರತೀಯ ಹೈಕಮಿಷನ್ ಕಚೇರಿ ಪ್ರತಿಪಾದನೆ

'ಭಯೋತ್ಪಾದನೆ: ವೈಭವೀಕರಣ ವಿಷಾದಕರ'

ಒಟ್ಟಾವ (ಪಿಟಿಐ): ಕೆನಡಾದಲ್ಲಿ ಭಯೋತ್ಪಾದನೆಯನ್ನು ವೈಭವೀಕರಿಸಲು ಆಗಾಗ್ಗೆ ನಡೆಯುತ್ತಿರುವ ಕೃತ್ಯಗಳನ್ನು 'ವಿಷಾದಕರ' ಎಂದು ಬಣ್ಣಿಸಿದ ಭಾರತ, ರಾಜಕೀಯ ಲಾಭದ ಉದ್ದೇಶದಿಂದ ತನ್ನ ಗಡಿಯೊಳಗೆ ನಡೆಯುವ ಭಯೋತ್ಪಾದನಾ ಕೃತ್ಯಗಳನ್ನು ಯಾವುದೇ ಸರ್ಕಾರವೂ ಕಡೆಗಣಿಸಬಾರದು ಎಂದು ಪ್ರತಿಪಾದಿಸಿದೆ.

'ಕಾನಿಷ್ಕ' ಬಾಂಬ್ ಸ್ಫೋಟ ಘಟನೆಯ 39ನೇ ವರ್ಷಾಚರಣೆ ಅಂಗವಾಗಿ ಕೆನಡಾದಲ್ಲಿರುವ ಭಾರತೀಯ ಹೈಕಮಿಷನರ್ ಕಚೇರಿ ಭಾನುವಾರ ಹೇಳಿಕೆ ಹೊರಡಿಸಿದ್ದು, 'ಭಯೋತ್ಪಾದನೆಗೆ ಯಾವುದೇ ಗಡಿ, ರಾಷ್ಟ್ರೀಯತೆ ಮತ್ತು ಜನಾಂಗ ಎಂಬುದಿಲ್ಲ' ಎಂದಿದೆ.

ಕೆನಡಾದ ಮಾಂಟ್ರಿಯಲ್‌ನಿಂದ ನವದೆಹಲಿಗೆ ಸಂಚರಿಸುತ್ತಿದ್ದ ಏರ್ ಇಂಡಿಯಾದ 'ಕಾನಿಷ್ಕ' ವಿಮಾನವನ್ನು ಸಿಖ್ ಉಗ್ರಗಾಮಿಗಳು 1985ರ ಜೂನ್ 23ರಂದು ಸ್ಫೋಟಿಸಿದ್ದರು. ವಿಮಾನದಲ್ಲಿದ್ದ 89 ಮಕ್ಕಳು ಸೇರಿ ಎಲ್ಲ 329 ಜನರು ಮೃತಪಟ್ಟಿದ್ದರು. 'ಹೇಡಿತನದ ಕೃತ್ಯ ನಡೆದು 39 ವರ್ಷಗಳು ಕಳೆದಿವೆ. ದುರದೃಷ್ಟವಶಾತ್, ಭಯೋತ್ಪಾದನೆಯು ಇಂದು ಕೂಡಾ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಬೆದರಿಕೆಯಾಗಿಯೇ ಉಳಿದುಕೊಂಡಿದೆ' ಎಂದು ಪ್ರಕಟಣೆ ತಿಳಿಸಿದೆ.

'ಕಾನಿಷ್ಕ' ಬಾಂಬ್ ಸ್ಫೋಟ ಘಟನೆಯ 39ನೇ ವರ್ಷಾಚರಣೆ ಅಂಗವಾಗಿ ಕೆನಡಾದ ಒಟ್ಟಾವದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತದ ಹೈಕಮಿಷನರ್ ಸಂಜಯ್ ಕುಮಾರ್ ವರ್ಮಾ ಅವರು ದುರಂತದಲ್ಲಿ ಮಡಿದವರಿಗೆ ಗೌರವ ಸಲ್ಲಿಸಿದರು —ಪಿಟಿಐ ಚಿತ್ರ

'1985ರ ಕಾನಿಷ್ಕ ಘಟನೆ ಸೇರಿದಂತೆ ಭಯೋತ್ಪಾದನೆಯನ್ನು ವೈಭವೀಕರಿಸುವ ಯಾವುದೇ ಕೃತ್ಯ ವಿಷಾದನೀಯ. ಶಾಂತಿಯನ್ನು ಬಯಸುವ ಎಲ್ಲ ದೇಶಗಳು ಮತ್ತು ಜನರು ಅದನ್ನು ಖಂಡಿಸಬೇಕು' ಎಂದು ಹೇಳಿದೆ.

ಈ ದುರಂತ ಘಟನೆಯನ್ನು ಸ್ಮರಿಸಲು ಸೋಮವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಭಾರತದ ಹೈಕಮಿಷನರ್ ಸಂಜಯ್ ಕುಮಾರ್ ವರ್ಮಾ, 'ಕ್ಷಣಿಕ ರಾಜಕೀಯ ಹಿತಾಸಕ್ತಿಗಿಂತ ಮಾನವ ಜೀವನವು ಹೆಚ್ಚು ಮುಖ್ಯವಾಗಿದೆ. ಭಯೋತ್ಪಾದಕ ಚಟುವಟಿಕೆಗಳು ಮಾನವೀಯತೆಗೆ ಹಾನಿಕರವಾಗುವ ಮುನ್ನವೇ ಅದನ್ನು ಹೊಸಕಿ ಹಾಕುವುದು ಅಗತ್ಯ' ಎಂದು ಹೇಳಿದರು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-37500
ಹಳತು	37500-45500
ಚಿತ್ರದುರ್ಗ	
ಅಪಿ	50600-51000
ಬೆಟ್ಟೆ	35600-36000
ಕೆಂಪುಗೋಟು	30600-31000
ರಾಶಿ	50100-55000
ಕಾರ್ಕಳ	
ಹೊಸತು	25000-38000
ಹಳತು	30000-46000
ಕುಮಟ	
ಚಿಪ್ಪು	26089-28509
ಕೋಕ	13569-24029
ಫ್ಯಾಕ್ಟರಿ	10509-20299
ಹಳೆಚಾಲಿ	35899-37799
ಹೊಸಚಾಲಿ	31989-35019

ಪುತ್ತೂರು	
ಹೊಸತು	26500-38000
ಸಾಗರ	
ಬಿಳಿಗೋಟು	16009-26599
ಚಾಲಿ	26899-34299
ಕೋಕ	14009-29099
ಕೆಂಪುಗೋಟು	16899-34299
ರಾಶಿ	31989-52199
ಸಿಪ್ಪೆಗೋಟು	10269-18739
ಶಿವಮೊಗ್ಗ	
ಬೆಟ್ಟೆ	41099-52699
ಗೊರಬಲು	16500-35100
ರಾಶಿ	33211-53000
ಸರಕು	53399-78700
ಸಿದ್ದಾಪುರ	
ಬಿಳಿಗೋಟು	23699-28806
ಚಾಲಿ	32899-35900
ಕೋಕ	13679-27311

ಕೆಂಪುಗೋಟು	26789-32899
ರಾಶಿ	43899-49599
ತಟ್ಟಿಬೆಟ್ಟೆ	33289-38882
ಶಿರಸಿ	
ಬೆಟ್ಟೆ	31109-45611
ಬಿಳಿಗೋಟು	18299-29399
ಚಾಲಿ	31899-36011
ಕೆಂಪುಗೋಟು	24069-27001
ರಾಶಿ	43799-47808
ಯಲ್ಲಾಪುರ	
ಅಪಿ	58869-66269
ಬಿಳಿಗೋಟು	22899-29800
ಚಾಲಿ	31369-36299
ಕೋಕ	8899-34419
ಕೆಂಪುಗೋಟು	24899-34419
ರಾಶಿ	45900-54369
ತಟ್ಟಿಬೆಟ್ಟೆ	34469-44219

ಬಾಲಕನ ತಲೆಬುರುಡೆಯಲ್ಲಿ ಸಾಧನ ಅಳವಡಿಕೆ

ಲಂಡನ್ (ಪಿಟಿಐ): ತೀವ್ರತರದ ಮೂರ್ಛೆರೋಗದಿಂದ ಬಳಲುತ್ತಿರುವ ಶಾಲಾ ವಿದ್ಯಾರ್ಥಿಯೊಬ್ಬನ ತಲೆಬುರುಡೆಯೊಳಗೆ ಮೂರ್ಛೆಯನ್ನು ನಿಯಂತ್ರಿಸುವ ಸಾಧನವನ್ನು ಬ್ರಿಟನ್‌ನಲ್ಲಿ ಪ್ರಾಯೋಗಿಕವಾಗಿ ಅಳವಡಿಸಲಾಗಿದೆ.

ಪ್ರಪಂಚದಲ್ಲೇ ಇದು ಮೊದಲ ಪ್ರಯತ್ನವಾಗಿದ್ದು, ಓರನ್ ನೋಲ್ಸನ್ ಎಂಬ ಹೆಸರಿನ ಬಾಲಕನು ವೈದ್ಯಕೀಯ ಕ್ಷೇತ್ರದಲ್ಲಿ ಇತಿಹಾಸ ನಿರ್ಮಿಸಿದ್ದಾನೆ ಎಂದು ವರದಿಯೊಂದು ಹೇಳಿದೆ.

ತಲೆಬುರುಡೆಯಲ್ಲಿ ಅಳವಡಿಸಿರುವ ನರಉತ್ತೇಜಕ (ನ್ಯೂರೋಸ್ಟಿಮ್ಯುಲೇಟರ್) ಸಾಧನವು ಮಿದುಳಿಗೆ ವಿದ್ಯುತ್ ಸಂಕೇತಗಳನ್ನು ರವಾನಿಸುತ್ತದೆ. ಇದು ಬಾಲಕ ಹಗಲು ಹೊತ್ತಿನಲ್ಲಿ ಮೂರ್ಛೆಹೋಗುವ ಪ್ರಮಾಣವನ್ನು ಶೇ 80ರಷ್ಟು ಕಡಿಮೆ ಮಾಡಿದೆ.

'ಲೆನ್ನೊಕ್ಸ್–ಗ್ಯಾಸ್ಟೌಟ್ ಸಿಂಡ್ರೋಮ್‌ನಿಂದ (ಎಲ್‌ಜಿಎಸ್) ಓರನ್ ಬಳಲುತ್ತಿದ್ದಾನೆ. ಇದು ಚಿಕಿತ್ಸೆ ಇಲ್ಲದ ತೀವ್ರ ಸ್ವರೂಪದ ಮೂರ್ಛೆರೋಗವಾಗಿದೆ. ಓರನ್ ಮೂರು ವರ್ಷದವನಾಗಿದ್ದಾಗ ಈ ಕಾಯಿಲೆ ಕಂಡು ಬಂದಿತ್ತು. ಅಂದಿನಿಂದ ಪ್ರತಿ ದಿನ ಆತ ಕನಿಷ್ಠ 24ರಿಂದ 100 ಬಾರಿ ಪ್ರಜ್ಞೆ ತಪ್ಪುತ್ತಿದ್ದ' ಎಂದು ಬಿಬಿಸಿ ವರದಿ ಮಾಡಿದೆ.

'ಲಂಡನ್ನಿನ ಗ್ರೇಟ್ ಆರ್ಮಂಡ್ ಸ್ಟ್ರೀಟ್ ಆಸ್ಪತ್ರೆಯಲ್ಲಿ ಲಂಡನ್ ಯೂನಿವರ್ಸಿಟಿ ಕಾಲೇಜು, ಕಿಂಗ್ಸ್ ಕಾಲೇಜು ಆಸ್ಪತ್ರೆ ಮತ್ತು ಆಕ್ಸ್‌ಫರ್ಡ್ ವಿವಿಯ ಸಹಯೋಗದಲ್ಲಿ ಪ್ರಾಯೋಗಿಕವಾಗಿ 2023ರ ಅಕ್ಟೋಬರ್‌ನಲ್ಲಿ ಈ ಶಸ್ತ್ರಕ್ರಿಯೆ ನಡೆಸಲಾಗಿದೆ. ಓರನ್‌ಗೆ ಆಗ 12 ವರ್ಷ ವಯಸ್ಸಾಗಿತ್ತು' ಎಂದು ವರದಿಯಲ್ಲಿ ಹೇಳಲಾಗಿದೆ.

ಚಿಕಿತ್ಸೆ ಯಶಸ್ವಿಯಾಗಿರುವುದಕ್ಕೆ ಸಂತಸ ವ್ಯಕ್ತಪಡಿಸಿರುವ ಓರನ್ ತಾಯಿ ಜಸ್ಟಿನ್, 'ಓರನ್ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದೆ. ಮೂರ್ಛೆ ತಪ್ಪುವುದು ಕಡಿಮೆಯಾಗಿದೆ. ಪ್ರಜ್ಞೆ ತಪ್ಪುವಾಗಿನ ತೀವ್ರತೆ ಯೂ ಕಡಿಮೆಯಾಗಿದೆ' ಎಂದು ಬಿಬಿಸಿಗೆ ಹೇಳಿದ್ದಾರೆ.

ಹಜ್ ವೇಳೆ 1,300ಕ್ಕೂ ಅಧಿಕ ಜನರ ಸಾವು

ಕೈರೊ (ಎಪಿ): ಈ ಸಲದ ಹಜ್ ವಾರ್ಷಿಕ ಯಾತ್ರೆ ಸಂದರ್ಭದಲ್ಲಿ ಅಧಿಕ ತಾಪಮಾನದಿಂದ 1,300ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಎಂದು ಸೌದಿ ಅರೇಬಿಯಾದ ಅಧಿಕಾರಿಗಳು ತಿಳಿಸಿದ್ದಾರೆ.

'ಹಜ್ ಯಾತ್ರೆಯ ವೇಳೆ ಒಟ್ಟು 1,301 ಮಂದಿ ಮೃತಪಟ್ಟಿದ್ದು, ಅದರಲ್ಲಿ ಶೇ 83 ರಷ್ಟು ಮಂದಿ 'ಅನಧಿಕೃತ ಯಾತ್ರಿ'ಗಳಾಗಿದ್ದಾರೆ. ಅವರು ಯಾತ್ರೆಯ ವಿಧಿ ವಿಧಾನಗಳನ್ನು ಪೂರೈಸಲು ಮೆಕ್ಕಾ ನಗರ ಹಾಗೂ ಹೊರವಲಯದಲ್ಲಿ ಸುಮಾರು ದೂರವನ್ನು ಕಾಲ್ನಡಿಗೆಯಲ್ಲೇ ಕ್ರಮಿಸಿದ್ದಾರೆ. ಈ ವೇಳೆ ಬಿಸಿಲಿನ ತಾಪಕ್ಕೆ ಬಳಲಿದ್ದಾರೆ' ಎಂದು ಸೌದಿ ಅರೇಬಿಯಾದ ಆರೋಗ್ಯ ಸಚಿವ ಫಹದ್ ಬಿನ್ ಅಬ್ದುರ್ರಹ್ಮಾನ್ ಅಲ್–ಜಲಾಜಿಲ್ ಭಾನುವಾರ ಹೇಳಿದ್ದಾರೆ.

'95 ಯಾತ್ರಿಗಳು ಚಿಕಿತ್ಸೆ ಪಡೆಯುತ್ತಿದ್ದು, ಕೆಲವರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಿಯಾದ್‌ನ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತಪಟ್ಟ ಬಹುತೇಕ ಮಂದಿಯ ಬಳಿ ಸೂಕ್ತ ದಾಖಲೆಗಳು ಇಲ್ಲದ ಕಾರಣ ಅವರ ಗುರುತು ಪತ್ತೆಹಚ್ಚುವ ಪ್ರಕ್ರಿಯೆ ತಡವಾಗಿದೆ. ಮೃತದೇಹಗಳನ್ನು ಮೆಕ್ಕಾದಲ್ಲಿ ಅಂತ್ಯಸಂಸ್ಕಾರ ಮಾಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಈಜಿಪ್ಟ್‌ನ 660 ಮಂದಿ ಸಾವು: ಹಜ್ ಯಾತ್ರೆ ವೇಳೆ ಈಜಿಪ್ಟ್‌ನ 660 ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಅದರಲ್ಲಿ 31 ಮಂದಿ ಅನಧಿಕೃತವಾಗಿ ಯಾತ್ರೆಯಲ್ಲಿ ಪಾಲ್ಗೊಂಡವರು ಎಂದು ಕೈರೊದ ಅಧಿಕಾರಿಗಳು ತಿಳಿಸಿದ್ದಾರೆ.

ಯಾತ್ರಿಕರಿಗೆ ಅನಧಿಕೃತವಾಗಿ ಸೌದಿ ಅರೇಬಿಯಾಕ್ಕೆ ಪ್ರಯಾಣಿಸಲು ಅನುವು ಮಾಡಿಕೊಟ್ಟ 16 ಟ್ರಾವೆಲ್ ಏಜೆನ್ಸಿಗಳ ಪರವಾನಗಿಯನ್ನು ಈಜಿಪ್ಟ್ ಸರ್ಕಾರ ರದ್ದುಗೊಳಿಸಿದೆ ಎಂದಿದ್ದಾರೆ.

ಹಜ್ ಯಾತ್ರಿಕರು ಅನಧಿಕೃತವಾಗಿ ಪ್ರವೇಶಿಸುವುದನ್ನು ತಡೆಯಲು ಸೌದಿ ಅರೇಬಿಯಾದ ಅಧಿಕಾರಿಗಳು ಈ ಬಾರಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರು. ಸೂಕ್ತ ದಾಖಲೆಗಳಿಲ್ಲದ ಸಾವಿರಾರು ಮಂದಿಯನ್ನು ವಾಪಸ್ ಕಳುಹಿಸಿದ್ದರು. ಆದರೂ ಈಜಿಪ್ಟ್‌ನ ನೂರಾರು ಮಂದಿ ಅಧಿಕಾರಿಗಳ ಕಣ್ಣುತಪ್ಪಿಸಿ ಮಕ್ಕಾ ತಲುಪಿದ್ದರು. ವಾಸ್ತವ್ಯ ಹೂಡಲು ಹೋಟೆಲ್ ಕೊಠಡಿಗಳು ಸೇರಿದಂತೆ ಅಧಿಕೃತ ಯಾತ್ರಾತ್ರಿಗಳಿಗೆ ಸಿಗುವ ಸೌಲಭ್ಯಗಳು ಅವರಿಗೆ ಲಭಿಸಿಲ್ಲ.

ತೈವಾನ್: ಹ್ಯಾಕರ್‌ಗಳ ದಾಳಿ

ಹಾಂಗ್‌ಕಾಂಗ್ (ಎಪಿ): ಚೀನಾ ಪ್ರಾಯೋಜಿತ ಶಂಕಿತ ಹ್ಯಾಕಿಂಗ್ ತಂಡವು ತೈವಾನ್‌ನ ಸಂಸ್ಥೆಗಳನ್ನು ಗುರಿಯಾಗಿರಿಸಿಕೊಂಡು ಸೈಬರ್ ದಾಳಿ ನಡೆಸಿದೆ. ಅದರಲ್ಲೂ ಪ್ರಮುಖವಾಗಿ ಸರ್ಕಾರಿ ಸಂಸ್ಥೆ, ಶಿಕ್ಷಣ, ತಂತ್ರಜ್ಞಾನ ಹಾಗೂ ರಾಜತಾಂತ್ರಿಕತೆ ವಲಯಗಳ ಮೇಲೆ ಈ ದಾಳಿ ನಡೆದಿದೆ ಎಂದು ಸೈಬರ್ ಭದ್ರತೆ ಗುಪ್ತಚರ ಸಂಸ್ಥೆ 'ರೆಕಾರ್ಡೆಡ್ ಫ್ಯೂಚರ್' ಸಂಸ್ಥೆ ತಿಳಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಚೀನಾ– ತೈವಾನ್ ನಡುವೆ ಸಂಬಂಧ ಹದಗೆಟ್ಟಿದೆ. ತೈವಾನ್ ಜಲಸಂಧಿಯ ಉದ್ದದ ದ್ವೀಪವನ್ನು ಚೀನಾ ತನ್ನದೆಂದು ಹೇಳಿ ಕೊಂಡಿದ್ದು, ಎರಡು ರಾಷ್ಟ್ರಗಳ ನಡುವಿನ ಪರಿಸ್ಥಿತಿ ಬಿಗಡಾಯಿಸಿದೆ. ತೈವಾನ್‌ನಲ್ಲಿ ಜನವರಿಯಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆ ಬಳಿಕ ನಡೆದ ಅಧಿಕಾರ ಹಸ್ತಾಂತರ ಪ್ರಕ್ರಿಯೆಗೂ ಮುನ್ನ ಹಾಗೂ ನಂತರದ ಅವಧಿಯಲ್ಲಿ (2023ರ ನವೆಂಬರ್‌ನಿಂದ 2024ರ ಏಪ್ರಿಲ್) 'ರೆಡ್ ಜ್ಯೂಲಿಯಟ್' ತಂಡದಿಂದ ಸೈಬರ್ ದಾಳಿ ನಡೆದಿದೆ ಎಂದು ಆರೋಪಿಸಿದೆ.

ತೈವಾನ್‌ನ ಸಂಸ್ಥೆಗಳ ಮೇಲೆ 'ರೆಡ್ ಜ್ಯೂಲಿಯಟ್' ಸಂಸ್ಥೆಯೂ ಈ ಹಿಂದೆಯೂ ಸೈಬರ್ ದಾಳಿ ನಡೆಸಿದ್ದರೂ, ಇದೇ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ದಾಳಿ ನಡೆಸಿದೆ ಎಂದು ಸುರಕ್ಷತೆ ಕಾಳಜಿ ಸಂಸ್ಥೆ 'ರೆಕಾರ್ಡೆಡ್ ಫ್ಯೂಚರ್ ಅನಾಲಿಸ್ಟ್' ತಿಳಿಸಿದೆ. ವರದಿ ಪ್ರಕಾರ, 'ರೆಡ್‌ಜ್ಯೂಲಿಯಟ್' ಸಂಸ್ಥೆಯು 24 ಸಂಸ್ಥೆಗಳ ಮೇಲೆ ದಾಳಿ ನಡೆಸಿದ್ದು, ಲಾವೋಸ್, ಕೀನ್ಯಾ, ರುವಾಂಡ ಹಾಗೂ ತೈವಾನ್‌ನ ಮೇಲೂ ದಾಳಿ ನಡೆದಿದೆ. ಹಾಂಗ್‌ಕಾಂಗ್, ದಕ್ಷಿಣ ಕೊರಿಯಾದ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ವೆಬ್‌ಸೈಟ್ ಮೇಲೂ ದಾಳಿ ನಡೆಸಿದೆ. ಆದರೆ, ಸಂಸ್ಥೆಗಳ ಹೆಸರನ್ನು ಬಹಿರಂಗಪಡಿಸಿಲ್ಲ.

ಭಾರತ–ಪಾಕ್ ವಿದ್ಯುತ್ ಯೋಜನೆ ಪರಿಶೀಲನೆ

ಜಮ್ಮು (ಪಿಟಿಐ): ಭಾರತ ಮತ್ತು ಪಾಕಿಸ್ತಾನದ ಪ್ರತಿನಿಧಿಗಳ ತಂಡಗಳು ತಟಸ್ಥ ತಜ್ಞರೊಂದಿಗೆ ಸೋಮವಾರ ಜಮ್ಮು ಕಾಶ್ಮೀರದ ಕಿಶ್ತವಾಡ ಜಿಲ್ಲೆಗೆ ಭೇಟಿ ನೀಡಿ, ಸಿಂಧೂ ಜಲ ಒಪ್ಪಂದದ ಅಡಿ ನಡೆಯುತ್ತಿರುವ ಎರಡು ಜಲವಿದ್ಯುತ್ ಯೋಜನೆಗಳ ಪರಿಶೀಲನೆ ನಡೆಸಿದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ 2 ಜಲವಿದ್ಯುತ್ ಯೋಜನೆ ಪರಿಶೀಲನೆಗಾಗಿ ತಟಸ್ಥ ತಜ್ಞರೊಂದಿಗೆ ಪಾಕಿಸ್ತಾನದ ಪ್ರತಿನಿಧಿಗಳ ತಂಡವು ಭಾನು ವಾರ ಇಲ್ಲಿಗೆ ಆಗಮಿಸಿತು. ಅವ ರೊಂದಿಗೆ ಭಾರತದ ಪ್ರತಿನಿಧಿಗಳು ಸೇರಿ ಒಟ್ಟು 40 ಮಂದಿ ಚೀನಾಬ್ ಕಣಿವೆಯಲ್ಲಿ ನಡೆಯುತ್ತಿರುವ ಕಾಮಗಾರಿ ಪರಿಶೀಲಿಸಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿಮ್ಮೊಗ 8095555517

ಭವಿಷ್ಯ

Astrology

★ಪರಮಶ್ರೇಷ್ಠ★ ಶ್ರೀದೇವಾನಂದನ್‌ರವರಿಂದ ನಿಮ್ಮ ಎಲ್ಲೂ ಪರಿಹಾರವಾಗದ ವಿವಾಹ,ಕುಟುಂಬ,ದಾಂಪತ್ಯ ಕಲಹ,ಬಂಜೇತನ ದುರ್ನಡತೆ, ದುಶ್ಚಟ,ಸಾಲ,ಶತ್ರು ರೋಗ ಲೈಂಗಿಕತೆ, ಸ್ತ್ರೀಪುರುಷ ವಶೀಕರಣಕ್ಕೆ ಸಂಪರ್ಕಿಸಿರಿ: 9845005009

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರೆಂಟಲ್ ಪ್ರಾಪರ್ಟೀಸ್

Accommodation Wanted

Industrial And Factory

INDUSTRIAL SHED
Required on Lease. We are looking for an 8500sqft Shed for Factory setup having 25ft Height and Orange Category in Bangalore within 50-60 kms Radius from Malleshwaram. Contact: 9108934749.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
www.dhclassifieds.com
BOOK NOW
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331
9901641752

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಯುರೋ ಕಪ್ ಫುಟ್‌ಬಾಲ್: ಬರ್ನಬಾಸ್ ವರ್ಗಾಗೆ ಗಂಭೀರ ಗಾಯ

ಹಂಗರಿಗೆ ಮಣಿದ ಸ್ಕಾಟ್ಲೆಂಡ್

ಸ್ಟುಟ್‌ಗಾರ್ಟ್, ಜರ್ಮನಿ (ಎಎಫ್‌ಪಿ): ಇಂಜುರಿ ಅವಧಿಯ ಹತ್ತನೇ ನಿಮಿಷ ಕೆವಿನ್ ಸ್ಕೊಬೋತ್ ಗಳಿಸಿದ ಗೋಲಿನ ನೆರವಿನಿಂದ ಹಂಗರಿ ತಂಡ 1-0 ಯಿಂದ ಸ್ಕಾಟ್ಲೆಂಡ್ ತಂಡವನ್ನು ಸೋಲಿಸಿ ಯುರೋ ಕಪ್ 2024ರ ಟೂರ್ನಿಯ 16ರ ಸುತ್ತಿಗೆ ಸ್ಥಾನ ಭದ್ರಪಡಿಸಿಕೊಳ್ಳುವತ್ತ ಹೆಜ್ಜೆಯಿಟ್ಟಿತು. ಉತ್ತರಾರ್ಧದ ಅವಧಿಯ ಆಟದ ವೇಳೆ ಹಂಗರಿಯ ಬರ್ನಬಾಸ್ ವರ್ಗಾ ಅವರು ಗಂಭೀರವಾಗಿ ಗಾಯಗೊಂಡರು.

68ನೇ ನಿಮಿಷ ಫ್ರೀಕಿಕ್‌ನಲ್ಲಿ ಎತ್ತರದಿಂದ ಚಿಮ್ಮಿದ ಚೆಂಡನ್ನು ವರ್ಗಾ ಅವರಯ ಗೋಲಿಗೆ ಹೆಡ್ ಮಾಡುವ ಯತ್ನದಲ್ಲಿದ್ದಾಗ ಈ ಘಟನೆ ನಡೆಯಿತು. ಇನ್ನೊಂದೆಡೆ ಚೆಂಡನ್ನು ಪಂಚ್ ಮಾಡಿ ಆಚೆಹಾಕುವ ಯತ್ನದಲ್ಲಿದ್ದ ಸ್ಕಾಟ್ಲೆಂಡ್ ಗೋಲ್‌ಕೀಪರ್ ಆ್ಯಂಗಸ್ ಗುನ್ ಭುಜಕ್ಕೆ ಅವರ ಮುಖ ಬಲವಾಗಿ ಡಿಕ್ಕಿಯಾಗಿ ಕ್ಷಣಾರ್ಧದಲ್ಲಿ ಕುಸಿದುಬಿದ್ದರು. ಹಂಗರಿ ಆಟಗಾರರು ಅವರ ರಕ್ಷಣೆಗೆ ಧಾವಿಸಿದರು. ಕ್ಯಾಮೆರಾಗಳಿಗೆ ಕಾಣದಂತೆ ಹಂಗರಿ ಆಟಗಾರರು ಚಿಕಿತ್ಸೆ ವೇಳೆ ಬಟ್ಟೆ ಅಡ್ಡಹಿಡಿದಿದ್ದರು.

ಸುಮಾರು ಹತ್ತು ನಿಮಿಷ ಆಟ ಸ್ಥಗಿತಗೊಂಡಿತು. ದವಡೆ ಸೇರಿದಂತೆ ಮುಖದ ಕೆಲಭಾಗದಲ್ಲಿ ತೀವ್ರ ಗಾಯಗಳಾಗಿದ್ದು, ಅವರನ್ನು ಸ್ಟ್ರೆಚರ್‌ನಲ್ಲಿ ಕರೆದೊಯ್ಯಲಾಯಿತು. ಹಂಗರಿ ಆಟಗಾರರು ಆಘಾತಗೊಂಡಿದ್ದರು.

ಸ್ಟುಟ್‌ಗಾರ್ಟ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರ ಸ್ಥಿತಿ ಸ್ಥಿರವಾಗಿದೆ ಎಂದು ಸ್ವಲ್ಪ ಹೊತ್ತಿನ ನಂತರ ಹಂಗೇರಿಯ ಫುಟ್‌ಬಾಲ್ ಫೆಡರೇಷನ್ ತಿಳಿಸಿತು. ಅವರು ಉಳಿದ ಪಂದ್ಯಗಳಿಗೆ ಲಭ್ಯರಿಲ್ಲ ಎಂದು ಮ್ಯಾನೇಜರ್ ಖಚಿತಪಡಿಸಿದರು.

ಆಟ ಮರು ಆರಂಭವಾದಾಗ ಪೆನಾಲ್ಟಿ ನೀಡುವಂತೆ ಹಂಗರಿ ಆಟಗಾರರು ಕೇಳಿದರೂ ರೆಫ್ರಿಗಳು ಅದನ್ನು ಪುರಸ್ಕರಿಸಲಿಲ್ಲ.

ಸ್ಕೊಬೊತ್ ತಾವು ಗಳಿಸಿದ ಗೋಲನ್ನು ವರ್ಗಾ ಅವರಿಗೆ ಸಮರ್ಪಿಸುವುದಾಗಿ ತಿಳಿಸಿದರು.

ಈ ಸೋಲಿನಿಂದ, ಮೊದಲ ಬಾರಿ ಪ್ರಮುಖ ಟೂರ್ನಿಯೊಂದ ನಾಕೌಟ್ ತಲುಪುವ ಸ್ಕಾಟ್ಲೆಂಡ್ ಆಸೆ ನುಚ್ಚುನೂರಾಯಿತು.

ಇನ್ನೊಂದು ಪಂದ್ಯ 'ಡ್ರಾ': 'ಎ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಸ್ವಿಜರ್ಲೆಂಡ್ ಜೊತೆ 1-1 ಡ್ರಾ ಮಾಡಿಕೊಂಡ ಜರ್ಮನಿ ಅಗ್ರಸ್ಥಾನ ಪಡೆಯಿತು. ಸ್ವಿಜರ್ಲೆಂಡ್ ಎರಡನೇ ತಂಡವಾಗಿ ನಾಕೌಟ್‌ಗೆ ಮುನ್ನಡೆಯಿತು. ಮೂರನೇ ಸ್ಥಾನ ಪಡೆದ ಉತ್ತಮ ತಂಡವಾಗಿ ಹಂಗರಿ ತಂಡಕ್ಕೆ ಮುಂದಿನ ಸುತ್ತಿಗೆ ಹೋಗುವ ಅವಕಾಶ ಇದೆಯಾದರೂ, ಅದರ ಭವಿಷ್ಯ ಇತರ ಗುಂಪುಗಳ ಫಲಿತಾಂಶವನ್ನು ಅವಲಂಬಿಸಿದೆ.

ಸ್ಕಾಟ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಗೋಲು ಗಳಿಸಿದ ಹಂಗರಿಯ ಕೆವಿನ್ ಸ್ಕೊಬೋತ್ (ಎಡ) ಸಂಭ್ರಮ —ಎಎಫ್‌ಪಿ ಚಿತ್ರ

ಇಂದಿನ ಪಂದ್ಯಗಳು

ಪೋಲೆಂಡ್ Vs ಫ್ರಾನ್ಸ್		ರಾತ್ರಿ 9.30
ನೆದರ್ಲೆಂಡ್ಸ್ Vs ಆಸ್ಟ್ರಿಯಾ		ರಾತ್ರಿ 9.30
ಡೆನ್ಮಾರ್ಕ್ Vs ಸರ್ಬಿಯಾ		ರಾತ್ರಿ 12.30
ಇಂಗ್ಲೆಂಡ್ Vs ಸ್ಲೋವೆನಿಯಾ		ರಾತ್ರಿ 12.30

ಲೈವ್: ಸೋನಿ ಸ್ಪೋರ್ಟ್ಸ್

ಜೂನಿಯರ್ ಸ್ಕ್ವಾಷ್: ಆದ್ಯಾ ಶಿವೇನ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಇಸ್ಲಾಮಾಬಾದ್‌ನಲ್ಲಿ ಮಂಗಳವಾರ ಆರಂಭವಾಗಲಿರುವ 31ನೇ ಏಷ್ಯನ್ ಜೂನಿಯರ್ ವೈಯಕ್ತಿಕ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ 11 ಆಟಗಾರರ ತಂಡ ಭಾರತವನ್ನು ಪ್ರತಿನಿಧಿಸಲಿದೆ.

ಐದು ದಿನಗಳ ಕೂಟದಲ್ಲಿ ಒಟ್ಟು ಆಟಗಾರರು ಆಯಾ ವಯೋಮಾನದ ವಿಭಾಗಗಳಲ್ಲಿ ಅಗ್ರ 10 ರಲ್ಲಿ ಸ್ಥಾನ ಪಡೆದಿದ್ದಾರೆ.

ಶಿವೇನ್ ಅಗರವಾಲ್ ಮತ್ತು ಆದ್ಯಾ ಬುಧಿಯಾ ಕ್ರಮವಾಗಿ ಬಾಲಕರ 15 ಮತ್ತು 13 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದಾರೆ.

ಭಾರತ ತಂಡ: 17 ವರ್ಷದೊಳಗಿನ ಬಾಲಕರು: ಯುಷಾ ನಫೀಸ್, ಶಿವೇನ್ ಅಗರವಾಲ್, ಲೋಕೇಶ್ ಸುಬ್ರಮಣಿ, ಧ್ರುವ್ ಬೋಜ್ಜಾ; 19 ವರ್ಷದೊಳಗಿನ ಬಾಲಕಿಯರು: ನಿರುಪಮಾ ದುಬೆ, ಶಮೀನಾ ರಿಯಾಜ್, ಉನ್ನತಿ ತ್ರಿಪಾಠಿ; ಅನಿಕಾ ದುಬೆ, ದಿವಾ ಶಾ (9), ಅದ್ಯಾ ಬುಧಿಯಾ, ಗೌಸಿಕಾ ಎಂ.

ದೀಪಿಕಾ ಕುಮಾರಿ, ತರುಣ್‌ದೀಪ್‌ಗೆ ನಾಲ್ಕನೇ ಒಲಿಂಪಿಕ್ಸ್

ಆರ್ಚರಿ ತಂಡಗಳಿಗೆ ಪ್ಯಾರಿಸ್ ಟಿಕೆಟ್

ನವದೆಹಲಿ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳೆಯರ ಆರ್ಚರಿ ತಂಡವು ವಿಶ್ವ ರ‍್ಯಾಂಕಿಂಗ್ ಆಧಾರದ ಮೇಲೆ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕೋಟಾ ಗಳಿಸಿದೆ.

12 ವರ್ಷಗಳಲ್ಲಿ ಮೊದಲ ಬಾರಿಗೆ ಭಾರತವು ಪೂರ್ಣ ಆರು ಆಟಗಾರರ ಆರ್ಚರಿ ತಂಡವನ್ನು ಒಲಿಂಪಿಕ್ಸ್‌ಗೆ ಕಳುಹಿಸಲಿದ್ದು, ಒಲಿಂಪಿಕ್ ಕೂಟದ ಎಲ್ಲಾ ಐದು ವಿಭಾಗಗಳಲ್ಲಿ ಸ್ಪರ್ಧಿಸಲು ಅರ್ಹತೆ ಪಡೆದಿದೆ.

2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತ ಕೊನೆಯ ಬಾರಿಗೆ ಆರು ಮಂದಿಯ ತಂಡವನ್ನು ಕಣಕ್ಕಿಳಿಸಿತ್ತು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮಿಶ್ರ ತಂಡ ಸ್ಪರ್ಧೆಯನ್ನು ಪರಿಚಯಿಸಲಾಯಿತು. ಒಲಿಂಪಿಕ್ಸ್‌ನಲ್ಲಿ ಭಾರತವು ಆರ್ಚರಿಯಲ್ಲಿ ಇದುವರೆಗೆ ಪದಕ ಗೆದ್ದಿಲ್ಲ.

ತಂಡ ಸ್ಪರ್ಧೆಗಳಲ್ಲಿ ಪ್ರತಿ ವಿಭಾಗದಲ್ಲಿ 12 ತಂಡಗಳು ಇರಲಿದ್ದು, ಮಿಶ್ರ ಸ್ಪರ್ಧೆಗಳಲ್ಲಿ ಐದು ತಂಡಗಳು ಸ್ಪರ್ಧಿಸಲಿವೆ.

ಮೂರು ಕೋಟಾ ಅರ್ಹತಾ ಟೂರ್ನಿಯ ನಂತರ ಮೊದಲ ಬಾರಿಗೆ ಅಗ್ರ ಎರಡು ರಾಷ್ಟ್ರಗಳಿಗೆ ತಂಡದ ಕೋಟಾವನ್ನು ನೀಡಲಾಗುತ್ತದೆ.

ಕಳೆದ ವರ್ಷ ಬರ್ಲಿನ್‌ನಲ್ಲಿ ನಡೆದ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಒಲಿಂಪಿಕ್ ಅರ್ಹತಾ ಪಂದ್ಯ ನಡೆಯಿತು. ಅಲ್ಲಿಂದ ದಕ್ಷಿಣ ಕೊರಿಯಾ, ಟರ್ಕಿ ಮತ್ತು ಜಪಾನ್ ಪುರುಷರ ವಿಭಾಗದಲ್ಲಿ ಅರ್ಹತೆ ಪಡೆದವು. ಮಹಿಳಾ ವಿಭಾಗದಲ್ಲಿ ಜರ್ಮನಿ ಮತ್ತು ಮೆಕ್ಸಿಕೊ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡಿವೆ. ಅಂತಿಮ ಒಲಿಂಪಿಕ್ ಅರ್ಹತಾ ಪಂದ್ಯ ಕಳೆದ ವಾರ ಟರ್ಕಿಯ ಅಂತಾಲ್ಯದಲ್ಲಿ ನಡೆಯಿತು.

ಅನುಭವಿಗಳಾದ ತರುಣ್‌ದೀಪ್ ರಾಯ್ ಮತ್ತು ದೀಪಿಕಾ ಕುಮಾರಿ ಅವರಿಗೆ ಇದು ನಾಲ್ಕನೇ ಒಲಿಂಪಿಕ್ಸ್. ಧೀರಜ್ ಬೊಮ್ಮದೇವರ, ಅಂಕಿತಾ ಭಕತ್ ಮತ್ತು ಭಜನ್ ಕೌರ್‌ಗೆ ಚೊಚ್ಚಲ ಒಲಿಂಪಿಕ್ಸ್, ಪ್ರವೀಣ್ ಜಾಧವ್‌ಗೆ ಸತತ ಎರಡನೇ ಕ್ರೀಡಾಕೂಟವಾಗಿದೆ.

ಗಾಲ್ಫ್: ಅದಿತಿ, ದೀಕ್ಷಾಗೆ ಕೋಟಾ

ಅದಿತಿ ಅಶೋಕ್

ನವದೆಹಲಿ (ಪಿಟಿಐ): ಭಾರತದ ಗಾಲ್ಫ್ ತಾರೆಗಳಾದ ಅದಿತಿ ಅಶೋಕ್ ಮತ್ತು ದೀಕ್ಷಾ ಡಾಗರ್ ಸೋಮವಾರ ವಿಶ್ವ ರ‍್ಯಾಂಕಿಂಗ್ ಮೂಲಕ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.

ಜುಲೈ 26 ರಿಂದ ಆಗಸ್ಟ್ 11 ರವರೆಗೆ ನಡೆಯಲಿರುವ ಕ್ರೀಡಾಕೂಟಕ್ಕಾಗಿ ನಾಲ್ಕು ಮಂದಿಯ ಭಾರತದ ತಂಡದಲ್ಲಿ 24ನೇ ರ‍್ಯಾಂಕ್‌ನೊಡನೆ ಕರ್ನಾಟಕದ ಅದಿತಿ ಅರ್ಹತೆ ಪಡೆದರು. ದೀಕ್ಷಾ 40ನೇ ರ‍್ಯಾಂಕ್‌ನೊಡನೆ ಅವಕಾಶ ಪಡೆದರು. ಪುರುಷರ ವಿಭಾಗದಲ್ಲಿ ಅಗ್ರಮಾನ್ಯ ಗಾಲ್ಫರ್ ಶುಭಂಕರ್ ಶರ್ಮಾ ಮತ್ತು ಗಗನ್‌ಜೀತ್ ಭುಲ್ಲರ್ ಈಗಾಗಲೇ ಅರ್ಹತೆ ಪಡೆದಿದ್ದಾರೆ.

ಅದಿತಿ ಇದು ಮೂರನೇ ಒಲಿಂಪಿಕ್ಸ್. ದೀಕ್ಷಾ ಎರಡನೇ ಬಾರಿ ಸ್ಪರ್ಧಿಸಲಿದ್ದಾರೆ. 27 ವರ್ಷ ವಯಸ್ಸಿನ ಶರ್ಮಾ ಮತ್ತು 36 ವರ್ಷ ವಯಸ್ಸಿನ ಭುಲ್ಲರ್ ಅವರಿಗೆ ಇದು ಮೊದಲ ಒಲಿಂಪಿಕ್ ಆಗಿದೆ.

ಅದಿತಿ ಅವರ ನಂತರ ಎಲ್‌ಇಟಿ (ಮಹಿಳಾ ಯುರೋಪಿಯನ್ ಟೂರ್) ಗೆದ್ದ ಎರಡನೇ ಭಾರತೀಯ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ದೀಕ್ಷಾ ಪಾತ್ರರಾದ್ದಾರೆ. ಅವರು 18ನೇ ವಯಸ್ಸಿಗೆ ಈ ಸಾಧನೆ ಮಾಡಿದ್ದರು.

ಕೊಪಾ: ಅಮೆರಿಕ, ಉರುಗ್ವೆ ಶುಭಾರಂಭ

ಅರ್ಲಿಂಗ್ಟನ್, ಅಮೆರಿಕ (ಎಎಫ್‌ಪಿ): ನಾಯಕ ಕ್ರಿಸ್ಟಿಯನ್ ಪುಲಿಸಿಕ್ ಮತ್ತು ಫ್ಲೋಲಾರಿನ್ ಬಾಲೋಗನ್ ಅವರು ಗಳಿಸಿದ ಗೋಲುಗಳ ನೆರವಿನಿಂದ ಅಮೆರಿಕ ತಂಡವು ಕೊಪಾ ಅಮೆರಿಕ ಟೂರ್ನಿಯಲ್ಲಿ 2-0 ಗೋಲುಗಳಿಂದ ಬೊಲಿವಿಯಾ ತಂಡವನ್ನು ಮಣಿಸಿತು.

ಮಯಾಮಿಯ ಹಾರ್ಡ್ ರಾಕ್ ಸ್ಟೇಡಿಯಂನಲ್ಲಿ ಭಾನುವಾರ ನಡೆದ 'ಸಿ' ಗುಂಪಿನ ಮತ್ತೊಂದು ಪಂದ್ಯದಲ್ಲಿ 15 ಬಾರಿಯ ಕೊಪಾ ಚಾಂಪಿಯನ್ ಉರುಗ್ವೆ 3-1 ಗೋಲುಗಳಿಂದ ಪನಾಮ ತಂಡವನ್ನು ಸೋಲಿಸಿತು.

ಟೆಕ್ಸಾಸ್‌ನ ಆರ್ಲಿಂಗ್ಟನ್‌ನಲ್ಲಿರುವ ಎಟಿ ಅಂಡ್ ಟಿ ಕ್ರೀಡಾಂಗಣದಲ್ಲಿ ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಅಮೆರಿಕ ನಾಯಕ ಪುಲಿಸಿಕ್ ಮೂರನೇ ನಿಮಿಷ ಗೋಲು ಗಳಿಸಿದರು. ಸ್ಟ್ರೈಕರ್ ಫ್ಲೋಲಾರಿನ್ ಬಾಲೊಗನ್ ಅವರು 44ನೇ ನಿಮಿಷದಲ್ಲಿ ಎರಡನೇ ಗೋಲು ಗಳಿಸುವ ಮೂಲಕ ಮುನ್ನಡೆ ಒದಗಿಸಿದರು. ಈ ಗೋಲಿಗೂ ಫ್ಲೋಲಾರಿನ್ ಅವರ ಉತ್ತಮ ಪಾಸ್ ನೆರವಾಯಿತು.

ಆರಂಭಿಕ ಮುನ್ನಡೆಯ ಹೊರತಾಗಿಯೂ ದೊರೆತ ಅವಕಾಶಗಳಲ್ಲಿ ಗೋಲು ಗಳಿಸಲು ಅಮೆರಿಕಕ್ಕೆ ಸಾಧ್ಯವಾಗಲಿಲ್ಲ. ಒರಟು ಆಟವಾಡಿದ ಬೊಲಿವಿಯಾದ ಲಿಯೋನೆಲ್ ಜಸ್ಟಿನಿಯಾನೊ, ಗೇಬ್ರಿಯಲ್ ವಿಲ್ಲಾಮಿಲ್ ಮತ್ತು ಲೂಯಿಸ್ ಹಕ್ವಿನ್ ಅವರಿಗೆ ರೆಫ್ರಿ ಎಚ್ಚರಿಕೆ ನೀಡಿದರು.

'ನಿಸ್ಸಂಶಯವಾಗಿ ಆರಂಭಿಕ ಗೋಲು ನಮಗೆ ಸಾಕಷ್ಟು ನೆರವಾಯಿತು' ಎಂದು ಪುಲಿಸಿಕ್ ಹೇಳಿದರು.

ಉರುಗ್ವೆಗೆ ಜಯ: ಪನಾಮಾ ತಂಡದ ವಿರುದ್ಧ ಜಯ ಸಾಧಿಸಿರುವ ಉರುಗ್ವೆ ಮೂರು ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. 16ನೇ ನಿಮಿಷ ಮಾರ್ಸೆಲೊ ಬಿಯೆಲ್ಸಾ ಮೊದಲ ಗೋಲು ಗಳಿಸಿದರು. 85ನೇ ನಿಮಿಷ ಡಾರ್ವಿನ್ ನುನೆಜ್ ಅಂತರ ಹೆಚ್ಚಿಸಿದರು.

ಆರು ನಿಮಿಷ ತರುವಾಯ ಮ್ಯಾಟಿಯಾಸ್ ವಿನಾಸ್ ಮುನ್ನಡೆಯನ್ನು 3-0ಗೆ ಹೆಚ್ಚಿಸಿದರು. ಪಂದ್ಯದ ಕೊನೆಯ ಕ್ಷಣದಲ್ಲಿ ಪನಾಮ ಪರ ಮೈಕೆಲ್ ಅಮೀರ್ ಮುರಿಲ್ಲೊ (90+4) ಗೋಲು ಗಳಿಸಿದರು.

ಬೊಲಿವಿಯಾದ ಲೂಯಿಸ್ ಹಕ್ವಿನ್ ಮತ್ತು ಅಮೆರಿಕದ ಕ್ರಿಸ್ಟಿಯನ್ ಪುಲಿಸಿಕ್ (ಬಲ) ಚೆಂಡಿನ ಮೇಲೆ ಹಿಡಿತ ಸಾಧಿಸಲು ಯತ್ನಿಸಿದರು. ಎಎಫ್‌ಪಿ ಚಿತ್ರ

ಅಮೆರಿಕ ಓಪನ್ ಬ್ಯಾಡ್ಮಿಂಟನ್ ಟ್ರೀಸಾ–ಗಾಯತ್ರಿ ಜೋಡಿಗೆ 'ಬೈ'

ಫೋರ್ಟ್‌ವರ್ತ್ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತ ಜೋಡಿ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಮಂಗಳವಾರ ಆರಂಭವಾಗುವ ಅಮೆರಿಕ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ 24ನೇ ಸ್ಥಾನದಲ್ಲಿರುವ ಟ್ರೀಸಾ- ಗಾಯತ್ರಿ ಜೋಡಿಯು ತಿಂಗಳ ಹಿಂದೆ ನಡೆದ ಸಿಂಗಪುರ ಓಪನ್‌ನಲ್ಲಿ ಸೆಮಿಫೈನಲ್ ತಲುಪಿತ್ತು. ಇಲ್ಲಿ ಎರಡನೇ ಶ್ರೇಯಾಂಕ ಪಡೆದಿರುವ ಭಾರತದ ಆಟಗಾರ್ತಿಯರು ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದಾರೆ. ಎರಡನೇ ಸುತ್ತಿನಲ್ಲಿ ಅವರು ಚೀನಾ ತೈಪೆಯ ಹ್ಸೇಹ್ ಪೀ ಶಾನ್ ಮತ್ತು ಹಂಗ್ ಎನ್-ತ್ಸು ಅವರನ್ನು ಎದುರಿಸುವರು.

ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಪಡೆದಿರುವ ಪಿ.ವಿ. ಸಿಂಧು, ಎಚ್‌. ಎಸ್. ಪ್ರಣಯ್, ಲಕ್ಷ್ಯ ಸೇನ್, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ, ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಅವರು ಈ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಭಾರತದ ಗಾಯತ್ರಿ ಗೋಪಿಚಂದ್ ಮತ್ತು ಟ್ರಿಸಾ ಜೋಳಿ

ಪುರುಷರ ಸಿಂಗಲ್ಸ್‌ನಲ್ಲಿ ಪ್ರಿಯಾಂಶು ರಾಜಾವತ್ ಎಂಟನೇ ಶ್ರೇಯಾಂಕ ಪಡೆದಿದ್ದು, ಅವರು ಝೆಕ್ ರಿಪಬ್ಲಿಕ್‌ನ ಜಾನ್ ಲೋಡಾ ವಿರುದ್ಧ ಅಭಿಯಾನ ಆರಂಭಿಸುವರು. ಆಯುಷ್ ಶೆಟ್ಟಿ ಮತ್ತು ಎಸ್. ಶಂಕರ್ ಮುತ್ತುಸ್ವಾಮಿ ಸುಬ್ರಮಣಿಯನ್ ಅವರೂ ಕಣಕ್ಕೆ ಇಳಿಯುವರು. ಮಾಳವಿಕಾ ಬನ್ಸೋಡ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಏಳನೇ ಶ್ರೇಯಾಂಕದ ಪಡೆದಿದ್ದು, ಅವರು ಮೊದಲ ಸುತ್ತಿನಲ್ಲಿ ಎಸ್ಟೋನಿಯಾದ ಕ್ರಿಸ್ಟಿನ್ ಕುಬಾ ಅವರನ್ನು ಎದುರಿಸುವರು. ತಾನ್ಯಾ ಹೇಮಂತ್ ಕೂಡ ಸ್ಪರ್ಧಾ ಕಣದಲ್ಲಿ ಇದ್ದಾರೆ.

ಸೀನ್ ನದಿಯಲ್ಲಿ ಉದ್ಘಾಟನೆ: ಮುಂದುವರಿದ ಹೊಯ್ದಾಟ

ಪ್ಯಾರಿಸ್ (ಎಎಫ್‌ಪಿ): ಸೀನ್ ನದಿಯಲ್ಲಿ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭ ಈ ಬಾರಿಯ ಕ್ರೀಡಾಮೇಳದ ಆಕರ್ಷಣೆಯಾಗಿದೆ. ಆದರೆ ಒಂದು ತಿಂಗಳು ಇರುವಂತೆ ಜುಲೈ 26ರಂದು ಈ ನದಿಯಲ್ಲಿ ವಿನೂತನ ರೀತಿಯ ಉದ್ಘಾಟನೆ ಸಾಧ್ಯವಾಗುವುದೇ ಎಂಬ ಹೊಯ್ದಾಟ ಮುಂದುವರಿದಿದೆ.

ಮಳೆಯ ಭೀತಿ, ಮಾಲಿನ್ಯ ಮತ್ತು ಉಗ್ರರ ಉಪಟಳದ ಆತಂಕ ವ್ಯವಸ್ಥಾಪಕರಿಗೆ ಈ ವಿನೂತನ ಯೋಜನೆಯ ಬಗ್ಗೆ ಎರಡೆರಡು ಬಾರಿ ಯೋಚಿಸುವಂತೆ ಮಾಡಿದೆ.

ಇತಿಹಾಸದಲ್ಲೇ ಮೊದಲ ಬಾರಿ ಉದ್ಘಾಟನಾ ಸಮಾರಂಭವನ್ನು ಮುಖ್ಯ ಕ್ರೀಡಾಂಗಣದಿಂದ ಹೊರಗೆ– ನದಿಯಲ್ಲಿ ದೋಣಿಗಳನ್ನು ಬಳಸಿ ನಡೆಸಲು– ನಿರ್ಧರಿಸಲಾಗಿದೆ. ಇದೇ ನದಿಯಲ್ಲಿ ಮುಕ್ತ ಈಜು ಮತ್ತು ಟ್ರಯಥ್ಲಾನ್‌ನ ಈಜು ಲೆಗ್ ನಿಗದಿಯಾಗಿದೆ. ಸದ್ಯ ನದಿಯ ಹರಿವು ಜೋರಾಗಿದ್ದು, ಪ್ರಸ್ತುತ ರಿಹರ್ಸಲ್ ನಡೆಸುವುದೂ ಕಷ್ಟವಾಗಿದೆ. ನದಿಯ ನೀರೂ ಸ್ವಚ್ಛವಾಗಿಲ್ಲ. 85 ದೋಣಿಗಳನ್ನು ಬಳಸಿ ಸೋಮವಾರ ಮೊದಲ ಸಲ ನಡೆಸಲು ಉದ್ದೇಶಿಸಲಾಗಿದ್ದ ತಾಲೀಮನ್ನು ಹರಿವು ತೀವ್ರವಾದ ಕಾರಣ ರದ್ದುಪಡಿಸಲಾಯಿತು. ಉದ್ಘಾಟನೆ ದಿನ ಆರು ಕಿ.ಮೀ. (ನಾಲ್ಕು ಮೈಲಿ) ದೂರ ಅಥ್ಲೀಟುಗಳು ದೋಣಿಯಲ್ಲಿ ಪಥ ಸಂಚಲನದ ಮೂಲಕ ಸಾಗಬೇಕಾಗಿದೆ.

'ಅಂದು ನದಿಯ ಹರಿವು ಜೋರಾಗಿದ್ದಲ್ಲಿ ಉದ್ಘಾಟನಾ ಸಮಾರಂಭಕ್ಕೆ ಗಂಭೀರ ಸಮಸ್ಯೆ ಆಗಬಹುದು' ಎಂದು ಜಲಶಾಸ್ತ್ರಜ್ಞ ಜೀನ್ ಮೇರಿ ಮೌಷೆಲ್ 'ಎಎಫ್‌ಪಿ'ಗೆ ತಿಳಿಸಿದರು. ನೀರಿನ ಮಟ್ಟ ಸಾಮಾನ್ಯ ಬೇಸಿಗೆಯಲ್ಲಿ ಇರುವುದಕ್ಕಿಂತ ನಾಲ್ಕರಿಂದ ಐದು ಪಟ್ಟು ಜಾಸ್ತಿಯಿದ್ದು ಹರಿವಿನ ವೇಗದಲ್ಲೂ ಹೆಚ್ಚಳವಾಗಿದೆ.

ಮೇ ಮತ್ತು ಜೂನ್ ತಿಂಗಳಲ್ಲಿ ಆಗಿರುವ ಭಾರಿ ಮಳೆಯಿಂದ ನದಿಯೂ ಮಲೀನಗೊಂಡಿದೆ. ನದಿಯನ್ನು ಸ್ವಚ್ಛಗೊಳಿಸಲು ಕಳೆದ ದಶಕದಲ್ಲಿ ಕೋಟಿಗಟ್ಟಲೆ ಯುರೊ ವೆಚ್ಚಮಾಡಲಾಗಿದೆ. ಒಳಚರಂಡಿ ವ್ಯವಸ್ಥೆ ಮತ್ತು ನೀರಿನ ಸಂಸ್ಕರಣೆ ಘಟಕಗಳನ್ನು ಮೇಲ್ದರ್ಜೆಗೇರಿಸಲಾಗಿದೆ.

ಎಂಸಿಎ ಅಧ್ಯಕ್ಷ ಸ್ಥಾನಕ್ಕೆ ಜುಲೈ 23ರಂದು ಚುನಾವಣೆ

ಮುಂಬೈ (ಪಿಟಿಐ): ಅಮೋಲ್ ಕಾಳೆ ಅವರ ನಿಧನದಿಂದ ತೆರವಾದ ಮುಂಬೈ ಕ್ರಿಕೆಟ್ ಸಂಸ್ಥೆಯ (ಎಂಸಿಎ) ಅಧ್ಯಕ್ಷ ಸ್ಥಾನಕ್ಕೆ ಜುಲೈ 23ರಂದು ಚುನಾವಣೆ ನಿಗದಿಯಾಗಿದೆ.

47 ವರ್ಷದ ಕಾಳೆ ಅವರು ಜೂನ್ 9ರಂದು ಅಮೆರಿಕದಲ್ಲಿ ಹೃದಯಸ್ತಂಭನದಿಂದ ನಿಧನರಾಗಿದ್ದರು. ನ್ಯೂಯಾರ್ಕ್‌ನಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯ ಭಾರತ– ಪಾಕಿಸ್ತಾನ ಪಂದ್ಯವನ್ನು ವೀಕ್ಷಿಸಲು ಅವರು ಅಲ್ಲಿಗೆ ತೆರಳಿದ್ದರು.

2022ರ ಅಕ್ಟೋಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಅವರು ಭಾರತ ತಂಡದ ಮಾಜಿ ಆಟಗಾರ ಸಂದೀಪ್ ಪಾಟೀಲ್ ಅವರನ್ನು ಸೋಲಿಸಿ ಅಧ್ಯಕ್ಷಗಾದಿಗೆ ಏರಿದ್ದರು.

ಮಹಾರಾಷ್ಟ್ರ ರಾಜ್ಯ ಚುನಾವಣಾ ಆಯೋಗದ ಮಾಜಿ ಉಪ ಆಯುಕ್ತ ಅವಿನಾಶ್ ತುಕಾರಾಂ ಸನಾಸ್ ಅವರನ್ನು ಚುನಾವಣಾಧಿಕಾರಿಯಾಗಿ ನೇಮಿಸಲಾಗಿದೆ. ಜುಲೈ 23ರಂದು ಮತದಾನ ನಡೆಯಲಿದ್ದು, ಅಂದೇ ಫಲಿತಾಂಶ ಪ್ರಕಟವಾಗಲಿದೆ.

ಸ್ಟಿಮಾಚ್ ವಿರುದ್ಧ ಎಐಎಫ್‌ಎಫ್ ಕಿಡಿ

ನವದೆಹಲಿ (ಪಿಟಿಐ): 'ಭಾರತ ಫುಟ್‌ಬಾಲ್ ತಂಡದ ಪದಚ್ಯುತ ಕೋಚ್ ಇಗೊರ್ ಸ್ಟಿಮಾಚ್ ಅವರು ದೇಶದ ಫುಟ್‌ಬಾಲ್ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಟ್ಟದಾಗಿ ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಆರೋಪಿಸಿದೆ.

ಎಐಎಫ್‌ಎಫ್ ವಿರುದ್ಧ ಸ್ಟಿಮಾಚ್ ಮಾಡಿದ ಸರಣಿ ಆರೋಪಗಳಿಗೆ ಪ್ರತಿಕ್ರಿಯಿಸಿದ ಫೆಡರೇಷನ್, ತಂಡದ ಪ್ರದರ್ಶನ ಮಟ್ಟ ಹೆಚ್ಚಿಸಲು ಅವರು ಕೇಳಿದ ಎಲ್ಲವನ್ನೂ ಒದಗಿಸುವ ಪ್ರಯತ್ನ ಮಾಡಲಾಗಿದೆ ಎಂದು ಹೇಳಿದೆ.

'ವಜಾ ಮಾಡಿದ ನಾಲ್ಕು ದಿನಗಳ ನಂತರ ಪತ್ರಿಕಾಗೋಷ್ಠಿಯನ್ನು ಕರೆಯುವ ಅವರ ಏಕೈಕ ಉದ್ದೇಶವು ಫೆಡರೇಷನ್ ಅನ್ನು ಕೆಟ್ಟದಾಗಿ ಬಿಂಬಿಸುವುದಾಗಿದೆ' ಎಂದು ಎಐಎಫ್‌ಎಫ್ ಹೇಳಿಕೆಯಲ್ಲಿ ತಿಳಿಸಿದೆ.

ಇಗೊರ್ ಸ್ಟಿಮಾಚ್

'ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ತಮ್ಮ ಸ್ಥಾನದಿಂದ ಎಷ್ಟು ಬೇಗ ನಿರ್ಗಮಿಸುವರೊ, ದೇಶದ ಫುಟ್‌ಬಾಲ್ ಭವಿಷ್ಯಕ್ಕೆ ಅಷ್ಟು ಒಳಿತಾಗಲಿದೆ' ಎಂದು ಸ್ಟಿಮಾಚ್ ಎರಡು ದಿನಗಳ ಹಿಂದೆ ವಾಗ್ದಾಳಿ ನಡೆಸಿದ್ದರು.

'ಪಂದ್ಯ ನಡೆಯುವ ಸ್ಥಳಗಳ ಆಯ್ಕೆ, ನೆರವು ಸಿಬ್ಬಂದಿ ಆಯ್ಕೆ, ಪ್ರಯಾಣದ ದಿನಗಳಿಗೆ ಸಂಬಂಧಿಸಿ ತಂಡದ ಮ್ಯಾನೇಜರ್ ಜೊತೆ ಸಂವಹನ ನಡೆಸಲು ಸ್ಟಿಮಾಚ್ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು' ಎಂದೂ ತಿಳಿಸಿದೆ.

ಆ.25ಕ್ಕೆ ರೆಫ್ರಿ ಪರೀಕ್ಷೆ

ಬೆಂಗಳೂರು: ಕರ್ನಾಟಕ ಅಮೆಚೂರ್ ಥ್ರೋಬಾಲ್ ಸಂಸ್ಥೆಯಿಂದ ಆಗಸ್ಟ್ 25ರಂದು ರೆಫ್ರಿ ಬೋರ್ಡ್ ಕ್ಲಿನಿಕ್ ಮತ್ತು ರೆಫ್ರಿ ಪರೀಕ್ಷೆಯನ್ನು ಕಲಬುರ್ಗಿ ಮತ್ತು ಬೆಂಗಳೂರಿನಲ್ಲಿ ನಡೆಸಲಾಗುತ್ತಿದೆ.

ಪರೀಕ್ಷೆ ತೆಗೆದುಕೊಳ್ಳಲು ಇಚ್ಛಿಸುವವರು ತಮ್ಮ ಹೆಸರನ್ನು ಸಂಸ್ಥೆಯ ಗೌರವ ಕಾರ್ಯದರ್ಶಿ ಎಂ.ವಿ.ಸತ್ಯನಾರಾಯಣ, ಕೊಠಡಿ ಸಂಖ್ಯೆ 57, ಕಂಠೀರವ ಕ್ರೀಡಾಂಗಣ, ಬೆಂಗಳೂರು ಇಲ್ಲಿ ಜುಲೈ 5ರೊಳಗೆ ನೋಂದಾಯಿಸಬೇಕು. ಮಾಹಿತಿಗೆ 9611119600, 9844048312 ಸಂಪರ್ಕಿಸಬಹುದು.

ಮೋದಿ–ಶಾಗೆ ಸಂವಿಧಾನ ಪ್ರದರ್ಶನ

ಒಂದನೇ ಪುಟದಿಂದ...

ಹಂಗಾಮಿ ಸ್ಪೀಕರ್ ಆಗಿ ಭರ್ತೃಹರಿ ಮಹತಾಬ್ ಅವರನ್ನು ಆಯ್ಕೆ ಮಾಡಿದ್ದನ್ನು ಪ್ರತಿಭಟಿಸಿ ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯ ಕೊಡಿಕುನ್ನಿಲ್ ಸುರೇಶ್, ಡಿಎಂಕೆಯ ಟಿ.ಆರ್. ಬಾಲು ಹಾಗೂ ಟಿಎಂಸಿಯ ಸುದೀಪ್ ಬಂಡೋಪಾಧ್ಯಾಯ ಸದನದಿಂದ ಹೊರ ನಡೆದರು. ಇದರ ನಡುವೆಯೇ, ಸಭಾಧ್ಯಕ್ಷರ ಪ್ಯಾನೆಲ್‌ನಲ್ಲಿರುವ ಬಿಜೆಪಿಯ ರಾಧಾಮೋಹನ್ ಸಿಂಗ್ ಹಾಗೂ ಫಗ್ಗನ್ ಸಿಂಗ್ ಕುಲಸ್ತೆ ಅವರು ಪ್ರಮಾಣವಚನ ಸ್ವೀಕರಿಸಿದರು. ಆಗ ವಿಪಕ್ಷ ಸದಸ್ಯರು 'ಸಂವಿಧಾನದ ಉಲ್ಲಂಘನೆ' ಎಂದು ಘೋಷಣೆ ಕೂಗಿದರು.

₹2 ಕೋಟಿ ಮೌಲ್ಯದ ಗಾಂಜಾ ವಶ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯಲ್ಲಿ ಅಂತರರಾಜ್ಯ ಮಾದಕದ್ರವ್ಯ ಜಾಲವನ್ನು ಭೇದಿಸಿರುವ ಮಾದಕ ವಸ್ತು ನಿಯಂತ್ರಣ ದಳವು (ಎನ್‌ಸಿಬಿ) ₹2 ಕೋಟಿ ಮೌಲ್ಯದ 111 ಕೆ.ಜಿಯಷ್ಟು ಗಾಂಜಾವನ್ನು ವಶಕ್ಕೆ ಪಡೆದಿದೆ.

ಈ ಘಟನೆಯಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಮಾದಕ ದ್ರವ್ಯ ಸಾಗಣೆಗಾಗಿ ಬಳಸಲಾಗಿದ್ದ ಎರಡು ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ಸೋಮವಾರ ಮಾಹಿತಿ ನೀಡಿದ್ದಾರೆ.

ಪುಣೆ ಮೂಲದ ಈ ಜಾಲವು ಗಾಂಜಾ ಸೇರಿದಂತೆ ಇನ್ನಿತರ ಮಾದಕದ್ರವ್ಯಗಳನ್ನು ಒಡಿಶಾದಿಂದ ಅಕ್ರಮವಾಗಿ ಸಾಗಣೆ ಮಾಡಿ, ಮುಂಬೈ ಮತ್ತು ಪುಣೆಯಲ್ಲಿ ಹಂಚಿಕೆ ಮಾಡುತ್ತಿತ್ತು ಎಂದು ಎನ್‌ಸಿಬಿಯ ಮುಂಬೈ ವಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಹಿಳಾ ಕಾನ್‌ಸ್ಟೆಬಲ್ ಜೊತೆ ಸಂಬಂಧ: ಹಿಂಬಡ್ತಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಡಿವೈಎಸ್‌ಪಿ ಹುದ್ದೆಯಲ್ಲಿದ್ದ ಕೃಪಾಶಂಕರ್ ಕನೌಜಿಯಾ ಅವರಿಗೆ ಮಹಿಳಾ ಕಾನ್‌ಸ್ಟೆಬಲ್ ಒಬ್ಬರ ಜೊತೆಗೆ ಸಂಬಂಧ ಹೊಂದಿದ್ದಾರೆ ಎಂಬ ಆರೋಪದ ಕಾರಣಕ್ಕೆ ಕಾನ್‌ಸ್ಟೆಬಲ್ ಹುದ್ದೆಗೆ ಹಿಂಬಡ್ತಿ ನೀಡಲಾಗಿದೆ.

ಡಿವೈಎಸ್‌ಪಿ ಹುದ್ದೆಗೆ ಬಡ್ತಿ ಪಡೆಯುವ ಮೊದಲು ಈ ಪೊಲೀಸ್ ಅಧಿಕಾರಿ ಕಾನ್‌ಸ್ಟೆಬಲ್ ಆಗಿದ್ದರು. ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಬಡ್ತಿ ಪಡೆದಿದ್ದರು.

ಕಾನ್‌ಸ್ಟೆಬಲ್ ಆಗಿ ಪೊಲೀಸ್ ಇಲಾಖೆಯನ್ನು ಸೇರಿದ್ದ ಕೃಪಾಶಂಕರ್ ಅವರು ಶ್ರಮವಹಿಸಿ ಕೆಲಸ ಮಾಡುತ್ತಿದ್ದರು. ಮೊದಲು ಹೆಡ್ ಕಾನ್‌ಸ್ಟೆಬಲ್ ಆಗಿ ಬಡ್ತಿ ಪಡೆದ ಅವರು ಕೆಲವು ವರ್ಷಗಳ ಹಿಂದೆ ಡಿವೈಎಸ್‌ಪಿ ಆಗಿ ಬಡ್ತಿ ಪಡೆದರು.

ಆದರೆ 2021ರಲ್ಲಿ ಅವರು ಮಹಿಳಾ ಕಾನ್‌ಸ್ಟೆಬಲ್ ಒಬ್ಬರೊಂದಿಗೆ ಲೈಂಗಿಕ ಕ್ರಿಯೆ ನಡೆಸುತ್ತಿದ್ದಾಗ ಸಿಕ್ಕಿಬಿದ್ದಿದ್ದರು ಎನ್ನಲಾಗಿದೆ. ಇದಾದ ನಂತರ ಅವರನ್ನು ಅಮಾನತಿನಲ್ಲಿ ಇರಿಸಿ, ಅವರ ವಿರುದ್ಧ ಇಲಾಖಾ ತನಿಖೆಗೆ ಆದೇಶಿಸಲಾಗಿತ್ತು.

ಕೃಪಾಶಂಕರ್ ಅವರು ಪೊಲೀಸರು ಪಾಲಿಸಬೇಕಿರುವ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂಬುದು ಗೊತ್ತಾದ ನಂತರ ಅವರಿಗೆ ಕಾನ್‌ಸ್ಟೆಬಲ್ ಹುದ್ದೆಗೆ ಹಿಂಬಡ್ತಿ ನೀಡಲಾಯಿತು. ನಂತರ ಹಿಂದೆ ತಾವು ಇನ್‌ಸ್ಪೆಕ್ಟರ್ ಆಗಿದ್ದ ಪಿಎಸಿ ಘಟಕಕ್ಕೇ ಅವರನ್ನು ಕಾನ್‌ಸ್ಟೆಬಲ್ ಆಗಿ ವರ್ಗಾಯಿಸಲಾಯಿತು.

2021ರ ಜುಲೈನಲ್ಲಿ ಕೃಪಾಶಂಕರ್ ಅವರು ತುರ್ತು ಕೌಟುಂಬಿಕ ಕೆಲಸ ಇದೆ ಎಂಬ ಕಾರಣ ನೀಡಿ ಒಂದು ದಿನದ ರಜೆ ಪಡೆದಿದ್ದರು. ರಜೆ ಪಡೆದು ಮನೆಗೆ ಹೋಗುವ ಬದಲು ಅವರು ಮಹಿಳಾ ಕಾನ್‌ಸ್ಟೆಬಲ್ ಜೊತೆ ಕಾನ್ಪುರಕ್ಕೆ ತೆರಳಿದ್ದರು ಎಂದು ಮೂಲಗಳು ಹೇಳಿವೆ.

ಈ ನಡುವೆ ಹಿರಿಯ ಅಧಿಕಾರಿಗಳಿಗೆ ಕರೆ ಮಾಡಿದ್ದ ಕೃಪಾಶಂಕರ್ ಅವರ ಪತ್ನಿ, ತಮ್ಮ ಪತಿ ಇನ್ನೂ ಮನೆಗೆ ಬಂದಿಲ್ಲ, ಅವರು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಹೇಳಿದ್ದರು. ಪೊಲೀಸರು ಅವರಿಗಾಗಿ ಹುಡುಕಾಟ ಆರಂಭಿಸಿದ್ದರು.

ಅವರ ಮೊಬೈಲ್ ಫೋನ್ ಲೊಕೇಷನ್ ಆಧರಿಸಿ, ಅವರು ಕಾನ್ಪುರದ ಹೋಟೆಲ್ ಒಂದರಲ್ಲಿ ಇರುವುದನ್ನು ಪೊಲೀಸರು ಪತ್ತೆಮಾಡಿದರು. ಅವರನ್ನು ಯಾರೋ ಅಪಹರಿಸಿರಬೇಕು ಎಂಬ ಅನುಮಾನದ ಅಡಿ ಪೊಲೀಸರು ಆ ಹೋಟೆಲ್ ಮೇಲೆ ದಾಳಿ ನಡೆಸಿದರು. ಆಗ ಕೃಪಾಶಂಕರ್ ಅವರು ಮಹಿಳಾ ಕಾನ್‌ಸ್ಟೆಬಲ್ ಜೊತೆ ಸಿಕ್ಕಿಬಿದ್ದರು.

ಬೃಹನ್‌ಮುಂಬೈ ನಗರ ಪಾಲಿಕೆಗೆ ಹೈಕೋರ್ಟ್ ಪ್ರಶ್ನೆ

ಗಣ್ಯರಿಗೆ ಫುಟ್‌ಪಾತ್ ಸ್ವಚ್ಛ; ಜನರಿಗೇಕಿಲ್ಲ?

ಮುಂಬೈ (ಪಿಟಿಐ): 'ಪ್ರಧಾನಿಗಾಗಿ ಅಥವಾ ಇತರ ಅತಿ ಗಣ್ಯ ವ್ಯಕ್ತಿಗಳಿಗಾಗಿ ರಸ್ತೆಗಳು ಮತ್ತು ಪಾದಚಾರಿ ಮಾರ್ಗಗಳನ್ನು ಸ್ವಚ್ಛಗೊಳಿಸಲಾಗುತ್ತದೆ ಎಂದಾದರೆ, ಅದನ್ನು ಸಾಮಾನ್ಯರಿಗಾಗಿ ಪ್ರತಿದಿನ ಏಕೆ ಮಾಡಲಾಗುವುದಿಲ್ಲ?' ಎಂದು ಬಾಂಬೆ ಹೈಕೋರ್ಟ್ ಸೋಮವಾರ ಚಾಟಿ ಬೀಸಿದೆ.

ಸ್ವಚ್ಛ ಪಾದಚಾರಿ ಮಾರ್ಗಗಳು ಮತ್ತು ನಡೆಯಲು ಸುರಕ್ಷಿತ ಸ್ಥಳಗಳು ಪ್ರತಿಯೊಬ್ಬರ ಮೂಲಭೂತ ಹಕ್ಕು ಮತ್ತು ಇದನ್ನು ಕಡ್ಡಾಯವಾಗಿ ಒದಗಿಸುವುದು ರಾಜ್ಯದ ಆಡಳಿತ ಕರ್ತವ್ಯವಾಗಿದೆ ಎಂದು ನ್ಯಾಯಮೂರ್ತಿಗಳಾದ ಎಂ.ಎಸ್. ಸೋನಕ್ ಮತ್ತು ಕೋಮಲ್ ಖಾಟಾ ಅವರಿದ್ದ ವಿಭಾಗೀಯ ಪೀಠ ಹೇಳಿದೆ.

ಮುಂಬೈ ನಗರದಲ್ಲಿ ನಿಯಮ ಉಲ್ಲಂಘಿಸುವ ಬೀದಿ ಬದಿ ವ್ಯಾಪಾರಿಗಳಿಂದ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ಕಳೆದ ವರ್ಷ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿತ್ತು.

ರಸ್ತೆಗಳನ್ನು ಅಕ್ರಮವಾಗಿ ಅತಿಕ್ರಮಣ ಮಾಡುತ್ತಿರುವ ಬೀದಿಬದಿ ವ್ಯಾಪಾರಿಗಳ ವಿರುದ್ಧ ರಾಜ್ಯ ಸರ್ಕಾರವು ಮಹತ್ವದ ಕ್ರಮ ಕೈಗೊಳ್ಳಲೇಬೇಕು ಎಂದು ಹೈಕೋರ್ಟ್ ಹೇಳಿದೆ.

'ಪಾದಚಾರಿ ಮಾರ್ಗದ ಮೇಲೆಯೇ ನಡೆಯಿರಿ ಎಂದು ಮಕ್ಕಳಿಗೆ ಹೇಳುತ್ತೇವೆ. ಆದರೆ ಓಡಾಟಕ್ಕೆ ಪಾದಚಾರಿ ಮಾರ್ಗವೇ ಇರುವುದಿಲ್ಲ. ಹಲವು ವರ್ಷಗಳಿಂದ ಈ ಸಮಸ್ಯೆಗೆ ಸಂಬಂಧಿಸಿದಂತೆ ಪರಿಹಾರ ಕಂಡುಕೊಳ್ಳಲು ಕೆಲಸ ಮಾಡುತ್ತಿದ್ದೇವೆ ಎಂದು ಅಧಿಕಾರಿಗಳು ಹೇಳುತ್ತಲೇ ಇದ್ದಾರೆ. ಆದರೆ ಪರಿಹಾರ ಕಂಡುಕೊಂಡಿಲ್ಲ. ಇದು ಅಧಿಕಾರಿಗಳಲ್ಲಿಯ ಇಚ್ಛಾಶಕ್ತಿಯ ಕೊರತೆ ತೋರುತ್ತದೆ' ಎಂದು ಪೀಠ ಹೇಳಿದೆ.

'ಕಾಲಕಾಲಕ್ಕೆ ಪಾದಚಾರಿ ಮಾರ್ಗಗಳಲ್ಲಿ ಅಕ್ರಮವಾಗಿ ವ್ಯಾಪಾರ ಮಾಡುತ್ತಿರುವ ಬೀದಿಬದಿ ವ್ಯಾಪಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಆದರೆ ಅವರು ಪುನಃ ಬರುತ್ತಾರೆ' ಎಂದು ಬೃಹನ್‌ಮುಂಬೈ ನಗರ ಪಾಲಿಕೆ (ಬಿಎಂಸಿ) ಪರ ವಕೀಲರು ಕೋರ್ಟ್‌ಗೆ ತಿಳಿಸಿದರು. ವಕೀಲರ ವಾದವನ್ನು ಪುಷ್ಟೀಕರಿಸದ ಕೋರ್ಟ್, ಅಂಥ ವ್ಯಾಪಾರಿಗಳನ್ನು ಗುರುತಿಸಲು ದತ್ತಾಂಶ ಆಧರಿತ ಕ್ರಮಗಳನ್ನು ತೆಗೆದುಕೊಳ್ಳಿ ಎಂದು ಹೇಳಿತು.

ನಗರಸಭಾ ಕಾರ್ಯಾಲಯ ಹೊಸಕೋಟೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 114. ತಾಲ್ಲೂಕು ಆಫೀಸ್ ಪಕ್ಕ, ಹಳೆ ಬಸ್ ನಿಲ್ದಾಣ.
ದೂರವಾಣಿ : 2793 1221. ಇ–ಮೇಲ್ : itstaff_ulb_hosakote@yahoo.com
ವೆಬ್‌ಸೈಟ್: www.hosakotecity.mrc.gov.in

ಸಂಖ್ಯೆ : ನ.ಸ.ಹೊ./ಆ.ಶಾ./ಸಿಆರ್/ಎಂ.ಆರ್.ಎಫ್./ಟೆಂಡರ್/03/2024–25
ದಿನಾಂಕ : 24–06–2024

ಅಲ್ಪಾವಧಿ ಟೆಂಡರ್ & ಮರು ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು, ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಸ್ವಚ್ಛ ಭಾರತ್ ಮಿಷನ್ 2.0 ಎನ್.ಎಂ.ಪಿ.ಸಿ. ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಪ್ರಕಾರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರು ಹಾಗೂ ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕಾಮಗಾರಿಗಳ ವಿವರ : 1) DMA/2024-25/WORK_INDENT18793, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 99.90, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) : 1,69,300/–. 2) DMA/2024-25/IND1834/Call-2, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 3.900, ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) : 7,500/–.

1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. 2) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 02–07–2024 ರ ಸಂಜೆ 5.00 ಗಂಟೆಯವರೆಗೆ ಹಾಗೂ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : 05–07–2024 ರ ಬೆಳಿಗ್ಗೆ 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ : 08–07–2024 ರ ಸಂಜೆ 5.00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ನಿಗಧಿಪಡಿಸಲಾಗಿರುತ್ತದೆ. 3) ಹೆಚ್ಚಿನ ವಿವರಗಳನ್ನು ಕಛೇರಿಯ ಆರೋಗ್ಯ ಶಾಖೆಯಿಂದ ಅಥವಾ ವೆಬ್‌ಸೈಟ್ : https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ. ಹಾಗೂ ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಯುವುದು.

ಸಹಿ/– ಪೌರಾಯುಕ್ತರು, ನಗರಸಭೆ, ಹೊಸಕೋಟೆ.
ಸಹಿ/– ಆಡಳಿತಾಧಿಕಾರಿಗಳು, ನಗರಸಭೆ, ಹೊಸಕೋಟೆ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/540/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು(ಕೆರೆಗಳು ದಕ್ಷಿಣ ವಲಯ), ಕೊಠಡಿ ಸಂ.309, 3ನೇ ಮಹಡಿ ಹೊಸ ಕಟ್ಟಡ, ಬೃಬೆಂಮಪಾ, ಎನ್.ಆರ್.ಚೌಕ, ಬೆಂಗಳೂರು–560 002.

ಸಂ: ಕಾಪಾಅ–ದಕ್ಷಿಣ ವಲಯ/(ಕೆರೆಗಳು)/ಟಿಎನ್–01/2024–25 ದಿನಾಂಕ: 24.06.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಟೆಂಡರ್) (ಕರ್ನಾಟಕ ಸರ್ಕಾರದ KPP ಪೋರ್ಟಲ್ ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್ ಅಥವಾ ರಾಜ್ಯ ಸರ್ಕಾರದ ಯಾವುದೇ ಸಂಸ್ಥೆಯಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

2ನೇ ಕರೆ

ಕ್ರ ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಮಡಿವಾಳ ಕೆರೆಯ ಸಮಗ್ರ ಅಭಿವೃದ್ಧಿ (2ನೇ ಕರೆ)	1500.00	1234.38	15 ಲಕ್ಷಗಳು

ಪೂರ್ಣಗೊಳಿಸಲು ನಿಗದಿಪಡಿಸಿರುವ ಅವಧಿ: 11 ತಿಂಗಳು

(1) ಬಿಡ್ ದಾಖಲೆಗಳನ್ನು ದಿನಾಂಕ: 29–06–2024ರಿಂದ ವೆಬ್‌ಸೈಟ್ http://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಮುಖ್ಯ ಅಭಿಯಂತರರು (ಕೆರೆಗಳು), ಬೃಬೆಂಮಪಾ, ಇಲ್ಲಿ ಬಿಡ್ ಪೂರ್ವಭಾವಿ ಸಭೆ ದಿನಾಂಕ: 02–07–2024ರ ಸಂಜೆ 3.00 ಗಂಟೆಗೆ. (3) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 12–07–2024 ಸಂಜೆ 4:00 ಗಂಟೆವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರು (ದಕ್ಷಿಣ), ಕೆರೆಗಳು, ಬೃಬೆಂಮ ಪಾಲಿಕೆ ಇಲ್ಲಿ ವೆಬ್‌ಸೈಟ್: http://kppp.karnataka.gov.in ನಲ್ಲಿ ತೆರೆಯುವ ದಿನಾಂಕ: 15–07–2024ರ ಅಪರಾಹ್ನ 12.00 ಗಂಟೆಗೆ.
ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದು. ವಿವರಗಳು, ನೋಂದಣಿ ಹಾಗೂ ಇ–ಪಾವತಿಗಾಗಿ ಜಿಒಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ http://kppp.karnataka.gov.in ಅಥವಾ ಕೆಪಿಪಿ ಪೋರ್ಟಲ್ ಸಹಾಯವಾಣಿ 080–22485867/22485927 ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಕೆರೆಗಳು ದಕ್ಷಿಣ ವಲಯ), ಬೃಬೆಂಮಪಾ

ನಗರಸಭಾ ಕಾರ್ಯಾಲಯ, ತಿಪಟೂರು

ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in
ನಂ.ನ.ಸ.ತಿ/ಕಂ.ಶಾ/ಸಿ.ಆರ್/15/2024–25 ದಿನಾಂಕ: 20.06.2024

ಟೆಂಡರ್/ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಆದ್ಯಾದೇಶ 1999 – 2000ರ ನಿಯಮಗಳಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು ಗುತ್ತಿಗೆದಾರರಿಂದ ಹಾಗೂ ಸರಬರಾಜು ರವರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು).

ಕ್ರ ಸಂ	ಇಂಡೆಂಟ್ ನಂಬರ್	ಅಂದಾಜು ಮೊತ್ತ ರೂ.ಲಕ್ಷ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2023-24/OW/WORK_INDENT17073/CALL-2	58,00,000/-	1,16,000/-	28.06.2024	01.07.2024
2	DMA/2023-24/SE1831/Call-3	20,50,000/-	41,000/-	08.07.2024	10.07.2024

ಕರ್ನಾಟಕ ಪುರಸಭಾ ಕಾಯ್ದೆ 1964 ನಿಯಮ 347ರಂತೆ ಕೆಲಸ ನಿರ್ವಹಿಸಲು ಕೊಟೇಷನ್ ಆಹ್ವಾನಿಸಲಾಗಿದೆ.

1) ವಾರ್ಡ್ ನಂ. 23 ರ ಬೋವಿ ಶಾಲೆ ಪಕ್ಕದಲ್ಲಿ ಇರುವ ಆರ್.ಓ Plant ನ್ನು ದುರಸ್ಥಿ ಪಡಿಸಲು ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು.
2) ವಾರ್ಡ್ ನಂ. 27 ರ ವಿವೇಕಾನಂದ ನಗರದಲ್ಲಿ ಇರುವ ಆರ್.ಓ Plant ನ್ನು ದುರಸ್ಥಿ ಪಡಿಸಲು ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು.
3) ಎಸ್.ಟಿ.ಪಿ ಘಟಕದಲ್ಲಿ ಕೆಟ್ಟಿರುವ 250 ಕೆವಿಎ Diesel Generator ನ್ನು ದುರಸ್ಥಿ ಪಡಿಸಲು ಪರಿಶೀಲಿಸಿ ಕೊಟೇಷನ್ ಸಲ್ಲಿಸುವುದು.
4) ನಗರದ ಈಚನೂರು ಇನ್‌ಟೆಕ್‌ವೆಲ್‌ನಲ್ಲಿ ಸುಟ್ಟಿರುವ 40 ಹೆಚ್.ಪಿ ಸಾಮರ್ಥ್ಯದ ಮೋಟಾರ್‌ನ್ನು ದುರಸ್ಥಿ ಪಡಿಸಲು ಕೊಟೇಷನ್ ಸಲ್ಲಿಸುವುದು.
5) Sucking and Jetting ವಾಹನಕ್ಕೆ ಹೊಸದಾಗಿ Jetting Pipe ನ್ನು ಖರೀದಿಸಲು ಕೊಟೇಷನ್ ಸಲ್ಲಿಸುವುದು.
6) ಸಮಾಜ ಕಲ್ಯಾಣ ಇಲಾಖೆಯ ಎಸ್.ಸಿ/ ಎಸ್.ಟಿ ಹಾಸ್ಟಲ್‌ಗಳಿಗೆ ಹೀಟ್ ಪಂಪ್ (Heat Pump) ಸರಬರಾಜು ಮಾಡಲು ಅಂದಾಜು ಪಟ್ಟಿ ತಯಾರಿಸಲು ಕೊಟೇಷನ್ ಸಲ್ಲಿಸುವುದು.
7) ನಗರಸಭೆಗೆ ಅವಶ್ಯಕವಾದ Stationary ಸಾಮಾಗ್ರಿಗಳ ಸರಬರಾಜು ಮಾಡಿಕೊಳ್ಳಲು ಟೆಂಡರ್ ಕರೆಯಬೇಕಾಗಿದ್ದು ಅಂದಾಜು ಪಟ್ಟಿ ತಯಾರಿಸಲು ದರಗಳ ಅವಶ್ಯಕವಿರುವುದರಿಂದ ಸಾಮಾಗ್ರಿಗಳ ದರಗಳನ್ನು ಸಂಪೂರ್ಣ ವಿವರಣೆ ಮತ್ತು ದರ ಒಳಗೊಂಡಂತೆ ಕೋಟೇಷನ್ ಸಲ್ಲಿಸುವುದು ಬೇಕಾಗಿರುವ ಸಾಮಾಗ್ರಿಗಳ ಪಟ್ಟಿಯನ್ನು ಕಛೇರಿಯ ವಿಷಯ ನಿರ್ವಹಕರ ಬಳಿ ಪಡೆಯತಕದ್ದು.
8) 2 ವೆಟ್‌ವೆಲ್‌ಗಳನೊಳಗೊಂಡಂತೆ 1 ಎಸ್.ಟಿ.ಪಿ 6 MLD ಘಟಕದ ವಾರ್ಷಿಕವಾಗಿ ನಿರ್ವಹಿಸಲು ಮಾನವ ಸಂಪನ್ಮೂಲ ದುರಸ್ಥಿಗಳನ್ನು, ದೀಪಗಳು, ರಾಸಾಯನಿಕಗಳು, ಆವರಣದ ಸಂಪೂರ್ಣ ಜವಾಬ್ದಾರಿ ಒಳಗೊಂಡಂತೆ ವಿವರವಾದ ಕೊಟೇಷನ್ ದರಗಳನ್ನು ಸಲ್ಲಿಸುವುದು.

ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಸಂಜೆ 5.30 ರ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.

ಸಹಿ/– ಪೌರಾಯುಕ್ತರು, ನಗರಸಭೆ, ತಿಪಟೂರು.
DIPR/TUM/85/KSMCA/2024-25

ಸೂಪರ್ ಎಂಟರ ಹಂತದ ಪಂದ್ಯ • ಅರ್ಷದೀಪ್‌ಗೆ ಮೂರು ವಿಕೆಟ್ • ಆಸ್ಟ್ರೇಲಿಯಾದ ನಾಲ್ಕರ ಘಟ್ಟದ ಹಾದಿ ಕಠಿಣ

ರೋಹಿತ್ ಅಬ್ಬರ: ಸೆಮಿಗೆ ಭಾರತ

ಗ್ರಾಸ್ ಐಲೆಟ್, ಸೇಂಟ್ ಲೂಸಿಯಾ (ಎಎಫ್‌ಪಿ): ರೋಹಿತ್ ಶರ್ಮಾ (92, 41ಎಸೆತ) ಅವರ 'ಸೂಪರ್ ಹಿಟ್' ಬ್ಯಾಟಿಂಗ್ ಅಬ್ಬರದಲ್ಲಿ ಆಸ್ಟ್ರೇಲಿಯಾ ತಂಡದ ಆರ್ಭಟ ಮರೆಯಾಯಿತು.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸಿದ ಭಾರತ ತಂಡ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು. ಮಿಚೆಲ್ ಮಾರ್ಷ್ ನಾಯಕತ್ವದ ಆಸ್ಟ್ರೇಲಿಯಾ ನಾಲ್ಕರ ಘಟ್ಟದ ಹಾದಿ ಇನ್ನಷ್ಟು ಕಠಿಣವಾಯಿತು. ಕಳೆದ ಪಂದ್ಯದಲ್ಲಿ ಅಫ್ಗಾನಿಸ್ತಾನ ಎದುರು ಮುಖಭಂಗ ಅನುಭವಿಸಿದ್ದ ಆಸ್ಟ್ರೇಲಿಯಾ ಭಾರತದ ಎದುರೂ ಮಂಡಿಯೂರಿತು.

ಮಂಗಳವಾರ ಬೆಳಿಗ್ಗೆ ನಡೆಯಲಿರುವ ಬಾಂಗ್ಲಾದೇಶ–ಅಫ್ಗಾನಿಸ್ತಾನ ಪಂದ್ಯದ ಫಲಿತಾಂಶದ ನಂತರ ಆಸ್ಟ್ರೇಲಿಯಾದ ಭವಿಷ್ಯ ನಿರ್ಧಾರವಾಗಲಿದೆ. ಬಾಂಗ್ಲಾ ವಿರುದ್ಧ ಅಫ್ಗನ್ ಸೋತರೆ ಮಾತ್ರ ಆಸ್ಟ್ರೇಲಿಯಾ ಸೆಮಿಗೆ ತಲುಪಲಿದೆ. ಒಂದು ವೇಳೆ ಅಫ್ಗನ್ ಗೆದ್ದರೆ ಆಸ್ಟ್ರೇಲಿಯಾ ಟೂರ್ನಿಯಿಂದಲೇ ಹೊರಬೀಳಲಿದೆ. ಅಫ್ಗಾನಿಸ್ತಾನ ಮೊದಲ ಬಾರಿ ವಿಶ್ವಕಪ್ ಸೆಮಿಫೈನಲ್ ಪ್ರವೇಶಿಸಲಿದೆ.

ಏಳು ತಿಂಗಳುಗಳ ಹಿಂದೆ ಅಹಮದಾಬಾದಿನಲ್ಲಿ ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತಿದ್ದ ಭಾರತ ಇಲ್ಲಿ ಮುಯ್ಯಿ ತೀರಿಸಿಕೊಂಡಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 24 ರನ್‌ಗಳಿಂದ ಜಯಿಸಲು ನಾಯಕ ರೋಹಿತ್ ಅವರ ಬ್ಯಾಟಿಂಗ್ ಮತ್ತು ಬೌಲರ್‌ಗಳ ಛಲ ಬಿಡದ ಆಟ ಕಾರಣವಾಯಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಆಸ್ಟ್ರೇಲಿಯಾ ತಂಡಕ್ಕೆ ಆರಂಭದಲ್ಲಿ ಯಶಸ್ಸು ಲಭಿಸಿತು. ಆಸ್ಟ್ರೇಲಿಯಾ ಪರ ಪರಿಣಾಮಕಾರಿಯಾಗಿದ್ದ ಜೋಶ್ ಹ್ಯಾಜಲ್‌ವುಡ್ (4–0–14–1) ಅವರು ಕೊಹ್ಲಿ ವಿಕೆಟ್ ಪಡೆದರು. ಟಿಮ್ ಡೇವಿಡ್ ಮಿಡ್‌ಆನ್ ಕಡೆ ಓಡಿ ಪಡೆದ ಉತ್ತಮ ಕ್ಯಾಚ್ ಇದಕ್ಕೆ ಕಾರಣವಾಯಿತು. ಕೊಹ್ಲಿ ಬರಿಗೈಯಲ್ಲಿ ಮರಳಿದರು.

ಆದರೆ ಇನ್ನೊಂದೆಡೆ ಇದ್ದ ರೋಹಿತ್ ಬೀಸಾಟ ಮುಗಿಲುಮುಟ್ಟಿತು. ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ಅವರ ಮೂರನೇ ಓವರ್‌ನಲ್ಲಿ ಶರ್ಮಾ 28 ರನ್ ಬಾಚಿದರು. ಆ ಓವರ್‌ನಲ್ಲಿ ನಾಲ್ಕು ಸಿಕ್ಸರ್, ಒಂದು ಬೌಂಡರಿ ಜೊತೆ ಒಂದು ವೈಡ್ ಸೇರಿ 29 ರನ್‌ಗಳು ಹರಿದುಬಂದವು.

ರೋಹಿತ್ ಕೇವಲ ಎಂಟು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. ಆದರೆ ತಂಡ 5 ವಿಕೆಟ್‌ಗೆ 205 ರನ್‌ಗಳ ದೊಡ್ಡ ಮೊತ್ತ ಪೇರಿಸಲು ನೆರವಾದರು. ಎದುರಾಳಿ ಬೌಲರ್‌ಗಳ ಬೆವರಿಳಿಸಿದರು. ಕೇವಲ 41 ಎಸೆತಗಳಲ್ಲಿ ಏಳು ಬೌಂಡರಿ, ಎಂಟು ಸೊಗಸಾದ ಸಿಕ್ಸರ್‌ಗಳಿದ್ದ 92 ರನ್ ಸಿಡಿಸಿದರು.

ಬಿರುಸಿನ 92 ರನ್ ಗಳಿಸಿದ ರೋಹಿತ್ ಶರ್ಮಾ (ಎಡ), ವಿಕೆಟ್ ಪಡೆದ ಸಂಭ್ರಮದಲ್ಲಿ ಅರ್ಷದೀಪ್ ಸಿಂಗ್ –ಪಿಟಿಐ ಚಿತ್ರಗಳು

ರಿಷಭ್ ಪಂತ್ (15) ಜೊತೆ 87 ರನ್‌ಗಳ ಎರಡನೇ ಜೊತೆಯಾಟದಲ್ಲಿ ರೋಹಿತ್ ಅವರದೇ ಸಿಂಹಪಾಲು. ಕೊನೆಗೂ ಮಾರ್ಕಸ್ ಸ್ಟೊಯಿನಿಸ್ ಈ ಜೊತೆಯಾಟ ಮುರಿದರು. ಪಂತ್ ಅವರು ಲಾಂಗ್‌ಆಫ್‌ನಲ್ಲಿ ಹ್ಯಾಜಲ್‌ವುಡ್ ಹಿಡಿದ ಕ್ಯಾಚಿಗೆ ನಿರ್ಗಮಿಸಬೇಕಾಯಿತು.

ಶತಕದತ್ತ ಹೆಜ್ಜೆಯಿಟ್ಟಿದ್ದ ರೋಹಿತ್ ಅವರ ವಿಕೆಟ್ ಅನ್ನು ಸ್ಟಾರ್ಕ್ ಅವರೇ ಗಳಿಸಿದರು. ಈ ಪಂದ್ಯದಲ್ಲಿ ರೋಹಿತ್ ಅವರಿಂದ ಅತಿ ಹೆಚ್ಚು ದಂಡಿತರಾಗಿದ್ದ ಸ್ಟಾರ್ಕ್ ನಿಟ್ಟುಸಿರುಬಿಟ್ಟರು. ಇನ್ನೊಂದೆಡೆ ಸೂರ್ಯಕುಮಾರ್ ಯಾದವ್ (31, 16ಎ, 4x2, 2x6), ಶಿವಂ ದುಬೆ (28, 22ಎ) ಮತ್ತು ಹಾರ್ದಿಕ್ ಪಾಂಡ್ಯ (ಔಟಾಗದೇ 27, 17ಎ) ಉತ್ತಮ ಕಾಣಿಕೆ ನೀಡಿದರು.

ಕಾಡಿದ ಹೆಡ್: ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ತಂಡದ ಗೆಲುವಿನ ಆಸೆಯನ್ನು ಇನಿಂಗ್ಸ್‌ನಲ್ಲಿ ಬಹಳಷ್ಟು ಹೊತ್ತು ಜೀವಂತವಾಗಿಟ್ಟವರು ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್. 43 ಎಸೆತಗಳಲ್ಲಿ 76 ರನ್ ಗಳಿಸಿದರು. ಮಿಚೆಲ್ ಮಾರ್ಷ್ ಜೊತೆಗೆ ಎರಡನೇ ವಿಕೆಟ್‌ಗೆ 81 ರನ್ ಸೇರಿಸಿದರು. ಆದರೆ, 17ನೇ ಓವರ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಎಸೆತವನ್ನು ಆಡುವ ಭರದಲ್ಲಿ ರೋಹಿತ್‌ಗೆ ಕ್ಯಾಚಿತ್ತ ಹೆಡ್ ಔಟಾದರು.

ಒಂದು ಕಡೆ ಹೆಡ್ ಬೀಸಾಟವಾಡುತ್ತಿದ್ದರೂ ಇನ್ನೊಂದೆಡೆಯಿಂದ ವಿಕೆಟ್ ಕಬಳಿಸಿದ ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್ ಹಾಗೂ ಅಕ್ಷರ್ ಪಟೇಲ್ ಅವರ ಆಟಕ್ಕೆ ಜಯ ಒಲಿಯಿತು.

ಇಂದಿನ ಪಂದ್ಯ: ಬಾಂಗ್ಲಾದೇಶ– ಅಫ್ಗಾನಿಸ್ತಾನ (ಬೆಳಿಗ್ಗೆ 8), ನೇರಪ್ರಸಾರ– ಸ್ಟಾರ್ ಸ್ಪೋರ್ಟ್ಸ್, ಹಾಟ್ ಸ್ಟಾರ್

ಸೆಮಿಯಲ್ಲಿ ಇಂಗ್ಲೆಂಡ್ ಎದುರಾಳಿ

ಭಾರತ ಗಯಾನಾದಲ್ಲಿ ಇದೇ 27ರಂದು ನಡೆಯಲಿರುವ ಎರಡನೇ ಸೆಮಿಫೈನಲ್‌ನಲ್ಲಿ ಎರಡನೇ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿರುವ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. 2022ರ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲೂ ಇವೆರಡು ತಂಡಗಳು ಮುಖಾಮುಖಿ ಆಗಿದ್ದವು.

ಸ್ಕೋರ್ ಕಾರ್ಡ್

ಭಾರತ 5 ವಿಕೆಟ್‌ಗೆ 205 (20 ಓವರ್‌ಗಳಲ್ಲಿ)
ರೋಹಿತ್ ಬಿ ಸ್ಟಾರ್ಕ್ 92 (41ಎ, 4X7, 6X8)
ಕೊಹ್ಲಿ ಸಿ ಡೇವಿಡ್ ಬಿ ಹ್ಯಾಜಲ್‌ವುಡ್ 0 (5ಎ)
ಪಂತ್ ಸಿ ಹ್ಯಾಜಲ್‌ವುಡ್ ಬಿ ಸ್ಟೊಯಿನಿಸ್ 15 (14ಎ, 4X1, 6X1)
ಸೂರ್ಯಕುಮಾರ್ ಸಿ ವೇಡ್ ಬಿ ಸ್ಟಾರ್ಕ್ 31 (16ಎ, 4X3, 6X2)
ಶಿವಂ ದುಬೆ ಸಿ ವಾರ್ನರ್ ಬಿ ಸ್ಟೊಯಿನಿಸ್ 28 (22ಎ, 4X2, 6X1)
ಹಾರ್ದಿಕ್ ಪಾಂಡ್ಯ ಔಟಾಗದೇ 27 (17ಎ, 4X1, 6X2)
ರವೀಂದ್ರ ಜಡೇಜ ಔಟಾಗದೇ 9 (5ಎ, 6X1)
ಇತರೆ: 3 (ಲೆಗ್‌ಬೈ1, ವೈಡ್2)
ವಿಕೆಟ್ ಪತನ: 1-6 (ವಿರಾಟ್ ಕೊಹ್ಲಿ, 1.4), 2-93 (ರಿಷಭ್ ಪಂತ್, 7.6), 3-127 (ರೋಹಿತ್ ಶರ್ಮಾ, 11.2), 4-159 (ಸೂರ್ಯಕುಮಾರ್ ಯಾದವ್, 14.3), 5-194 (ಶಿವಂ ದುಬೆ, 18.4)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–45–2, ಜೋಶ್ ಹ್ಯಾಜಲ್‌ವುಡ್ 4–0–14–1, ಪ್ಯಾಟ್ ಕಮಿನ್ಸ್ 4–0–48–0, ಆ್ಯಡಂ ಜಂಪಾ 4–0–41–0, ಮಾರ್ಕಸ್ ಸ್ಟೊಯಿನಿಸ್ 4–0–56–2

ಆಸ್ಟ್ರೇಲಿಯಾ 7ಕ್ಕೆ 181 (20 ಓವರ್‌ಗಳಲ್ಲಿ)
ವಾರ್ನರ್ ಸಿ ಯಾದವ್ ಬಿ ಅರ್ಷದೀಪ್ 6 (6ಎ, 4x1)
ಹೆಡ್ ಸಿ ಶರ್ಮಾ ಬಿ ಬೂಮ್ರಾ 76 (43ಎ, 4x9, 6x4)
ಮಿಚೆಲ್ ಮಾರ್ಷ್ ಸಿ ಪಟೇಲ್ ಬಿ ಕುಲದೀಪ್ 37 (28ಎ, 4x3, 6x2)
ಮಾಕ್ಸ್‌ವೆಲ್ ಬಿ ಕುಲದೀಪ್ 20 (12ಎ, 4x2, 6x1)
ಸ್ಟೊಯಿನಿಸ್ ಸಿ ಪಾಂಡ್ಯ ಬಿ ಅಕ್ಷರ್ 2 (4ಎ)
ಟಿಮ್ ಸಿ ಬೂಮ್ರಾ ಬಿ ಅರ್ಷದೀಪ್ 15 (11ಎ, 4x1, 6x1)
ಮ್ಯಾಥ್ಯೂ ಸಿ ಕುಲದೀಪ್ ಬಿ ಅರ್ಷದೀಪ್ 1 (2ಎ)
ಪ್ಯಾಟ್ ಕಮಿನ್ಸ್ ಔಟಾಗದೇ 11 (7ಎ, 6x1)
ಮಿಚೆಲ್ ಸ್ಟಾರ್ಕ್ ಔಟಾಗದೇ 4 (7ಎ)
ಇತರೆ: 9 (ಬೈ 5, ಲೆಗ್‌ಬೈ 1, ವೈಡ್ 3)
ವಿಕೆಟ್ ಪತನ: 1-6 (ಡೇವಿಡ್ ವಾರ್ನರ್, 0.6), 2-87 (ಮಿಚೆಲ್ ಮಾರ್ಷ್, 8.6), 3-128 (ಗ್ಲೆನ್ ಮ್ಯಾಕ್ಸ್‌ವೆಲ್, 13.1), 4-135 (ಮಾರ್ಕಸ್ ಸ್ಟೊಯಿನಿಸ್, 14.1), 5-150 (ಟ್ರಾವಿಸ್ ಹೆಡ್, 16.3), 6-153 (ಮ್ಯಾಥ್ಯೂ ವೇಡ್, 17.1), 7-166 (ಟಿಮ್ ಡೇವಿಡ್, 17.5)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–37–3, ಜಸ್‌ಪ್ರೀತ್ ಬೂಮ್ರಾ 4–0–29–1, ಅಕ್ಷರ್ ಪಟೇಲ್ 3–0–21–1, ಹಾರ್ದಿಕ್ ಪಾಂಡ್ಯ 4–0–47–0, ಕುಲದೀಪ್ ಯಾದವ್ 4–0–24–2, ರವೀಂದ್ರ ಜಡೇಜ 1–0–17–0
ಪಂದ್ಯದ ಆಟಗಾರ: ರೋಹಿತ್ ಶರ್ಮಾ

ಫಲಿತಾಂಶ: ಭಾರತ ತಂಡಕ್ಕೆ 24 ರನ್‌ಗಳ ಜಯ

ಟಿ20 ವಿಶ್ವಕಪ್: ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಟೈ	ಅಂಕ	ನೆಟ್ ರನ್‌ರೇಟ್
ಸೂಪರ್ ಎಂಟರ ಹಂತ– ಗುಂಪು 1						
ಭಾರತ	3	3	0	0	6	2.017
ಆಸ್ಟ್ರೇಲಿಯಾ	3	1	2	0	2	-0.331
ಅಫ್ಗಾನಿಸ್ತಾನ	2	1	1	0	2	-0.650
ಬಾಂಗ್ಲಾದೇಶ	2	0	2	0	0	-2.489
ಗುಂಪು 2						
ದಕ್ಷಿಣ ಆಫ್ರಿಕಾ	3	3	0	0	6	0.599
ಇಂಗ್ಲೆಂಡ್	3	2	1	0	4	1.992
ವೆಸ್ಟ್ ಇಂಡೀಸ್	3	1	2	0	2	0.963
ಅಮೆರಿಕ	3	0	3	0	0	-3.906

ನಾಲ್ಕರ ಘಟ್ಟಕ್ಕೆ ದಕ್ಷಿಣ ಆಫ್ರಿಕಾ

ನಾರ್ತ್ ಸೌಂಡ್ (ಆ್ಯಂಟೀಗಾ): ಸಂಯಮದಿಂದ ಆಡಿದ ದಕ್ಷಿಣ ಆಫ್ರಿಕಾ ತಂಡ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಸೋಮವಾರ ಆತಿಥೇಯ ವೆಸ್ಟ್ ಇಂಡೀಸ್ ಮೇಲೆ ಗೆದ್ದು ಸೆಮಿಫೈನಲ್ ಪ್ರವೇಶಿಸಿತು. ಮಳೆಬಾಧಿತ ಪಂದ್ಯವನ್ನು ದಕ್ಷಿಣ ಆಫ್ರಿಕಾ ಮೂರು ವಿಕೆಟ್‌ಗಳಿಂದ ಗೆದ್ದುಕೊಂಡಿತು.

ಎಡಗೈ ಸ್ಪಿನ್ನರ್ ತಬ್ರೇಜ್ ಸಂಶಿ (27ಕ್ಕೆ3) ಅವರು ಕೇಶವ ಮಹಾರಾಜ್ ಮತ್ತು ನಾಯಕ ಏಡನ್ ಮರ್ಕರಂ (24ಕ್ಕೆ1) ಜೊತೆಗೂಡಿ ಪ್ರಬಲ ವೆಸ್ಟ್ ಇಂಡೀಸ್ ತಂಡವನ್ನು 8 ವಿಕೆಟ್‌ಗೆ 135 ರನ್‌ಗಳಿಗೆ ಸೀಮಿತಗೊಳಿಸಿದರು. ದಕ್ಷಿಣ ಆಫ್ರಿಕಾ ಇನಿಂಗ್ಸ್‌ನ ಎರಡನೇ ಓವರ್ (ಸ್ಕೋರ್ 15ಕ್ಕೆ2) ನಂತರ ಮಳೆ ಯಾಯಿತು. ನಂತರ ಗುರಿಯನ್ನು 17 ಓವರುಗಳಲ್ಲಿ 123 ರನ್‌ಗಳಿಗೆ ಪರಿಷ್ಕರಿಸಲಾಯಿತು. ದಕ್ಷಿಣ ಆಫ್ರಿಕಾ ತುಸು ಆತಂಕ ಎದುರಿಸಿದರೂ 5 ಎಸೆತಗಳಿರುವಂತೆ 7 ವಿಕೆಟ್ ನಷ್ಟದಲ್ಲಿ 124 ರನ್ ಗಳಿಸಿತು. ಅಜೇಯ ಸಾಧನೆಯೊಡನೆ ದಕ್ಷಿಣ ಆಫ್ರಿಕಾ ಒಂದನೇ ಗುಂಪಿನಿಂದ ಸೆಮಿ ಫೈನಲ್ ತಲುಪಿತು. ಹಾಲಿ ಚಾಂಪಿಯನ್ ಇಂಗ್ಲೆಂಡ್ ಎರಡನೇ ತಂಡವಾಗಿ ಸೆಮಿಗೆ ಮುನ್ನಡೆಯಿತು.

ಯುವ ಆಟಗಾರ ಟ್ರಿಸ್ಟನ್ ಸ್ಟಬ್ಸ್ (29, 27ಎ) ಅವರು ಹೆನ್ರಿಚ್ ಕ್ಲಾಸೆನ್ (22, 10ಎ) ಜೊತೆ ತಂಡವನ್ನು ಗೆಲುವಿನತ್ತ ಒಯ್ದರು. ಆದರೆ ಮಾರ್ಕೊ ಯಾನ್ಸನ್ (ಅಜೇಯ 21, 14ಎ) ಅವರು ಎಡಗೈ ವೇಗಿ ಒಬೇದ್ ಮೆಕಾಯ್ ಅವರಕೊನೆಯ (17ನೇ) ಓವರ್‌ನ ಮೊದಲ ಎಸೆತದಲ್ಲೇ ಲಾಂಗ್‌ಆನ್‌ಗೆ ಸಿಕ್ಸರ್ ಎತ್ತಿ ಗೆಲುವು ಪೂರೈಸಿದರು. ಆ ಓವರ್‌ನಲ್ಲಿ ಗೆಲುವಿಗೆ ಐದು ರನ್‌ಗಳು ಬೇಕಿದ್ದವು. ರೋಸ್ಟನ್ ಚೇಸ್ (52, 12ಕ್ಕೆ3) ಆಲ್‌ರೌಂಡ್ ಆಟದೊಂದಿಗೆ ಮಿಂಚಿದರೂ ವೆಸ್ಟ್ ಇಂಡೀಸ್ ಗೆಲುವಿಗೆ ಅದು ಸಾಕಾಗಲಿಲ್ಲ.

1992ರ ಏಕದಿನ ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾ ಮಳೆ ನಿಯಮದ ಅವಕೃಪೆಗೆ ಒಳಗಾಗಿ ಸೆಮಿಫೈನಲ್‌ನಲ್ಲಿ ನಿರ್ಗಮಿಸಿತು. ಅಂದಿನಿಂದ ಆ ತಂಡ ವಿಶ್ವಕಪ್‌ಗಳ ನಿರ್ಣಾಯಕ ಘಟ್ಟದಲ್ಲಿ ಹೊರಬಿದ್ದು 'ಚೋಕರ್ಸ್' ಹಣೆಪಟ್ಟಿ ಹೊಂದಿದೆ. ಬ್ಯಾಟರ್‌ಗಳಿಗೆ ಸವಾಲಾಗಿದ್ದ ಪಿಚ್‌ನಲ್ಲಿ, ಮರ್ಕರಂ, ಕೇಶವ್ ಮತ್ತು ಶಂಸಿ ಒಟ್ಟು 12 ಓವರುಗಳಲ್ಲಿ 79 ರನ್ನಿತ್ತು ಐದು ವಿಕೆಟ್ ಹಂಚಿಕೊಂಡಿದ್ದು ನಿರ್ಣಾಯಕವಾಯಿತು.



ವಿಕೆಟ್ ಪಡೆದ ಸಂಭ್ರಮದಲ್ಲಿ ತಬ್ರೇಜ್ ಸಂಶಿ –ಎಎಫ್‌ಪಿ ಚಿತ್ರ

ಕೈಲ್ ಮೇಯರ್ಸ್ (35, 34ಎ) ಮತ್ತು ಚೇಸ್ (52, 42ಎ) ಅವರು ಮೂರನೇ ವಿಕೆಟ್‌ಗೆ 81 ರನ್ ಸೇರಿಸಿದ್ದು ಇನಿಂಗ್ಸ್‌ನ ಪ್ರಮುಖ ಘಟ್ಟ. ಅದೂ 11 ಓವರ್‌ಗಳ ಒಳಗೆ. ಆದರೆ ಸ್ಪಿನ್ ದಾಳಿಗೆ ನಾಯಕ ಪೊವೆಲ್, ಶರ್ಫೇನ್ ರುದರ್‌ಫೋರ್ಡ್ ಮತ್ತು ರಸೆಲ್ ಬೇಗ ನಿರ್ಗಮಿಸಿದ್ದರಿಂದ ವಿಂಡೀಸ್ ಒತ್ತಡಕ್ಕೆ ಸಿಲುಕಿತು.

ಸ್ಕೋರುಗಳು: ವೆಸ್ಟ್ ಇಂಡೀಸ್: 8 ವಿಕೆಟ್‌ಗೆ 135 (ಕೈಲ್ ಮೇಯರ್ಸ್ 35, ರೋಸ್ಟನ್ ಚೇಸ್ 52, ಅಲ್ಜರಿ ಜೋಸೆಫ್ ಔಟಾಗದೇ 11; ತಬ್ರೇಜ್ ಸಂಶಿ 27ಕ್ಕೆ3, ಕಗಿಸೊ ರಬಾಡ 11ಕ್ಕೆ1); **ದಕ್ಷಿಣ ಆಫ್ರಿಕಾ:** 16.1 ಓವರುಗಳಲ್ಲಿ 7 ವಿಕೆಟ್‌ಗೆ 124 (ಏಡನ್ ಮರ್ಕರಂ 18, ಟ್ರಿಸ್ಟನ್ ಸ್ಟಬ್ಸ್ 29, ಹೆನ್ರಿಚ್ ಕ್ಲಾಸೆನ್ 22, ಮಾರ್ಕೊ ಯಾನ್ಸೆನ್ ಔಟಾಗದೇ 21, ಕಗಿಸೊ ರಬಾಡ ಔಟಾಗದೇ 5; ಆ್ಯಂಡ್ರೆ ರಸೆಲ್ 19ಕ್ಕೆ2, ಅಲ್ಜಾರಿ ಜೋಸೆಫ್ 25ಕ್ಕೆ2, ರೋಸ್ಟನ್ ಚೇಸ್ 12ಕ್ಕೆ3).
ಪಂದ್ಯದ ಆಟಗಾರ: ತಬ್ರೇಜ್ ಸಂಶಿ.

ಜುಲೈನಲ್ಲಿ ಜಿಂಬಾಬ್ವೆ ಪ್ರವಾಸ: ಭಾರತ ತಂಡಕ್ಕೆ ಶುಭಮನ್ ಗಿಲ್ ನಾಯಕ

ನವದೆಹಲಿ (ಪಿಟಿಐ): ಯುವ ಆಟಗಾರರಾದ ರಿಯಾನ್ ಪರಾಗ್, ಅಭಿಷೇಕ್ ಶರ್ಮಾ ಮತ್ತು ನಿತೀಶ್ ರೆಡ್ಡಿ ಅವರು ಐಪಿಎಲ್‌ನಲ್ಲಿ ತೋರಿದ ಆಟಕ್ಕೆ ಮನ್ನಣೆ ಪಡೆದಿದ್ದಾರೆ. ಮುಂಬರುವ ಜಿಂಬಾಬ್ವೆ ಕಿರು ಪ್ರವಾಸಕ್ಕೆ ಅವರು ಮೊದಲ ಬಾರಿ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ. ಶುಭಮನ್ ಗಿಲ್‌ಗೆ ನಾಯಕತ್ವ ವಹಿಸಲಾಗಿದೆ.

ಭಾರತ ತಂಡಕ್ಕೆ ಮುಂದೆ ಬಿಡುವಿಲ್ಲದ ವೇಳಾಪಟ್ಟಿ ಇರುವ ಕಾರಣ, ಹಾಲಿ ಟಿ20 ವಿಶ್ವಕಪ್‌ನಲ್ಲಿ ಆಡುತ್ತಿರುವ ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಲಾಗಿದೆ. ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್, ರವೀಂದ್ರ ಜಡೇಜ ಮತ್ತು ಜಸ್‌ಪ್ರೀತ್ ಬೂಮ್ರಾ ಅವರಿಗೆ ವಿರಾಮ ಸಿಗಲಿದೆ.

ಶುಭಮನ್ ಗಿಲ್

ಜಿಂಬಾಬ್ವೆ ಪ್ರವಾಸದಲ್ಲಿ ಭಾರತ ಐದು ಟಿ20 ಪಂದ್ಯಗಳನ್ನು ಆಡಲಿದೆ. ಜುಲೈ 6ರಂದು ಮೊದಲ ಪಂದ್ಯ ನಡೆಯಲಿದೆ. ಜುಲೈ 7, 10, 13, 14ರಂದು ಉಳಿದ ಪಂದ್ಯಗಳು ನಡೆಯಲಿವೆ.

ತುಷಾರ್ ದೇಶಪಾಂಡೆ, ಹರ್ಷಿತ್ ರಾಣಾ, ಆವೇಶ್ ಖಾನ್ ಮತ್ತು ರಿಂಕು ಸಿಂಗ್ ಅವರೂ 15 ಸದಸ್ಯರ ತಂಡವನ್ನು ಕೂಡಿಕೊಳ್ಳಲಿದ್ದಾರೆ.

ಗಿಲ್ ಮತ್ತು ಆವೇಶ್, ವಿಶ್ವಕಪ್‌ಗೆ ಮೀಸಲು ಆಟಗಾರರಾಗಿದ್ದು, ಯಾವುದೇ ಪಂದ್ಯದಲ್ಲಿ ಆಡಿರಲಿಲ್ಲ. ಹೀಗಾಗಿ ಗುಂಪು ಪಂದ್ಯಗಳ ನಂತರ ಅವರನ್ನು ತಂಡದಿಂದ ಮುಕ್ತಗೊಳಿಸಲಾಗಿದೆ.

ಪಂಜಾಬ್‌ನ ಆಟಗಾರ ಅಭಿಷೇಕ್ ಸನ್‌ರೈಸರ್ಸ್ ಹೈದರಾಬಾದ್ ಪರ ಕಳೆದ ಐಪಿಎಲ್ ಋತುವಿನಲ್ಲಿ 484 ರನ್ ಗಳಿಸಿದ್ದರು. ಅಸ್ಸಾಮ್‌ನ ಪರಾಗ್ ಅವರು ರಾಜಸ್ಥಾನ ರಾಯಲ್ಸ್ ಪರ 573 ರನ್ ಕಲೆಹಾಕಿದ್ದರು. ದೇಶದ ಈಶಾನ್ಯ ಭಾಗದಿಂದ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದ ಮೊದಲ ಆಟಗಾರ ಎನಿಸಿದ್ದಾರೆ.

ತಂಡ ಹೀಗಿದೆ: ಶುಭಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ಋತುರಾಜ್ ಗಾಯಕವಾಡ, ಅಭಿಷೇಕ್ ಶರ್ಮಾ, ರಿಂಕು ಸಿಂಗ್, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಧ್ರುವ್ ಜುರೇಲ್ (ವಿಕೆಟ್ ಕೀಪರ್), ನಿತೀಶ್ ರೆಡ್ಡಿ,ರಿಯಾನ್ ಪರಾಗ್, ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಆವೇಶ್ ಖಾನ್, ಖಲೀಲ್ ಅಹ್ಮದ್, ಮುಕೇಶ್ ಕುಮಾರ್ ಮತ್ತು ತುಷಾರ್ ದೇಶಪಾಂಡೆ

Down Payment 5999*
Low ROI @ 9.99%*
No Hypothecation*
Instant Cashback of 5% up to ₹3000*
HDFC BANK
For dealer details scan the QR Code
CLICK BOOK RELAX

*Terms and conditions apply. Offer available on all Honda two-wheeler models for EMI transactions made using HDFC Bank credit cards through Pine Labs machines only. Customers can avail a 5% Instant cashback, up to a maximum of Rs 3000. Valid on one transaction per card/order during the offer period. Offer valid until 31st August 2024. The scheme is available in selected outlets only. Product shown in the picture may vary from the actual product available in the market. Accessories shown in the product are not part of the standard equipment.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com